
ಜಾನಪದ ವರ್ಷ ೨೦೧೩

ಸಂಪಾದಕರು
ಡಾ. ಎಸ್. ಮೋಹನ್



BVP-1223- 1/3/17
1320- 11/38.

ಜಾನಪದ ವರ್ಷ - ೨೦೧೩

೨೦೧೩ರಲ್ಲಿ ಪ್ರಕಟವಾದ ಜಾನಪದ ಕೃತಿಗಳ ಸಮೀಕ್ಷೆ

ಪ್ರಧಾನ ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು

ಡಾ. ಎಸ್. ಮೋಹನ್

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ - ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

JAANAPADA VARSHA - 2013
Reviews of Folklore Books Published in 2013
Edited by
Dr. S. Mohan
Publication Assistant
Prasaranga
Kannada University, Hampi
Vidyaranya 583 276
Hosapete (Tq), Ballary (Dist)
Cell: 94486 53860

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 197
Shiggavi Taluk, Haveri Dist., Karnataka
Phone: 0836 - 2255180

Pages: xvi + 168 **Price: ₹ 120/-**
www.janapadauni.in

First Impression: 2014

ISBN 978-93-83149-33-9

ಬೆಲೆ: ₹ ೧೨೦/-

ಮುಖಪುಟ: ಕೆ.ಕೆ. ಮಕಾಳಿ

ಅಕ್ಷರ ಸಂಯೋಜನೆ
ಸವಿತ ಗ್ರಾಫಿಕ್ಸ್, ಕಮಲಾಪುರ
Cell No.: 94802 57392

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು. ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ-ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು,

ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪ್ಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು-ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ-ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ

ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಿಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆ ಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ನೆಲಮೂಲ ಜ್ಞಾನ ಪರಂಪರೆಯನ್ನು ಗರ್ಭೀಕರಿಸಿಕೊಂಡಿರುವ ಜಾನಪದ ಅವಿನಾಶಿಯಾದುದು. ಜಾಗತೀಕರಣ, ಆಧುನೀಕರಣಗಳ ಪರಿಣಾಮದಿಂದ ಜಾನಪದ ಸಂಬಂಧಿ ಸೈದ್ಧಾಂತಿಕ ಸ್ವರೂಪದ ಕೆಲಸಗಳು ಹಿನ್ನೆಲೆಗೆ ಸರಿಯುತ್ತಿವೆ ಎನ್ನುವ ಹಳಹಳಿಕೆ ಪ್ರಚಲಿತದಲ್ಲಿದೆ. ಈ ನಡುವೆ, ಎಂದಿಗೂ ಜೀವಂತವಾಗಿರುವ ಜಾನಪದ ರೂಪಾಂತರವನ್ನು ಹೊಂದಿಯೂ, ಅಸ್ತಿತ್ವದಲ್ಲಿರುವ ನಮ್ಮತನದ ಮೂಲ ಅಸ್ಮಿತೆ ಎನ್ನುವ ನಂಬಿಕೆ ಬಲಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಬಹುಶಿಸ್ತೀಯ ಹಾಗೂ ಅಂತರ್‌ಶಿಸ್ತೀಯ ಅಧ್ಯಯನಗಳ ಸಾಧ್ಯತೆಗಳನ್ನು ಒಳಗೊಂಡಿರುವ ಜಾನಪದವನ್ನು ಕುರಿತ ಕೆಲಸಗಳು ಗುಣ ಮತ್ತು ಗಾತ್ರವನ್ನು ಕಾಪಾಡಿಕೊಳ್ಳುವುದು ಕಷ್ಟಸಾಧ್ಯ. ಜಾನಪದವನ್ನು ಸಂರಕ್ಷಿಸುವ, ಸಂವರ್ಧಿಸುವ ಮೂಲ ಆಶಯಕ್ಕೆ ಬದ್ಧವಾಗಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು, ಪ್ರತಿವರ್ಷ ಜಾನಪದ ಸಂಬಂಧೀ ಕೃತಿಗಳ ಸಮೀಕ್ಷಾತ್ಮಕ ಗ್ರಂಥವನ್ನು ಹೊರತರುವ ಸೈದ್ಧಾಂತಿಕ ಪ್ರಯತ್ನವನ್ನು ನೋಂಪಿಯಂತೆ ಮಾಡಿಕೊಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಡಾ. ಎಸ್. ಮೋಹನ್ ಅವರು ೨೦೧೩ರಲ್ಲಿ ಪ್ರಕಟವಾದ ಜಾನಪದ ಸಂಬಂಧೀ ಕೃತಿಗಳನ್ನು ಒಂದೆಡೆ ಸಂಕಲಿಸಿ, ಸಮೀಕ್ಷಿಸಿರುವುದರಿಂದ ನಿರ್ದಿಷ್ಟ ಕ್ಷೇತ್ರವೊಂದರಲ್ಲಾದ ಬೆಳವಣಿಗೆಯ ಒಂದು ನೋಟವನ್ನು ಪಡೆದುಕೊಳ್ಳಲು ಸಾಧ್ಯ. ಈ ಬಗೆಯ ಪ್ರಯತ್ನ ಹೊಸ ಹೊಸ ಸಾಧ್ಯತೆಗಳನ್ನು ಅನಾವರಣಗೊಳಿಸುವ ಕಾರಣಕ್ಕೆ ಮಹತ್ವದ್ದೂ ಕೂಡ. ಈ ನಿಟ್ಟಿನಲ್ಲಿ

'ಜಾನಪದ ವರ್ಷ - ೨೦೧೩' ಗ್ರಂಥ ಮುಖ್ಯವೆನಿಸುತ್ತದೆ. ಗದ್ಯ ಮತ್ತು ಗೀತ ಸಂಗ್ರಹಗಳು, ವಿಚಾರ-ವಿಮರ್ಶೆ ಮತ್ತು ಸಂಶೋಧನೆ, ಜೀವನ ಪರಿಚಯ, ಜನಪದ ವೈದ್ಯ ಹಾಗೂ ಸಂಕೀರ್ಣ ಎಂಬ ಐದು ಮುಖ್ಯ ಶೀರ್ಷಿಕೆಗಳಲ್ಲಿ ಇಲ್ಲಿನ ಸಮೀಕ್ಷಾ ಲೇಖನಗಳು ವೈಜ್ಞಾನಿಕ ಕ್ರಮದಲ್ಲಿ ವಿಭಾಗಿಸಲ್ಪಟ್ಟಿವೆ. ಇಂಥ ಮಹತ್ವದ ಗ್ರಂಥ ಸಿದ್ಧಗೊಳ್ಳುವಾಗ ಸಂಪಾದಕರು ಸೇರಿದಂತೆ ಸಮೀಕ್ಷೆಗಾರರ ಶ್ರಮ - ಶ್ರದ್ಧೆ ಮರೆಯಲಾಗದು. ಈ ಎಲ್ಲರ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಪ್ರಕೃತ 'ಜಾನಪದ ವರ್ಷ - ೨೦೧೩' ರೂಪುಗೊಂಡಿದೆ. ಪ್ರಕೃತ ಗ್ರಂಥವನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟ ಡಾ. ಎಸ್. ಮೋಹನ್ ಅವರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲಬೇಕು.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ

ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಇಂದಿನ ದಿನಗಳಲ್ಲಿ ಜಾನಪದದ ಫಸಲು ಸಮೃದ್ಧವಾಗಿದೆ. ಬೆಳೆ ಸಮೃದ್ಧವಾದಷ್ಟೇ ಉತ್ಕೃಷ್ಟವಾಗಿಯೂ ಇರಬೇಕೆಂಬುದು ನಿರೀಕ್ಷೆ. ಕಾಲದ ಒತ್ತಡಗಳು, ಸಾಂಸ್ಕೃತಿಕ ಸಂದರ್ಭಗಳು ಬರವಣಿಗೆಯ ಸ್ವರೂಪ ಹಾಗೂ ಪ್ರಮಾಣವನ್ನು ನಿರ್ಧರಿಸುತ್ತವೆ. ಈ ಹಿನ್ನೆಲೆಯಲ್ಲಿ ಜಾನಪದ ಸಂಬಂಧಿ ಅಧ್ಯಯನ, ಸಂಶೋಧನೆಗಳ ಸೈದ್ಧಾಂತಿಕ ಸ್ವರೂಪವನ್ನು ಪರಿಭಾವಿಸಬಹುದಾಗಿದೆ. ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡುತ್ತಿರುವ ಜಾನಪದವನ್ನು ಇನ್ನಷ್ಟು ವೈಜ್ಞಾನಿಕವಾಗಿ ಅಧ್ಯಯನಿಸುವ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ಜಾನಪದವನ್ನು ವಿಶಿಷ್ಟವಾಗಿ ಅಧ್ಯಯನ ಮಾಡುವ ಕ್ರಮಗಳನ್ನು ಮತ್ತು ಹೊಸ ಮಾರ್ಗವನ್ನು ಕಂಡುಕೊಳ್ಳಲು ಸಮೀಕ್ಷಾತ್ಮಕ ಕೃತಿಗಳು ಮುಖ್ಯ ಮಾದರಿಯನ್ನು ಒದಗಿಸುತ್ತವೆ. ಈ ಹಿನ್ನೆಲೆಯಲ್ಲಿ ಡಾ. ಎಸ್. ಮೋಹನ್ ಅವರು ಸಂಪಾದಿಸಿದ 'ಜಾನಪದ ವರ್ಷ - ೨೦೧೩' ಸಂಪಾದಿತ ಕೃತಿ ಮಹತ್ವದ್ದೆನಿಸುತ್ತದೆ. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಪ್ರಕಟವಾಗುವ ಕೃತಿಗಳನ್ನು ಗಮನಿಸಿದರೆ ಆ ಕಾಲದ ವಿದ್ಯಮಾನಗಳು, ಪಾರಂಪರಿಕ ಜ್ಞಾನವೊಂದರ ಬದಲಾದ ಸ್ವರೂಪ, ಆನ್ವಯಿಕ ನೆಲೆಯ ಪ್ರಯತ್ನ ಒಟ್ಟಾರೆ ಆ ಕ್ಷೇತ್ರದಲ್ಲಾದ ಬೆಳವಣಿಗೆ ಇತ್ಯಾದಿ ಸಂಗತಿಗಳ ಬಗ್ಗೆ ತಿಳಿವಳಿಕೆ ಮೂಡುತ್ತದೆ. ಜೊತೆಗೆ ಇನ್ನೂ ಆಗದೇ ಇರುವ ಕೆಲಸಗಳ ಬಗ್ಗೆ ತಿಳಿಯಲು ಕೂಡ ಇಂಥ ಸೈದ್ಧಾಂತಿಕ ಪ್ರಯತ್ನದಿಂದ ಸಾಧ್ಯವಾಗುತ್ತದೆ. ಆದ್ದರಿಂದ ೨೦೧೩ರ ಅವಧಿಯಲ್ಲಿ ಪ್ರಕಟವಾದ ಜಾನಪದ ಸಂಬಂಧಿ ಕೃತಿಗಳ ಸಮೀಕ್ಷೆಯು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಜಾನಪದ ಕ್ಷೇತ್ರದಲ್ಲಿನ ಬೆಳವಣಿಗೆಯನ್ನು ಗಮನಿಸುತ್ತಲೇ ಅದರ ಮುಂದಿನ ನಡೆಯ ಕಡೆ ಬೆರಳು ಮಾಡುತ್ತದೆ. ಸಮೀಕ್ಷಾತ್ಮಕ ಲೇಖನಗಳನ್ನು ಒಂದೆಡೆ ಸಂಪಾದಿಸುವ ಶ್ರಮದಾಯಕ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಡಾ. ಎಸ್. ಮೋಹನ್ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲಬೇಕು.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ

ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಅನ್ವಯಿಕ ಜಾನಪದ ನಿಕಾಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ಅಕ್ಷರ ಸಂಯೋಜಿಸಿ ಪುಟವಿನ್ಯಾಸ ಮಾಡಿದ ಕಮಲಾಪುರದ ಶ್ರೀ ಜೆ. ಬಸವರಾಜ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸಗಳಲ್ಲಿ ಸಹಕರಿಸಿದ ಶ್ರೀ ಸಂಗಮೇಶ ಎಸ್. ಗಣಿ, ಶ್ರೀ ವಿಶ್ವ ಗುಜ್ಜರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಅಂದವಾಗಿ ಮುದ್ರಿಸಿದ ರಾಜಾ ಪ್ರಿಂಟರ್ಸ್ ಬೆಂಗಳೂರು ಅವರಿಗೆ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಸಂಪಾದಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಕರ್ನಾಟಕಕ್ಕೆ ಸಂಬಂಧಿಸಿದ ಒಟ್ಟು ಜಾನಪದವನ್ನು ಸಂರಕ್ಷಿಸುವ, ಪುನರುಜ್ಜೀವನಗೊಳಿಸುವ ಪ್ರಕ್ರಿಯೆಯಲ್ಲಿ ಮಹತ್ವದ ಕಾರ್ಯಯೋಜನೆಗಳನ್ನು ಆರಂಭಿಸಿ ಮುನ್ನಡೆಯುತ್ತಿದೆ. ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯಗಳು ಕೈಹಾಕದ ಅಪರೂಪದ ಯೋಜನೆಗಳನ್ನು ಆರಂಭಿಸಿ ಕಾರ್ಯಗತಗೊಳಿಸಲು ಶ್ರಮಿಸುತ್ತಿದೆ. ಗ್ರಾಮಚರಿತ್ರೆ ಕೋಶ, ವಸ್ತುಸಂಗ್ರಹಾಲಯಗಳು, ಜನಪದ ಕತೆಗಳ ಪಠ್ಯಪುಸ್ತಕ ರಚನೆ, ಜಿಲ್ಲಾ ಜಾನಪದ ಹೀಗೆ ಇನ್ನಿತರ ಗುರುತರ ಯೋಜನೆಗಳನ್ನು ಕೈಗೆತ್ತಿಕೊಂಡು ಕಾರ್ಯನಿರ್ವಹಿಸುತ್ತಿದೆ. ಅಲಕ್ಷಿತ ಜನಪದ ಕಲೆ, ಸಂಸ್ಕೃತಿ, ಕಲಾವಿದ, ಜನಪದ ಕತೆ; ಹೀಗೆ ಒಟ್ಟು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಪ್ರಕಾರಗಳನ್ನು ಕೃತಿರೂಪದಲ್ಲಿ ಜನಪದರ ಮುಂದೆ, ಜನಸಾಮಾನ್ಯರ ಸನಿಹಕ್ಕೆ ಕೊಂಡೊಯ್ಯುವ ಪ್ರಕಟಣ ಕಾರ್ಯದಲ್ಲೂ ಕ್ರಿಯಾಶೀಲವಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರ ದೂರದೃಷ್ಟಿಯ ಆಶಯದಂತೆ 'ಜಾನಪದ ವರ್ಷ'ದ ಮೂಲಕ ಆಯಾ ವರ್ಷದಲ್ಲಿ ಪ್ರಕಟವಾದ ಕೃತಿಗಳ ವಿಮರ್ಶಾ ಸಂಕಲನ ರೂಪುಗೊಂಡಿದೆ.

ಈಗಾಗಲೇ ಡಾ. ಎಸ್.ಪಿ. ಪದ್ಮಪ್ರಸಾದ್ ಅವರ ಸಂಪಾದಕತ್ವದಲ್ಲಿ ಜಾನಪದ ವರ್ಷ-೨೦೧೧ ಮತ್ತು ಡಾ. ಕೆ.ವಿ. ಮುದ್ದವೀರಪ್ಪ ಅವರ ಸಂಪಾದಕತ್ವದಲ್ಲಿ ಜಾನಪದ ವರ್ಷ-೨೦೧೨ ವಿಮರ್ಶಾ ಸಂಕಲನಗಳು ಪ್ರಕಟವಾಗಿದೆ. ೨೦೧೩ರ ಜಾನಪದ ವರ್ಷದ ಫಸಲನ್ನು ಗುರುತಿಸುವ ಮಹತ್ವದ ಹೊಣೆಗಾರಿಕೆಯನ್ನು ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಹಾಗೂ ನನ್ನ ಗುರುಗಳೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಅವರು ನನಗೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ೨೦೧೩ನೇ ಸಾಲಿನಲ್ಲಿ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಕೃತಿಗಳನ್ನು ಸಂಗ್ರಹಿಸಿ, ವಿಮರ್ಶಕರಿಂದ ಲೇಖನಗಳನ್ನು ಸಂಪಾದಿಸಿ ಈ ಸಂಕಲನವನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಪೂರೈಸಿದ್ದೇನೆ. ಈ ಕಾರ್ಯವನ್ನು ಆಗುಮಾಡಲು ಅನುಮತಿಸಿದ ಮಾನ್ಯ ಕುಲಪತಿ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಮೌಲ್ಯಮಾಪನ ಕುಲಸಚಿವರಾದ ಪ್ರೊ. ಸ.ಚಿ. ರಮೇಶ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಅವರಿಗೆ ನಾನು ಆಭಾರಿಯಾಗಿದ್ದೇನೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಬ್ಬಂದಿ ವರ್ಗಕ್ಕೆ ನನ್ನ ವಂದನೆಗಳು.

ವಿಮರ್ಶೆ, ಸಮೀಕ್ಷೆ ಕಾರ್ಯದಲ್ಲಿ ವಿವಿಧ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು ಮತ್ತು ವಿಶ್ರಾಂತ ಪ್ರಾಧ್ಯಾಪಕರು ಸಹಕರಿಸಿದ್ದಾರೆ. ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರು, ಉಪನ್ಯಾಸಕರು, ಯುವ ಸಂಶೋಧಕರು ಮತ್ತು ಮಿತ್ರರು ಈ ಕಾರ್ಯದಲ್ಲಿ ಆದಷ್ಟು ಬೇಗ ಪ್ರಕಟವಾಗುವ ರೀತಿಯಲ್ಲಿ ಸಮೀಕ್ಷಾ ಲೇಖನಗಳನ್ನು ನೀಡಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಮಂಗಳೂರು, ಹುಬ್ಬಳ್ಳಿ, ಧಾರವಾಡ, ತುಮಕೂರು, ಬೆಂಗಳೂರು, ಮೈಸೂರು ಮುಂತಾದ ನಗರಗಳ ಪುಸ್ತಕದಂಗಡಿಗಳಲ್ಲಿ ಜಾನಪದ ಕೃತಿಗಳನ್ನು ತಡಕಾಡಿ ಸಂಗ್ರಹಿಸಿ ಕಳುಹಿಸಿಕೊಟ್ಟು ಸಹಕರಿಸಿದ ಡಾ. ಜ್ಯೋತ್ಸ್ನಾ ಚಂದ್ರಕಾಂತ ಮತ್ತು ತುಮಕೂರಿನ ಶ್ರೀ ಲೋಕೇಶ ಇವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ವಿಮರ್ಶಾ ಲೇಖನಗಳನ್ನು ಕಳುಹಿಸಿಕೊಡುವಲ್ಲಿ ಸಹಕರಿಸಿದ ಸಹೋದ್ಯೋಗಿ ಮಿತ್ರರಾದ ಶ್ರೀ ಕೆ.ಎಲ್. ರಾಜಶೇಖರ್ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಡಾ. ಚಂದ್ರಪ್ಪ ಸೊಬಟಿ ಅವರಿಗೆ ವಂದನೆಗಳು.

೨೦೧೩ರಲ್ಲಿ ಪ್ರಥಮ ಮುದ್ರಣಗೊಂಡ ಜಾನಪದ ಕೃತಿಗಳನ್ನು ಕಳುಹಿಸಿಕೊಟ್ಟ ಲೇಖಕ/ಸಂಪಾದಕ/ಪ್ರಕಾಶಕರಿಗೆ ನನ್ನ ವಂದನೆಗಳು. ಸಮಯಕ್ಕೆ ಸರಿಯಾಗಿ ತಾಳ್ಮೆಯಿಂದ ಸುಂದರವಾಗಿ ಅಕ್ಷರ ಸಂಯೋಜಿಸಿ ಪುಟವಿನ್ಯಾಸ ಮಾಡಿ ಸಹಕರಿಸಿದ ಮಿತ್ರ ಕಮಲಾಪುರದ ಸವಿತ ಗ್ರಾಫಿಕ್ಸ್‌ನ ಶ್ರೀ ಜೆ. ಬಸವರಾಜ, ಮುಖಪುಟ ವಿನ್ಯಾಸ ಮಾಡಿಕೊಟ್ಟ ಹಂಪಿ, ಕನ್ನಡ ವಿಶ್ವವಿದ್ಯಾಲಯದ ಕಲಾವಿದರಾದ ಶ್ರೀ ಕೆ.ಕೆ. ಮಕಾಳಿ, ಅಂದವಾಗಿ ಮುದ್ರಿಸಿದ ರಾಜಾ ಪ್ರಿಂಟರ್ಸ್, ಬೆಂಗಳೂರು ಇವರಿಗೆ ಮತ್ತು ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ನನ್ನ ಅನಂತ ವಂದನೆಗಳು.

ಡಾ. ಎಸ್. ಮೋಹನ್

ಪರಿವಿಡಿ

೧

ಪ್ರಸ್ತಾವನೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿ ಗಮನಾರ್ಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ. ಮಹತ್ವದ ಯೋಜನೆಗಳಲ್ಲೊಂದಾದ 'ಜಾನಪದ ವರ್ಷ'ಕ್ಕೆ ಈಗ ಮೂರರ ಹರೆಯ. ಜಾನಪದ ವರ್ಷ-೨೦೧೧ ಮತ್ತು ಜಾನಪದ ವರ್ಷ-೨೦೧೨ ಈಗಾಗಲೇ ಪ್ರಕಟವಾಗಿವೆ. ಇದೀಗ ಜಾನಪದ ವರ್ಷ-೨೦೧೩ ಪ್ರಕಟವಾಗುತ್ತಿದೆ. ಒಂದು ವರ್ಷದ ಅವಧಿಯಲ್ಲಿ ಒಂದು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಕೃತಿಗಳನ್ನು ವಿಮರ್ಶಿಸಿ ಗ್ರಂಥರೂಪದಲ್ಲಿ ತರುವ ಒಂದು ಸಂಪ್ರದಾಯ ನಾಡಿನ ಅನೇಕ ವಿಶ್ವವಿದ್ಯಾಲಯಗಳು ಮಾಡಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಯಾವ ವಿಶ್ವವಿದ್ಯಾಲಯದಿಂದಲೂ ಕೃತಿಗಳ ವಿಮರ್ಶಾ ಲೇಖನಗಳು ಪುಸ್ತಕರೂಪದಲ್ಲಿ ಪ್ರಕಟವಾಗುತ್ತಿಲ್ಲ. ಇದೀಗ ನಮ್ಮ ಹೆಮ್ಮೆಯ, ದೇಸಿಜ್ಞಾನದ ಅಧ್ಯಯನ ಮತ್ತು ಅದಕ್ಕೊಂದು ಅಧಿಕೃತ ಮನ್ನಣೆ ಕೊಡಲು ಸ್ಥಾಪಿತವಾಗಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಜಾನಪದ ಕ್ಷೇತ್ರದಲ್ಲಿ ಪ್ರಕಟವಾದ ಕೃತಿಗಳ ವಿಮರ್ಶಾ ಸಂಕಲನವನ್ನು ಪ್ರಕಟಿಸುವ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗಲು ದೃಢ ಸಂಕಲ್ಪ ಮಾಡಿರುವುದು ಸ್ವಾಗತಾರ್ಹ.

ನಮ್ಮ ಮಾತೃಭಾಷೆಯಾದ ಕನ್ನಡ, ಸಾಹಿತ್ಯ, ಭಾಷೆಗೆ ಸಂಬಂಧಿಸಿದ ನೂರಾರು ಕೃತಿಗಳು ಪ್ರತಿವರ್ಷ ಪ್ರಕಟವಾಗುತ್ತಲೇ ಇರುತ್ತವೆ. ಹಾಗೆಯೇ ಇತ್ತೀಚಿನ ವರ್ಷಗಳಲ್ಲಿ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಬಹುಮುಖಿ ವಿಷಯಗಳ ಕೃತಿಗಳು ಸಾಹಿತ್ಯಕ್ಕೆ ಪೈಪೋಟಿಯೆಂಬಂತೆ (ಪೈಪೋಟಿಯಲ್ಲ) ಪ್ರಕಟವಾಗುತ್ತಿರುವುದು ಗಮನಾರ್ಹ. ಆದರೆ ಒಳ್ಳೆಯ ಕಾಳುಗಳ ಜೊತೆ ಜೊತೆಗೆ ಜೊಳ್ಳುಗಳು ಸೇರಿಕೊಂಡಂತೆ ಕೆಲವು (ನಾಮ್‌ಕೆವಾಸ್ತೆ) ಕೃತಿಗಳೂ ಪ್ರಕಟಗೊಂಡಿರುವುದನ್ನು ಅಲ್ಲಗಳೆಯಲಾಗದು. ಆದರೆ ಜಾನಪದವೆಂದರೆ ಮೂಢನಂಬಿಕೆಗಳ ಗಡಾಣ; ಏನೂ ಇಲ್ಲ ಎಂದು ಮೂಗು ಮುರಿಯುವವರ ಬಾಯಿ ಮುಚ್ಚಿಸುವಂತೆ ಗಂಭೀರವಾದ ಸಂಶೋಧನಾತ್ಮಕ, ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳ ಮೇಲೆ ಬೆಳಕು ಚೆಲ್ಲುವ ನೂರಾರು ಕೃತಿಗಳು ಪ್ರಕಟವಾಗಿವೆ-ಪ್ರಕಟವಾಗುತ್ತಿವೆ. ಇಂದು

ಮೌಖಿಕ ರೂಪದ ಜಾನಪದಕ್ಕೆ ಲಿಖಿತರೂಪದ ಚರಿತ್ರೆಯಷ್ಟೇ ಮಹತ್ವವಿರುವುದನ್ನು ಗಮನಿಸಬೇಕು. ಲಿಖಿತರೂಪದ ಚರಿತ್ರೆಯ ಹಿಂದೆ ಸತ್ಯಗಳ ಜೊತೆಗೆ ಒತ್ತಡ, ಅವಲಂಬನೆ, ಉಪಕಾರ ಸ್ಮರಣೆಗಳಂಥ ಅಂಶಗಳು ಕೆಲಸ ಮಾಡಿದರೆ, ಮೌಖಿಕ ರೂಪದ ಚರಿತ್ರೆಯ ಹಿನ್ನೆಲೆಯಲ್ಲಿ ಅವ್ಯಾವೂ ಪರಿಣಾಮ ಬೀರುವುದಕ್ಕೆ ಕಷ್ಟಸಾಧ್ಯ. ಜನರ ದನಿಯಾಗಿ ಕಣ್ಣಾರೆ ಕಂಡಿದ್ದನ್ನು, ಕೇಳಿದ್ದನ್ನು ಬಾಯ್ಮಾತಿನಲ್ಲಿ ವರ್ಗಾಯಿಸುತ್ತ ಬಂದಿರುವಂಥದ್ದು. ಕಾಲಾಂತರದಲ್ಲಿ ಇತರೆ ವಿಷಯಗಳ ಸೇರ್ಪಡೆಯಾಗಿರುವುದರಲ್ಲಿ ಅನುಮಾನವಿಲ್ಲ. ಆದರೆ ಅವು ಅಷ್ಟು ಗಂಭೀರವಾದದ್ದಲ್ಲ.

೨೦೧೩ರಲ್ಲಿ ಕನ್ನಡದಲ್ಲಿ ಪ್ರಕಟವಾಗಿರುವ ಜಾನಪದಕ್ಕೆ ಸಂಬಂಧಿಸಿದ ಒಟ್ಟು ೫೧ ಕೃತಿಗಳು ನನಗೆ ದೊರೆತಿವೆ. ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ೨೦೧೩ ಜಾನಪದ ಕೃತಿಗಳ ಪ್ರಕಟಣೆಯಲ್ಲಿ ಹೇಳಿಕೊಳ್ಳುವಂಥ ಫಸಲು ಇಲ್ಲ ಎಂದರೆ ತಪ್ಪಾಗಲಾರದು. ಕಾರಣ ಹಲವು; ಶಾಸ್ತ್ರೀಯ ಭಾಷಾ ಸ್ಥಾನಮಾನ ಯೋಜನೆಯಲ್ಲಿ ೨೦೧೧, ೨೦೧೨ರಲ್ಲಿ ರಾಜ್ಯದ ಹಲವು ವಿಶ್ವವಿದ್ಯಾಲಯಗಳಿಂದ ಅನೇಕ ಪುಸ್ತಕಗಳು ಪ್ರಕಟವಾಗಿದ್ದವು. ೨೦೧೩ರಲ್ಲಿ ಈ ಪ್ರಮಾಣ ಸ್ಥಗಿತಗೊಂಡಂತೆ ಕಾಣುತ್ತದೆ. ವಿಶ್ವವಿದ್ಯಾಲಯಗಳಿಂದ ೨೦೧೩ರಲ್ಲಿ ಜಾನಪದಕ್ಕೆ ಸಂಬಂಧಿಸಿದ ಅಧ್ಯಯನಗಳೇ ಪುಸ್ತಕ ರೂಪದಲ್ಲಿ ಪ್ರಕಟವಾಗಿಲ್ಲ.

ಕರ್ನಾಟಕ ಜಾನಪದ ಅಕಾಡೆಮಿ ಮತ್ತು ಪರಿಷತ್ತು ಅಧ್ಯಕ್ಷರಿಲ್ಲದೆ ಬಡವಾದ ವರ್ಷ. ಈ ನೆಪದಲ್ಲಿ ಯಾವುದೇ ಪ್ರಕಟಣೆಗಳೇ ಆಗಿಲ್ಲ ಎಂಬ ಬೇಸರದ ಮಾತುಗಳು ಕನ್ನಡ ಭವನಕ್ಕೆ ಕಾಲಿಟ್ಟಾಗ ತಿಳಿಯಿತು. ಭವ್ಯ ಪರಂಪರೆ, ಸಂಸ್ಕೃತಿ, ಸಮೃದ್ಧ ಜಾನಪದದ ತವರೆನಿಸಿಕೊಂಡ ಅಖಂಡ ಕರ್ನಾಟಕಕ್ಕಿರುವ ಅಧಿಕೃತ ಸಂಸ್ಥೆ ಕರ್ನಾಟಕ ಜಾನಪದ ಅಕಾಡೆಮಿ ಮತ್ತು ಪರಿಷತ್ತು. ಆದರೆ ಆಡಳಿತಶಾಹಿಗಳ ಬೇಜವಾಬ್ದಾರಿಯಿಂದ ಅಧ್ಯಕ್ಷರಿಲ್ಲದೆ ಸೊರಗುವಂತಾದುದು ದುರದೃಷ್ಟವೇ ಸರಿ. ಬೆಂಗಳೂರಿನಂಥ ನಗರದಲ್ಲಿ ಜಾನಪದದ ಪುಸ್ತಕಗಳನ್ನು ಸುವ್ಯವಸ್ಥಿತವಾಗಿ ಜೋಡಿಸಿ ಮಾರಾಟ ಮಾಡಲು ಅನುಕೂಲವಾಗಿಲ್ಲ ಎಂಬುದು ಅತ್ಯಂತ ಬೇಸರದ ಸಂಗತಿಯೇ ಸರಿ.

ಜಾನಪದ ವರ್ಷ-೨೦೧೩ನ್ನು ಗದ್ಯ ಮತ್ತು ಗೀತ ಸಂಗ್ರಹಗಳು, ವಿಚಾರ, ವಿಮರ್ಶೆ ಮತ್ತು ಸಂಶೋಧನೆ, ಜೀವನ ಪರಿಚಯ, ಜನಪದ ವೈದ್ಯ ಮತ್ತು ಸಂಕೀರ್ಣವೆಂಬ ಆರು ವಿಭಾಗಗಳಾಗಿ ವಿಂಗಡಿಸಲಾಗಿದೆ. ನಮ್ಮ ಪರಿಸರದ ಕನ್ನಡ, ಹವ್ಯಕ ಕನ್ನಡದ ಗಾದೆ, ಜನಪದ ಹಾಡು, ಕೋಲಾಟದ ಹಾಡು, ವಸ್ತುಕೋಶ, ಜನಪದ ಕತೆ, ಯಕ್ಷಗಾನದ ಪ್ರಸಂಗ ಹೀಗೆ ಗದ್ಯ ಮತ್ತು ಪದ್ಯರೂಪದಲ್ಲಿ ಸಂಗ್ರಹವಾದ ಕೃತಿಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ. 'ಜಾನಪದ ವಸ್ತುಕೋಶದಲ್ಲಿ ಕ್ಷೇತ್ರಕಾರ್ಯಾಧಾರಿತ ವಿಶೇಷ ಮಾಹಿತಿಗಳನ್ನು ಸಚಿತ್ರವಾಗಿ ನೀಡಿರುವುದನ್ನು ಗಮನಿಸಬೇಕು. ಇಂದಿನ ಯಾಂತ್ರಿಕ

ಜೀವನದಲ್ಲಿ ಮೂಲೆಗುಂಪಾಗಿರುವ ಅಥವಾ ಕಣ್ಮರೆಯಾಗಿರುವ ದೇಸೀ ವಸ್ತುಗಳು ನೋಡಲು ಸಿಗುತ್ತಿರುವುದು ಭೆರಳೆಣಿಕೆಯಲ್ಲಿ. ಪರಂಪರಾಗತ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿರುವ ಮನೆತನಗಳು ಮತ್ತು ದೇಸಿ ವಸ್ತುಗಳು ಇಂದಿಗೂ ನಮ್ಮ ನಡುವೆ ಇವೆ ಎನ್ನುವುದಕ್ಕೆ ಜಾನಪದ ವಸ್ತುಕೋಶದಲ್ಲಿ ಸಂಗ್ರಹಿಸಿರುವ ವಸ್ತುಗಳು ಸಾಕ್ಷಿ. ಈ ಹಿನ್ನೆಲೆಯಲ್ಲಿ ವಸ್ತುಗಳು ಕೇವಲ ವಸ್ತುಗಳು ಮಾತ್ರವಲ್ಲ. ನಮ್ಮ ಹಿರಿಯ ತಲೆಮಾರಿನ ಗತವೈಭವವನ್ನು, ಮಣ್ಣಿನ ಸೊಗಡನ್ನು ಸೇರಿಸಿಕೊಂಡಂತೆ ಒಟ್ಟು ಜೀವನ ಚರಿತ್ರೆಯನ್ನೇ ಬಿಚ್ಚಿಡುವ ಗಣಿಗಳು. ಈ ರೀತಿಯ ಪಳಿಯುಳಿಕೆಗಳನ್ನು ಎತ್ತಿತೋರಿಸುವ ಕೃತಿಗಳು ಈ ಭಾಗದಲ್ಲಿವೆ. ಯಕ್ಷಗಾನದ ಪ್ರಸಂಗಗಳ ಸಂಗ್ರಹ ಒಳಗೊಂಡಂತೆ ನಮ್ಮೂರ ಜಾನಪದದ ಮೂಲಕ ನಮ್ಮ ಬಾಲ್ಯವನ್ನು ನೆನಪಿಸುವ ಕೃತಿಗಳ ಸಮೀಕ್ಷೆ ಇಲ್ಲಿದೆ.

'ವಿಚಾರ, ವಿಮರ್ಶೆ ಮತ್ತು ಸಂಶೋಧನೆ' ಭಾಗದಲ್ಲಿ ಶೀರ್ಷಿಕೆಯೇ ಸೂಚಿಸುವಂತೆ ವೈಚಾರಿಕ, ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕವಾಗಿ ಕೃತಿರೂಪದಲ್ಲಿ ಪ್ರಕಟವಾದ ಪುಸ್ತಕಗಳನ್ನು ವಿಮರ್ಶಿಸಲಾಗಿದೆ. ಲಘು ಬರಹಗಳ ಸಂಕಲನ, ಸಂಶೋಧನಾತ್ಮಕ ಲೇಖನಗಳ ಸಂಕಲನ. ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳ ಸಂಕಲನಗಳು ಇಲ್ಲಿ ಸಮೀಕ್ಷಿಸಲ್ಪಟ್ಟಿವೆ. ಗಂಡು ಕಲೆಯೆಂದೇ(ಈಗ ಈ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಸಾಕಷ್ಟು ಸಾಧಿಸಿದ್ದಾರೆ) ಹೆಸರು ಪಡೆದ ಯಕ್ಷಗಾನಕ್ಕೆ ಸಂಬಂಧಿಸಿದ ಏಳು ಲೇಖನಗಳು ಇಲ್ಲಿವೆ. ಇತ್ತೀಚಿನ ದಿನಗಳಲ್ಲಿ ಜನಪ್ರಿಯತೆಯನ್ನು ಬಿಟ್ಟು ತೆರೆಮರೆಗೆ ಸರಿಯುತ್ತಿರುವ ಯಕ್ಷಗಾನವನ್ನು ಪುನರುಜ್ಜೀವನಗೊಳಿಸಲು ಶ್ರಮಿಸುತ್ತಿರುವ ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರ ಈ ನಿಟ್ಟಿನಲ್ಲಿ ಅನೇಕ ಪ್ರಕಟಣೆಗಳನ್ನು ಹೊರತರುತ್ತಿರುವುದು ಸ್ವಾಗತಾರ್ಹ. ಕರಾವಳಿಯ ಗ್ರಾಮೀಣ ಪ್ರದೇಶಗಳಲ್ಲಿ ಈಗ್ಗೆ ಇಪ್ಪತ್ತು-ಮೂವತ್ತು ವರ್ಷಗಳ ಹಿಂದೆ ಇದ್ದ 'ಯಕ್ಷಗಾನದ ವಾತಾವರಣ', ವಿಜೃಂಭಣೆ ಈಗಿಲ್ಲವೆಂದೇ ಹೇಳಬೇಕು. ಸಮೀಕ್ಷಿಸಿದ ವಿಮರ್ಶಕರು ಕೂಡ ಇವುಗಳ ಬಗ್ಗೆ ಗಮನಿಸಿದ್ದಾರೆ. ಇಲ್ಲಿ ಮೂರು ಪಿಎಚ್.ಡಿ. ಸಂಶೋಧನ ಮಹಾಪ್ರಬಂಧಗಳು ಕೃತಿರೂಪ ದಲ್ಲಿ ಈಗ ಪ್ರಕಟವಾಗಿ ನಮ್ಮ ಜಾನಪದ ವರ್ಷ - ೨೦೧೩ರಲ್ಲಿ ಸಮೀಕ್ಷೆಗೊಳಪಟ್ಟಿದೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿರುವ ನಿಯತಕಾಲಿಕೆ 'ಜಾನಪದ ಜಗಲಿ'ಯ ಎರಡು ಸಂಚಿಕೆಗಳು ವಿಮರ್ಶೆಗೊಳಪಟ್ಟಿವೆ. ಹಾಗೆಯೇ ಜಾನಪದವನ್ನು ಬಿಟ್ಟಿರಲಾರದ ಬುಡಕಟ್ಟು, ಬುಡಕಟ್ಟನ್ನು ಬಿಟ್ಟಿರಲಾರದ ಜಾನಪದದ ಹಿನ್ನೆಲೆಯಲ್ಲಿ ಹಂಪಿ, ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗವು ಪ್ರಕಟಿಸಿದ ಬುಡಕಟ್ಟು ಅಧ್ಯಯನದ ಎರಡು ಸಂಚಿಕೆಗಳ ಸಮೀಕ್ಷೆ ಇಲ್ಲಿದೆ. ಪಿಎಚ್.ಡಿ. ಅಧ್ಯಯನದ ಅಧ್ಯಾಯಗಳನ್ನೇ ಯಥಾವತ್ತಾಗಿ ನೀಡುವ ಕೆಟ್ಟ ಸಂಪ್ರದಾಯ ಇತ್ತೀಚಿನ ದಿನಗಳಲ್ಲಿ

ಹೆಚ್ಚಾಗುತ್ತಿದೆ. ಸಂಪಾದಕರು ಅವುಗಳ ಬಗ್ಗೆ ತೋರುವ 'ಉದಾಸೀನತೆ' ಎಂದೇ ಹೇಳಬೇಕು. ಯುವ ಲೇಖಕರನ್ನು ಸರಿಯಾದ ದಾರಿಯಲ್ಲಿ ಪ್ರೋತ್ಸಾಹಿಸಬೇಕೇ ವಿನಃ ಅಡ್ಡದಾರಿಯ ವಿಧಾನಗಳಿಂದಲ್ಲ. ನಿಯತಕಾಲಿಕೆಗಳಲ್ಲಿ ಹಿರಿಯ ವಿದ್ವಾಂಸರ ಲೇಖನಗಳ ಜೊತೆಗೆ ಕಿರಿಯ ಸಂಶೋಧಕರ ಲೇಖನಗಳೂ ಸಹಜವಾಗಿ ಸಂಕಲನಗೊಂಡಿರುತ್ತವೆ. ಈ ಮೂಲಕ ಹೊಸಬರಿಗೆ, ಸಂಶೋಧನ ಕ್ಷೇತ್ರಕ್ಕೆ ಕಾಲಿಡುತ್ತಿರುವವರಿಗೆ ಒಂದು ರೀತಿಯ ಉತ್ತೇಜನ ದೊರಕಿದಂತಾಗುತ್ತದೆ. ತಮ್ಮ ತಮ್ಮ ಜ್ಞಾನದ ದಾರಿಯಲ್ಲಿ ತಪ್ಪಿಲ್ಲದಂತೆ ಮುನ್ನಡೆಯಲು ಸಹಕಾರಿಯಾಗುತ್ತದೆ. ಕಾಲಮಾನದ ಸಂವೇದನೆಗಳಾಗಿರುವ ಈ ರೀತಿಯ ಸಂಕಲನಗಳು ಓದುಗರ ಅಭಿರುಚಿಯನ್ನು ಹೆಚ್ಚಿಸುತ್ತವೆ. ಪ್ರಚಲಿತ ವಿದ್ಯಮಾನ ಗಳನ್ನು ತಿಳಿದು ತಮ್ಮ ಮುನ್ನಡೆಯ ದಾರಿಯನ್ನು ಕಂಡುಕೊಳ್ಳಲು ಓದುಗರಿಗೂ, ಯುವ ಸಂಶೋಧಕರಿಗೂ ಸಹಕಾರಿ.

ದೇಸಿ ಕೃಷಿಯಲ್ಲಿ ಯಾವ ರೀತಿಯಲ್ಲಿ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಬಹುದು ಎಂಬುದರ ಬಗ್ಗೆ ಸ್ವಅನುಭವವನ್ನು ತೆರೆದಿಡುವ ಕೃತಿ 'ನೆಲದೊಡಲ ಚಿಗುರು'. ನಾಡೋಜ ನಾರಾಯಣರೆಡ್ಡಿ ಅವರ ಕೃಷಿಜೀವನವೇ ನಮಗೆ ಒಂದು ರೀತಿಯ ದಾರಿದೀಪವಿದ್ದಂತೆ. ಅವರು ಒಂದು ಕೃಷಿ ವಿಶ್ವವಿದ್ಯಾಲಯ ಮಾಡದಂಥ ಪ್ರಯೋಗಗಳನ್ನು ಮಾಡಿ ಯಶಸ್ವಿಯಾದವರು. ಅವರೇ ಒಂದು ಕೃಷಿ ವಿಶ್ವವಿದ್ಯಾಲಯ ವಿದ್ದಂತೆಯೇ ಸರಿ. ದಣಿವರಿಯದ ಕಲಾವಿದರಾದ ಗೊಂಬೆಗೌಡರ ರಾಮನಗೌಡರು ಮತ್ತು ಬುರ್ರಕಥಾ ಜಯಮ್ಮ ಮತ್ತು ಕರಾವಳಿಯ ಹಾಲಕ್ಕಿ ಒಕ್ಕಲಿಗ ಬುಡಕಟ್ಟನ್ನು ಪರಿಚಯಿಸುವ 'ಜೀವನ ಪರಿಚಯ' ಭಾಗದ ಕೃತಿಗಳನ್ನು ಸಮೀಕ್ಷೆ ಮಾಡಲಾಗಿದೆ.

ನಮ್ಮ ಗ್ರಾಮೀಣ ಪ್ರದೇಶದಲ್ಲಿ ಸಾವಿರಾರು ಪರಂಪರಾಗತ ಜನಪದ ವೈದ್ಯ ಪದ್ಧತಿಯಲ್ಲಿ ಚಿಕಿತ್ಸೆ ನೀಡುವವರು ಈಗಲೂ ಇದ್ದಾರೆ. ಪ್ರಸ್ತುತ ಜಾನಪದ ವರ್ಷ-೨೦೧೩ರಲ್ಲಿ ಈ ಹಿನ್ನೆಲೆಯ ಎರಡು ಲೇಖನಗಳನ್ನು ಸಮೀಕ್ಷಿಸಲಾಗಿದೆ. 'ಸಂಕೀರ್ಣ' ಭಾಗದಲ್ಲಿ ಜಾನಪದ ವಿದ್ವಾಂಸರಿಗೆ, ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡಿದಂತಹ ವಿದ್ವಾಂಸರಿಗೆ ಸಂದಾಯವಾದ ಅಭಿನಂದನ ಗ್ರಂಥಗಳ ವಿಮರ್ಶೆಗಳಿವೆ. ನಮ್ಮ ಜನಪದರ ಜೀವನದ ಒಂದು ಭಾಗವೇ ಆಗಿರುವ ತಂತ್ರ-ಮಂತ್ರಗಳಲ್ಲಿಯೂ ಒಳಿತನ್ನು ಕಂಡ ನೂರಾರು ಉದಾಹರಣೆಗಳು ನಮ್ಮ ಸಮಾಜದಲ್ಲಿ ಸಿಗುತ್ತವೆ. ಈ ಹಿನ್ನೆಲೆಯ ಮಂತ್ರವಾದಕ್ಕೆ ಸಂಬಂಧಿಸಿದ ಅಭಿನಂದನ ಕೃತಿಯೊಂದರ ವಿಮರ್ಶೆಯೂ ಪ್ರಸ್ತುತ ಸಂಕಲನದಲ್ಲಿ ಸೇರಿಕೊಂಡಿದೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಪ್ರಕಟವಾದ 'ತಚ್ಚೋಳಿ ಒದೇನನ್' ಎಂಬ ಜನಪದ ವೀರನ ಕುರಿತ ಕೃತಿಯ ವಿಮರ್ಶೆ ಇಲ್ಲಿದೆ. ನಮ್ಮ ನಾಡಿನ ಹೆಸರಾಂತ ಪ್ರಕಾಶಕರಾದ ಹೇಮಂತ ಸಾಹಿತ್ಯ ತನ್ನ ಸುವರ್ಣ ಮಹೋತ್ಸವದ ನೆನಪಿನಲ್ಲಿ ಮಕ್ಕಳ ಮಾಲಿಕೆಯಲ್ಲಿ ನಮ್ಮ ನಾಡು-

ನುಡಿ, ಸಂಸ್ಕೃತಿ, ಇತಿಹಾಸ, ಪರಂಪರೆಗೆ ಸಂಬಂಧಿಸಿದ ಪುಟ್ಟ ಪುಟ್ಟ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಂತಹ ಕೃತಿಗಳ ಸಮೀಕ್ಷೆ ಇಲ್ಲಿದೆ.

ಜಾನಪದ ಕೃತಿಗಳನ್ನು ಸಂಗ್ರಹಿಸುವಾಗ ಮುಖ್ಯವಾಗಿ ೨೦೧೩ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿರುವ ಕೃತಿಗಳನ್ನು ಮಾತ್ರ ಪರಿಗಣಿಸಿದ್ದೇನೆ. ಮರುಮುದ್ರಣಗೊಂಡ ಪ್ರಕಟಣೆಗಳನ್ನು ಪರಿಗಣಿಸಿಲ್ಲ. ೨೦೧೩ರಲ್ಲಿ ಪ್ರಕಟವಾದ ಕೃತಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂಗ್ರಹಿಸಿದ್ದೇನೆ. ಕೆಲವೊಂದು ಕೃತಿಗಳು ಲಭ್ಯವಾಗಿಲ್ಲ. ರಾಜ್ಯದ ಮೂಲೆ ಮೂಲೆಯಿಂದಲೂ ಹವ್ಯಾಸಿ ಬರಹಗಾರರು, ಸಂಶೋಧಕರು ತಮ್ಮ ತಮ್ಮ ಕೃತಿಗಳನ್ನು ಪ್ರಕಟಿಸುತ್ತಲೇ ಇದ್ದಾರೆ. ಅವುಗಳಲ್ಲಿ ಬಹುತೇಕ ಕೃತಿಗಳು ಪಟ್ಟಣ-ನಗರಗಳ ಪುಸ್ತಕದಂಗಡಿಗಳಲ್ಲಿ ದೊರೆಯದಿರುವುದು ಮತ್ತು ಪ್ರಕಟವಾದ ಎಲ್ಲ ಕೃತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ನೋಂದಾಯಿಸದಿರುವುದು. ಹೀಗೆ ಅನೇಕ ಕಾರಣಗಳಿಂದ ಕೆಲವೊಂದು ಕೃತಿಗಳು ಅಲಭ್ಯವಾಗಿವೆ ಎಂದು ಹೇಳಲು ವಿಷಾದಿಸುತ್ತೇನೆ.

ಒಟ್ಟಾರೆ ಕನ್ನಡ ಜಾನಪದ ಕ್ಷೇತ್ರ ಕೃತಿರೂಪದ ಮೂಲಕ ಇನ್ನಷ್ಟು ಅಭಿವೃದ್ಧಿಯಾಗ ಬೇಕು. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಂತೆ ಇತರೆ ವಿಶ್ವವಿದ್ಯಾಲಯಗಳು ಕಾರ್ಯೋನ್ಮುಖವಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕ ಜಾನಪದ ಪರಿಷತ್ತು, ಅಕಾಡೆಮಿ ಕಾರ್ಯೋನ್ಮುಖವಾಗಬೇಕು.

ನಮ್ಮ ಪರಂಪರಾಗತ ಜ್ಞಾನವನ್ನು ಕೃತಿಗಳ ರೂಪದಲ್ಲಿ ಇಂದಿನ ಯುವಪೀಳಿಗೆಗೆ ತಲುಪಿಸುವ ಕಾರ್ಯ ಮುಂದುವರಿಯಲಿ ಎಂಬುದೇ ನನ್ನ ಆಶಯ.

□□

೨

ಗದ್ಯ ಮತ್ತು ಗೀತ ಸಂಗ್ರಹಗಳು

೧. ನಮ್ಮೂರ ಜಾನಪದ

ಬಾಲಕೃಷ್ಣ ಜಂಬಗಿ
ಪುಟ ೩೫೦, ಬೆಲೆ ರೂ. ೨೦೦/-
ಪ್ರಥಮ ಮುದ್ರಣ ೨೦೧೩
ಆದಿಗಂಗಾ ಪ್ರಕಾಶನ, ಕಾಲೇಜು ರಸ್ತೆ
ಹಾರೊಗೇರಿ-೫೯೧೨೨೦, ರಾಯಭಾಗ ತಾಲೂಕು, ಬೆಳಗಾವಿ ಜಿಲ್ಲೆ

ತೀರಾ ಇತ್ತೀಚೆಗೆ ಕರ್ನಾಟಕದ ಜಾನಪದ ಅಧ್ಯಯನ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಜಾಗತೀಕರಣದ ಈ ಅಬ್ಬರದಲ್ಲೂ ಅದು ತನ್ನ ಇರುವನ್ನು ಭಿನ್ನ ಸ್ವರೂಪದಲ್ಲಿ ಪ್ರಕಟಿಸುತ್ತಿದೆ. ಇದು ಜಾನಪದ ಸಂಸ್ಕೃತಿಗೆ ಇರುವ ಗುಣ. ಆದರೂ ಕೆಲವು ವಿದ್ವಾಂಸರು ಅದು ನಶಿಸಿ ಹೋಗುತ್ತಿದೆ. ಅದನ್ನು ಉಳಿಸಿಕೊಳ್ಳಬೇಕು, ಬೆಳೆಸಬೇಕು ಎಂಬ ಮಾತುಗಳನ್ನು ಹೇಳುತ್ತಿರುವುದು ಕಂಡುಬರುತ್ತಿದೆ. ಈ ಮಾತು ಯಾವ ಕಾಲದಲ್ಲೂ ಇದ್ದದ್ದೇ. ಇದನ್ನು ಮೀರಿ ಹೊಸ ಹೊಸ ಆಯಾಮಗಳಲ್ಲಿ ಅದು ನಿರಂತರವಾಗಿ ಬದುಕುವ ಸತ್ವವನ್ನು ಹೊಂದಿದೆ ಎಂಬುದನ್ನು ಮರೆಯಬಾರದು.

ಜಾಗತೀಕರಣ ಮತ್ತು ಆಧುನೀಕರಣ ಹಾಗೂ ನಗರೀಕರಣ ಈ ಮೂರು ಪ್ರಕ್ರಿಯೆಗಳು ನಮ್ಮ ನೆಲಮೂಲ ಬದುಕನ್ನು, ನಂಬಿಕೆಗಳನ್ನು, ಜ್ಞಾನವನ್ನು ಅನೇಕ ಬದಲಾವಣೆಗಳಿಗೆ ಒಳಗುಮಾಡಿವೆ. ಇದರಿಂದ ಗ್ರಾಮ ಭಾರತದ ಸ್ವರೂಪವೇ ಬದಲಾಗುತ್ತಿರುವುದು ಸತ್ಯ. ತೀರಾ ಇತ್ತೀಚೆಗಂತೂ ಇದರ ವಾಸನೆ ಪ್ರತಿ ಕುಗ್ರಾಮವನ್ನೂ ಪ್ರವೇಶಿಸಿ ಅಲ್ಲಿಯ ಸ್ಥಳೀಯ ಬದುಕಿನ ದಿಕ್ಕನ್ನೇ ಬದಲಿಸಿದೆ. ಇದು ಕೇವಲ ಭಾರತದ ಗ್ರಾಮ ಸಮಾಜವೊಂದರಲ್ಲೇ ಆಗುತ್ತಿದೆ ಎಂಬ ಆತಂಕ ಸರಿಯಲ್ಲ; ಇಡೀ ಭೂಮಂಡಲವೇ ಈ ರೀತಿಯ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿದೆ. ಹಾಗಾಗಿ ಮರೆಯಾಗುತ್ತಿರುವ ನಮ್ಮ ನೆಲಮೂಲ ಸಂಸ್ಕೃತಿಯನ್ನು ಅಭ್ಯಸಿಸುವ ಅಥವಾ

ದೇಸೀ ಚಿಂತನೆಯ ಮೂಲಕ ಜಾಗತೀಕರಣವನ್ನು ಎದುರುಗೊಳ್ಳುವ ಅನಿವಾರ್ಯತೆ ನಮ್ಮ ಮುಂದಿದೆ. ಈ ಹಿನ್ನೆಲೆಯಲ್ಲಿ ಮುಂದುವರೆದ ರಾಷ್ಟ್ರಗಳನ್ನು ಒಳಗೊಂಡಂತೆ ಎಲ್ಲಾ ವಲಯಗಳಲ್ಲಿಯೂ ಸ್ಥಳೀಯ ಸಂಸ್ಕೃತಿಯ ಅಧ್ಯಯನಗಳು ಬರದಿಂದ ಸಾಗಿರುವುದು ಕಂಡುಬರುತ್ತಿದೆ. ಇದರ ಭಾಗವಾಗಿಯೇ ಬಾಲಕೃಷ್ಣ ಜಂಬಗಿ ಅವರ ನಮ್ಮೂರ ಜಾನಪದ ಕೃತಿ ರಚನೆಗೊಂಡಿದೆ.

ಭಾರತದ ಪ್ರತಿ ಹಳ್ಳಿಯ ಬದುಕು, ಕಲೆ, ಆಹಾರ ಪದ್ಧತಿ, ಕೃಷಿ ಪದ್ಧತಿ, ಪಶುಸಂಗೋಪನೆ, ಕುಲಕಸುಬುಗಳು, ವೃತ್ತಿಗಳು, ಗುಡಿಕೈಗಾರಿಕೆ, ವೇಷಭೂಷಣ, ನಂಬಿಕೆ, ಸಂಪ್ರದಾಯ, ಜಾತ್ರೆ, ಉತ್ಸವ ಇತ್ಯಾದಿಯಾಗಿ ಒಟ್ಟಾರೆ ಸಾಂಸ್ಕೃತಿಕ ಬದುಕೇ ಬದಲಾಗುತ್ತಿದೆ. ಈ ಬದಲಾವಣೆಗೆ ದೊಡ್ಡ ಕಾರಣ ನಗರೀಕರಣ ಮತ್ತು ವಲಸೆ. ಇವು ತಂದೊಡ್ಡಿರುವ ಸವಾಲಿನಿಂದ ಇಂದು ಗ್ರಾಮಗಳು ವೃದ್ಧಾಶ್ರಮಗಳಾಗುತ್ತಿವೆ. ಹಳ್ಳಿಯ ಪ್ರತಿ ಯುವಕನು ತನಗನುಕೂಲವಾದ ನಗರಗಳಿಗೆ ಬದುಕನ್ನು ಕಟ್ಟಿಕೊಳ್ಳುವ ಸಲುವಾಗಿ ವಲಸೆ ಹೋಗುತ್ತಿದ್ದಾನೆ. ಅಲ್ಲಿನ ದುಸ್ಥರ ಬದುಕಿಗೆ ಹೆದರಿ ಹಿರಿಯರನ್ನು, ತಂದೆ ತಾಯಿಗಳನ್ನು ತನ್ನ ಹಳ್ಳಿಯಲ್ಲಿಯೇ ಉಳಿಸಿ ಅವರ ಪೋಷಣೆಗೆ ಸಹಕರಿಸುತ್ತಿದ್ದಾನೆ. ಇಂಥ ಅನೇಕ ಸಂಗತಿಗಳು ನಮ್ಮ ನೆಲಮೂಲ ಸಂಸ್ಕೃತಿಯಲ್ಲಿ ಬಿರುಕನ್ನು ಉಂಟುಮಾಡುತ್ತಿವೆ. ಈ ರೀತಿ ವಲಸೆ ಬಂದವರು ಮತ್ತು ಅವರ ಕುಟುಂಬದವರು ಸ್ವಂತ ಹಳ್ಳಿಯಲ್ಲಿಯೂ ಅಭದ್ರರಾಗುತ್ತಾರೆ. ನಗರದಲ್ಲೂ ನೆಲೆಯೂರಲು ಸಾಧ್ಯವಿಲ್ಲದೆ ಅತಂತ್ರವಾಗುವ ಪರಿಸ್ಥಿತಿ ಬಂದೊದಗುತ್ತದೆ.

ಜಾನಪದ ಶ್ರಮ ಸಂಸ್ಕೃತಿಯ ಮೂಲವಾದದ್ದು. ಶ್ರಮಿಕರೇ ಅದರ ಜೀವದ್ರವ್ಯ. ಆ ಶ್ರಮಿಕರ ಜೀವನಾನುಭವಗಳೇ ಜನಪದ ಕತೆ, ಹಾಡು, ಲಾವಣಿ, ಗಾದೆ, ಒಗಟು, ಆಟ ಇತ್ಯಾದಿಯಾಗಿ ಪ್ರಕಟವಾಗಿವೆ. ಅವು ನಮ್ಮ ಪ್ರಾಚೀನ ಬದುಕಿನ ಸಾರಾಮೃತ. ಪ್ರಸ್ತುತ ಬಾಲಕೃಷ್ಣ ಜಂಬಗಿ ಅವರ ನಮ್ಮೂರ ಜಾನಪದ ಈ ಹಿನ್ನೆಲೆಯ ಕೃತಿ. ಶತಮಾನದ ಹಿಂದಿನ ಕರ್ನಾಟಕದ ಗ್ರಾಮವೊಂದರ ಜಾನಪದ ಬದುಕನ್ನು ಇಲ್ಲಿ ದಾಖಲಿಸಿದ್ದಾರೆ. ಒಂದು ಗ್ರಾಮವನ್ನು ಅದರ ಇತಿಹಾಸ, ಅಲ್ಲಿನ ಜನಪದರ ಬದುಕಿನ ಕ್ರಮಗಳನ್ನು ಬಹಳಷ್ಟು ಶ್ರಮವಹಿಸಿ ಕ್ಷೇತ್ರಕಾರ್ಯ ನಡೆಸಿ, ತನ್ನ ಬಾಲ್ಯದ ಸ್ವ-ಅನುಭವಗಳನ್ನು ಬೆರೆಸಿ ಈ ಕೃತಿ ರಚಿಸಿದ್ದಾರೆ. ಇದು ಕೇವಲ ಒಂದು ಗ್ರಾಮದ ಜಾನಪದವನ್ನು ಆಮೂಲಾಗ್ರವಾಗಿ ಪ್ರಕಟಿಸುತ್ತಿದೆ ಎಂದು ಮೇಲ್ನೋಟಕ್ಕೆ ಕಂಡುಬಂದರೂ ಸೂಕ್ಷ್ಮವಾಗಿ ಗಮನಿಸಿದರೆ ಸಮಷ್ಟಿಯಾಗಿ ಇಡೀ ಕರ್ನಾಟಕದ ಪ್ರಾಚೀನ ಬದುಕನ್ನೇ ಅನಾವರಣ ಮಾಡುತ್ತಿದೆ ಎನಿಸುತ್ತದೆ.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದಲ್ಲಿ ಆದ ವೈಚಾರಿಕೆ, ವೈಜ್ಞಾನಿಕ ಬದಲಾವಣೆಗಳಿಂದ ನಮ್ಮ ನೆಲಮೂಲ ಸಂಸ್ಕೃತಿಯಲ್ಲಾದ ಬದಲಾವಣೆಗಳು ಉಂಟು ಮಾಡಿದ ತಲ್ಲಣ, ತವಕಗಳು ಏನೆಂಬುದನ್ನು ಈ ಕೃತಿ ನಿರೂಪಿಸುತ್ತದೆ. ಅಂತಹ

ವೈಜ್ಞಾನಿಕ, ವೈಚಾರಿಕ ಬದಲಾವಣೆಗಳು ಇಂದು ಯಾವ ಸ್ವರೂಪದಲ್ಲಿ ನಮ್ಮ ಬದುಕನ್ನು ಹಸನುಗೊಳಿಸಿವೆ ಅಥವಾ ಅಸಹನೀಯವಾಗಿಸಿವೆ ಎಂಬುದನ್ನು ಚಿಂತಿಸಬೇಕಾಗಿದೆ. ಕಾರಣ ಇಡೀ ಜನಸಮುದಾಯವೇ ಮಾನವೀಯ ಸಂಬಂಧಗಳ ತಂತುಗಳನ್ನು ಕತ್ತರಿಸಿಕೊಂಡಿವೆಯೇನೊ ಎಂಬ ಕಸಿವಿಸಿಯಲ್ಲಿ ಇಂದಿನ ಜನರ ಬದುಕು ಕಂಡು ಬರುತ್ತಿದೆ. ಪ್ರಾಥಮಿಕ ಸಂಬಂಧಗಳು ಮಾಯವಾಗಿ ಯಾಂತ್ರಿಕವಾದ ಹಾಗೂ ಲಾಭ ನಷ್ಟಗಳ ಲೆಕ್ಕಾಚಾರದಲ್ಲಿ ನಮ್ಮ ಬದುಕು ರೂಪುಗೊಳ್ಳುತ್ತಿದೆ. ಈ ವಿಧಾನ ನಮ್ಮ ಸಮಷ್ಟಿ ಬದುಕಿನಲ್ಲಿ ಅನೇಕ ಅನುಮಾನಗಳನ್ನು ಗೊಂದಲಗಳನ್ನು ಸೃಷ್ಟಿಸಿ ಮನುಷ್ಯರ ನಡುವೆ ಕಂದಕಗಳನ್ನು ನಿರ್ಮಾಣ ಮಾಡುತ್ತಿದೆ.

ನಮ್ಮೂರ ಜಾನಪದ ಮೇಲ್ನೋಟದಲ್ಲಿ ಕರ್ನಾಟಕದ ಪ್ರಾಚೀನ ಗ್ರಾಮವೊಂದರ ಜಾನಪದ ಬದುಕಿನ ದಾಖಲೀಕರಣ ಎನ್ನುವಂತೆ ಕಂಡುಬಂದರೂ, ಒಳನೋಟದಲ್ಲಿ ಕಳಚಿಕೊಂಡ ಸಾಂಸ್ಕೃತಿಕ ಘಳಿಗೆಗಳ ಸಂಶೋಧನೆಯಾಗಿ ಕಂಡುಬರುತ್ತದೆ. ಹಾಗಾಗಿಯೇ ಇದೊಂದು ಗ್ರಾಮಚರಿತ್ರೆ, ಗ್ರಾಮಕೋಶ ಎಂದರೆ ತಪ್ಪಲ್ಲ. ಗ್ರಾಮೀಣ ನೆಲೆಯಲ್ಲಿ ಕಂಡುಬರುವ ಶ್ರಮಸಂಸ್ಕೃತಿಯ ಹಿನ್ನೆಲೆಯುಳ್ಳ ತಳಸಮುದಾಯಗಳ ಸಾಂಸ್ಕೃತಿಕ ಸಂಗತಿಗಳ ಅಭಿವ್ಯಕ್ತಿ ಇಲ್ಲಿದೆ. ಹಾಗಾಗಿಯೇ ಇದೊಂದು ಶ್ರಮಸಾಧ್ಯವಾದ ಕೃತಿ. ಇದಕ್ಕೆ ಬದುಕನ್ನು ಪ್ರೀತಿಸುವ ವಿಶಾಲವಾದ ದೃಷ್ಟಿಕೋನ ಬೇಕಾಗುತ್ತದೆ. ಆಗ ಮಾತ್ರ ಎಲ್ಲವನ್ನು ಸಮಭಾವದಿಂದ ಹಿಡಿಯಲು ಸಾಧ್ಯವಾಗುತ್ತದೆ. ಆ ಕೆಲಸವನ್ನು ಬಾಲಕೃಷ್ಣ ಜಂಬಗಿ ಮಾಡಿದ್ದಾರೆ ಅವರು. ಅನುಸರಿಸಿರುವ ಕ್ಷೇತ್ರಕಾರ್ಯದ ವಿಧಾನಗಳಿಂದ ಸಹ ಇಂಥ ಕೃತಿ ಹುಟ್ಟಲು ಸಾಧ್ಯವಾಗಿದೆ.

ಪ್ರಾಚೀನ ಕರ್ನಾಟಕದ ಸಾಮಾನ್ಯ ಮತ್ತು ಸಮೃದ್ಧ ಜನಜೀವನಕ್ಕೆ ಸಂಬಂಧಿಸಿದ ಏನೆಲ್ಲವನ್ನು ಒಳಗೊಂಡ ಸಂಕೀರ್ಣ ವಿಷಯಗಳು ಸಂಕಲನಗೊಂಡು ಮರೆತು ಹೋಗಿರುವ ಒಂದು ಸಮಗ್ರ ಗ್ರಾಮಭಾರತದ ನೂರಾರು ಮಾಹಿತಿಗಳನ್ನು ಈ ನಮ್ಮೂರ ಜಾನಪದ ಕೃತಿ ಒಮ್ಮೆಲೇ ದಿಗ್ದರ್ಶಿಸುತ್ತದೆ. ದಿನನಿತ್ಯದ ಬದುಕಿನಲ್ಲಿ ಇಂತಹ ಹತ್ತಾರು ವಿಷಯಗಳಿಗೆ ನಾವು ಮುಖಾಮುಖಿಯಾಗುತ್ತೇವೆ. ಆದರೂ ನಾವಾರೂ ಗಂಭೀರವಾಗಿ ಪರಿಗಣಿಸದೇ ಇರುವ ಸಂಗತಿಗಳನ್ನು ಬಾಲಕೃಷ್ಣ ಜಂಬಗಿ ಅವರು ಶೋಧಿಸಹೊರಟಿದ್ದಾರೆ. ಆ ಮೂಲಕ ನಮ್ಮನ್ನು ಮತ್ತೆ ನೂರಾರು ವರ್ಷಗಳ ಹಿಂದಕ್ಕೆ ಕರೆದೊಯ್ಯುತ್ತಲೇ ನಾವು ಕಳೆದುಕೊಂಡಿರುವ ನೆಮ್ಮದಿ, ಶಾಂತಿ, ಬದುಕಿನ ಸಮೃದ್ಧತೆಗಳನ್ನು ನೆನಪಿಸುತ್ತಾರೆ. ಅದರ ಜೊತೆ ಜೊತೆಯಲ್ಲಿ ನಮ್ಮ ಜಾನಪದ ಸಂಸ್ಕೃತಿಯ ಹೆಮ್ಮೆಯನ್ನು ಇವತ್ತಿನ ಯುವ ಸಮುದಾಯಕ್ಕೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಈ ಕೃತಿ ಮಾಡುತ್ತಿದೆ. ಈ ಮೂಲಕ ನಮ್ಮ ಜನಪದರ ಬದುಕಿನ ರೀತಿ ನೀತಿಗಳು ಮಾನವೀಯ ಮೌಲ್ಯಗಳು, ಜನರ ನಡುವಣ ಸಂಬಂಧಗಳು, ಜನರ ಪ್ರೀತಿ, ವಿಶ್ವಾಸ, ಸಹಕಾರ, ಒಗ್ಗಟ್ಟು, ಪ್ರಾಮಾಣಿಕತೆ, ಹಬ್ಬ-ಹರಿದಿನಗಳಲ್ಲಿ ಅವರ

ಸಂಭ್ರಮ, ಸಂತೋಷಗಳನ್ನು ಗಮನಿಸಿದರೆ ಇಂದು ನಾವು ಎತ್ತ ಸಾಗುತ್ತಿದ್ದೇವೆ ಆಧುನೀಕರಣದಿಂದ ಏನನ್ನು ಪಡೆದುಕೊಂಡಿದ್ದೇವೆ, ಏನನ್ನು ಕಳೆದುಕೊಂಡಿದ್ದೇವೆ ಎಂಬುದರ ಆಲೋಚನೆಗೆ ಹಚ್ಚುತ್ತದೆ ಈ ಕೃತಿ.

ಶ್ರಮಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಜನಪದ ನಂಬಿಕೆ, ಆಚರಣೆ, ರೂಢಿ ಸಂಪ್ರದಾಯ, ದೈವ, ಗಾದೆ, ಒಗಟು, ಜಾತ್ರೆ, ಉತ್ಸವ, ಚರಿತ್ರೆ, ಕೆರೆ, ಹಳ್ಳ, ಹೊಲ, ಗದ್ದೆ, ತೋಟ, ವೃತ್ತಿ ಕುಲಕಸುಬು, ಪ್ರಾಣಿ, ಪಕ್ಷಿ, ಆಯಗಾರರು, ಮದುವೆ, ದಿಬ್ಬಣ, ಊಟೋಪಚಾರ ಮುಂತಾದ ನೂರಾರು ಸಂಗತಿಗಳನ್ನು ಒಂದು ಕಡೆ ಅಧ್ಯಯನ ಮಾಡಲು ಈ ಕೃತಿ ಸಹಕರಿಸುತ್ತದೆ. ಈ ಕೃತಿಯ ಕಾರ್ಯಕ್ಷೇತ್ರ ಇಂದಿನ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಹಾರೊಗೇರಿ ಎಂಬ ಊರು. ಒಂದು ಸ್ಥಳೀಯ ಅಧ್ಯಯನ ಇಷ್ಟೊಂದು ವ್ಯಾಪಕವಾಗಿ ಮಾಹಿತಿಯನ್ನು ಒದಗಿಸುತ್ತಿರುವುದು ಸೋಜಿಗದ ಸಂಗತಿ. ಲೇಖಕರು ಇದೇ ಊರಿನಲ್ಲಿ ಹುಟ್ಟಿ ಬೆಳೆದಿರುವುದರಿಂದ ಹಾಗೂ ಬಾಲ್ಯದ ಬಹುಕಾಲವನ್ನು ಇಲ್ಲಿಯೇ ಕಳೆದಿರುವುದರ ಅನುಭವ ಇಲ್ಲಿ ಅಭಿವ್ಯಕ್ತಿಗೊಂಡಿದೆ. ಈ ಹಾರೊಗೇರಿಯೂ ಆಧುನಿಕ ವಿದ್ಯಮಾನಗಳಿಗೆ ಒಳಗಾಗಿ ಅನೇಕ ಮಾರ್ಪಾಟುಗಳನ್ನು ಕಂಡಿದೆ, ಕಾಣುತ್ತಿದೆ. ಇದು ಕೇವಲ ಒಂದು ಊರಿನ ಕಥೆಯಲ್ಲ ಇಡೀ ಜಗತ್ತೆ ಈ ಪ್ರಕ್ರಿಯೆಗೆ ಒಳಗಾಗಿದೆ.

ಲೇಖಕರು ತನ್ನ ಹುಟ್ಟೂರಾದ ಹಾರೊಗೇರಿಯ ಜನಪದ ಅಧ್ಯಯನಕ್ಕಾಗಿ ಒಟ್ಟು ಎಂಟು ಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ. ಒಂದು ಸ್ಥಳದ ಅಧ್ಯಯನದ ಸಮಗ್ರತೆಗೆ ಇದು ಸಹಕಾರಿಯಾಗಿದೆ. ಇದು ಏಕಕಾಲದಲ್ಲಿ ಶೋಧನವೂ, ಸಂಗ್ರಹವೂ ಆಗಿ ಸಮಕಾಲೀನ ಬದುಕಿನ ಕೊರತೆಗಳೂ ಆಗಿ ಕಂಡುಬರುತ್ತದೆ. ಅಲ್ಲದೆ ಪ್ರತಿಯೊಬ್ಬ ಓದುಗನಿಗೂ ಈ ಕೃತಿ ಓದುವಾಗ ತಮ್ಮ ತಮ್ಮ ಬಾಲ್ಯ ಮತ್ತು ತಮ್ಮ ಹುಟ್ಟೂರಿನ ನೆನಪು ಕಾಡುವಂತೆ ಮಾಡುವ ಸಾಮರ್ಥ್ಯ ಈ ಕೃತಿಗೆ ಇದೆ. ಪ್ರಸ್ತುತ ಕೃತಿಯನ್ನು ಕುರಿತು ಲೇಖಕರೇ "ನಮ್ಮೂರ ಜಾನಪದದಲ್ಲಿ ೧೯೪೭ಕ್ಕಿಂತ ಮುಂಚಿನ ಎರಡು ಮೂರು ತಲೆಮಾರಿನ ಬದುಕನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ" ಎಂದು ತಿಳಿಸುತ್ತಾರೆ. ಆ ಮೂಲಕ ಇದು ಸ್ವಾತಂತ್ರ್ಯಪೂರ್ವದ ಸಂಗತಿ ಎನ್ನುವಂತೆ ಕಂಡರೂ ಸ್ವಾತಂತ್ರ್ಯಾನಂತರದ ತ್ವರಿತಗತಿಯ ಬದಲಾವಣೆ ಸಾವಿರಾರು ವರ್ಷಗಳಿಂದ ಕಟ್ಟಿಕೊಂಡ ಸ್ಥಳೀಯ ಬದುಕಿನ ಮೇಲೆ ಉಂಟುಮಾಡಿದ ಪರಿಣಾಮವನ್ನು ತಿಳಿಸುತ್ತದೆ.

ಲೇಖಕರು ಈ ಕೃತಿಯ ಎಂಟು ಅಧ್ಯಾಯಗಳಲ್ಲಿ ತಮ್ಮ ಊರಿನ ಭೌಗೋಳಿಕ ಹಿನ್ನೆಲೆ, ಚಾರಿತ್ರಿಕ ಹಿನ್ನೆಲೆ, ಸ್ಥಳೀಯರ ಆರ್ಥಿಕ ಬದುಕು ಅದಕ್ಕೆ ಮೂಲವಾದ ಚಾಕರಿ, ಹೊಲ-ಗದ್ದೆಗಳ ಮಾಹಿತಿ, ಕೂಲಿಕಾರ್ಮಿಕರು, ಕೃಷಿ ವ್ಯವಸ್ಥೆ, ಅದಕ್ಕೆ ಬಳಸುವ ಉಪಕರಣಗಳು, ಸಂತೆ, ಮಳೆಯ ವಿವರಗಳು, ಸಾರಿಗೆ ವ್ಯವಸ್ಥೆ ಹಾಗೂ ಗ್ರಾಮೀಣ ಬದುಕಿನಲ್ಲಿ ಬಹಳ ಪ್ರಮುಖ ಪಾತ್ರವಹಿಸುವ ಆಯಗಾರರು ಹಾಗೂ ಅವರ ಆರ್ಥಿಕ

ಸ್ಥಿತಿಗತಿಗಳು ಹೀಗೆ ಒಂದು ಗ್ರಾಮದಲ್ಲಿ ವಾಸಿಸುವ ಜನಸಮುದಾಯದ ಜೀವನೋಪಾಯಕ್ಕಾಗಿ ಕಂಡುಕೊಂಡ ಎಲ್ಲ ಆರ್ಥಿಕ ಸಂಗತಿಗಳನ್ನು ಸೂಕ್ಷ್ಮವಾಗಿ ಸವಿವರವಾಗಿ ನೀಡುತ್ತಾರೆ. ಇದು ಈ ಅಧ್ಯಯನಕ್ಕೆ ಒಂದು ಭದ್ರ ಬುನಾದಿಯನ್ನು ಒದಗಿಸುತ್ತದೆ.

ಹಾರೊಗೇರಿಯ ಸಾಮಾಜಿಕ ಬದುಕನ್ನು ಕುರಿತು ಬರೆಯುತ್ತಾ ಅಲ್ಲಿನ ಸಾಮಾಜಿಕ ಜೀವನದ ಸ್ಥಿತಿಗತಿಯನ್ನು ಕಟ್ಟುವ ಪ್ರಯತ್ನ ಮಾಡಿದ್ದಾರೆ. ಆ ಊರಿನಲ್ಲಿ ಕಂಡುಬಂದಿದ್ದ ಸಾಂಕ್ರಾಮಿಕ ರೋಗ ರುಜಿನಗಳು ಅವು ಉಂಟುಮಾಡಿದ ತಲ್ಲಣಗಳು, ಅದರಿಂದ ಉಂಟಾದ ಪರಿಣಾಮವನ್ನು ವಿವರಿಸುತ್ತಾರೆ. ಆ ಊರಿನ ಗ್ರಾಮದೈವಗಳು ಮತ್ತು ಅದರ ನಂಬಿಕೆ, ಸಂಪ್ರದಾಯಗಳು, ಊರಿನ ಕುಡಿಯುವ ನೀರಿನ ವ್ಯವಸ್ಥೆ, ಕುಡಿತ, ಕಸುಬು, ಶಿಕ್ಷಣ, ಮದುವೆ, ಊಟೋಪಚಾರ, ವಧು ಪರೀಕ್ಷೆ, ಆಟ, ನಂಬಿಕೆಗಳು, ಕೌಟುಂಬಿಕ ವಿವರಗಳು, ಜೋಗತಿಯರು, ಬೆತ್ತಲಸೇವೆ, ಅಸ್ಪೃಶ್ಯತೆ, ಭಿಕ್ಷಾಟನೆ ಮುಂತಾದ ಸಾಮಾಜಿಕ ಸಂಗತಿಗಳನ್ನು ಸವಿವರವಾಗಿ ಕೊಡುತ್ತಾರೆ. ಈ ಮಾಹಿತಿಗಳು ಒಂದು ಸ್ಥಳೀಯ ಸಾಂಸ್ಕೃತಿಕ ಬದುಕು ಗರ್ಭೀರಿಸಿಕೊಂಡಿರಬಹುದಾದ ನೂರಾರು ಸಂಗತಿಗಳನ್ನು ಗಮನಿಸಿದಾಗ ಹೇಗೆ ಅವೆಲ್ಲವೂ ನಮಗರಿವಿಲ್ಲದಂತೆ ಹುಟ್ಟಿಕೊಂಡವು, ಬದಲಾದವು, ಮಾಯವಾದವು ಎಂಬ ಪ್ರಶ್ನೆಯನ್ನು ಮುಂದಿಡುತ್ತವೆ.

ಆ ಗ್ರಾಮದಲ್ಲಿ ವಾಸಿಸುವ ವಿವಿಧ ಜಾತಿಯ ಜನರ ವಿವಿಧ ಆಚರಣೆಗಳು, ಕೆಲವು ಅಪರೂಪವಾಗಿ ಕಂಡುಬರುತ್ತವೆ. ಕೆಲವು ಎಲ್ಲಾ ಪ್ರದೇಶದಲ್ಲಿಯೂ ಕಂಡುಬರುವ ಆಚರಣೆಗಳೇ ಆಗಿವೆ. ಆದರೂ ಪ್ರತಿಯೊಂದನ್ನೂ ಹುಡುಕಿ ಅದರ ಮೂಲ ಚೂಲಗಳನ್ನು ವಿವರಿಸಿದ್ದಾರೆ. ಅಲ್ಲಿನ ಸಾಂಸ್ಕೃತಿಕ ಬದುಕಿನ ಭಾಗವಾಗಿ ರೂಪುತಳೆದ ಜೋಗುಳದ ಹಾಡು, ಹಂತಿರಾಶಿ, ಕರಿಸಿದ್ದನ ವಾಲ್ಗ, ಕುರುಬರ ಬೋನಗಿ, ಮಳೆ ಕರೆಯುವುದು, ಮರಣಗೀತೆಗಳು, ಗೋಪಾಳಕಾವಲಿ, ಕುರಿ ಬೆದರಿಸುವುದು, ಚೌಡಿಕೆ, ಬಯಲಾಟ, ಸುಡುಗಾಡು ಸಿದ್ಧರು, ಕೊರವಂಜಿಯವರು, ಬುಡಬುಡಿಕೆಯವರು, ದುರುಗಮುರಗಿಯವರು, ಡೊಂಬರು, ಕುರುಮಾಮ್‌ಗಳು, ಕರಡಿ ಆಡಿಸುವವರು, ಶಂಖದಯ್ಯದವರು, ಗೌಲೆತ್ತಿನವರು, ಸಾರುವ ಐಯ್ಯಗಳು, ಗ್ರಾಮೀಣ ಕ್ರೀಡೆಗಳು, ಮಂಗನ ಆಡಿಸುವರು, ಲಂಬಾಣಿಗರು ಮುಂತಾದ ಹತ್ತು ಹಲವು ವಿಚಾರಗಳನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಇವೆಲ್ಲವೂ ಈಗ ನಮ್ಮ ಕಣ್ಣಮುಂದೆ ಇಲ್ಲ. ಇಂದಿನ ಜಾಗತೀಕರಣದಲ್ಲಿ ಅವುಗಳು ಇದ್ದವು ಎಂಬ ಕುರುಹೂ ಸಿಗದಂತಾಗಿದೆ. ಹಾಗಾಗಿ ಈ ಕೃತಿ ಇನ್ನಷ್ಟು ಮುಖ್ಯ ಎನಿಸುತ್ತದೆ. ಇಂದಿನ ಮಕ್ಕಳಿಗಾಗಲೀ, ಯುವ ಪೀಳಿಗೆಗಾಗಲಿ ಇವುಗಳನ್ನು ಹೇಳುವುದು ತೀರಾ ತುರ್ತು. ಕಾರಣ ಜಾಗತೀಕರಣ ನಮ್ಮ ಸಮಯವನ್ನು ಕಸಿದುಕೊಂಡು ಯಂತ್ರಗಳನ್ನಾಗಿ ಮಾರ್ಪಡಿಸಿದೆ. ಅನೇಕ ಒತ್ತಡಗಳನ್ನು ನಿರ್ಮಾಣ ಮಾಡಿ ಮನುಷ್ಯನನ್ನು ಅನೇಕ ರೋಗ-ರುಜಿನಗಳಿಗೆ ಒಳಗುಮಾಡಿದೆ. ಅದರಿಂದ ಹೊರಬರಲು ನಾವು ಮತ್ತೆ ನಮ್ಮ ಸ್ಥಳೀಯ ಸಂಸ್ಕೃತಿ, ಚರಿತ್ರೆಯ ಕಡೆ ಅಲೋಚಿಸುವ

ಅನಿವಾರ್ಯತೆ ನಮ್ಮ ಮುಂದಿದೆ. ನಮ್ಮೊಳಗೆ ಇರುವ ಜಾತಿ, ಉಪಜಾತಿ, ಬುಡಕಟ್ಟುಗಳ ಅನೇಕ ನಡೆ-ನುಡಿಗಳನ್ನು, ಸಂಪ್ರದಾಯಗಳನ್ನು ಲೇಖಕರು ಒಂದೆಡೆ ಇಷ್ಟೊಂದು ಪ್ರಮಾಣದಲ್ಲಿ ಹೇಳಿರುವುದು ಮೆಚ್ಚಲೇಬೇಕಾದ ಸಂಗತಿ, ಹಾಗೆಯೇ ಆ ಪ್ರದೇಶದ ಜಾತ್ರೆ, ಉತ್ಸವ, ಹಬ್ಬ, ಆಚರಣೆ, ಅಮಾವಾಸ್ಯೆ, ಹುಣ್ಣಿಮೆ, ಸಂಪ್ರದಾಯಗಳನ್ನು ವಿಶೇಷವಾಗಿ ತಿಳಿಸುತ್ತಾರೆ.

ಆ ಪ್ರದೇಶದ ಧಾರ್ಮಿಕ ಆಚರಣೆಗಳು, ದೇವರು, ಅದರ ನಂಬಿಕೆಗಳು, ಬಲಿ ಉತ್ಸವ ಮುಂತಾದವುಗಳನ್ನು ಸಹ ಆಮೂಲಾಗ್ರವಾಗಿ ಶೋಧಿಸಿದ್ದಾರೆ. ಅಲ್ಲಿನ ಆಧ್ಯಾತ್ಮದ ಬದುಕು ಸ್ವಾತಂತ್ರ್ಯಪೂರ್ವದ ಕೆಲವು ಅಧಿಕಾರಿಗಳು, ಅಧಿಕಾರಗಳನ್ನು ಅಂದರೆ ಗ್ರಾಮಾಡಳಿತ ಪದ್ಧತಿ, ಕಲೆಕ್ಟರ್ ಮಾಮಲೆದಾರ, ಗಾವುಂಡ ಮುಂತಾದವರ ಜವಾಬ್ದಾರಿಗಳನ್ನು, ಅವರ ಕಾರ್ಯವೈಖರಿಯನ್ನು ವಿವರಿಸಿದ್ದಾರೆ.

ಈ ಎಲ್ಲಾ ಮಾಹಿತಿಗಳನ್ನು ಲೇಖಕರು ಬಹಳ ಶ್ರಮಪಟ್ಟು ಕಲೆಹಾಕಿದ್ದಾರೆ. ಕ್ಷೇತ್ರಕಾರ್ಯವನ್ನು ಮಾಡಿದ್ದಾರೆ. ತಮ್ಮ ಅನುಭವಗಳನ್ನು ಬಳಸಿಕೊಂಡು ಕೃತಿಗೆ ಮುಪ್ಪುರಿ ಶಕ್ತಿ ತುಂಬಿದ್ದಾರೆ. ಅನೇಕ ಜಾತಿ, ಧರ್ಮ, ಪಂಗಡ, ಕಸುಬುದಾರರು, ಬುಡಕಟ್ಟುಗಳ ಸಂಪ್ರದಾಯಗಳನ್ನು ಇಲ್ಲಿ ಹೇಳುವ ಮೂಲಕ ಕೃತಿಗೆ ಒಂದು ಸಮಗ್ರತೆ ಬಂದಿದೆ. ಹಾಗಾಗಿಯೇ ಇದೊಂದು ಶ್ರಮಸಾಧ್ಯವಾದ ಕೃತಿ. ಗ್ರಾಮೀಣ ನೆಲೆಯ ತಳಸಮುದಾಯಗಳ ಚರಿತ್ರೆ, ಅನೇಕ ಸಂಕೀರ್ಣ ವಿಷಯಗಳು ಇಲ್ಲಿ ಲಭ್ಯ. ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಆಡಳಿತ, ಜನಜೀವನ, ರಾಜಕೀಯ, ಭೌಗೋಳಿಕ, ಕ್ರೀಡೆ ಇಂತಹ ಹತ್ತುಹಲವು ಅಧ್ಯಯನ ಶಿಸ್ತುಗಳನ್ನು ಈ ಕೃತಿ ಒಳಗೊಂಡಿದೆ. ಒಂದು ಸ್ಥಳೀಯ ಸಂಸ್ಕೃತಿಯನ್ನು ಅಥವಾ ಗ್ರಾಮ್ಯಭಾರತದ ಸಾಂಸ್ಕೃತಿಕ ನೆಲೆಗಟ್ಟನ್ನು ಅರ್ಥ ಮಾಡಿಸುವ ಬಹಳ ಉತ್ತಮ ಕೃತಿ ಇದು. ಹಾಗಾಗಿಯೇ ಈ ಕೃತಿ ಮೇಲ್ನೋಟದಲ್ಲಿ ದಾಖಲೀಕರಣದಂತೆ ಕಂಡುಬಂದರೂ ಒಳನೋಟದಲ್ಲಿ ಕಳಚಿಕೊಂಡ ಅಥವಾ ಮರೆತುಹೋದ ಸಾಂಸ್ಕೃತಿಕ ರಸಘಳಿಗೆಗಳ ಶೋಧ ಎಂದರೆ ತಪ್ಪಾಗಲಾರದು.

ಡಾ. ಡಿ.ಸಿ. ಚಿತ್ತಯ್ಯ ಪೂಜಾರ್

೨. ಕನ್ನಡ ಗಾದೆ ಮಾತುಗಳು

ಸಂಗ್ರಹ: ಪ್ರೊ. ವಿಶಾಲಾಕ್ಷಿ ದೇಶಪಾಂಡೆ
ಪುಟ ೧೨೦, ಬೆಲೆ ರೂ. ೫೫/-
ಪ್ರಥಮ ಮುದ್ರಣ ೨೦೧೩
ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು - ೫೬೦ ೦೦೧

ಈವರೆಗೆ ಕನ್ನಡ ಗಾದೆಗಳ ಸಂಗ್ರಹಗಳು ಬಹಳಷ್ಟು ಬಂದಿವೆ. ವಿವಿಧ ಮೂಲಗಳಿಂದ ಮೂರು ಸಾವಿರ ಗಾದೆಗಳನ್ನು ಸಂಗ್ರಹಿಸಿರುವ ಪ್ರೊ. ವಿಶಾಲಾಕ್ಷಿ ದೇಶಪಾಂಡೆಯವರು ಅವನ್ನೆಲ್ಲ 'ಅ'ಕಾರಾದಿಯಲ್ಲಿ 'ಕನ್ನಡ ಗಾದೆ ಮಾತುಗಳು' ಎಂಬ ಪುಸ್ತಕದಲ್ಲಿ ನೀಡಿದ್ದಾರೆ. ಗಾದೆ ಮಾತುಗಳು ನಮ್ಮ ಪೂರ್ವಜರ ಅನುಭವದ ಸಾರಗಳಾಗಿದ್ದು ಬುದ್ಧಿ-ವಿವೇಕ, ವಿಡಂಬನೆ, ಹಾಸ್ಯ, ಗಂಭೀರ ವಿಚಾರ ತಿಳಿಸಲು ಅತ್ಯಂತ ಉಪಯುಕ್ತ ವಾಗಿವೆ. ಇವು ಲೇಖಕರಿಗೆ, ಭಾಷಣಕಾರರಿಗೆ, ಮಕ್ಕಳಿಗೆ, ಸಾಹಿತ್ಯಾಭ್ಯಾಸಿಗಳಿಗೆ ಕುತೂಹಲ ಮೂಡಿಸಬಹುದು.

ಉದಾ:- ವಿವೇಕ - ದೀಪದ ಕೆಳಗೆ ಕತ್ತಲೆ, ವಿಡಂಬನೆ - ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ, ಹಾಸ್ಯ - ಅರಸನ ಮೈಮೇಲಿನ ಅರಿವೆ(ಬಟ್ಟೆ) ಅಗಸನ ಮೈಮೇಲೆ.

ಗಾದೆಗಳಲ್ಲಿ ಕೆಲವು ಹ್ರಸ್ವ ಮತ್ತೆ ಕೆಲವು ದೀರ್ಘವಾದವು. ಸಾಮಾನ್ಯವಾಗಿ ಗಾದೆಗಳು ಪೀಳಿಗೆಯಿಂದ ಪೀಳಿಗೆಗೆ ಪ್ರವಹಿಸುವುದರಿಂದ ನೆನೆಪಿನಲ್ಲುಳಿಯಲು ಪ್ರಾಸಬದ್ಧವಾಗಿ, ಅಲಂಕಾರದಿಂದ ಕೂಡಿರುತ್ತವೆ.

ಉದಾ:- ಸಂಕ್ಷಿಪ್ತತೆ - ನಾರಿ ಮುನಿದರೆ ಮಾರಿ, ದೀರ್ಘವಾದವು - ಜಾಣ ಜಾಣನಿಗೆ ಮೂರು ಹಾದಿ, ಜಾಣನಿಗೆ ಕೋಣನಿಗೆ ಎರಡು ಹಾದಿ, ಕೋಣನಿಗೆ ಕೋಣನಿಗೆ ಒಂದೇ ಹಾದಿ, ಪ್ರಾಸ - ಊರಿಗೆ ಬಂದವಳು ನೀರಿಗೆ ಬಾರಳೇ, ಬಾಯಿ ಬಿಟ್ಟರೆ ಬಣ್ಣಗೇಡು

ಇದೇ ರೀತಿ ಗಾದೆಗಳನ್ನು ಈ ಸಂಗ್ರಹದಲ್ಲಿ ಕಾಣಬಹುದು. ಇಲ್ಲಿನ ಗಾದೆಗಳಲ್ಲಿ ಭಾಷೆ, ಉಪಭಾಷೆ, ಸಾಹಿತ್ಯ, ಮದುವೆ, ನಂಬಿಕೆ, ಸಂಪ್ರದಾಯ, ಹಬ್ಬ, ಜನನ-ಮರಣದಂತಹ ವಿಷಯಗಳನ್ನು ಅರಿಯಬಹುದು.

ಈ ಪುಸ್ತಕದಲ್ಲಿ ಕೆಲವು ದೋಷಗಳಿವೆ, ಕೊರತೆಗಳಿವೆ. ಬಳಸಿಕೊಂಡಿರುವ ಗಾದೆಗಳ ಸಂಗ್ರಹ ಪುಸ್ತಕಗಳ ಮತ್ತು ಸಂಗ್ರಹಕಾರರ ವಿವರವನ್ನು ನೀಡಿದ್ದರೆ ಆಸಕ್ತರ ಹೆಚ್ಚಿನ ಓದಿಗೆ ಅನುಕೂಲವಾಗುತ್ತಿತ್ತು. ಬೆರಳೆಣಿಕೆಯ ಗಾದೆಗಳ ಮುಂದೆ ಅಲ್ಲಲ್ಲಿ ಅರ್ಥವನ್ನು ನೀಡಿದ್ದಾರೆ. ಆದರೆ ಹಲವು ಪ್ರಾದೇಶಿಕ ಶಬ್ದಗಳಿಗೆ ಹೆಚ್ಚು ಗಮನಕೊಟ್ಟಿದ್ದರೆ ಅರ್ಥ ವಾದರೂ ತಿಳಿಯುತ್ತಿತ್ತು. ಕೆಲವು ಕ್ಲಿಷ್ಟವಾದ ಶಬ್ದಗಳಿಗೆ ಅರ್ಥ ನೀಡಿಲ್ಲದ್ದು ಕೊರತೆಯಾಗಿದೆ.

ಕೆಲವು ಹೇಳಿಕೆ, ಪ್ರಚಾರ ಪ್ರಾಸಗಳನ್ನು ಗಾದೆಯೆಂದು ದಾಖಲಿಸಿದ್ದಾರೆ. ಬಹುಶಃ 'ಗಾದೆ'ಯ ಬಗ್ಗೆ ಸ್ಪಷ್ಟ ತಿಳಿವಳಿಕೆಯಿಲ್ಲದೆ ಹೀಗಾಗಿರಬಹುದೇ!

ಉದಾ:- ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ (ಸಾಕ್ಷರತಾ ಪ್ರಚಾರ ವಾಕ್ಯ) ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು (ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯೇಸಿ-ಸಂಸ್ಕೃತ ಸುಭಾಷಿತ). ಇಂದಿನ ಮಕ್ಕಳೇ ನಾಳಿನ ನಾಗರಿಕರು(ವಿಶ್ವ ಪ್ರಸಿದ್ಧ ಆಂಗ್ಲ ನುಡಿಯ ಅನುವಾದ). ಕಿವಿಗೆ ಓಲೆ, ಮನೆಗೆ ಒಲೆ, ಜೀವನಕ್ಕೆ ಕಲೆ

(ಪ್ರಾಸ ಕೂಡಿಸಿದ ಮಾತು/ಹೇಳಿಕೆ ಗಾದೆಯಾದೀತೆ?) ವಂಡಾರ ಕಂಬಳ, ಜಸರೂರ ಜಪ್ಪಳ, ಕೋಟೇಶ್ವರ ಕೊಡ್ಷೀ ಹಬ್ಬ ಮೂರು ಕಂಡರೆ (ಮೋಟ) ಮೋಕ್ಷ. (ಇದು ಜನಪದ ನಂಬಿಕೆ ಗಾದೆಯೆಂದು ನೀಡಿದ್ದಾರೆ) ಖಗ ಇದ್ದರೆ ನಭ ಚಂದ (ಈ ಹೊಳ ಎನ ಮಾತನ್ನು ಗಾದೆ ಎಂದು ಒಪ್ಪಬಹುದೆ) ಎಮ್ಮೆಗೆ ಎರಡು ಕೋಡು, ಹೆಮ್ಮೆಗೆ ಎಂಟು ಕೋಟು - ಅಹಂಕಾರಕ್ಕೆ ಅಷ್ಟಮದ ಎಂಟುಕೋಡು ಎಂದಿರಬೇಕಿತ್ತು. ಇಂಥ ದೋಷಗಳು ಈ ಪುಸ್ತಕದಲ್ಲಿ ನುಸುಳಿ ಬಂದುದಾದರೂ ಹೇಗೆ?

ಪುಸ್ತಕದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನಕ್ಕಾಗಿ ಕೆಲವು ಗಾದೆಗಳಿಗೆ ವಿವರಣೆಯನ್ನು ಕೊಟ್ಟಿದ್ದಾರೆ. ಆದರೆ ಕೆಲವು ವಿವರಣೆಗಳಲ್ಲಿ ಗಾದೆಗಳಿಗಿರುವ ಇನ್ನೊಂದು ಮಗ್ಗುಲನ್ನು ನಿರ್ಲಕ್ಷಿಸಿದ್ದಾರೆ. ಉದಾ:- ಶುಭ ಸಮಾರಂಭದಲ್ಲಿ ಹಿರಿಯರಿಗೆ ವೀಳ್ಯ ಹಂಚುವುದು ರೂಢಿಯಲ್ಲಿದೆ. ಹಾಗೆ ನೀಡುವುದನ್ನು ಮರೆತಾಗ ಹಿರಿತನದ ಮರ್ಯಾದೆ, ಗೌರವಕ್ಕೆ ಚ್ಯುತಿ ಬಂದಿತೆಂದು ಭಾವಿಸಿದಾಗ ಇಂಥ ಗಾದೆ ದಕ್ಷಿಣ ಕರ್ನಾಟಕದಲ್ಲಿ ಬಳಕೆಗೆ ಬಂದಿರಬಹುದು(ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು). ಗ್ರಾಮೀಣರು ಮನೆಗೆ ಪಾಯ ಹಾಕುವ ಮುನ್ನ ಅಳತೆ ಮಾಡಿ ನಿವೇಶನವನ್ನು 'ಧ್ವಜ ಆಯ', 'ಗಜ ಆಯ' ಎಂದು ವಿಂಗಡಿಸುವ ಕ್ರಮವಿದೆ. ಆದರೆ ದೇವಾಲಯ ನಿರ್ಮಾಣಕ್ಕೆ 'ಸಿಂಹ ಆಯ'ವನ್ನೇ ವಿಂಗಡಿಸುತ್ತಾರೆ(ಆಯ ನೋಡಿ ಪಾಯ ಹಾಕು).

೨೦೧೨ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ದವರು 'ಸಮಗ್ರ ಕನ್ನಡ ಗಾದೆಗಳು' - ಎಂಬ ಹೆಸರಿನಲ್ಲಿ ನಾಲ್ಕು ಸಂಪುಟಗಳನ್ನು ಪ್ರಕಟಿಸಿದ್ದಾರೆ. ಈ ಸಂಪುಟಗಳನ್ನು ಪ್ರಸ್ತುತ ಪುಸ್ತಕದ ಸಂಗ್ರಹಕಾರರು ಅಗತ್ಯವಾಗಿ ಗಮನಿಸಬೇಕಿತ್ತು.

ಕರ್ನಾಟಕದ ಪ್ರತಿಷ್ಠಿತ, 'ನವಕರ್ನಾಟಕ ಪ್ರಕಾಶನ'ದವರು ಪ್ರಕಟಿಸಿರುವುದು ಈ ಪುಸ್ತಕದ ಹೆಗ್ಗಳಿಕೆ. ಸಂಗ್ರಹಕಾರರ ಪರಿಶ್ರಮ, ಪ್ರಯತ್ನ, ಸಾಹಸ ಮೆಚ್ಚುವಂಥದ್ದು.

ಪ್ರೊ. ಎಂ.ಎಲ್. ನರಸಿಂಹಮೂರ್ತಿ

೩. ಜಾನಪದ ವಸ್ತುಕೋಶ

ಪ್ರಧಾನ ಸಂಪಾದಕರು: ಪ್ರೊ. ಅಂಬಳಿಕೆ ಹಿರಿಯಣ್ಣ
ಸಂಪಾದಕರು: ಪ್ರೊ. ಸ.ಚಿ. ರಮೇಶ
ಪುಟ ೧೭೭, ಬೆಲೆ ರೂ. ೧೪೦/-
ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕನ್ನಡ ನಾಡು-ನುಡಿಯು ಅಮೂಲ್ಯವಾದ ಜಾನಪದ ಆಕರಗಳನ್ನು, ಭಾಷೆಯ ಮೌಖಿಕ ಪರಿಕರಗಳನ್ನು, ಸಂಕಥನಗಳನ್ನು ಸಂಗ್ರಹಿಸುವ, ಶೋಧಿಸುವ ಕಾರ್ಯ ಕಾಲದಿಂದ ಕಾಲಕ್ಕೆ ನಡೆಯುತ್ತ ಬಂದಿದೆ. ನೆಲಸಂಸ್ಕೃತಿಯನ್ನು ಮತ್ತೆ ಮತ್ತೆ ಶೋಧಿಸುವ, ಅದರ ಹರವನ್ನು ವಿಸ್ತರಿಸುವ ಸಾಂಸ್ಕೃತಿಕ ಜವಾಬ್ದಾರಿಯನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಮಾಡುತ್ತಿದೆ. ಆ ನಿಟ್ಟಿನಲ್ಲಿ ಅನೇಕ ಅಧ್ಯಯನ ಗ್ರಂಥಗಳನ್ನು ಪ್ರಕಟಿಸಿದೆ. ಅಂತಹ ಮೌಲಿಕ ಕೃತಿಗಳಲ್ಲಿ ಪ್ರೊ. ಸ.ಚಿ. ರಮೇಶ ಅವರು ಸಂಪಾದಿಸಿದ 'ಜಾನಪದ ವಸ್ತುಕೋಶ'ವು ಪ್ರಮುಖವಾಗಿದೆ. ರಮೇಶ ಅವರು ಕೃತಿ ರಚನೆಗಾಗಿ ತುಂಬ ಶ್ರಮಪಟ್ಟಿದ್ದಾರೆ. ಈ ಅಧ್ಯಯನ ಕ್ಷೇತ್ರಕಾರ್ಯ ಆಧಾರಿತವಾಗಿದೆ.

ಒಂದು ನಾಡುನುಡಿಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಹಲವು ಆಕರಗಳು ಅಗತ್ಯವಾಗುತ್ತವೆ(ಶಾಸನಗಳು, ಹಸ್ತಪ್ರತಿಗಳು, ನಾಣ್ಯಗಳು, ಸ್ಮಾರಕಗಳು ಮುಂತಾದುವು). ಅಂತಹುಗಳಲ್ಲಿ ಜನಪದ ವಸ್ತುಗಳೂ ಸಹಿತ ಪ್ರಮುಖವಾಗಿವೆ. ಇದಕ್ಕೆ ಕಾರಣಗಳೂ ಸ್ಪಷ್ಟವಾಗಿವೆ. ಜಾಗತೀಕರಣದಿಂದ ತೀವ್ರವಾಗಿ ಬದಲಾಗುತ್ತಿರುವ ಲೋಕಕ್ಕೆ ಪರ್ಯಾಯ ಸಂಸ್ಕೃತಿ ಆಕರವಾಗಿ ಅದರ ಪ್ರಸ್ತುತತೆಗೆ ಹಳೆಯದನ್ನು ಸಂಗ್ರಹಿಸುವುದು ಅದನ್ನು ಮುಂದಿನ ತಲೆಮಾರಿಗೆ ರವಾನಿಸುವುದು. ತತ್ಪರಿಣಾಮವಾಗಿ ಜಾನಪದವನ್ನು ಸ್ಥಾಪಿತ ಚೌಕಟ್ಟಿನ ಆಚೆಗೂ ಜಾನಪದವನ್ನು ವಿಶಾಲ ಚೌಕಟ್ಟಿನಲ್ಲಿ ಅರ್ಥೈಸಿಕೊಳ್ಳಬೇಕಾಗುವುದು ಇಂದು ತುಂಬ ಅಗತ್ಯವಾಗಿದೆ.

ನೆಲ ಸಂಸ್ಕೃತಿಯ ಜ್ಞಾನ ಪರಂಪರೆಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಈ ನೆಲೆಯ ಅಧ್ಯಯನ ಇದಾಗಿದೆ. ಈ ಕೃತಿಯಲ್ಲಿ ೯ ಅಧ್ಯಾಯಗಳಿವೆ. ಬೇಸಾಯ, ಮನೆಬಳಕೆ, ಆರಾಧನೆ, ಅಲಂಕಾರ, ಆಟ/ಆಟಿಕೆ, ಕಲೆ ಮಾಪನ, ವೈದ್ಯಕೀಯ ಮತ್ತು ಇತರ ಕಸುಬುಗಳು ಗ್ರಂಥಾಧ್ಯಯನಕ್ಕೆ ಅನುಕೂಲವಾಗುವಂತೆ ವಸ್ತುಸೂಚಿ, ದಾಸ್ತಿಗಳ ಸೂಚಿ ಎಂಬ ಎರಡು ಅನುಬಂಧಗಳಿವೆ. ಇಲ್ಲಿ ದಾಖಲಾದ ಬಹುಪಾಲು ಪದಗಳು ಹಳ್ಳಿಗರ ಬದುಕಿನ ಸಾಂಸ್ಕೃತಿಕ ಪದಗಳಾಗಿವೆ. ಉದಾಹರಣೆಗೆ ಒಂದು ನಮೂದನ್ನು ನೋಡಬಹುದು:

ತತ್ರಾಣಿ : ಕುಡಿಯುವ ನೀರು ಹಾಕಿಡಲು ಬಳಸುವ ಮಣ್ಣಿನ ಸಾಧನ. ಇದನ್ನು ಹೊಲಗಳಲ್ಲಿ ಕೆಲಸ ಮಾಡುವಾಗ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಿಕೊಳ್ಳುವುದಕ್ಕೆ ಬಳಸಿಕೊಳ್ಳುತ್ತಾರೆ. ತತ್ರಾಣಿ ಚಿಕ್ಕದಾಗಿದ್ದರೆ ಅದರ ಕುತ್ತಿಗೆಯ ಭಾಗಕ್ಕೆ ಹಗ್ಗ ಹಾಕಿ ಒಯ್ಯಬಹುದು. ದೊಡ್ಡದಾಗಿದ್ದರೆ ಹಾಗೆ ಮಾಡಿದಾಗ ತತ್ರಾಣಿಯ ಮೇಲ್ಭಾಗವು ಕಿತ್ತುಕೊಳ್ಳುವ ಅಪಾಯವಿರುವುದರಿಂದ ಅದರ ಸುತ್ತಲೂ ಲಂಬವಾಗಿ ಹಗ್ಗವನ್ನು ಆಧಾರವಾಗಿ ಹಾಕಿಕೊಳ್ಳಲು ಪುಟ್ಟ ಓಣಿಯಂತಹ ರಚನೆ ಇರುತ್ತದೆ. ತತ್ರಾಣಿಯನ್ನು ಬಗಲಲ್ಲಿ ಹಾಕಿಕೊಂಡು ಒಯ್ಯುವುದು ರೂಢಿ. ನೀರು ವ್ಯರ್ಥವಾಗದಂತೆ ಸರಿದುಕೊಳ್ಳಲು ತಂತ್ರಾಣಿಯ ಬಾಯಿಯ ಬಳಿ ಸಣ್ಣ ಕೊಳವೆಯಂತಹ ರಚನೆ ಇದೆ. ಅದನ್ನು

ಮುಚ್ಚಲು ಬೆಣೆ ಇರುತ್ತದೆ. ತತ್ರಾಣಿಯು ಆವೆಮಣ್ಣಿನಿಂದ ತಯಾರಾಗಿರುವುದರಿಂದ ಅದರಲ್ಲಿ ಹಾಕಿಟ್ಟಿರುವ ನೀರು ತಂಪಾಗಿರುತ್ತದೆ. ಪ್ಲಾಸ್ಟಿಕ್ ಕ್ಯಾನ್, ವಾಟರ್‌ಬಾಟಲ್‌ಗಳು ತತ್ರಾಣಿಯ ಸ್ಥಾನವನ್ನು ಆಕ್ರಮಿಸಿರುವುದಾದರೂ ಅದರ ಗುಣಮಟ್ಟವನ್ನು ತಲುಪಲು ಸಾಧ್ಯವಾಗಿಲ್ಲ.

ಈ ನಮೂದನ್ನು ಗಮನಿಸಿದಾಗ ಈ ಸಾಂಸ್ಕೃತಿಕ ಕೋಶ ರಚನೆಯ ಸ್ವರೂಪ ಅರ್ಥವಾಗುತ್ತದೆ. ಮುಖ್ಯ ನಮೂದು, ಆ ವಸ್ತುವಿನ ರಚನೆ, ಕಲಾಪ್ರತಿಭೆ, ರೈತಾಪಿ ಜನರ ಬದುಕಿಗೆ ಅದು ನೆರವಾಗುವ ರೀತಿ, ಆಧುನಿಕ ಸಂದರ್ಭದಲ್ಲಿಯೂ ಅದು ತನ್ನ ಮಹತ್ವವನ್ನು ಕಳೆದುಕೊಳ್ಳದಿರುವುದು. ಅದನ್ನು ಸಿದ್ಧಪಡಿಸುವ ವಿಧಾನ ಈ ಎಲ್ಲ ಮಾಹಿತಿಗಳನ್ನು ಸಚಿತ್ರ ಸಮೇತವಾಗಿ ವಿವರಿಸಿದ್ದಾರೆ. ಇದರಂತೆ ಕದರು, ಕೂರಿಗೆ, ಅಡ್ಡಣಿಗೆ, ಊರುಗೋಲು, ಗುಳಜುಟ್ಟಿ, ಎಣೆಕಾಯಿ, ದೊಣ್ಣೆಪ್ಪ, ಹರಕೆ ತೊಟ್ಟಿಲು, ಕುಲಾವಿ ಮುಂತಾದ ಸಾಂಸ್ಕೃತಿಕ ಪದಗಳ ಸಚಿತ್ರ ವಿವರಣೆ ದೊರೆಯುತ್ತದೆ. ಇದರಿಂದ ಜನಪದರ ಜೀವನ ಶೈಲಿ, ಅವರ ನಿತ್ಯ ಬದುಕಿನ ರೀತಿ-ನೀತಿಗಳು ಅವರು ಬಳಸುವ ಸಾಧನ ಸಲಕರಣೆಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಈ ವಸ್ತುಗಳ ಬಳಕೆ ಕಡಿಮೆಯಾಗುತ್ತಿದೆ. ಆದರೆ ನಮ್ಮ ಪೂರ್ವಿಕರು ಬಳಸುತ್ತಿದ್ದ ಆ ಸಲಕರಣೆಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಪ್ರದರ್ಶಿಸಿದರೆ ಆ ಮೂಲಕ ನಮ್ಮ ದೇಸಿ ಸಂಸ್ಕೃತಿಯ ಅನಾವರಣ ಮಾಡಿದಂತಾಗುತ್ತದೆ. ಹಳೆಯ ಸಲಕರಣೆಗಳನ್ನು ಆಧುನಿಕ ಸಂದರ್ಭಕ್ಕೆ ತಕ್ಕಂತೆ ನವೀಕರಣಗೊಳಿಸಿದಾಗ ಅವುಗಳನ್ನು ಬಳಸಿದಾಗ ವರ್ತಮಾನದಲ್ಲಿ ಅವು ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಪಡೆದುಕೊಳ್ಳುತ್ತವೆ. ಅವುಗಳನ್ನು ಬಳಸುವಂತೆ ಕನ್ನಡಿಗರನ್ನು ಸಜ್ಜುಗೊಳಿಸಬೇಕಾಗುತ್ತದೆ. ಇದರಿಂದ ಜನಪದರು ಬದುಕನ್ನು ಕಟ್ಟಿಕೊಂಡ ಮತ್ತು ಬದುಕನ್ನು ಕಟ್ಟುವ ರೀತಿ ತಿಳಿಯುತ್ತದೆ.

ಈ ವಸ್ತುಕೋಶದ ಬಂಧ, ತಂತ್ರ, ಸಂವಿಧಾನಗಳು ಅದು ಮಂಡಿಸುತ್ತಿರುವ ಆಶಯವಸ್ತು, ಜೀವನದೃಷ್ಟಿ ಇವುಗಳ ಸಂಬಂಧವನ್ನು ಗುರುತಿಸುವುದೇ ಇಲ್ಲಿಯ ನಮೂದುಗಳ ಗುರಿ. ಈ ಸಂಬಂಧದ ವಿಶ್ಲೇಷಣೆಯಲ್ಲಿ ಸಂಪಾದಕರಿಗೆ ಯಾವುದೇ ಪೂರ್ವ ನಿಶ್ಚಯ ಮಾದರಿಗಳಿಲ್ಲ. ಇದರಿಂದಾಗಿ ಜಾನಪದ ರಾಚನಿಕ ಶಿಲ್ಪವೊಂದರ ಗ್ರಹಿಕೆ ಅವರಿಂದ ಸಾಧ್ಯವಾಗಿದೆ. ಇದು ಈ ಕೃತಿಯ ಮುಖ್ಯ ಸಾಧನೆಯಾಗಿದೆ. ಜನಪದ ಸಾಂಸ್ಕೃತಿಕ ಪದಗಳ ಪಲ್ಲಟಗಳ ಭಾಷೆಯ ಬೆಳವಣಿಗೆಯ ಸಂಕೇತಗಳಾಗಿವೆ. ಈ ಕೃತಿಯಲ್ಲಿ ನಮೂದುಗಳ ಸಂಗ್ರಹ, ವಿವರಣೆ ಒಟ್ಟಂದದಲ್ಲಿ ಕರ್ನಾಟಕ ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಡುವುದರಲ್ಲಿ ಈ ಕೋಶ ಯಶಸ್ವಿಯಾಗಿದೆ. ಸಾಮೂಹಿಕ ವಿದ್ವತ್ ಪ್ರಯತ್ನದಿಂದ ಕೂಡಿದ ಈ ಕೋಶ ಜಾನಪದ ಅಧ್ಯಯನದಲ್ಲಿ ಉಪಯುಕ್ತ ಕೃತಿಯಾಗಿದೆ.

ಡಾ. ಎಸ್.ಎಸ್. ಅಂಗಡಿ

೪. ಹವಿಗನ್ನಡ ಗಾದೆಗಳು

ಡಾ. ಶ್ರೀಕೃಷ್ಣಭಟ್ ಅರ್ತಿಕಜೆ
ಪುಟ ೩೨೦, ಬೆಲೆ ರೂ. ೨೫೦/-
ಪ್ರಥಮ ಮುದ್ರಣ ೨೦೧೩
ಚಿತ್ತಾ ಪಬ್ಲಿಕೇಷನ್ಸ್, ಕೊಟ್ಟಾರ
ಮಂಗಳೂರು–೫೭೫೦೦೬, ದಕ್ಷಿಣ ಕನ್ನಡ ಜಿಲ್ಲೆ

ಡಾ. ಶ್ರೀಕೃಷ್ಣಭಟ್ ಅರ್ತಿಕಜೆಯವರು ಕಳೆದ ನಲವತ್ತೈದು ವರ್ಷಗಳಿಂದ ತಮ್ಮ ಮಾತೃಭಾಷೆಯಾದ ಹವ್ಯಕ ಭಾಷೆಯಲ್ಲಿ ಆಸಕ್ತಿ ವಹಿಸಿ ಸಂಗ್ರಹಿಸಿದ ೨೮೮೮ ಗಾದೆ ಮಾತುಗಳ ಸಂಗ್ರಹ ರೂಪವೇ 'ಹವಿಗನ್ನಡ ಗಾದೆಗಳು' ಎಂಬ ಕೃತಿ. ಡಾ. ಅರ್ತಿಕಜೆ ಯವರು ಬಹಳ ಹಿಂದೆಯೇ ಸಂಗ್ರಹಿಸಿದ್ದ ೧೪೬೧ ಹವ್ಯಕ ಗಾದೆಗಳನ್ನು ೧೯೮೫ರಲ್ಲಿ ಪ್ರಕಟಿಸಿದ್ದಾರೆ. ಇದರೊಂದಿಗೆ ಅನಂತರ ಕಾಲದಲ್ಲಿ ಸಂಗ್ರಹಿತವಾದ ಗಾದೆಗಳನ್ನು ಸೇರಿಸಿ ಒಟ್ಟು ೨೮೮೮ ಗಾದೆಗಳನ್ನು ಈ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಬೆಂಗಳೂರಿನ ಸಾಧನ ಮುದ್ರಣಾಲಯದವರು ಈ ಕೃತಿಯನ್ನು ಮುದ್ರಿಸಿದ್ದಾರೆ.

'ಹವಿಗನ್ನಡ ಗಾದೆಗಳು' ಎಂಬ ಈ ಕೃತಿ ಅತ್ಯುತ್ತಮ ಗಾದೆಗಳ ಸಂಗ್ರಹವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹವ್ಯಕ ಕನ್ನಡ(ಹವಿಗನ್ನಡ) ಬಾರದ ಇತರ ಕನ್ನಡಿಗರಿಗೆ ಈ ಗಾದೆಗಳನ್ನು ಅರ್ಥ ಮಾಡಿಕೊಳ್ಳಲು ಸಾಮಾನ್ಯ ಕನ್ನಡದಲ್ಲಿ ಅರ್ಥವನ್ನು ನೀಡಿದ್ದಾರೆ. ಗಾದೆಗಳ ಅರ್ಥ ಕ್ಲಿಷ್ಟತೆ ಇರುವಲ್ಲಿ, ಅರ್ಥ ವಿಸ್ತಾರವಾದ ಅಗತ್ಯವಿರುವಲ್ಲಿ ಹೆಚ್ಚಿನ ವಿವರಣೆಗಳನ್ನು ನೀಡಿದ್ದಾರೆ.

ಕೃತಿಯ ಪ್ರಾರಂಭದಲ್ಲಿ ಕೃತಿಗೆ ಸಂಬಂಧಿಸಿದಂತೆ ಹದಿನೆಂಟು ಪುಟಗಳ ದೀರ್ಘ ಪ್ರಸ್ತಾವನೆಯೊಂದನ್ನು ಬರೆದಿದ್ದಾರೆ. ಇದರಲ್ಲಿ ಹವ್ಯಕ ಜನಾಂಗದ ಮೂಲ, ಭಾಷೆ, ಸಂಸ್ಕೃತಿಯ ಬಗೆಗಿನ ಐತಿಹಾಸಿಕ ವಿವರಗಳು, ಇತರ ಹಿರಿಯ ವಿದ್ವಾಂಸರು, ಸಾಹಿತಿಗಳು ಬೇರೆ ಬೇರೆ ಕಡೆಗಳಲ್ಲಿ ಉಲ್ಲೇಖಿಸಿದ ಮಾಹಿತಿ ಮೊದಲಾದವುಗಳನ್ನು ನೀಡಿ, ಹವ್ಯಕರ ಹಾಗೂ ಹವಿಗನ್ನಡದ ಭಾಷೆಯ ಸಂಕ್ಷಿಪ್ತ ಪರಿಚಯವನ್ನು ನೀಡಿದ್ದಾರೆ. ಜೊತೆಗೆ ಹವಿಗನ್ನಡ ಭಾಷೆಯಲ್ಲಿರುವ ಗಾದೆಗಳ ಮಹತ್ವವನ್ನು ವಿಶ್ಲೇಷಿಸಿದ್ದಾರೆ. ಕೃತಿಯ ಕೊನೆಯಲ್ಲಿ ಮೂರು ಅನುಬಂಧಗಳಿವೆ. ಒಂದನೆಯ ಅನುಬಂಧದಲ್ಲಿ ಲೇಖಕರ ಸ್ನೇಹಿತರಾದ ಡಾ. ಹರಿಕೃಷ್ಣ ಭರಣ್ಯ ಅವರು ರಚಿಸಿದ ೧೩೮ ನವೀನ ಹವ್ಯಕ ಗಾದೆಗಳ ಸೂಚಿಯೊಂದನ್ನು ನೀಡಿದ್ದಾರೆ. ಎರಡನೆಯ ಅನುಬಂಧದಲ್ಲಿ ಪ್ರಸಕ್ತ 'ಹವಿಗನ್ನಡ ಗಾದೆಗಳು' ಕೃತಿಯ ರಚನೆಗೆ ಪೂರಕವಾದ ಗ್ರಂಥಗಳ ಯಾದಿಯೊಂದನ್ನು ನೀಡಿದ್ದಾರೆ. ಮೂರನೆಯ ಅನುಬಂಧದಲ್ಲಿ ಕೃತಿಯಲ್ಲಿನ ಕಠಿಣ ಪದಗಳಿಗೆ ಅರ್ಥ

ಕೊಡುವ ಶಬ್ದಾರ್ಥ ಕೋಶವಿದೆ. ಈ ಶಬ್ದಾರ್ಥ ಕೋಶ ಅಕಾರಾದಿಯಾಗಿದ್ದು ೩೦ ಪುಟಗಳಿಗೆ ವ್ಯಾಪಿಸಿದೆ.

ಲೇಖಕರು ಕೃತಿಯ ಪ್ರಸ್ತಾವನೆಯಲ್ಲಿ ನೀಡುವ ಗಾದೆ ಮಾತುಗಳ ಬಗೆಗಿನ ವಿವರಣೆ, ಅವುಗಳ ಮಹತ್ವ ಮೊದಲಾದ ವಿಚಾರಗಳು ಗಾದೆ ಮಾತುಗಳನ್ನು ಅರ್ಥೈಸುವಲ್ಲಿ ಸಹಾಯಕವಾಗಿವೆ. ಈ ಕೃತಿಯಲ್ಲಿ ಸಂಗ್ರಹಿತವಾಗಿರುವ ಗಾದೆ ಮಾತುಗಳು ದಕ್ಷಿಣ ಕನ್ನಡ ಜಿಲ್ಲೆಯ ಯಾವುದೋ ಒಂದು ಭಾಗಕ್ಕೆ ಸೀಮಿತವಾಗಿಲ್ಲ. ಹವ್ಯಕ ಸಮುದಾಯ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ, ಕೇರಳದ ಕಾಸರಗೋಡು, ಕುಂಬ್ಳೆ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಸಿರ್ಸಿ, ಕುಮಟಾ, ಯಲ್ಲಾಪುರ ಹಾಗೂ ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ ಮೊದಲಾದ ತಾಲೂಕುಗಳಲ್ಲಿ ವಾಸವಾಗಿರುವುದರಿಂದ ಅವರು ಆಡುವ ಭಾಷೆಯಲ್ಲಿ ಸಹಜವಾಗಿ ವ್ಯತ್ಯಾಸಗಳಿವೆ. ಪ್ರಾದೇಶಿಕವಾದ ವ್ಯತ್ಯಾಸಗಳು, ಸ್ಥಳೀಯ ಭಾಷೆಗಳ ಪ್ರಭಾವ ಮೊದಲಾದ ವಿಚಾರಗಳನ್ನು ಲೇಖಕರು ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ್ದಾರೆ. ಈ ಕೃತಿಯಲ್ಲಿ ಸಂಗ್ರಹಿತವಾಗಿರುವ ಗಾದೆ ಮಾತುಗಳು ಬೇರೆ ಬೇರೆ ಪ್ರದೇಶಗಳಿಗೆ ಸಂಬಂಧಿಸಿದ್ದು, ಗಾದೆ ಮಾತುಗಳಲ್ಲಿ ವೈವಿಧ್ಯವಿದೆ.

ಈ ಕೃತಿಯಲ್ಲಿ ಸಂಗ್ರಹಿಸಲಾಗಿರುವ ಗಾದೆ ಮಾತುಗಳಲ್ಲಿ ಕೆಲವು ಎಲ್ಲಾ ಲಕ್ಷಣಗಳಿರುವ ಪೂರ್ಣರೂಪದ ಗಾದೆಗಳು, ಕೆಲವು ಉಪಮಾನ ರೂಪದ ಗಾದೆಗಳು, ಇನ್ನು ಕೆಲವು ನುಡಿಗಟ್ಟುಗಳ ರೂಪದ ಗಾದೆಗಳು, ಮತ್ತೆ ಕೆಲವು ಹೇಳಿಕೆಗಳ ರೂಪದ ಗಾದೆಗಳಿವೆ. ಲೇಖಕರು ಈ ಎಲ್ಲಾ ವರ್ಗದ ಗಾದೆಗಳನ್ನು ವಿಷಯವಾರು ವಿಂಗಡಿಸದೇ ಎಲ್ಲವನ್ನು ಒಟ್ಟು ಸೇರಿಸಿ ಅಕಾರಾದಿಯಾಗಿ ವಿಂಗಡಿಸಿ ಪ್ರಕಟಿಸಿದ್ದಾರೆ. ಇಲ್ಲಿನ ಗಾದೆ ಮಾತುಗಳನ್ನು ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ - ಹೀಗೆ ಬೇರೆ ಬೇರೆ ವಿಭಾಗಗಳಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಿದರೆ ಸಮಸ್ತ ಹವ್ಯಕ ಸಮಾಜದ ಚಿತ್ರಣ ದೊರೆಯಬಹುದು. ಆದರೆ ಈ ಕೃತಿಯಲ್ಲಿ ಅದಕ್ಕೆ ಅವಕಾಶವಿಲ್ಲದುದರಿಂದ ಗಾದೆಗಳನ್ನು ಉಲ್ಲೇಖಿಸಿ, ಅರ್ಥದ ಜೊತೆ ಅವಶ್ಯಕತೆ ಇದ್ದಲ್ಲಿ ಮಾತ್ರ ಹೆಚ್ಚಿನ ವಿವರಣೆಗಳನ್ನು ನೀಡಿದ್ದಾರೆ.

ಗಾದೆ ಮಾತುಗಳನ್ನು ವಿಭಾಗವಾರು ವಿಂಗಡಿಸಿ, ಅಧ್ಯಯನ ಮಾಡಬಹುದಾದ ರೀತಿಯನ್ನು ಹಾಗೂ ಅದರಿಂದ ಗುರುತಿಸಿಕೊಳ್ಳಬಹುದಾದ ವಿಚಾರಗಳನ್ನು ಕೆಲವು ಉದಾಹರಣೆಗಳ ಮೂಲಕ ಪ್ರಸ್ತಾವನೆಯಲ್ಲಿ ವಿಶ್ಲೇಷಿಸಿದ್ದಾರೆ. ಇದರಿಂದ ಮುಂದೆ ಈ ನಿಟ್ಟಿನಲ್ಲಿ ಅಧ್ಯಯನ ಕೈಗೊಳ್ಳುವವರಿಗೆ ಅನುಕೂಲವಾಗುತ್ತದೆ. ಹವ್ಯಕ ಸಮುದಾಯದ ಸಂಪ್ರದಾಯಗಳು, ಆಚರಣೆಗಳು, ವಿವಿಧ ಸಾಂಸ್ಕೃತಿಕ ಸಮಾರಂಭಗಳ ವೈಶಿಷ್ಟ್ಯಗಳನ್ನು ಪ್ರತಿಬಿಂಬಿಸುವ ಗಾದೆಗಳನ್ನು ಈ ಕೃತಿಯಲ್ಲಿ ಕಾಣಬಹುದು. ಲೇಖಕರು ಪ್ರಸ್ತಾವನೆಯಲ್ಲಿ ಇಂತಹ ಗಾದೆಗಳ ಹಿನ್ನೆಲೆ, ಸಮಯ - ಸಂದರ್ಭಗಳ ವಿವರಗಳನ್ನು

ಉದಾಹರಣೆಗಳ ಮೂಲಕ ನೀಡಿದ್ದಾರೆ. ಇದು ಗಾದೆಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ.

ಗಾದೆಗಳ ಅಕಾರಾದಿ ಈ ಕೃತಿಯ ವೈಶಿಷ್ಟ್ಯ. ಇದರಿಂದ ನಮ್ಮ ಗಮನಕ್ಕೆ ಬಂದಿರುವ ಗಾದೆಗಳನ್ನು ಈ ಕೃತಿಯಲ್ಲಿ ಹುಡುಕಿಕೊಳ್ಳುವುದಕ್ಕೆ ಸುಲಭವಾಗುತ್ತದೆ. ಸುಮಾರು ೨೫೦ ಪುಟಗಳವರೆಗೆ ವ್ಯಾಪಿಸಿರುವ ಈ ಗಾದೆಗಳ ಸಂಗ್ರಹ ಹವ್ಯಕರಿಗೆ ಸಂಬಂಧಿಸಿದ ಭಾಷಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾದ ಅಧ್ಯಯನಕ್ಕೆ ಒಳ್ಳೆಯ ಆಕಾರವಾಗಿದೆ. ಅಲ್ಲದೇ ಈ ಕೃತಿ ಇತರ ಸಮುದಾಯಗಳ ಭಾಷೆಗಳಲ್ಲಿನ ಗಾದೆ, ನುಡಿಗಟ್ಟು ಮೊದಲಾದವುಗಳ ಸಂಗ್ರಹ, ಅಧ್ಯಯನ ಹಾಗೂ ಪ್ರಕಟಣೆಗಳಿಗೆ ಪ್ರೇರಣೆ ಹಾಗೂ ಮಾರ್ಗದರ್ಶನವನ್ನು ನೀಡುತ್ತದೆ. ಈ ಕೃತಿ ಹವ್ಯಕರ 'ಹವಿಗನ್ನಡ'ದಲ್ಲಿ ಪ್ರಕಟವಾಗಿರುವ ಒಂದು 'ಮೌಲಿಕ ಕೃತಿ' ಎನ್ನಬಹುದು.

ಡಾ. ವಸಂತಕುಮಾರ್

೫. ಕರಾವಳಿ ಜನಪದ ಕಥೆಗಳು

ಪ್ರಧಾನ ಸಂಪಾದಕರು: ಶಾ.ಮಂ. ಕೃಷ್ಣರಾಯ
ಸಂಪಾದಕರು: ಶ್ರೀಮತಿ ಶಾಂತಿ ನಾಯಕ
ಪುಟ ೭೦, ಬೆಲೆ ರೂ. ೩೦/-
ಪ್ರಥಮ ಮುದ್ರಣ ೨೦೧೩
ಹೇಮಂತ ಸಾಹಿತ್ಯ, ರಾಜಾಜಿನಗರ, ಬೆಂಗಳೂರು–೧೦

ಬೆಂಗಳೂರಿನ ಹೇಮಂತ ಸಾಹಿತ್ಯ ಐವತ್ತು ವರ್ಷ ತುಂಬಿದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ವಿಶೇಷವಾಗಿ ಸುವರ್ಣೋತ್ಸವ ಮಕ್ಕಳ ಮಾಲೆಯಲ್ಲಿ ಪ್ರಕಟವಾದ ಪುಟ್ಟ ಕೃತಿಯೇ 'ಕರಾವಳಿಯ ಜನಪದ ಕಥೆಗಳು'. ಶ್ರೀಮತಿ ಶಾಂತಿ ನಾಯಕ ಅವರು ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆಯಲ್ಲಿ ಸಂಗ್ರಹಿಸಿದ ಆರು ಪುಟ್ಟ ಪುಟ್ಟ ಮಕ್ಕಳ ಕಥಾ ಸಂಕಲನವಿದು.

ಮಾಣಿಕ್ಯದ ಹರಳಿನವಳು ಕಥೆ ಈ ಸಂಕಲನದ ಅತ್ಯಂತ ದೊಡ್ಡ ಕತೆ. ಕತೆಯ ಕೊನೆಯಲ್ಲಿ ಟಿಪ್ಪಣಿಯನ್ನು ನೀಡಿರುವುದು ಔಚಿತ್ಯಪೂರ್ಣವಾಗಿದೆ. ಆದರೆ "ಪುರುಷ ಪ್ರಧಾನ ಸಂಸ್ಕೃತಿಯಲ್ಲಿಯ ಅರಸನಿಗೆ ಎಲ್ಲಿಲ್ಲದ ಕೋಪ ತರುತ್ತದೆ" ಎಂಬ ಟಿಪ್ಪಣಿದ್ದು, ಚಿಕ್ಕಮಕ್ಕಳಿಗೆ ಈ ರೀತಿಯ ಉನ್ನತವಾದ ಆಲೋಚನೆಯನ್ನು, ತಿಳುವಳಿಕೆಯನ್ನು ತರುತ್ತದೆಯೇ? ಎಂಬ ಪ್ರಶ್ನೆ ಮೂಡುತ್ತದೆ.

'ಕತೆಯ ಹಕ್ಕಿ' ಕತೆಯನ್ನು ಸಂಪಾದಕರು ಅವರ ಅಜ್ಜಿ ಸಾವಿತ್ರಿಯವರಿಂದ ಸಂಗ್ರಹಿಸಲಾಗಿದೆ ಎಂದು ತಿಳಿಸಿದ್ದಾರೆ. ವರುಣ ರಾಜ ಕತೆಯನ್ನು ದಮಯಂತಿ

ಯವರಿಂದ, ಹಾಗೆಯೇ ಗಣೇಶ ಹೆಗಡೆ ಕವಲಕ್ಕಿಯವರಿಂದ ಸಂಗ್ರಹಿಸಿದ ಪಂಚವರ್ಣದ ಗಿಳಿ ಕತೆ ಈ ಸಂಕಲನದಲ್ಲಿದೆ. ಮಾತನಾಡುವ ಗಿಳಿ ಚಿನ್ನದ ಬಾವಿ, ಪುರ್ಲಕ್ಕಿಯ ಕತೆ ಹೀಗೆ ಚಿಕ್ಕಮಕ್ಕಳ ಮನರಂಜನೆಯ ಕತೆಗಳು ಮಕ್ಕಳನ್ನು ಖುಷಿಪಡಿಸುವುದರಲ್ಲಿ ಎರಡು ಮಾತಿಲ್ಲ. ಜಾಣ್ಮೆ, ನೀತಿ, ಶಿಷ್ಟರ ರಕ್ಷಣೆ, ದುಷ್ಟರ ಶಿಕ್ಷೆ, ಪ್ರಾಮಾಣಿಕತೆಯ ಜೊತೆಗೆ ರೋಚಕತೆ, ಮನರಂಜನೆಯನ್ನು ನೀಡುವ ಕತೆಗಳು ನಮ್ಮ ಹಿರಿಯರಿಂದ ಬಂದಂಥ ಬಳುವಳಿ ಎಂದರೆ ತಪ್ಪಾಗಲಾರದು. ಚಿಕ್ಕದಾದ, ಚೊಕ್ಕದಾದ ಕಥಾ ಸಂಕಲನವನ್ನು ಸಂಕಲಿಸಿದ ಶ್ರೀಮತಿ ಶಾಂತಿ ನಾಯಕ ಮತ್ತು ಪ್ರಕಟಿಸಿದ ಹೇಮಂತ ಸಾಹಿತ್ಯ, ಬೆಂಗಳೂರು ಇವರು ಅಭಿನಂದನಾರ್ಹರು.

ಡಾ. ಜ್ಯೋತ್ಸ್ನಾ ಚಂದ್ರಕಾಂತ

೬. ಸಾಣೂರು ಎಂ. ಶ್ರೀಧರ ಪಾಂಡಿ ವಿರಚಿತ
ಜಿನ ಯಕ್ಷಗಾನ ಸಂಪುಟ-೨

ಪ್ರಧಾನ ಸಂಪಾದಕರು: ಡಾ. ಕೆ. ಚಿನ್ನಪ್ಪ ಗೌಡ
ಸಂಪಾದಕರು: ಡಾ. ಕೆ.ಎಂ. ರಾಘವ ನಂಬಿಯಾರ್
ಪುಟ ೧೧೮, ಬೆಲೆ ರೂ. ೬೦/-
ಪ್ರಥಮ ಮುದ್ರಣ ೨೦೧೩
ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ
ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–೫೭೪ ೧೯೯

ಯಕ್ಷಗಾನ ಕವಿ ಸಾಣೂರು ಎಂ. ಶ್ರೀಧರ ಪಾಂಡಿಯವರ ಎರಡನೆಯ ಯಕ್ಷಗಾನ ಸಂಪುಟ. ಮೊದಲನೆಯ ಸಂಪುಟ ಅನೇಕಾಂತ ಪ್ರಕಾಶನದಿಂದ ಪ್ರಕಟವಾಗಿದೆ. ಪ್ರಕೃತ ಯಕ್ಷಗಾನ ಕೃತಿ 'ಜಿನ ಯಕ್ಷಗಾನ ಸಂಪುಟ-೨' ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದಿಂದ ಪ್ರಕಟಗೊಂಡಿದೆ. ಈ ಸಂಪುಟದಲ್ಲಿ ಎರಡು ಮುಖ್ಯ ಪ್ರಸಂಗಗಳಿವೆ. ಮೊದಲನೆಯದು 'ಪಾರ್ಶ್ವನಾಥ ಚರಿತೆ', ಎರಡನೆಯದು 'ಜ್ವಾಲಾಮಾಲಿನೀ ಮಹಾತ್ಮ್ಯ', ಶ್ರೀ ಪಾರ್ಶ್ವನಾಥ ಚರಿತೆ ಪ್ರಸಂಗದಲ್ಲಿ 'ಕಮಠೋಪಸರ್ಗ', ಚಕ್ರೇಶ್ವರ ವಜ್ರನಾಥ' ಹಾಗೂ 'ಶ್ರೀ ತೀರ್ಥಂಕ ರೋದ್ಭವ'ಗಳೆಂಬ ಮೂರು ಭಾಗಗಳಿವೆ. ಹಾಗೆಯೇ ಶ್ರೀ ಜ್ವಾಲಾಮಾಲಿನೀ ಮಹಾತ್ಮ್ಯ' ಪ್ರಸಂಗದಲ್ಲಿ 'ಶ್ರೀ ಜ್ವಾಲಾಮಾಲಿನೀ ದೇವೀ ಉದ್ಭವ'(ಕನಕಮಂಜರಿ ಕಲ್ಯಾಣ), 'ಆಚಾರ್ಯ ಸಮಂತಭದ್ರ' ಹಾಗೂ 'ಅಶನೀಶ ವಿಜಯ' ಎಂಬ ಮೂರು ಭಾಗಗಳಿವೆ.

ಕೃತಿಯ ಪ್ರಾರಂಭದಲ್ಲಿ ಯಕ್ಷಗಾನ ಕೇಂದ್ರದ ನಿರ್ದೇಶಕರೂ ಈ ಕೃತಿಯ ಪ್ರಧಾನ ಸಂಪಾದಕರೂ ಆಗಿರುವ ಡಾ. ಕೆ. ಚಿನ್ನಪ್ಪ ಗೌಡ ಅವರು ಈ ಕೃತಿಯಲ್ಲಿನ ಎರಡೂ ಪ್ರಸಂಗಗಳ ರಾಚನಿಕ ಸ್ವರೂಪ ಹಾಗೂ ಅದರ ಕುತೂಹಲಕರವಾದ ವಿನ್ಯಾಸದ ಬಗ್ಗೆ ನಾಲ್ಕು ಪುಟಗಳ ಪ್ರಸ್ತಾವನೆಯೊಂದನ್ನು ಬರೆದಿದ್ದಾರೆ.

ಈ ಯಕ್ಷಗಾನ ಸಂಪುಟದಲ್ಲಿರುವ ಪ್ರಸಂಗಗಳಲ್ಲಿ ಕಥೆಯ ದೃಷ್ಟಿಯಿಂದ ಒಂದೊಂದರಲ್ಲಿಯೂ ತಲಾ ಮೂರು ಭಾಗಗಳನ್ನು ಮಾಡಲಾಗಿದ್ದರೂ ಅವುಗಳನ್ನು ಪ್ರತ್ಯೇಕವಾದ ಪ್ರಸಂಗಗಳೆಂದು ಪರಿಗಣಿಸಬಹುದು. ಈ ಪ್ರಸಂಗಗಳಲ್ಲಿ ಜಿನ ಪುರಾಣದಲ್ಲಿನ ಚರಿತ್ರೆ ಹಾಗೂ ಅಲ್ಲಿ ಉಲ್ಲೇಖಗೊಂಡಿರುವ ಮಹಿಮೆಗಳನ್ನು ವಿಸ್ತಾರವಾಗಿ ಮತ್ತು ವೈವಿಧ್ಯಮಯವಾಗಿ ನಿರೂಪಿಸಲಾಗಿದೆ.

ಈ ಪ್ರಸಂಗಗಳ ಕರ್ತೃ ಎಂ. ಶ್ರೀಧರ ಪಾಂಡಿಯವರು ಯಕ್ಷಗಾನ ರಂಗದಲ್ಲಿ ಅಂತಹ ಪ್ರಸಿದ್ಧರಾದ ಕಲಾವಿದರಲ್ಲದಿದ್ದರೂ ತಾಳಮದ್ದಳೆ ಕ್ಷೇತ್ರದಲ್ಲಿ ತನ್ನ ಛಾಪನ್ನು ಮೂಡಿಸಿದವರು. ಯಕ್ಷಗಾನ ಕುರಿತಾದ ಕಮ್ಮಟಗಳನ್ನು ಹಮ್ಮಿಕೊಂಡು ಅನುಭವ ಗಳಿಸಿದವರು. ತನ್ನ ಊರಿನಲ್ಲಿ ಯಕ್ಷಗಾನ ಪ್ರದರ್ಶನಗಳನ್ನೇರ್ಪಡಿಸಿ ಹೀಗೆ ಯಕ್ಷಗಾನದ ಅಭಿಮಾನಿಯಾಗಿ ಅನಂತರ ಕಲಾವಿದನಾಗಿ ಬೆಳೆದವರು. ಹೀಗೆ ಯಕ್ಷಗಾನದ ಪರಿಮಿತಿಯ ಅನುಭವದ ನೆಲೆಯಲ್ಲಿಯೇ ಜೈನ ಧಾರ್ಮಿಕ ಪುರಾಣಗಳಲ್ಲಿನ ಕಥೆಗಳನ್ನು ಯಕ್ಷಗಾನಕ್ಕೆ ಅಳವಡಿಸಿ ಸಫಲರಾಗಿದ್ದಾರೆ. ಬದುಕಿರುವಲ್ಲಿಯವರೆಗೆ ಸುಮಾರು ಇಪ್ಪತ್ತೆರಡು ಯಕ್ಷಗಾನ ಪ್ರಸಂಗಗಳನ್ನು ಅವರು ಬರೆದಿದ್ದಾರೆ. ಜೈನ ಧರ್ಮದ ಪುರಾಣಗಳಿಗೆ ಸಂಬಂಧಿಸಿದ ಅವರ ಪ್ರಸಂಗಗಳಲ್ಲಿ ಧಾರ್ಮಿಕ ತತ್ವಗಳನ್ನು ಎಲ್ಲಾ ಮತಧರ್ಮಗಳಿಗೆ ಅನ್ವಯವಾಗುವಂತೆ ನಿರೂಪಿಸಿದ್ದಾರೆ.

ಪ್ರಕೃತ ಯಕ್ಷಗಾನ ಸಂಪುಟದಲ್ಲಿರುವ ಆರು ಭಾಗಗಳು ಎರಡು ಮುಖ್ಯ ಪ್ರಸಂಗಗಳ ತಲಾ ಮೂರು ಭಾಗಗಳಾದರೂ ಸ್ವತಂತ್ರವಾಗಿ ಅಸ್ತಿತ್ವವನ್ನು ಹೊಂದುವ ಅರ್ಹತೆ ಗಳಿರುವ ಪ್ರಸಂಗಗಳಾಗಿವೆ. ಇಲ್ಲಿನ ಪ್ರಸಂಗಗಳ ವಸ್ತು, ಭಾಷೆ, ಆಶಯ ಮೊದಲಾದ ದೃಷ್ಟಿಕೋನಗಳಿಂದ ವೈಶಿಷ್ಟ್ಯಪೂರ್ಣವಾಗಿದೆ. ಕಾವ್ಯ ಪ್ರಪಂಚದಲ್ಲಿ ಚಿರಸಂಚಿತವಾಗಿರುವ ಜೈನ ಪುರಾಣಗಳ ಕಥೆಗಳನ್ನು ಇಲ್ಲಿ ಯಕ್ಷಗಾನಕ್ಕೆ ಅಳವಡಿಸಿಕೊಂಡು ಸಹೃದಯರಿಗೆ ಸುಲಭವಾಗಿ ರಸಾಸ್ವಾದನವಾಗುವಂತೆ ಅವಕಾಶವನ್ನು ಕಲ್ಪಿಸಿಕೊಂಡಿದ್ದಾರೆ. ಮೇಲುನೋಟಕ್ಕೆ ಇಲ್ಲಿನ ಪದ್ಯಗಳು ಅತ್ಯಂತ ಸರಳವಾಗಿ ಕಂಡರೂ ತಾತ್ವಿಕ ವಿವೇಚನೆ ಯಲ್ಲಿ ಗಹನತೆಯನ್ನು ಹೊಂದಿವೆ. ಸಾಮಾನ್ಯವಾಗಿ ಯಕ್ಷಗಾನ ಪ್ರಸಂಗಗಳ ಪದ್ಯಗಳು ಸರಳವಾಗಿಯೇ ಇರುತ್ತವೆ. ಇತರ ಕಾವ್ಯಗಳ ಪದ್ಯಗಳಲ್ಲಿ ಕಂಡುಬರುವ ಕಾವ್ಯಾಂಶಗಳನ್ನು, ಪ್ರೌಢಿಮೆಯನ್ನು ಈ ಪದ್ಯಗಳಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಕಾವ್ಯದ ರಸಗ್ರಹಣ ಕಾವ್ಯವಾಚನದಲ್ಲಾದರೆ ಯಕ್ಷಗಾನದ ರಸಗ್ರಹಣವಾಗುವುದು ರಂಗದಲ್ಲಿನ ಅಭಿನಯ ಹಾಗೂ ಮಾತುಗಾರಿಕೆಯಲ್ಲಿ. ಯಕ್ಷಗಾನ ಪ್ರಸಂಗದಲ್ಲಿನ ಪದ್ಯಗಳಿಗೆ

ವೇಷಧಾರಿಗಳು ಜೀವ ತುಂಬುವ ಕೆಲಸ ಮಾಡುತ್ತಾರೆ. ಹಾಗಾಗಿ ಯಕ್ಷಗಾನದ ಪದ್ಯಗಳು ಸರಳವಾಗಿ ಕಾಣ್ಬುವುದು ವಿಶೇಷವೇನಲ್ಲ. ಮೇಲಾಗಿ ಇಲ್ಲಿನ ಪ್ರಸಂಗಗಳು ಜೈನ ಪರಿಭಾಷೆಗೆ ಸಂಬಂಧಿಸಿರುವುದರಿಂದ ಅದೇ ಜಾಡಿನಲ್ಲಿ ಪದ್ಯಗಳ ರಚನೆಯೂ ಆಗಬೇಕಾಗುತ್ತದೆ. ಈ ನಿಟ್ಟಿನಲ್ಲಿ ಈ ಕೃತಿಯಲ್ಲಿನ ಪ್ರಸಂಗಗಳ ಪದ್ಯಗಳು ಹಾಗೂ ಅವುಗಳ ಉದ್ದೇಶ ರಸಗ್ರಹಣಕ್ಕೆ ಅವಕಾಶ ಕಲ್ಪಿಸುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಯಕ್ಷಗಾನ ಪ್ರದರ್ಶನ ರಂಗದ ಭ್ರಮಾತ್ಮಕತೆ, ರೋಚಕತೆ ಹಾಗೂ ಸಾಂಕೇತಿಕತೆ ಮೊದಲಾದ ಉದ್ದೇಶಗಳನ್ನು ಸಾಧಿಸಿಕೊಳ್ಳುವಲ್ಲಿ ಈ ಪ್ರಸಂಗಗಳು ಗಮನಾರ್ಹವಾಗಿವೆ ಎನ್ನಬಹುದು. ಇಲ್ಲಿನ ಪ್ರಸಂಗಗಳ ಕಥಾ ವಿನ್ಯಾಸ, ಪಾತ್ರ ವೈವಿಧ್ಯ, ರಸ ನಿರೂಪಣೆ, ರಂಗಕಲ್ಪನೆ ಮೊದಲಾದ ವಿಷಯಗಳಲ್ಲಿ ಗಮನಸೆಳೆಯುತ್ತವೆ.

ಜೈನ ಧರ್ಮದ ವಿಷಯಗಳಾದ ತೀರ್ಥಂಕರರ ಚರಿತ್ರೆಯನ್ನು ಜೈನೇತರರು ಈ ಪ್ರಸಂಗಗಳ ಮೂಲಕ ಅರಿಯಬಹುದಾಗಿದೆ. ಈ ಪ್ರಸಂಗಗಳು ಜೈನ ಧರ್ಮದ ಪರಮತತ್ತ್ವಗಳೆನಿಸಿರುವ ಶ್ರಮಸಂಸ್ಕೃತಿ, ವಿಧೇಯತೆ, ಅಪರಿಗ್ರಹ, ಅಸ್ತೇಯ ಹಾಗೂ ಅಹಿಂಸೆ ಮೊದಲಾದವುಗಳನ್ನು ಕಾವ್ಯಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಅರ್ಥೈಸಲು ನೆರವಾಗುತ್ತವೆ. ಅಲ್ಲದೆ ಇಲ್ಲಿನ ಪ್ರಸಂಗಗಳು ಜೈನ ಮತದ ತೀರ್ಥಂಕರರು ಹಾಗೂ ಯಕ್ಷ-ಯಕ್ಷಿಣಿಯರ ನಡುವಿನ ಸಂಬಂಧಾಂತರಗಳನ್ನು ಅವರ ಸ್ಥಾನಮಾನ ಗಳಿಗನುಗುಣವಾಗಿರುವ ಅವರ ಕಾರ್ಯಶೈಲಿಯನ್ನು, ಶ್ರಾವಕರಿಗೆ ಅದರಿಂದಾಗುವ ಪ್ರಯೋಜನ ಮೊದಲಾದ ಮಾಹಿತಿಗಳನ್ನು ನೀಡುತ್ತದೆ.

ಈ ಕೃತಿಯಲ್ಲಿನ ಪ್ರಸಂಗಗಳನ್ನು ಸಂಪಾದಿಸಿ ಪ್ರಕಟಣೆಗೆ ಅನುವುಗೊಳಿಸಿದವರು ನಾಡಿನ ಪ್ರಸಿದ್ಧ ಯಕ್ಷಗಾನ ವಿದ್ವಾಂಸರೂ, ಪ್ರಸಂಗಕರ್ತರೂ ಆಗಿರುವ ಡಾ. ಕೆ.ಎಂ. ರಾಘವ ನಂಬಿಯಾರ್. ಈ ಕೃತಿಯ ಮೊದಲಿಗೆ ಸಂಪಾದನೆಗೆ ಸಂಬಂಧಪಟ್ಟಂತೆ ಹಾಗೂ ಪ್ರಸಂಗದ ಇತಿಮಿತಿಗಳ ಬಗ್ಗೆ ಹಲವು ಮಾತುಗಳನ್ನಾಡಿದ್ದಾರೆ. ಇಲ್ಲಿನ ಪ್ರಸಂಗಗಳನ್ನು ಪ್ರದರ್ಶನಕ್ಕೆ ಅಳವಡಿಸಬೇಕಾದ ಸಂದರ್ಭದಲ್ಲಿ ಆಡುವವರು ಅನುಸರಿಸಬೇಕಾದ ಹಲವು ಸಲಹೆ-ಸೂಚನೆಗಳನ್ನು, ರಂಗನಿರ್ದೇಶನಗಳನ್ನು ಅಲ್ಲಲ್ಲಿ ನಮೂದಿಸಿದ್ದಾರೆ. ಕೃತಿಯ ಕೊನೆಯಲ್ಲಿ ಎರಡು ಅನುಬಂಧಗಳನ್ನು ನೀಡಲಾಗಿದ್ದು, ಅವುಗಳಲ್ಲಿ ಪ್ರಸಂಗಗಳ ಕಥಾ ಸಾರಾಂಶ, ಜಿನ ಮತದ ತತ್ತ್ವಗಳು (ಪ್ರಸಂಗಗಳಲ್ಲಿ ಅಲ್ಲಲ್ಲಿ ಶ್ರೀಧರ ಪಾಂಡಿಯವರು ಕೊಟ್ಟಿರುವಂಥವು) ಮೊದಲಾದವುಗಳ ಕುರಿತು ಟಿಪ್ಪಣಿಗಳನ್ನು ನೀಡಿರುವುದರಿಂದ ಪ್ರಸಂಗಗಳನ್ನು ಅರ್ಥೈಸಿಕೊಳ್ಳುವಲ್ಲಿ ಸಹಕಾರಿ ಯಾಗಿವೆ. ಅಲ್ಲದೆ ರಂಗದ ಮೇಲೆ ವೇಷಧಾರಿಗಳಾಗಿ ಅಭಿನಯಿಸುವವರಿಗೂ ಇದರಿಂದ ತುಂಬಾ ಅನುಕೂಲವಾಗುತ್ತದೆ.

ಡಾ. ವಸಂತಕುಮಾರ್

೭. ಜಾನಪದ ನೀತಿ ಕಥೆಗಳು

ಲಕ್ಷ್ಮೀಗಣಪತಿ
ಪುಟ ೧೨೮, ಬೆಲೆ ರೂ. ೪೦/-
ಪ್ರಥಮ ಮುದ್ರಣ ೨೦೧೩
ಸ್ಟೂಡೆಂಟ್ ಬುಕ್ ಕಂಪನಿ, ಮೊದಲನೇ ಅಡ್ಡರಸ್ತೆ
ಶೃಂಗೇರಿ ಮಠದ ಹತ್ತಿರ, ಕೆ.ಆರ್. ಬಡಾವಣೆ
ತುಮಕೂರು

ಸ್ಟೂಡೆಂಟ್ ಮಕ್ಕಳ ಕಥಾ ಮಾಲಿಕೆಯಲ್ಲಿ ಲಕ್ಷ್ಮೀಗಣಪತಿಯವರು ಬರೆದಿರುವ 'ಜಾನಪದ ನೀತಿ ಕಥೆಗಳು' ಎಂಬ ಈ ಕೃತಿಯಲ್ಲಿ ಮೂವತ್ತೇಳು ಕಥೆಗಳಿವೆ. ಪ್ರತಿಯೊಂದು ಕಥೆಯ ಕೊನೆಯಲ್ಲಿ ನೀತಿ: ಬಹಿರಂಗ ಶುದ್ಧಿಗಿಂತಲೂ ಅಂತರಂಗದ ಶುದ್ಧಿ ದೊಡ್ಡದು, ಸುಳ್ಳು ಹೇಳುವುದು ಸುಲಭ, ನಿಜ ಹೇಳುವುದು ಕಷ್ಟ ಎನ್ನುವಂಥ ಕಥೆಯ ಸಾರಾಂಶದ ಮಾತುಗಳಿವೆ. ಸರಳ ಪದಗಳನ್ನು ಬಳಸಿಕೊಂಡು ಸರಳ ವಾಕ್ಯಗಳಲ್ಲಿ ಕಥೆಗಳನ್ನು ಬರೆದಿರುವುದರಿಂದ ಮತ್ತು ದೊಡ್ಡ ಅಕ್ಷರಗಳಿಂದ ಮುದ್ರಿತವಾಗಿರುವುದರಿಂದ ಹಾಗೂ ಕಥೆಗಳಿಗೆ ರೇಖಾಚಿತ್ರಗಳನ್ನು ನೀಡಿರುವುದರಿಂದ ಮಕ್ಕಳು ಸುಲಭವಾಗಿ ಓದಿ ಅರ್ಥ ಮಾಡಿಕೊಳ್ಳಬಹುದಾಗಿದೆ.

ಇದರಲ್ಲಿ ಇತಿಹಾಸ, ಪುರಾಣ, ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಕಥೆಗಳಿರುವುದರಿಂದ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ, ನೀತಿಯುತವಾದ ಬದುಕನ್ನು ರೂಪಿಸಿಕೊಳ್ಳಲು ಸಹಾಯಕವಾಗುವುದರಲ್ಲಿ ಸಂಶಯವಿಲ್ಲ. ನಮ್ಮ ಹಳ್ಳಿಗಾಡಿನ ಜನಪದ ಕಥೆಗಳ ಕಣಜವು ಅಗಾಧವಾದದ್ದು. ಮನುಷ್ಯ ಪ್ರಾಣಿ ಇತರ ಪ್ರಾಣಿಗಳಂತೆ ಇರದೆ ಅನೇಕ ಸಂಕಷ್ಟಗಳ ಸಮಯದಲ್ಲಿ ಅಧೀರನಾಗಿ ವರ್ತಿಸುತ್ತಾನೆ, ನೋವುಗಳಿಗೆ ನರಳುತ್ತಾನೆ. ಕಷ್ಟಗಳಿಗೆ ಕುಗ್ಗುತ್ತಾನೆ. ಸೋಲುಗಳಿಗೆ ಅಂಜುತ್ತಾನೆ. ಮಾನವ ಜಾತಿಯ ಬುದ್ಧಿಯನ್ನು ಉದ್ದೀಪನಗೊಳಿಸುವ ಕಾರ್ಯವನ್ನು ಬಹಳ ಹಿಂದಿನಿಂದಲೂ ನಮ್ಮ ಜನಪದರು ಮಾಡುತ್ತಲೇ ಬಂದಿದ್ದಾರೆ. ಈ ಕೃತಿಯಲ್ಲಿ ಜನಪದ ಕಥೆಗಳನ್ನು ಸಂಗ್ರಹಿಸಿ ರೂಪಾಂತರಿಸಿ, ಸಂಸ್ಕರಿಸಿ ನೀಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಆದರೆ ಈ ಕೃತಿಗೆ 'ಜಾನಪದ ನೀತಿ ಕಥೆಗಳು' ಎಂಬ ಶೀರ್ಷಿಕೆಗೆ ಬದಲಾಗಿ 'ನೀತಿ ಕಥೆಗಳು' ಎಂದಿದ್ದರೆ ಸೂಕ್ತವಾಗುತ್ತಿತ್ತು. ಇತಿಹಾಸ, ಧರ್ಮ, ಪುರಾಣಗಳಂಥ ವಿಷಯಗಳನ್ನೊಳಗೊಂಡ ಕಥೆಗಳನ್ನು ಸಾರಾಸಗಟಾಗಿ ಜಾನಪದ ಕಥೆಗಳೆಂದು ಕರೆಯಲಾಗದು. ಹಾಗೆ ಕರೆಯಬೇಕಾದರೆ ಜಾನಪದಕ್ಕಿರುವ ತತ್ವಗಳನ್ನು ಅನುಸರಿಸಿ ನೋಡಬೇಕಾಗುತ್ತದೆ. ಪ್ರಧಾನ ಸಂಪಾದಕರು ಇಂಥ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಹೊಂದಿರಬೇಕಾಗುತ್ತದೆ. ಇಲ್ಲಿ ಆ ಕೊರತೆ ಎದ್ದು ಕಾಣುತ್ತದೆ ಎಂದು ಹೇಳಬಹುದು.

ಇಂತಹ ಪುಸ್ತಕಗಳು ದೇಶದ ಮಕ್ಕಳನ್ನು ಸನ್ಮಾರ್ಗದಲ್ಲಿ ನಡೆಸಲು ಮಾರ್ಗದರ್ಶಕಗಳಾಗುತ್ತವೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳೆಂಬುದನ್ನು ಗಮನದಲ್ಲಿರಿಸಿಕೊಂಡು ಈ ಪುಸ್ತಕ ರೂಪಿತವಾಗಿರುವುದು ಮೆಚ್ಚುವಂಥದ್ದು.

ಲೋಕೇಶ

೮. ತುಳುನಾಡಿನ ಜನಪದ ಕತೆಗಳು

ಸಂಪಾದಕರು: ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್
ಪುಟ ೧೯೦, ಬೆಲೆ ರೂ. ೧೦೦/-
ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕರಾವಳಿ ಕರ್ನಾಟಕದ ತುಳು ಜಾನಪದ ಅಧ್ಯಯನಕಾರರಲ್ಲಿ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರದು ಬಹುದೊಡ್ಡ ಹೆಸರು. ತುಳು ಜನಪದ ಸಂಸ್ಕೃತಿ, ದೈವಾರಾಧನೆ, ಆಚರಣೆ, ಮೌಖಿಕ ಸಾಹಿತ್ಯ ಇತ್ಯಾದಿಗಳಲ್ಲೆಲ್ಲ ಕೃಷಿ ಮಾಡಿದ ಪಾಲ್ತಾಡಿ ರಾಮಕೃಷ್ಣ ಆಚಾರ್ ಸಂಕಲಿಸಿದ 'ತುಳುನಾಡಿನ ಜನಪದ ಕತೆಗಳು'. ಸುಮಾರು ಒಂದು ನೂರ ಎಪ್ಪತ್ತು ಪುಟಗಳಲ್ಲಿ ಮೂವತ್ತೆರಡು ಜನಪದ ಕತೆಗಳು ಸ್ಥಾನ ಪಡೆದಿವೆ. ಇಲ್ಲಿರುವ ಮಕ್ಕಳ ಕತೆಗಳನ್ನು ಸಂಕೀರ್ಣ, ಸರಳ ಕತೆಗಳನ್ನು ತಮ್ಮ ತಂದೆಯವರಿಂದ, ನೆರೆಹೊರೆಯವರಿಂದ, ಹಿರಿಯರಿಂದ ಕೇಳಿ ಪಡೆದಿದ್ದೇನೆ ಎಂದು ಸಂಪಾದಕರು ತಿಳಿಸಿದ್ದಾರೆ.

ನಮ್ಮ ಬಹುತೇಕ ಜನಪದ ಕತೆಗಳಲ್ಲಿ ಜಾಣರು, ದಡ್ಡರು, ಪ್ರಾಣಿ-ಪಕ್ಷಿಗಳು, ಯಕ್ಷ, ಯಕ್ಷಿಣಿಯರು ಊಹಿಸಲಾರಂಥ ಕೆಲಸ ಕಾರ್ಯಗಳನ್ನು ಮಾಡಿ ಜಯಿಸುತ್ತಾರೆ. ಕಾಮಸಂದಗೆ ಕಥೆಯಲ್ಲಿ ರಾಜಕುಮಾರನ ಬುದ್ಧಿವಂತಿಕೆ ಆತನನ್ನು ಕಾಮಸಂದಗೆಯನ್ನು ರಾಣಿಯನ್ನಾಗಿಸುವಲ್ಲಿ ಸಫಲವಾಗುತ್ತದೆ. ಭೂಲೋಕ, ಪಾತಾಳ ಮತ್ತು ಮೇಲಿನ ಲೋಕವೆಂಬುದು ಜನಪದರ ಮೂರು ಲೋಕಗಳು. ರಾಜಕುಮಾರ ಮೇಲಿನ ಲೋಕಕ್ಕೆ ಹೋಗಿ ಎಲ್ಲ ಸ್ಪರ್ಧೆಗಳಲ್ಲಿ ಜಯಿಸಿ ರಾಣಿಯನ್ನು ವರಿಸುತ್ತಾನೆ. ಸೂರ್ಯ-ಚಂದ್ರ ಕತೆ ಸಂಕೀರ್ಣ ಕತೆಯಾಗಿದೆ. ಕತೆಯೊಳಗೆ ಅನೇಕ ಕತೆಗಳು ಸೇರಿಕೊಂಡಿವೆ. ಸೂರ್ಯ-ಚಂದ್ರರಿಬ್ಬರೂ ಅನೇಕ ಕಂಟಕಗಳನ್ನು ಎದುರಿಸುತ್ತಲೇ ಬರುತ್ತಾರೆ. ದುಷ್ಟರು ಕಷ್ಟಗಳ ಸರಮಾಲೆಯನ್ನೇ ನೀಡುತ್ತಾರೆ. ಕೊನೆಗೆ ಮದುವೆಯಾಗಿ ಸುಖಾಂತವಾದರೆ ದುಷ್ಟರಿಗೆ

ತಕ್ಕ ಶಿಕ್ಷೆಯಾಗುತ್ತದೆ. ಜನಪದ ಕತೆಯಲ್ಲಿನ ಶಿಕ್ಷೆಗಳನ್ನು ನಾವು ಗಮನಿಸಬಹುದು. ಈ ಕತೆಯಲ್ಲಿಯೂ ದುಷ್ಟ ಸೆಟ್ಟಿಯ ತಲೆ ಕಡಿಯಲಾಗುತ್ತದೆ. ಸೂಳೆಯನ್ನು ಎರಡು ಹೋಳು ಮಾಡಿ ಹೆಬ್ಬಾಗಿಲಿಗೆ ತೋರಣ ಕಟ್ಟುತ್ತಾರೆ. ಆ ಮೂಲಕ ದುಷ್ಟತನಕ್ಕೆ ಯಾವತ್ತೂ ಜಯವಿಲ್ಲ ಎಂಬ ಆಶಯವನ್ನು ಓದುಗರಿಗೆ ನೀಡುತ್ತದೆ ಕತೆ. 'ಮಂತ್ರದ ಮಾವು' ಕತೆ ಕೂಡ ಮೇಲಿನ ಆಶಯವನ್ನೇ ಹೊಂದಿದೆ. ದೊಡ್ಡ ರಾಣಿ ಚಿಕ್ಕ ರಾಣಿಯನ್ನು ಸಂಕಷ್ಟಕ್ಕೆ ಸಿಲುಕಿಸುವುದು, ನಂತರ ತಪ್ಪಿಗೆ ಇಡೀ ಪರಿವಾರವೇ ಶರಣಾಗತಿಯಾಗಿ ತಲೆ ಕಡಿಸಿಕೊಳ್ಳುವ ಸ್ಥಿತಿ ಉಂಟಾಗುವುದನ್ನು ಕತೆಯಲ್ಲಿ ನೋಡಬಹುದು.

ಕಾಡುಪ್ರಾಣಿಗಳು ಮನುಷ್ಯರನ್ನು ಸಾಕುತ್ತವೆ. ಬದುಕಲು ಸಹಾಯ ಮಾಡುತ್ತವೆ. ತಾವು ಸಹಾಯ ಮಾಡಿದ ಮನುಷ್ಯರಿಂದ ಕಷ್ಟ ಬಂದಾಗ ಸಹಾಯ ಪಡೆದು ಸಂತಸಪಡುತ್ತವೆ. ಪ್ರಸ್ತುತ ಕೃತಿಯ 'ತೋಳ ಸಾಕಿದ ಹೆಣ್ಣು ಕತೆ' ಈ ಮೇಲಿನ ಕಥಾವಸ್ತುವನ್ನು ಹೊಂದಿದೆ. ಜನಪದ ಕತೆಗಳ ಸ್ವರೂಪವೇ ಹಾಗೆ; ಒಂದು ರೀತಿಯಲ್ಲಿ ಸಮಾನತೆಯನ್ನು, ಒಗ್ಗಟ್ಟನ್ನು ಯಾವತ್ತೂ ಕೈಬಿಡುವುದಿಲ್ಲ. ಇಲ್ಲಿ ಕುಂಬಾರನಿಗೆ ತನ್ನ ಕರುಳಕುಡಿಗಿಂತ ತನ್ನ ಹೊಟ್ಟೆ ತುಂಬಿಸುವುದೇ ಹೆಚ್ಚಾಗುತ್ತದೆ. ಕಾಡುಪ್ರಾಣಿಗಳು ಮನುಷ್ಯರನ್ನು ಸಾಕಿ ಸಲಹುವ ಮೂಲಕ ಮಾನವನಿಗಿಂತ ಒಂದು ಹೆಜ್ಜೆ ಮೇಲಕ್ಕೇರುತ್ತವೆ. ಮನುಷ್ಯತ್ವ ಇರಬೇಕೆಂಬುದು ಸಾಮಾನ್ಯ ಆಡುನುಡಿ. ಅದಕ್ಕೆ ಈ ಕತೆ ತದ್ವಿರುದ್ಧ. ಒಟ್ಟು ಪ್ರತಿಯೊಂದು ಕತೆಯಲ್ಲಿರುವ ತನ್ನದಲ್ಲದ ತಪ್ಪಿಗೆ ಮೊದಮೊದಲ ಕಷ್ಟವನ್ನ ನುಭವಿಸಿದರೂ ಸುಖದಲ್ಲಿಯೇ ಅಂತ್ಯವಾಗುವುದು.

ಜನಪದ ಕತೆಗಳಲ್ಲಿ ಆದಿಯಿಂದ ಅಂತ್ಯದವರೆಗೂ ಸಹಾಯ ಬೇಡುವ ಪ್ರಾಣಿ-ಪಕ್ಷಿಗಳಿರುತ್ತದೆ. ಸಾವಧಾನದಿಂದ ಅವುಗಳ ಬೇಡಿಕೆಗಳಿಗೆ ಒಪ್ಪಿಗೆ ಸೂಚಿಸಿ ಮುಂದುವರೆದರೆ ಒಳಿತಾಗುವುದು. ಧಿಕ್ಕರಿಸಿದರೆ ಸಂಕಷ್ಟಗಳಿಗೆ ತುತ್ತಾಗಬೇಕಾಗುವುದು. ಒಡೆಯನನ್ನುಳಿಸಿದ ಎತ್ತು ಕತೆಯಲ್ಲಿಯೂ ಈ ಸ್ವರೂಪ ಕಂಡುಬರುತ್ತದೆ.

ಒಟ್ಟಾರೆ ಪ್ರಸ್ತುತ ಕೃತಿಯಲ್ಲಿರುವ ಜನಪದ ಕತೆಗಳು ತುಳುನಾಡಿನ ಜನಜೀವನ, ಜೀವನ ಪದ್ಧತಿ, ಸಂಸ್ಕೃತಿಗಳನ್ನು ಬಿಚ್ಚಿಡುವಲ್ಲಿ ಸಫಲವಾಗಿದೆ. ಗದ್ದೆ, ಮುಡಿ, ಜಾನುವಾರು ಜಾತ್ರೆ (ಸುಬ್ರಹ್ಮಣ್ಯ), ಮೀರ್ಲೋಕ (ಮೇಲಿನ ಲೋಕ), ಹೊದ್ಲು (ಅರಳು), ತೋಡು, ಪುದ್ವಾರ್, ಇರ್ಲೋಕ (ಇಹಲೋಕ), ಅಟ್ಟ, ಒನಕೆ, ದೈವ, ಕೋಲ, ಬೊಜ್ಜ, ಹಾವು, ಉಬಾರ್ (ಉಪ್ಪಿನಂಗಡಿ), ಕಡ್ಪತ್ತಿ (ದೊಡ್ಡ ಕತ್ತಿ), ಕಾಟ (ಚಿತೆ) ಹೀಗೆ ಅನೇಕ ಆಚರಣೆ, ಜೀವನ ಪದ್ಧತಿ, ದೈವಾರಾಧನೆ, ಕೃಷಿ, ಜಾತ್ರೆಗಳಿಗೆ ಸಂಬಂಧಿಸಿದ ವಸ್ತು, ಆಶಯಗಳೇ ಕಂಡುಬರುತ್ತವೆ. ಕೃತಿಯಲ್ಲಿ ತುಳು ಸಂಸ್ಕೃತಿಗೆ ಸಂಬಂಧಿಸಿದ ರೇಖಾಚಿತ್ರಗಳನ್ನು ಬಳಸಲಾಗಿದ್ದು ಕತೆಗಳಿಗೆ ಪೂರಕವಾಗಿವೆ. ತುಳು ಭಾಷೆಯ ಶಬ್ದಗಳನ್ನು ಮತ್ತು ಪ್ರಾದೇಶಿಕ ಶಬ್ದಗಳ ಅಚ್ಚಗನ್ನಡದಲ್ಲಿ ಅರ್ಥವನ್ನು ನೀಡಿರುವುದರಿಂದ ಓದುಗರಿಗೆ

ಅರ್ಥೈಸಲು ಸುಲಭಸಾಧ್ಯವಾಗಿದೆ. ಜನಪದ ಕತೆಗಳು ಜಾನಪದ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವುದು ಸಂತಸದ ಸಂಗತಿ. ಹಾಗೆಯೇ ಸಂಪಾದಕರಾದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅಭಿನಂದನಾರ್ಹರು.

ಡಾ. ಎಸ್. ಮೋಹನ್

೯. ಜಗತ್ಪ್ರಸಿದ್ಧ ಜಾನಪದ ಕತೆಗಳು

ಪಿ. ಲಕ್ಷ್ಮೇಶ್ವರಮಠ
ಪುಟ ೧೪೦, ಬೆಲೆ ರೂ. ೭೫/-
ಪ್ರಥಮ ಮುದ್ರಣ ೨೦೧೩
ವಿದ್ಯಾನಿಧಿ ಪ್ರಕಾಶನ, ಗದಗ

ಜಾನಪದ ಕತೆಗಳೆಂದರೆ ಮಕ್ಕಳಿಗಷ್ಟೇ ಅಲ್ಲ, ಎಲ್ಲ ವಯೋಮಾನದವರೂ ಕೇಳಿ ಸಂತೋಷಪಡುತ್ತಾರೆ. ಅದ್ಭುತ, ರಮ್ಯ, ರೋಚಕ, ದುಃಖಾಂತ್ಯ, ಸುಖಾಂತ ಹೀಗೆ ಎಲ್ಲಾ ರೀತಿಯ ರಸವತ್ತಾದ ಕಥೆಗಳಿಗೆ ಮಾರುಹೋಗದವರು ಯಾರೂ ಇಲ್ಲ. ಸಣ್ಣಪುಟ್ಟ ಕತೆಗಳಿಂದ ಹಿಡಿದು ದೀರ್ಘ ಕತೆಗಳಿಗೂ ನಮ್ಮ ಸಮಾಜದಲ್ಲಿ, ಜನಪದರಲ್ಲಿ ಬರಗಾಲವಿಲ್ಲ. ಜಗತ್ತಿನ ಪ್ರತಿಯೊಂದು ದೇಶಗಳ ಮೂಲೆಮೂಲೆಯಲ್ಲಿಯೂ ಜಾನಪದ ಕತೆಗಳನ್ನು ಕೇಳಬಹುದು, ನೋಡಬಹುದು. ಪ್ರಾಚೀನ ಕಾಲದಿಂದಲೂ ಜಾನಪದ ಕತೆಗಳು ಕಣ್ಮರೆಯಾಗದೆ ಮುಂದುವರಿದುಕೊಂಡು ಬರಲು ಮುಖ್ಯ ಕಾರಣ ಅವುಗಳಲ್ಲಿರುವ ನೀತಿ, ಉಪದೇಶ, ಮಾನವೀಯ ಗುಣ, ಶಿಷ್ಟರ ರಕ್ಷಣೆ, ದುಷ್ಟರ ಶಿಕ್ಷೆ ಮತ್ತು ಕಾಲಕ್ಕನುಗುಣವಾಗಿ ಬದಲಾಗುವ ಸ್ಥಿತಿಸ್ಥಾಪಕ ಗುಣಗಳಿರುವುದು.

ಎಫ್.ಪಿ. ಲಕ್ಷ್ಮೇಶ್ವರಮಠ ಅವರು ಸಂಗ್ರಹಿಸಿದ ಜಾನಪದ ಕಥೆಗಳಲ್ಲಿ ಹೊರದೇಶಗಳ ಕಥೆಗಳು ಸೇರಿರುವುದು ಈ ಕೃತಿಯ ವೈಶಿಷ್ಟ್ಯ. ಸುಮಾರು ಐವತ್ತು ನೀತಿ ಬೋಧಕ, ಆಯಾ ಸಂಸ್ಕೃತಿಯ ವೈಶಿಷ್ಟ್ಯವನ್ನು ಸಾರುವ, ಜನಜೀವನವನ್ನು ಪರಿಚಯಿಸುವ, ಜೀವನ ಪದ್ಧತಿಯನ್ನು ಗುರುತಿಸುವ ಕತೆಗಳು ಇಲ್ಲಿವೆ. ರಷ್ಯಾ, ಬಾಂಗ್ಲಾದೇಶ, ಇಟಲಿ, ನ್ಯೂಜಿಲ್ಯಾಂಡ್, ಬಲ್ಗೇರಿಯಾ, ಇಂಗ್ಲೆಂಡ್, ಕೊರಿಯಾ, ಉಜ್ಬೆಕಿಸ್ತಾನ್, ಶ್ರೀಲಂಕಾ, ಮಾರಿಷಸ್, ನೇಪಾಳ, ಟರ್ಕಿ, ಚೀನಾ, ಇಂಡೋನೇಶಿಯಾ, ಅಮೇರಿಕಾ, ಇಥಿಯೋಪಿಯಾ, ಇರಾಕ್, ಜರ್ಮನ್, ಗ್ರೀಕ್ ಮತ್ತು ನಮ್ಮ ಭಾರತ ಸೇರಿದಂತೆ ಇಪ್ಪತ್ಮೂರು ದೇಶಗಳ ಒಟ್ಟು ಐವತ್ತು ಕತೆಗಳನ್ನು ಇಲ್ಲಿ ನೋಡಬಹುದು.

ಬಹುತೇಕ ಜಾನಪದ ಕತೆಗಳು ಯಾಕೆ ಇಷ್ಟವಾಗುತ್ತವೆ ಎಂದರೆ ಅವುಗಳಲ್ಲಿ ಬರುವ ಮನುಷ್ಯನಿಂದ ಹಿಡಿದು ಪ್ರತಿಯೊಂದು ಪ್ರಾಣಿ, ಪಕ್ಷಿ, ಗಿಡ-ಮರ, ಬಳ್ಳಿಗಳೆಲ್ಲವೂ ಮಾತನಾಡುತ್ತವೆ. ಕ್ರಿಯೆಗೆ ಪ್ರತಿಕ್ರಿಯೆ ತೋರಿಸುತ್ತವೆ. ಮಕ್ಕಳು ಇವುಗಳೆಲ್ಲವೂ

ಮಾತನಾಡುವುದನ್ನು, ಹಾಡುವುದನ್ನು ಕೇಳಿ ಓದಿ ಖುಷಿ ಪಡುತ್ತವೆ. ಅವು ಮಾತನಾಡುತ್ತವಲ್ಲಾ? ಎಂದು ಮಕ್ಕಳು ಪ್ರಶ್ನಿಸಿದಾಗ ಕಥೆಗಾರ 'ಆ ಕಾಲದಲ್ಲಿ ಅವು ಮಾತನಾಡುತ್ತಿದ್ದವು' ಎಂದು ಸಿದ್ಧ ಉತ್ತರ ನೀಡುತ್ತಾನೆ.

ಕರಡಿ ತನ್ನ ಕಾಲನ್ನು ಕಳೆದುಕೊಂಡರೂ ರೈತನ ಮನೆಗೆ ಬಂದು ಪ್ರಶ್ನಿಸುತ್ತದೆ. "ನನಗೆ ಮರದ ಕಾಲಿದೆ. ಇದು ನಿನಗೆ ತಿಳಿದಿರಲಿ. ನಿನ್ನಿಂದ ನಾನು ಕುಂಟನಾದೆ, ನಿನ್ನೊಂದಿಗೆ ಹಗೆ ತೀರಿಸಿಕೊಳ್ಳಲು ನಾನು ಬಂದಿರುವೆ. ನೀನೀಗ ಹೊರಗೆ ಬಾ, ನನ್ನನ್ನು ಥಳಿಸು ಬಾ ನೋಡೋಣ"(ಪು. ೨) ಎಂದು ಸವಾಲು ಹಾಕುತ್ತದೆ. ರಷ್ಯಾದ 'ಕಳ್ಳತನಕ್ಕೆ ತಕ್ಕ ಶಿಕ್ಷೆ' ಎಂಬ ಕಥೆಯಲ್ಲಿ, ಕರಡಿ ಸತ್ತು ಹೋಯಿತು. ಪ್ರಾಣಿ ಪ್ರೀತಿಯ ಮಕ್ಕಳಿಗೆ ದುಃಖವಾದರೆ, ಪ್ರಾಣಿ ಎಂದರೆ ಭಯಪಡುವ ಮಕ್ಕಳು ಸಂತಸಪಡುತ್ತಾರೆ.

ಅಸೂಯೆ, ಮತ್ಸರ, ಕಪಟ ನಾಟಕವಾಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ಬಹುತೇಕ ಕತೆಗಳು ನೀತಿ ಬೋಧಿಸುತ್ತವೆ. ಇವುಗಳಿಂದ ಮಕ್ಕಳಿಗೆ ಚಿಕ್ಕಂದಿನಿಂದಲೇ ಯಾವ ಕೆಲಸ ಒಳಿತು, ಯಾವುದು ಕೆಡಕು, ಹೇಗೆ ಜೀವಿಸಬೇಕೆಂಬುದರ ಬಗ್ಗೆ ಜ್ಞಾನವುಂಟಾಗುತ್ತದೆ, ತಿಳುವಳಿಕೆಯುಂಟಾಗುತ್ತದೆ. ಬಲ್ಗೇರಿಯಾದ ಜಾನಪದ ಕಥೆ 'ಅಸೂಯೆ'ಯಲ್ಲಿ ಜಿಪುಣ ರೈತನಿಗೆ ಅನುಭವಸ್ಥ ವೃದ್ಧನೊಬ್ಬ ತಿಳುವಳಿಕೆ ಹೇಳುತ್ತಾನೆ. ಇದ್ದುದರಲ್ಲಿ ಸಂತಸ ಪಡಬೇಕೆಂದು, ಅತಿಯಾಸೆ ಪಡಬೇಡವೆಂದು ಬುದ್ಧಿ ಹೇಳಿದಾಗ ಜಿಪುಣ ರೈತ ನಾಚಿಕೊಂಡು ತಿದ್ದಿಕೊಳ್ಳಲು ಯೋಚಿಸುತ್ತಾನೆ(ಪು. ೨೫).

ಪ್ರಸ್ತುತ ಕೃತಿಯಲ್ಲಿನ ಬಹುತೇಕ ಕಥೆಗಳು ನೀತಿಗಳನ್ನೇ ಉದ್ದೇಶವಾಗಿಸಿ ಕೊಂಡಿರುವುದನ್ನು ಕಾಣಬಹುದು. ಕಳ್ಳತನಕ್ಕೆ ಶಿಕ್ಷೆ, ಜಂಭದ ಪರಿಣಾಮ, ವಿಮೋಚನೆ, ಮುಯ್ಯಿಗೆ ಮುಯ್ಯಿ, ಕೊನೆ ಇಲ್ಲದ ಬೇಡಿಕೆಗಳು, ಬಿತ್ತಿದ್ದನ್ನು ಬೆಳೆದುಕೊ ಹೀಗೆ ಅನೇಕ ಕತೆಗಳು ಜಗತ್ತಿನ ವಾಸ್ತವತೆಯನ್ನು ಮಕ್ಕಳಿಗೆ ತಿಳಿಸುವಲ್ಲಿ ಸಹಕಾರಿಯಾಗಿವೆ. ಮಕ್ಕಳಿಗೆ ಪ್ರಾಣಿ-ಪಕ್ಷಿ-ಕಾಡುಗಳೆಂದರೆ ಎಲ್ಲಿಲ್ಲದ ಪ್ರೀತಿ. ನಮ್ಮ ಇಂದಿನ ಸಮಾಜ ಮಕ್ಕಳಿಗೆ ಹಿತಕರವಾಗಿಲ್ಲವೆಂದು ಭಾವಿಸಬೇಕಾಗಿದೆ. ಕಾರಣ ಅವಿಭಕ್ತ ಕುಟುಂಬಗಳೆಲ್ಲ ವಿಭಕ್ತ ಕುಟುಂಬಗಳಾಗಿ ಹಂಚಿ ಹೋಗುತ್ತಿವೆ. ತಂದೆ-ತಾಯಿ, ಮಗ-ಮಗಳು ಇಷ್ಟೇ ಸಂಖ್ಯೆಯ ಕುಟುಂಬವಾಗುತ್ತಿದ್ದು, ಮಕ್ಕಳು ಅಜ್ಜ-ಅಜ್ಜಿ, ದೊಡ್ಡಪ್ಪ-ಚಿಕ್ಕಪ್ಪ, ಚಿಕ್ಕಮ್ಮ ಹೀಗೆ ಕೂಡುಕುಟುಂಬದ ಸಂಬಂಧವಿಲ್ಲದವರಾಗುತ್ತಿದ್ದಾರೆ. ಈ ಎಲ್ಲ ಸಂಬಂಧಗಳಿಂದ ವಂಚಿತರಾಗಿ ಕತೆ, ಹಾಸ್ಯ, ಮನರಂಜನೆ, ಬಾಂಧವ್ಯಗಳ ಅರ್ಥವನ್ನೇ ಕಳೆದುಕೊಳ್ಳುತ್ತಿವೆ. ತಂದೆ-ತಾಯಿ ಉದ್ಯೋಗ, ಜವಾಬ್ದಾರಿಯಲ್ಲಿ ಮುಳುಗಿದರೆ ಮಕ್ಕಳಿಗೆ ನಾಲ್ಕು ಗೋಡೆಯ ಮಧ್ಯೆ ಇರುವ 'ಮೂರ್ಖರ ಪೆಟ್ಟಿಗೆ' ಟಿ.ವಿ.ಯೇ ಗತಿ ಎಂಬಂತಾಗಿದೆ.

'ಜಗತ್ಪ್ರಸಿದ್ಧ ಜಾನಪದ ಕತೆಗಳು' ಎಂಬಂಥ ಕೃತಿಗಳನ್ನಾದರೂ ಓದಿ ಮಕ್ಕಳನ್ನು ರಂಜಿಸುವ ಕೆಲಸ ತಂದೆ-ತಾಯರಿಂದ ಆಗಬೇಕು, ಶಾಲಾ ಶಿಕ್ಷಕರಿಂದ ಆಗಬೇಕು.

ಬಹುತೇಕ ಜಾನಪದ ಕತೆಗಳು ಆಯಾ ಪ್ರದೇಶದ ವಾತಾವರಣ, ಪರಿಸರ, ಪ್ರಾಣಿ-ಆಹಾರ-ಬೆಳೆಗಳನ್ನು ಒಳಗೊಂಡ ಕಥಾವಸ್ತುವನ್ನು ಹೊಂದಿರುವುದನ್ನು ಗಮನಿಸಬಹುದು. ರಷ್ಯನ್ ಜಾನಪದ ಕಥೆಗಳಲ್ಲಿ ಹಿಮ, ಕರಡಿ ತರಹದ ವಾತಾವರಣ ಕಂಡುಬಂದರೆ, ಈಜಿಪ್ಟ್‌ನ ಕಥೆಗಳಲ್ಲಿ ಒಂಟೆಯ ಹಾಜರಾತಿಯಿರುತ್ತದೆ.

ಎಫ್.ಪಿ. ಲಕ್ಷ್ಮೇಶ್ವರಮಠ ಅವರ ಈ ಐವತ್ತು ಜಾನಪದ ಕಥೆಗಳು ಮಕ್ಕಳನ್ನಷ್ಟೇ ಅಲ್ಲ, ಎಲ್ಲ ವಯೋಮಾನದವರನ್ನು ಖುಷಿ ಪಡಿಸುವುದರಲ್ಲಿ ಸಫಲವಾಗಿದೆ. ಛಾಯಾಚಿತ್ರ ಅಥವಾ ರೇಖಾಚಿತ್ರಗಳನ್ನು ನೀಡಿದ್ದರೆ ಕಥೆಗಳಿಗೆ ಇನ್ನಷ್ಟು ಮೆರಗು ಬರುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಒಂದುನೂರ ಮೂವತ್ತೆಂಟು ಪುಟಗಳ ಈ ಕೃತಿಯಲ್ಲಿ ಅನೇಕ ಅಕ್ಷರ ದೋಷಗಳು ಉಳಿದುಕೊಂಡಿವೆ ಮತ್ತು "ಚಕ್ರವರ್ತಿ ಗ್ರಾಮದಲ್ಲಿ ವಾಸವಾಗಿದ್ದನು"(ಪು. ೨೦). ಈ ತರಹದ ವಾಕ್ಯಗಳು ಅಲ್ಲಲ್ಲಿವೆ. ಚಕ್ರವರ್ತಿಯೊಬ್ಬ ಗ್ರಾಮದಲ್ಲಿ ವಾಸಿಸುವುದು ಅಸಾಧ್ಯವೇ ಸರಿ. ಇದರಿಂದ ಮಕ್ಕಳು ಅಪಾರ್ಥ ಮಾಡಿಕೊಳ್ಳುವ ಸಂಭವವಿರುವುದನ್ನು ಲೇಖಕರು ಗಮನಿಸಬೇಕಿತ್ತು. ಈ ರೀತಿಯ ಸಣ್ಣಪುಟ್ಟ ದೋಷಗಳಿದ್ದರೂ ಕಥೆಗಳನ್ನು ಓದಿದ, ಕೇಳಿದ ಮಕ್ಕಳನ್ನು, ಹಿರಿಯರನ್ನು ರಂಜಿಸದಿರದು.

ಡಾ. ಜ್ಯೋತ್ಸ್ನಾ ಚಂದ್ರಕಾಂತ

೧೦. ಕಾಡುಗೊಲ್ಲರ ಕೋಲಾಟದ ಪದಗಳು

ಸಂಪಾದಕರು: ಮೋಹನ್‌ಕುಮಾರ್ ಎನ್.
ಪುಟ ೧೪೪, ಬೆಲೆ ರೂ. ೮೦/-
ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಅತಿ ಕಿರಿವಯಸ್ಸಿನ ಮೋಹನ್‌ಕುಮಾರ್ ಅವರು ಅತಿ ಹಿರಿ ವಯಸ್ಸಿನ ವಿದ್ವಾಂಸರು ಮಾಡಲು ಕಷ್ಟಸಾಧ್ಯದಂತಹ ಸಾಹಸ ಕಾರ್ಯವನ್ನು 'ಕಾಡುಗೊಲ್ಲರ ಕೋಲಾಟದ ಪದಗಳು' ಕೃತಿ ಮುಖೇನ ಸಾಧಿಸಿ ತೋರಿಸಿದ್ದಾರೆ. ವಿಶ್ವವಿದ್ಯಾಲಯಗಳ ಅಧಿಕೃತ ಸಂಶೋಧಕರಿಗೂ ದಕ್ಕದ ಗೊಲ್ಲ ಸಮುದಾಯ ಗೇಯಾತ್ಮಕ ಮೌಖಿಕ ಸಾಹಿತ್ಯ ಸಂಪತ್ತನ್ನು ಯಥಾವತ್ತಾದ ಗ್ರಾಮೀಣ ಸೊಗಡಿನ ಪರಿಭಾಷೆಯಲ್ಲಿ ರಚನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಈ ಕೋಲಾಟ ಪದಗಳು ಬುಡಕಟ್ಟು ಸಮುದಾಯವೊಂದರ ಸಾಂಸ್ಕೃತಿಕ ಪರಂಪರೆಯನ್ನು ತನ್ನೊಡಲಲ್ಲಿ ಇಟ್ಟುಕೊಂಡಿವೆ. ಕಾಡುಗೊಲ್ಲ ಸಂಸ್ಕೃತಿಯು

ವಿವಿಧ ಕಾಲಘಟ್ಟಗಳಲ್ಲಿ ಪಲ್ಲಟಗೊಳ್ಳುತ್ತ 'ಮುಟ್ಟಿದರೆ ಮುನಿ'ಯಂತಹ ಸ್ಥಿತಿಸ್ಥಾಪಕತ್ವ ಗುಣದಿಂದ ಹೊರಬಂದು, ಆಧುನಿಕತೆಯ ಬೆರಗು-ಬಿನ್ನಾಣಗಳ ನಡುವೆ ಬೆಳ್ಳಂ ಬೆಳಕಾಗಲು ಯತ್ನಿಸುತ್ತಿರುವ ಸಂಗತಿಗಳನ್ನು ಒಳಗೊಂಡ ಪದಗಳು, ಮೋಹನ್ ಕುಮಾರ್‌ರವರ ಪರಿಶ್ರಮದಿಂದ ಕೃತಿರೂಪದಲ್ಲಿ ಅಕ್ಷರ ಮೂಡಿದವರ ಕೈ ಸೇರಿವೆ. ಆ ಮೂಲಕ ಬುಡಕಟ್ಟು ಸಮುದಾಯವೊಂದರ ಪಾರಂಪರಿಕ ವಿಚಾರಗಳು ಹಾಡಿನ ರೂಪದಲ್ಲಿ ಗುನುಗುಟ್ಟುತ್ತಿವೆ, ಸಂಸ್ಕೃತಿಯ ಕಂಪನ್ನು ಚೆಲ್ಲಿ ಗಮಗುಟ್ಟುತ್ತಲಿವೆ. ಸೃಜನಾತ್ಮಕ ಪ್ರಕ್ರಿಯೆಯೊಳಗೆ ಸಾರ್ಥಕತೆ ಪಡೆಯುತ್ತಿವೆ. ಈ ನಿಟ್ಟಿನಲ್ಲಿ ಮೋಹನ್‌ಕುಮಾರ್ ಸಾಹಸ ಮೆಚ್ಚುವಂತಹದು. ಆದ್ದರಿಂದ ಮೋಹನ್‌ಕುಮಾರ್ ಅವರನ್ನು ಮೊದಲಿಗೆ ಅಭಿನಂದಿಸುತ್ತೇನೆ.

ಸಂಶೋಧನಾ ಕಾರ್ಯವು ವಸ್ತುನಿಷ್ಠತೆಗೆ ಮಹತ್ವ ಕೊಡುವಂತಹ ಕಾರ್ಯ ವಾದ್ದರಿಂದ ಮತ್ತು ಸತ್ಯನಿಷ್ಠ ಅಥವಾ ಸತ್ಯವನ್ನು ಅನಾವರಣಗೊಳಿಸುವಂತಹ ಪ್ರಾಮಾಣಿಕ ಕರ್ತವ್ಯವಾದ್ದರಿಂದ ಸೃಜನಶೀಲ ಸಾಹಿತ್ಯಕ್ಕಿಂತ ಭಿನ್ನ ಕಾರ್ಯಕ್ಷೇತ್ರವಾಗಿದೆ. ಹಾಗೆಯೇ ಸಂಶೋಧನಾ ಕ್ಷೇತ್ರವು ಅಷ್ಟು ಸುಲಭದ ಕಾರ್ಯಕ್ಷೇತ್ರವಲ್ಲ ಎಂಬ ಸತ್ಯ ನಿಜ ಸಂಶೋಧಕರಿಗೆ ಮಾತ್ರ ಅರಿವಿಗೆ ಬರುವಂತಹ ವಿಷಯವಾಗಿದೆ. ನಾನೂ ಒಬ್ಬ ಕಾರ್ಯನಿರತ ಸಂಶೋಧಕನಾಗಿರುವುದರಿಂದ ನನ್ನ ಅನುಭವದ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ.

ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗೆ ಆರಂಭದಲ್ಲೇ ಎಡತಾಕುವ ಸಂಶೋಧನಾ ಸಂಬಂಧದ ಸವಾಲುಗಳು, ಒಮ್ಮೊಮ್ಮೆ ಸಂಶೋಧಕನನ್ನು ಆತನ ಗುರುತರ ಜವಾಬ್ದಾರಿಯಿಂದ ಅಥವಾ ಗುರಿಯಾಗಿಸಿಕೊಂಡ ಸಂಶೋಧನಾ ಕ್ಷೇತ್ರದಿಂದ ಕಾಲ್ತೆಗೆಯುವಂತೆ ಮಾಡುವಷ್ಟರಮಟ್ಟಿಗೆ ಜಟಿಲವಾಗಿ ಗೋಚರಿಸುವವು. ಏಕೆಂದರೆ ಸಂಶೋಧಕನು ನಿಸ್ಪೃಹ ಮನಸ್ಸು ಮತ್ತು ಬುದ್ಧಿಯ ಕಸರತ್ತಿಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ತನ್ನನಿಸಿಕೆ, ಅಭಿಪ್ರಾಯಗಳನ್ನು ವಸ್ತುವಿಷಯ ನಿರೂಪಣೆ ಸಂದರ್ಭದಲ್ಲಿ ಅಭಿವ್ಯಕ್ತಗೊಳಿಸಲು ನಿಷಿದ್ಧವಾದ್ದರಿಂದ, ಸಂಶೋಧಕನು ಸಿಕ್ಕಿದಷ್ಟು ಮಾಹಿತಿಯನ್ನು ದಕ್ಕಿಸಿಕೊಂಡು ವಿಷಯ ವಿಶ್ಲೇಷಣೆ ಮಾಡಿ ಪ್ರಬಂಧವನ್ನು ನಿರೂಪಿಸುವುದು ಇದೆಯಲ್ಲ ಅದು ತುಂಬಾ ತಾಳ್ಮೆ ವಹಿಸಿ ಮಾಡಬೇಕಾದ ಅಚ್ಚುಕಟ್ಟಿನ ಕೆಲಸವಾಗಿದೆ. ಈ ವಿಚಾರದಲ್ಲಿ ಮೋಹನ್ ಯಶಸ್ಸು ಸಾಧಿಸಿದ್ದಾರೆ.

ಮೋಹನ್‌ಕುಮಾರ್ ಸಂಪಾದಿಸಿರುವ ತುಮಕೂರು ಜಿಲ್ಲೆ ಮತ್ತು ಅದರಾಚೆಗಿನ ಭೂಪ್ರದೇಶಗಳಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ ನೆಲೆಸಿ, ಪಶುಪಾಲನೆ, ಕೃಷಿಯಂತಹ ಆರ್ಥಿಕ ಮೂಲ ಚಟುವಟಿಕೆ ಅಥವಾ ಕಸುಬುಗಳನ್ನು ಅವಲಂಬಿಸಿ ಬದುಕು ಸಾಗಿಸುವ ಕಾಡುಗೊಲ್ಲ ಸಮುದಾಯದ ಸಂಸ್ಕೃತಿ ಪ್ರತೀಕ ಕೋಲಾಟದ ಪದಗಳು ಆಧುನಿಕ ವಿಮರ್ಶಾ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿ, ಮೌಲ್ಯ ಕಟ್ಟಬಹುದಾದ ವಿಚಾರಗಳನ್ನು

ಒಳಗೊಂಡಿವೆ. ಕೆಲವು ಕೋಲಾಟ ಪದಗಳನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡಿದರೆ, ದ್ರಾವಿಡ ಸಂಸ್ಕೃತಿಯ ಪ್ರತೀಕವಾಗಿರುವ ಶೈವಾರಾಧನೆಯ ವಿವಿಧ ಮಜಲುಗಳನ್ನು ಅರಿಯಬಹುದಾಗಿದೆ. ಹಾಗೆಯೇ ಕಾಲಾನುಕ್ರಮಣಿಕೆಯಲ್ಲಿ ಶೈವಾರಾಧನೆಯು ವೈಷ್ಣವ Cult ನತ್ತ ವಾಲುತ್ತಿರುವುದನ್ನು ಮನಗಾಣಬಹುದಾಗಿದೆ.

ಆಶ್ಚರಿಯ ಸಂಗತಿಯೆಂದರೆ ಈ ಸಮುದಾಯದ ಸಾಂಸ್ಕೃತಿಕ ವೀರರು ಅಥವಾ ಸಾಂಸ್ಕೃತಿಕ ಜನನಾಯಕರು ಈಶ್ವರನ ಅಂಶದಿಂದ ಹುಟ್ಟಿದವರು ಇಲ್ಲವೇ ಈಶ್ವರನ ಅವತಾರವೇ ಆಗಿದ್ದಾರೆ ಎಂದು ಪವಾಡ ಮುಖೇನ ವರ್ಣನೆಗಳುಳ್ಳ ಕಥೆ ಪುರಾಣಗಳು ಹೆಣೆಯಲ್ಪಟ್ಟಿವೆಯಾದ್ದರಿಂದ ಶಿವನ ಆರಾಧನೆ ಮೊದಲಾಗಿ ಸಮುದಾಯ ನಾಯಕರು ಶೈವ ಪೂಜಾ ವಿಧಿ-ವಿಧಾನಗಳ ಮೂಲಕ ಆರಾಧನೆಗೆ ಒಳಪಡುವುದು ಸಾಮಾನ್ಯ ಸಂಗತಿ. ಆದರೆ ಕೆಲವು ಕೋಲಾಟ ಪದಗಳನ್ನು ಆಧರಿಸಿ ಮತ್ತು ವಾಸ್ತವ ಸಮಾಜದಲ್ಲಿ ಈ ಸಮುದಾಯದ ಧಾರ್ಮಿಕ ಆರಾಧನೆಯ ವಿವಿಧ ಸ್ವರೂಪ ಅಥವಾ ಆರಾಧನಾ ದೇವತೆಗಳನ್ನು ಗಮನಿಸಿದಾಗ Culturalization ಆಗಿ ವೈಷ್ಣವ Cultನ್ನು ಅಪ್ಪಿಕೊಳ್ಳುವ ವಿಚಾರ ತಿಳಿದುಬರುತ್ತದೆ. ಇದು ಆ ಜನರ Dual Personalityಯನ್ನು ಸೂಚಿಸುತ್ತದೆ. ಅಲ್ಲದೆ ಸಮಸ್ಯೆ, ಸಂಕಷ್ಟಗಳ ನಿವಾರಣೆಗೆ ಅನಿವಾರ್ಯವಾಗಿ ಬೇರೊಂದು ಮೂಲದ ದೇವತೆಗಳನ್ನು ಅವಲಂಬಿಸಿ ತಮ್ಮ ಬದುಕಿನ ಪರಿಧಿಯೊಳಗೆ ಆರಾಧನೆ ಶುರುವಿಟ್ಟು ಕೊಳ್ಳುವುದು ಚರ್ಚೆಗೆ ಎಡೆ ಮಾಡಿಕೊಡುತ್ತದೆ.

ಪ್ರಾಗಿತಿಹಾಸ ಕಾಲದ ಶೈವ ಪರಂಪರೆ ಈ ನೆಲಮೂಲ ಸಂಸ್ಕೃತಿ ಸೊಗಡನ್ನು ಇಂದಿಗೂ ಪಸರಿಸುತ್ತಲಿದೆ. ಆ ಕಾರ್ಯ ನಮ್ಮ ಜನಪದರಿಂದಲೇ ಆಗುತ್ತಿದೆ ಎಂಬುದು ಸತ್ಯ. ಆದರೂ ಜೀವನಾಭಿರುಚಿ ಅಥವಾ ಜೀವನ ಕಾರ್ಯಗಳಿಗೆ ಜನರ ಧಾರ್ಮಿಕ ವಿಚಾರವೂ ಗುರಿಯಾಗಿ ಧಾರ್ಮಿಕ ಸನಾನತನೆಯು ಸ್ಥಿತ್ಯಂತರಗೊಳ್ಳುತ್ತಿರುವುದು ಕೆಲವು ಕೋಲಾಟ ಪದಗಳಿಂದ ವೇದ್ಯವಾಗುತ್ತದೆ. ಇಲ್ಲಿನ ಕೆಲವು ಪದಗಳು ಸಾಮಾಜಿಕ, ಚಾರಿತ್ರಿಕ ಮತ್ತು ಮನೋವಿಜ್ಞಾನದ ಮಾನದಂಡಗಳ ಹಿನ್ನೆಲೆಯಲ್ಲಿ ಚರ್ಚಾರ್ಹ ವಾದವುಗಳಾಗಿವೆ.

ನಮ್ಮ ಇಂದಿನ ಬದುಕಿನ ರೀತಿ-ನೀತಿಗಳು, ಸಾಧನೆಗಳು, ನಮ್ಮ ಪೂರ್ವಿಕರ ಸಾಧನೆ, ಜೀವನ ಪ್ರೀತಿ ಬೆರೆತ ಧ್ಯೇಯೋದ್ದೇಶಗಳ ಮುಂದೆ ಮಂಕಾಗಿ ಬಿಡುತ್ತವೆ. ಕೂಡು ಕುಟುಂಬಗಳು, ಸಾಮುದಾಯಿಕ ಆಸ್ತಿಯ ಒಡೆತನದ ಪರಿಕಲ್ಪನೆ, ಅದರ ಸಂರಕ್ಷಣೆ, ಆ ಬಗೆಗಿನ ಕುಲ-ಜಾತಿ ಪ್ರೇಮ ಕಕ್ಕುಲಾತಿ ಪ್ರಕ್ರಿಯೆಗಳು, ಭಾವನಾತ್ಮಕ ಬಂಧುತ್ವದ ಎಳೆಗಳು ಈ ಕೃತಿಯ ಅನೇಕ ಪದಗಳಲ್ಲಿ ಅನಾವರಣಗೊಂಡಿವೆ. ಬುಡಕಟ್ಟು ಜನರ ತುಂಬು ಜೀವನ ಕ್ರಮ, ಸಾಹಸ ಪ್ರವೃತ್ತಿಗಳು, ಬಲಿದಾನದಂತಹ ಮನ ಕಲಕುವ ಘಟನೆಗಳು, ಜನ-ಧನ ಸಂಪಾದನೆ, ಜಾನುವಾರುಗಳನ್ನು ಗಣನೀಯ ವಾಗಿ ಹೆಚ್ಚಿಸಿಕೊಳ್ಳುವಂತಹದ್ದು, ಆ ಕಾರಣಕ್ಕೆ ಜರುಗುವ ಜಗಳ-ಹೊಡೆದಾಟ-ಬಡಿದಾಟ,

ರಕ್ತಪಾತ, ಜೂಜು ಇನ್ನಿತರ ಅಂಶಗಳು ಸಹೃದಯರ ಗಮನ ಸೆಳೆಯುತ್ತವೆ. ಈ ನಿಟ್ಟಿನಲ್ಲಿ ಹೆಬ್ಬೂರ ದನವ ತಿರುವಾನೋ, ದಿಲ್ಲೀಗೆ ಮೇಲು ಕರಡೇರು, ಕೆಂಗೂರಿಗಣ್ಣ ತಿರುಮೋತ, ಮಾಯಾಜೆ ಕಾಪಂದಿ ಮಲಿಗ್ಯಾವೆ, ವಕ್ಕೀದುಲ್ಲಾಗೆ ದೊಕ್ಕಿ ಮಲಗಿವ್ರೋನೆ, ಪುಂಡಾರ ಈರಣ್ಣ ರೆಂಬ್ಗೇನು ಕಳುವಾನು... ಮುಂತಾದ ಪದಗಳು ಗಾಯನದ ದೃಷ್ಟಿಯಿಂದಲೂ ಮುಖ್ಯವಾಗಿವೆ.

ಜುಂಜಪ್ಪ, ಚಿಕ್ಕಣ್ಣ, ಚಿತ್ತಯ್ಯ, ಈರುತಮ್ಮಣ್ಣ ಮುಂತಾದ ಕುಲಸಂಬಂಧಿ ಸಾಂಸ್ಕೃತಿಕ ವೀರರು ತಮ್ಮ ನಿಜ ಬದುಕಿನಲ್ಲಿ ಮೆರೆದ ಸಾಹಸ, ತಮ್ಮ ಜನ-ಜಾನುವಾರು ರಕ್ಷಣೆಯಲ್ಲಿ ತೋರಿದ ಆಸಕ್ತಿ, ಜೀವನ ಬದ್ಧತೆ ಅಚ್ಚರಿ ಮೂಡಿಸುವ ವಿಚಾರಗಳಾಗಿವೆ. ಕರಡೇರು ಬೆಡಗಿನ ಶ್ರೇಷ್ಠತೆ, ಕಂಬೇರುಗೊಲ್ಲರ ಬಗೆಗಿನ ಅಸಹನೆ, ಇನ್ನಿತರ ಬೆಡಗಿನವರ ಜೀವನಶೈಲಿ ಮುಂತಾದವು ಗಮನ ಸೆಳೆಯುತ್ತವೆ. ಮೋಹನ್‌ಕುಮಾರ್ ಸಂಪಾದಿಸಿರುವ ಈ ಕೃತಿಯಲ್ಲಿ ಕೋಲಾಟ ಸಂದರ್ಭಗಳಲ್ಲಿ ಹಾಡುವ ಕೊರವಂಜಿ ಪದಗಳು, ತಮಾಷೆಯ ಪದಗಳು ರಂಜನಾತ್ಮಕವಾಗಿವೆ. ಅಲ್ಲದೆ ಹಿಂದಿನ ಪೀಳಿಗೆಯ ಕವಿತ್ವ ಪ್ರತಿಭೆ ಅನಾವರಣಗೊಳ್ಳುತ್ತದೆ.

ಆದರೆ ಕೆಲವು ಕಡೆಗಳಲ್ಲಿ ಇಂದಿಗೂ ಕೂಡ ಗೊಲ್ಲರ ಹಟ್ಟಿಗಳು ಕುಲಮೂಲದ ಮೌಢ್ಯತೆಯುಳ್ಳ ಕಟ್ಟುಪಾಡುಗಳೆಂಬ ಸಂಕೋಲೆಗಳಿಂದ ಕಿತ್ತು ಬಿಸಾಕಿದಂತೆ ಹೊರಬರಲು ಸಾಧ್ಯವಾಗಿಲ್ಲ. ಇದಕ್ಕೆ ಅನಕ್ಷರತೆಯ ಕರಿನೆರಳು ಅವರ ನೆರಳಂತೆ ಹಿಂಬಾಲಿಸುತ್ತ ಅಜ್ಞಾನ ಕೂಪದಿಂದ ಹೊರಬಂದು ಆಧುನಿಕತೆಯ ಬೆಳಕು ಮುಡಿಯಲು ಆಗದಿರುವುದು ನೋವಿನ ಸಂಗತಿ. ಮಹಿಳೆಯರ ಕುರಿತ ಅನಿಷ್ಟ ಆಚರಣೆಗಳ ವಿಚಾರದಲ್ಲಿ ನಾಗರಿಕತೆಯ ಅರಿವು ನಿಜಕ್ಕೂ ಬರಬೇಕಿದೆ. ಅದರ ಜೊತೆಗೆ ಸೃಜನಶೀಲವಾದ ಮೌಖಿಕ ಸಾಹಿತ್ಯ ಸಂಪತ್ತು ಅಕ್ಷರರೂಪ ಪಡೆದುಕೊಳ್ಳಬೇಕಿದೆ. ಇಲ್ಲಿಯವರೆಗಿನ ಈ ಸಮುದಾಯ ಕುರಿತ ಸಂಶೋಧನೆ, ಪುಸ್ತಕ ಪ್ರಕಟಣೆ ಆಶಾಭಾವ ಮೂಡಿಸುವ ವಿಷಯವೆಂದು ಭಾವಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮೋಹನ್‌ಕುಮಾರ್ ಅವರ ಈ ಶ್ರಮವೂ ಗಣನೀಯವಾದುದು. ಅಲ್ಲದೆ ನೆಲಮೂಲ ಸಂಸ್ಕೃತಿಯನ್ನು ಪ್ರತಿನಿಧಿಸುವಂತಹ ಕಾಡುಗೊಲ್ಲರ ಕೋಲಾಟ ಪದಗಳು ಮಾನವನ ಬದುಕಿನ ವಿವಿಧ ಅವಸ್ಥಾಂತರಗಳ ಸ್ವರೂಪವನ್ನು ತಿಳಿಸಿಕೊಡುತ್ತವೆ.

ಸಂಶೋಧಕನು ಮನುಷ್ಯನು, ಭಾವಜೀವಿಯೂ ಆಗಿರುವುದರಿಂದ ಆತನ ಕಾರ್ಯಕಾರಣ ಸಂಬಂಧದಲ್ಲಿ ಸ್ಖಾಲಿತ್ಯ-ದೋಷಗಳು ಸಹಜವಾಗಿ ಘಟಿಸುತ್ತವೆ. ಸಂಶೋಧಕನು ಉದ್ದೇಶವಿಟ್ಟುಕೊಂಡು ಹುಡುಕಹೊರಟ ವಿಷಯ ವ್ಯಾಪ್ತಿಯು ಗಡಿ ಮೀರಲೂಬಹುದು. ಕ್ರೋಢೀಕರಣಕ್ಕೆ ಒಳಪಡುವ ಮಾಹಿತಿ 'ಇದಕ್ಕಿಂತ ಅದು ಮೇಲು' ಅಥವಾ ಮತ್ತಷ್ಟು ಪೂರಕ ವಿಷಯ ಸಿಗಬಹುದೆಂಬ ಅತ್ಯುತ್ಸಾಹಕ್ಕೆ ಕಟ್ಟುಬಿದ್ದು, ವಿಪುಲ ಮಾಹಿತಿಯ ರಾಶಿಯೇ ಲಭ್ಯವಾಗಬಹುದು. ಈ ಕಾರಣದಿಂದ ವಿಶ್ಲೇಷಣೆಗೆ

ತೊಡಕಾಗಿ ಪ್ರಬಂಧ ನಿರೂಪಣೆ ಕಾರ್ಯ ವಿಳಂಬವಾಗಲೂಬಹುದು. ಪ್ರಬಂಧ ನಿರೂಪಣೆ ಸಂದರ್ಭದಲ್ಲಿ ಕ್ರಮಬದ್ಧ ಜೋಡಣೆ, ಅಗತ್ಯ ಅಂಶಗಳ ಸೇರ್ಪಡೆಯಂತಹ ವಿಷಯಗಳು ಗೌಣವಾಗಿ ಪ್ರಬಂಧದ ರಚನಾತ್ಮಕತೆಯಲ್ಲಿ ದೋಷ ತಲೆದೋರಲೂ ಬಹುದು. ಇಂತೆಂಬೋ ಸವಾಲುಗಳ ನಡುವೆ ಮೋಹನ್‌ಕುಮಾರ್‌ರವರ ಕಾರ್ಯ ಸಿದ್ಧಿಸಿದೆ.

ಆದರೆ ಕೃತಿಯಲ್ಲಿ ಸಂಶೋಧನಾ ಸಂದರ್ಭದಲ್ಲಿ ನೆರವಾದ ವಕ್ತೃಗಳ ಹೆಸರು, ವಿಳಾಸ, ಜಾತಿ, ವಯಸ್ಸು ಮುಂತಾದ ಅಂಶಗಳನ್ನು ಅನುಬಂಧದಲ್ಲಿ ನೀಡುವ ಪ್ರಯತ್ನ ಮಾಡಬೇಕಿತ್ತು. ಏಕೆಂದರೆ ಸಂಶೋಧನಾ ಮೂಲದ ಯಾವುದೇ ಕೃತಿಗಳು ಬೇರೆ ಸಂಶೋಧಕರಿಗೆ ನೆರವಾಗುವ ಅಮೂಲ್ಯ ರತ್ನಗಳೇ ಆಗಿ ಪರಿಗಣಿಸುತ್ತವಾದ್ದರಿಂದ ಈ ವಿಚಾರವನ್ನು ಲಕ್ಷಿಸಬೇಕು. ಆಯಾಯ ಕೋಲಾಟ ಪದಗಳಡಿಯಲ್ಲಿ ಘಟನೆ-ವ್ಯಕ್ತಿ ವಿವರವುಳ್ಳ ಮಾಹಿತಿಯನ್ನು ನೀಡಬೇಕಿತ್ತು. ಮುಂದೆ ಪರಿಷ್ಕರಣೆ ಮಾಡುವ ಸಮಯದಲ್ಲಿ ಈ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬಹುದಾಗಿದೆ. ಆದರೂ ಮೋಹನ್‌ಕುಮಾರ್ ಅವರ ಈ ಸಾಧನೆ ಕಡಿಮೆಯದ್ದೇನಲ್ಲ.

ಮೋಹನ್‌ಕುಮಾರ್‌ರವರು ಕೋಲಾಟದ ಪದಗಳನ್ನು ಸಂಗ್ರಹಿಸಲು ಬಲು ಶ್ರಮಪಟ್ಟಿರುವುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಉತ್ಸಾಹ ಚಿಲುಮೆಯೂ ಆಗಿರುವ ಮೋಹನ್‌ಕುಮಾರ್ ಅವರ ಸಂಶೋಧನಾ ಕಾರ್ಯದ ಬದ್ಧತೆ ಸ್ತುತ್ಯರ್ಹವಾದುದು. ಇವರಿಗೆ ಅನೇಕ ವಿದ್ವಾಂಸರ ಕೃಪೆ, ಸಹವಾಸ ಇರುವುದರಿಂದ ಮತ್ತಷ್ಟು ಸಂಶೋಧನಾಧಾರವಾದ ಕೃತಿಗಳು ಹೊರಬರಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

ಡಾ. ಓ. ನಾಗರಾಜು

೧೧. ಕೆಲವು ಜಾನಪದ ಹಾಡುಗಳು

ಸಂಪಾದಕರು: ಪ್ರೊ. ಎಸ್. ಉಮಾಪತಿ
ಪುಟ ೧೨೮, ಬೆಲೆ ರೂ. ೭೦/-
ಪ್ರಥಮ ಮುದ್ರಣ ೨೦೧೩
ನಂ. ಸಿ-೨, ಎರಡನೇ ಮುಖ್ಯರಸ್ತೆ, ವಿದ್ಯಾನಗರ
ದಾವಣಗೆರೆ - ೫೭೭೦೦೫

ನಮ್ಮ ಕನ್ನಡ ನಾಡಿನಲ್ಲಿ ಜನಪದ ಪರಂಪರೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಜನಪದ ಸಾಹಿತ್ಯ, ಜನಪದ ಕ್ರೀಡೆ, ಜನಪದ ಮನರಂಜನೆ, ಸಂಗೀತ, ಪ್ರದರ್ಶನ ಕಲೆ ಹೀಗೆ ಎಲ್ಲ ರೀತಿಯಿಂದಲೂ ಜನಪದರು ತಮ್ಮ ಪ್ರತಿಭೆ, ಪ್ರೌಢಿಮೆ, ಸಾಹಸಗಳನ್ನು ಜೀವನಾನುಭವಗಳ ಮಧ್ಯೆಯೇ ಹೊರಗೆಡಹುತ್ತಾ ಬಂದಿದ್ದಾರೆ, ಬರುತ್ತಿದ್ದಾರೆ. ಪ್ರತಿಯೊಂದು ಸಮುದಾಯ, ಪಂಥ, ಪಂಗಡ, ಧರ್ಮಗಳ ಜನಪದರು ಇದಕ್ಕೆ

ಹೊರತಾಗಿಲ್ಲ. ಆಯಾ ಧರ್ಮದೊಳಗಿನ ಧಾರ್ಮಿಕ ಪದ್ಧತಿ-ಪರಂಪರೆಯನ್ನು ಗೌರವಿಸುತ್ತಾ, ತಮ್ಮ ತಮ್ಮ ರೀತಿ ರಿವಾಜುಗಳನ್ನು ಅನುಸರಿಸುತ್ತ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕ್ರೀಡೆ, ಸಾಹಿತ್ಯ, ಮನರಂಜನೆಗಳ ಮೂಲಕ ಪ್ರದರ್ಶಿಸಿದ ಹಿರಿಮೆ ನಮ್ಮ ಜನಪದರದ್ದು. ಹೀಗಾಗಿಯೇ ಜಾತಿ-ಜಾತಿಗಳ, ಧರ್ಮ-ಧರ್ಮಗಳ ಮಧ್ಯೆ ಎಷ್ಟೇ ಹೋರಾಟ-ಬಡಿದಾಟಗಳಾದರೂ ಜನಪದರು ಎಲ್ಲರೂ ಒಂದೇ, ನಾವೆಲ್ಲರೂ ಒಂದೇ ಎಂಬಂತೆ ಬಾಳಿ ಬದುಕಿದರು. ಈ ಹಿನ್ನೆಲೆಯಲ್ಲಿಯೇ 'ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತ ಮತಿಗಳ್' ಎಂದು ಹಾಡಿ ಹೊಗಳಿಸಿಕೊಂಡಿದ್ದಾರೆ ನಮ್ಮ ಜನಪದರು.

'ಕೆಲವು ಜಾನಪದ ಹಾಡುಗಳು' ಎಂಬ ಕೃತಿಯನ್ನು ಪ್ರೊ. ಎಸ್. ಉಮಾಪತಿಯವರು ಸಂಕಲಿಸಿದ್ದಾರೆ. ಜಾನಪದ ಹಾಡುಗಳನ್ನು, ರಿವಾಯತು ಪದಗಳನ್ನು, ಭಕ್ತಿ ಪ್ರಧಾನ ಹಾಡುಗಳನ್ನು, ಯಕ್ಷಗಾನದ ಹಾಡುಗಳನ್ನು, ಲಾವಣಿ ಪದಗಳನ್ನು ಹೀಗೆ ತಮಗೆ ದೊರಕಿದ ಹಸ್ತಪ್ರತಿಗಳಲ್ಲಿ ಕಂಡುಬಂದ ಜನಪದ ಹಾಡುಗಳನ್ನು ಸಂಗ್ರಹಿಸಿದ್ದಾರೆ. 'ಲಿಂಗಾಂಗ ಸಮರಸದ ಪಾರಿಜಾತ' ಹಳಗನ್ನಡದ ಕಾವ್ಯವಾಗಿ ಕಂಡುಬರುತ್ತದೆ. ಇದನ್ನು ಸ್ವತಃ ಪ್ರೊ. ಉಮಾಪತಿಯವರು ಬರೆದಿದ್ದಾರೆ(ಪು. ೨-೧೪). ಕನ್ನಡದ ಜನಪ್ರಿಯ ಜಾನಪದ ಗೀತೆಗಳಾದ ಶಿವನು ಭಿಕ್ಷಕೆ ಬಂದ, ಪಂಚಮಿ ಹಬ್ಬ, ಕುದುರೆ ತಂದಿವ್ನಿ, ಭಾಗ್ಯದ ಬಳೆಗಾರ ಹೋಗಿ ಬಾ ನನ್ನ ತವರಿಗೆ ಇತ್ಯಾದಿ ಹಾಡುಗಳಿವೆ. ಈ ಮೊದಲು ಎಲ್ಲಾ ಜಾನಪದ ಗೀತೆಗಳ ಸಂಕಲನಗಳಲ್ಲಿ, ದೃಶ್ಯ, ಶ್ರವ್ಯ ಮಾಧ್ಯಮಗಳಲ್ಲಿ ಇವುಗಳನ್ನು ಕೇಳಿರುತ್ತೇವೆ. ಆದರೆ ಈ ರೀತಿಯ ಸಂಕಲನಗಳಲ್ಲಿ ಬಂದಾಗಲೂ, ನೋಡಿದಾಗಲೂ ಸಂತಸದಿಂದಲೇ ಗುನುಗುತ್ತೇವೆ. ಇದು ನಮ್ಮ ಮೂಲಸಂಸ್ಕೃತಿಯ ಜಾನಪದದ ಲಕ್ಷಣ. ಹಾಗೆಯೇ ಈ ಎಲ್ಲ ಜನಪದ ಗೀತೆಗಳಲ್ಲಿ ನಮ್ಮ ಜೀವನ ಪದ್ಧತಿಯೇ ಸೇರಿಕೊಂಡಿದೆ. ತಂದೆ-ತಾಯಿಲ್ಲದ ತವರುಮನೆಯಲ್ಲಿ ನಡೆಯುವ ಅಣ್ಣನ ಮದುವೆಗೆ ತಂಗಿಯನ್ನು ಕರೆದರೆ ಅಪ್ಪ-ಅಮ್ಮ ಇಲ್ಲದ ಮನೆಗೆ ನಾನು ಹೇಗೆ ಬರಲಿ(ಪು. ೪೭) ಎಂದು ತನ್ನ ಬಾಂಧವ್ಯದ ಬಗ್ಗೆ ದುಃಖಿಸುತ್ತಾಳೆ. 'ಪಂಚಮಿ ಹಬ್ಬ'ದಲ್ಲಿ ತನ್ನ ತವರುಮನೆಯಿಂದ ಅಣ್ಣ ಯಾಕೆ ಕರೆಯುವುದಕ್ಕೆ ಬಂದಿಲ್ಲ ಎಂದು ಹಂಬಲಿಸುತ್ತಾಳೆ. ಒಟ್ಟು ಹುಟ್ಟಿ ಬೆಳೆದ ಮನೆ, ಬೆಳೆಸಿದ ತಂದೆ-ತಾಯಿ, ಪ್ರೀತಿಯ ಅಣ್ಣ-ತಮ್ಮ, ಅಕ್ಕ-ತಂಗಿ, ಓರ್ವ ಸಂಸಾರಸ್ಥ ಸ್ತ್ರೀಗೆ ಎಷ್ಟೊಂದು ಅವಶ್ಯಕ ಎಂಬುದನ್ನು ನಮ್ಮ ಜನಪದರು ನೂರಾರು-ಸಾವಿರಾರು ವರ್ಷಗಳ ಹಿಂದೆಯೇ ಕಾವ್ಯರೂಪದಲ್ಲಿ ನೀಡಿದ್ದಾರೆ. ಎಲ್ಲ ಸಂಬಂಧಗಳ ಸಂಬಂಧಿಕರಿದ್ದರೇನು? ತವರುಮನೆಯಲ್ಲಿ ತಾಯಿ ಇದ್ದ ಹಾಗಾಗುವುದಿಲ್ಲ; ಗಂಡನಿಗಿಂತ ಯಾರು ಮೇಲಲ್ಲ ಗರತಿಗೆ ಎಂಬ ಜಾನಪದ ಗೀತೆಯಲ್ಲಿ ಜೀವನದಲ್ಲಿ ಯಾವುದು ಮುಖ್ಯ; ಯಾವುದು ಅಮುಖ್ಯ ಎನ್ನುವುದನ್ನು ಜನಪದರು ಹಾಡಿನ ಮೂಲಕ ತೋರಿಸಿದ್ದಾರೆ(ಪು. ೫೯-೬೦).

ಪ್ರಸ್ತುತ ಸಂಕಲನದಲ್ಲಿ ಜೋಗುಳದ ಹಾಡುಗಳೂ ಸೇರಿದೆ. ಶ್ರೀ ನೀಲಗಂಗಿಗೆ ಜೋ ಜೋ(ಪು. ೨೬). ಧೀರ ವರ ಹನುಮ(ಪು. ೬೧-೬೭). ಚಾರಿತ್ರಿಕ ಹಾಡನ್ನು ಸಂಪಾದಕರು ಸಂಗ್ರಹಿಸಿದ್ದಾರೆ. ಕೊಮಾರರಾಮನ ಪದ(ಪು. ೫೧, ೫೫, ೫೬) ಕಂಪಿಲರಾಯನ ಕುರಿತ ಈ ಎರಡು ಹಾಡು ಮತ್ತು ಕೊಮಾರರಾಮನ ಹಾಡನ್ನು ನೋಡಬಹುದು. ಹೈದರಾಬಾದ್-ಕರ್ನಾಟಕ ಮತ್ತು ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಪ್ರಚಲಿತದಲ್ಲಿರುವ ರಿವಾಯಿತು ಮತ್ತು ಲಾವಣಿ ಪದಗಳನ್ನು ಇಲ್ಲಿ ಸೇರಿಸಲಾಗಿದೆ. ಸಂಪಾದಕರೇ ಹೇಳಿರುವಂತೆ ರಾಮಾಯಣ-ಮಹಾಭಾರತ ಮಹಾಕಾವ್ಯಗಳನ್ನು ಉಪಯೋಗಿಸಿಕೊಂಡ ಜನಪದ ಮಹಾಕಾವ್ಯಗಳು ಭಾರತದೆಲ್ಲೆಡೆ ಇವೆ.

ಸಂಶೋಧಕರು ದೇಶದಲ್ಲಿ ನೂರಾರು ರಾಮಾಯಣಗಳಿಗೆ, ನೂರಾರು ಮಹಾಭಾರತ ಗಳಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ನಿಖರವಾದ, ನಿಜವಾದ ರಾಮಾಯಣ, ಮಹಾಭಾರತ ಯಾವುದೆಂದೂ ಇದುವರೆಗೆ ತಿಳಿಯಲಾಗಿಲ್ಲ ಎಂಬ ಮಾತು ನಮ್ಮ ಸಂಶೋಧನ ವಲಯದಲ್ಲಿದೆ. ಯಕ್ಷಗಾನ ಕೂಡ ಜನಪದ ಮೂಲದ್ದು. ಜನಪದರ ರಚನೆಯೇ ಆಗಿತ್ತು. ಇತ್ತೀಚಿನ ದಿನಗಳಲ್ಲಿ ಸಂಸ್ಕೃತದ ಪ್ರಭಾವ, ಶಿಷ್ಟದ ಪ್ರಭಾವ ಹೀಗೆ ಇನ್ನಿತರ ಪ್ರಭಾವಗಳಾಗಿರುವುದನ್ನು ಅಲ್ಲಗಳೆಯಲಾಗದು. ಪ್ರೊ. ಎಸ್. ಉಮಾಪತಿಯವರು ಇಲ್ಲಿ ಜನಪದರು ರಚಿಸಿದ 'ಕೀಚಕ-ಸೈಲೇಂದ್ರಿವಾದ'ವನ್ನು ಸಂಗ್ರಹಿಸಿ ನೀಡಿದ್ದಾರೆ. ಇದರಿಂದ ಭಾಷಿಕ ವ್ಯತ್ಯಾಸವನ್ನು, ನಿರೂಪಣೆಯನ್ನು, ಬದಲಾದ ಕಾಲದಲ್ಲಿ ಆದಂಥ ಬದಲಾವಣೆಯನ್ನು ಗಮನಿಸಲು ಸಾಧ್ಯವಾಗುತ್ತದೆ.

ಒಟ್ಟು ವಿವಿಧ ಇಪ್ಪತ್ತೈದು ಹಾಡುಗಳನ್ನು ಸಂಪಾದಕರು ನೀಡಿದ್ದಾರೆ. ಪರಿವಿಡಿಯ ಮೂಲಕ ಆರಂಭಿಸಿದ್ದಿದ್ದರೆ ಚೆನ್ನಾಗಿತ್ತು. ಹಾಗೆಯೇ ಎಲ್ಲಾ ಹಾಡುಗಳ ಬಗೆಗೂ ಅಲ್ಪಸ್ವಲ್ಪ ಸಾರಾಂಶವನ್ನು ಹಾಡಿನ ಆರಂಭದಲ್ಲಿ ಅಥವಾ ಅಂತ್ಯದಲ್ಲಿ ನೀಡಿದ್ದರೆ ಇಂದಿನ ಓದುಗರಿಗೆ ಸಹಕಾರಿಯಾಗುತ್ತಿತ್ತು. ಕಾರಣ ನಮ್ಮ ಯುವ ಪೀಳಿಗೆಯ ಮಕ್ಕಳಿಗೆ ಚಲನಚಿತ್ರದ, ಇಂಗ್ಲಿಷ್ ಪಠ್ಯಪುಸ್ತಕದ ಮತ್ತು ಪಾಶ್ಚಾತ್ಯ ಸಂಗೀತವಿರುವ ಹಾಡುಗಳನ್ನು ಗನುಗುನಿಸುತ್ತಾರೆಯೇ ವಿನಃ ನಮ್ಮ ಸಮೃದ್ಧ ಆಶಯ, ನೀತಿ, ವಿಚಾರಗಳಿರುವ ಜನಪದ ಹಾಡುಗಳನ್ನು ನೋಡುವುದಿಲ್ಲ. ಒಟ್ಟಾರೆಯಾಗಿ ಹಾಡುಗಳನ್ನು ಸಂಗ್ರಹಿಸಿ, ಸಂಕಲಿಸಿ, ಪ್ರಕಟಿಸಿದ ಪ್ರೊ. ಎಸ್. ಉಮಾಪತಿ ಅವರಿಗೆ ಕೃತಜ್ಞತೆಗಳು.

ಪಿ. ಸೌಮ್ಯಾ

□□

೩

ವಿಚಾರ, ವಿಮರ್ಶೆ ಮತ್ತು ಸಂಶೋಧನೆ

೧. ತುಳುಪೊಲಿ

ಪ್ರೊ. ಎ.ವಿ. ನಾವಡ
ಪುಟ ೩೭೨, ಬೆಲೆ ರೂ. ೩೫೦/-
ಪ್ರಥಮ ಮುದ್ರಣ ೨೦೧೩
ಶೋಧನ ಪ್ರಕಾಶನ, ನಂ. ೩೦೧, ಎಬೋಡ್ ಅಪಾರ್ಟ್‌ಮೆಂಟ್
ಕಲ್ಪನಾ ರಸ್ತೆ, ವಾಸ್‌ಲೇನ್
ಮಂಗಳೂರು ೫೭೫ ೦೦೨

ಪ್ರೊ. ಎ.ವಿ. ನಾವಡ ಅವರು ಬಹುಶ್ರುತ ವಿದ್ವಾಂಸರು. ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ - ಹೀಗೆ ವಿವಿಧ ಕ್ಷೇತ್ರಗಳ ಅಧ್ಯಯನಗಳಲ್ಲಿ ತಮ್ಮನ್ನು ತಾವು ಗಂಭೀರವಾಗಿ ತೊಡಗಿಸಿಕೊಂಡವರು. ಅದರಲ್ಲೂ ಭಾಷೆ ಮತ್ತು ಜಾನಪದಾಧ್ಯಯನ ಕ್ಷೇತ್ರಗಳಲ್ಲಿ ಅವರ ಪರಿಶ್ರಮ ಹೆಚ್ಚೆಂದು ಹೇಳಬಹುದು. ಕೋಟ ಕನ್ನಡವು ಪ್ರೊ. ನಾವಡರ ಮನೆ ಮಾತಾಗಿದ್ದರೂ ತುಳು ಜಾನಪದ ಅಧ್ಯಯನವು ಅವರ ಮೆಚ್ಚಿನ ಕ್ಷೇತ್ರವೆಂಬುದು ಇದುವರೆಗಿನ ಅವರ ಬರೆಹಗಳಿಂದ ವೇದ್ಯವಾಗುತ್ತದೆ. ಇದಕ್ಕೆ ಪುರಾವೆಯೆಂಬಂತೆ ಪ್ರಸ್ತುತ 'ತುಳುಪೊಲಿ' ಗ್ರಂಥವೂ ನಮ್ಮ ಮುಂದಿದೆ.

ತುಳುನಾಡಿನ ಜಾನಪದವು ಅನೇಕ ವೈಶಿಷ್ಟ್ಯಗಳನ್ನು ತನ್ನೊಳಗೆ ಅಂತರ್ಗತಗೊಳಿಸಿ ಕೊಂಡಿದೆ. ಅದಕ್ಕನುಗುಣವಾಗಿ ತುಳು ಜಾನಪದಾಧ್ಯಯನವೂ ವಿಭಿನ್ನವಾಗಿಯೇ ಬೆಳೆದು ಬಂದಿದೆ. ತುಳುನಾಡಿಗೆ ಸಂಬಂಧಿಸಿದ ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿ, ಇತಿಹಾಸ - ಇಂತಹ ಯಾವುದೇ ವಿಷಯಗಳ ಅಧ್ಯಯನವೂ ಜಾನಪದ ಆಕರಗಳಿಲ್ಲದೆ ಪೂರ್ಣಗೊಳ್ಳುವುದಿಲ್ಲ. ಹಾಗಾಗಿಯೇ 'ತುಳುಪೊಲಿ'ಯಲ್ಲಿನ ಎಲ್ಲಾ ಲೇಖನಗಳೂ ಒಂದಲ್ಲ ಒಂದು ರೀತಿಯಲ್ಲಿ ಜಾನಪದ ಅಧ್ಯಯನಗಳೇ ಆಗಿ ಬಿಡುತ್ತವೆ. ಸಾಲದ್ದಕ್ಕೆ ಲೇಖಕರ ಪ್ರಮುಖ ಆಸಕ್ತಿಯ ಕ್ಷೇತ್ರವೂ ಜಾನಪದವೇ ಆಗಿರುವುದರಿಂದ ಇಲ್ಲಿನ 'ಜಾನಪದೇತರ' ಲೇಖನಗಳೂ ಜಾನಪದದೊಂದಿಗೆ ತಾಳೆ ಹೊಂದುತ್ತಿರುವುದನ್ನು

ಅಲ್ಲಗಳೆಯುವಂತಿಲ್ಲ. ಈ ಎಲ್ಲಾ ಕಾರಣಗಳಿಗಾಗಿ ಒಟ್ಟಂದದಲ್ಲಿ ಪ್ರಸ್ತುತ ಕೃತಿಯು ಜಾನಪದಾಧ್ಯಯನವೆಂಬುದ್ದರಲ್ಲಿ ಎರಡು ಮಾತಿಲ್ಲ.

ಹೆಸರೇ ಸೂಚಿಸುವಂತೆ ತುಳುನಾಡಿನ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ, ಸಾಹಿತ್ಯಿಕ ಹಾಗೂ ಜಾನಪದೀಯ 'ಪೊಲಿ'- ಅರ್ಥಾತ್ ಸಮೃದ್ಧಿಗಳನ್ನು ಕುರಿತು ವಿವೇಚಿಸುವ ಅಧ್ಯಯನಪೂರ್ಣ ಬರೆಹಗಳು ಇಲ್ಲಿವೆ. ಪ್ರೊ. ನಾವಡರು ಕಾಲಕಾಲಕ್ಕೆ ಬರೆದಿರುವ ಒಟ್ಟು ೨೯ ಲೇಖನಗಳು ೨೬೦ ಪುಟಗಳಷ್ಟು ವಿಸ್ತಾರವಾದ ಗ್ರಂಥವಾಗಿ ಇಲ್ಲಿ ರೂಪು ಪಡೆದಿದೆ. ತುಳುನಾಡು, ತುಳು ಪಾಡ್ದನಗಳು, ತುಳು ಭಾಷೆಯ ಸುತ್ತಮುತ್ತ, ತುಳು ಸಾಹಿತ್ಯದ ಸುತ್ತಮುತ್ತ ಮತ್ತು ತುಳು ಜನ ಎಂಬ ಐದು ಕಟ್ಟುಗಳಾಗಿ ಒಟ್ಟಾರೆ ಲೇಖನಗಳನ್ನು ವಿಂಗಡಿಸಲಾಗಿದೆ. ಅನುಬಂಧದಲ್ಲಿ ಅವುಗಳಿಗೆ ಪೂರಕವಾದ ವಿವರ-ಮಾಹಿತಿ ಹಾಗೂ ಆಕರಗಳ ಸೂಚಿಸಿದೆ.

"ಹಾಲು ಉಕ್ಕಿದಂತೆ ತುಳು ಸಮೃದ್ಧಿ ಉಕ್ಕಬೇಕು. ಇದು ತುಳುವ ಸಂಸ್ಕೃತಿಯ ವಾರಸುದಾರರು-ಕೃಷಿಕರು ಭೂಮಿ ಪೂಜೆಯ ಸಂದರ್ಭದಲ್ಲಿ ಹಾಡುವ ಹಾಡಿನ ಒಂದು ಸೊಲ್ಲು. ತಮ್ಮ ನಾಡಿನ ಸಮೃದ್ಧಿಯನ್ನು ಬಯಸುವ ಆಶಯವುಳ್ಳ ನುಡಿಗಟ್ಟು ಇದು. ಈ ನುಡಿಗಟ್ಟಿನ ಆಶಯದ ಹಿನ್ನೆಲೆಯಲ್ಲಿ ತುಳು ಭಾಷೆ, ಸಂಸ್ಕೃತಿಯ ಹೆಚ್ಚುಗಾರಿಕೆಯನ್ನು ವಾಸ್ತವದ ನೆಲೆಯಲ್ಲಿ ಪರಿಶೀಲಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ" - ಎಂಬುದಾಗಿ ಇಲ್ಲಿನ ಬರೆಹಗಳ ಹಿಂದಿರುವ ಆಶಯಗಳನ್ನು ವ್ಯಕ್ತಪಡಿಸುವ ಲೇಖಕರು "ತುಳು ಜಾನಪದವನ್ನು ಅದರ ಪ್ರಾದೇಶಿಕ ಅನನ್ಯತೆಯ ಜೊತೆಗೆ ವಿಶ್ವಾತ್ಮಕ ನೆಲೆಯಲ್ಲಿ ಪರಿಶೀಲಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಜಾನಪದವನ್ನು ಜನಪದ ಸಾಹಿತ್ಯದ ಹಿನ್ನೆಲೆಯಲ್ಲಷ್ಟೇ ನೋಡದೆ ಅದನ್ನು ಸಮಾಜಶಾಸ್ತ್ರ, ಮಾನವಶಾಸ್ತ್ರ, ಭಾಷಾವಿಜ್ಞಾನಗಳಂತಹ ಬಹುಶಿಸ್ತೀಯ ದೃಷ್ಟಿಕೋನದಂತೆ ಪರಿಶೀಲಿಸಬೇಕು - ಎಂಬ ಉದ್ದೇಶವನ್ನು ಹೊಂದಿದ್ದಾರೆ.

ತುಳುನಾಡಿನ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ವಿಶ್ಲೇಷಿಸುವುದ ರೊಂದಿಗೆ ಆರಂಭವಾಗುವ ಕೃತಿಯು ಇಲ್ಲಿನ ವಿವಿಧ ಜನಸಮುದಾಯ ಗಳ ಸಂಸ್ಕೃತಿಯನ್ನು ಪರಿಶೀಲಿಸುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ. ಇವುಗಳ ಮಧ್ಯಂತರದಲ್ಲಿ ತುಳು ಪಾಡ್ದನ, ಭಾಷೆ ಮತ್ತು ಸಾಹಿತ್ಯವನ್ನೂ ಪರಾಮರ್ಶೆಗೆ ಒಳಪಡಿಸಲಾಗಿದೆ. ಲೇಖಕರ ಅಧ್ಯಯನಶೀಲತೆಯು ನಿಖರವಾಗಿ ಪ್ರಕಟವಾಗುವುದು ಇಲ್ಲಿನ ಪಾಡ್ದನಾಧ್ಯಯನದ ಭಾಗದಲ್ಲಿ. ಈ ಭಾಗವೇ ಕೃತಿಯ ಕ್ಷಿರುಳೆಂದರೂ ತಪ್ಪಾಗಲಾರದು. ಪಾಡ್ದನಾಧ್ಯಯನದ ಬಹು ಸಾಧ್ಯತೆಗಳನ್ನು ತೆರೆದು ತೋರಿಸುವ ೧೫ ಬರೆಹಗಳು ಇಲ್ಲಿವೆ. ರಾಚನಿಕ, ಸೈದ್ಧಾಂತಿಕ, ಭಾಷಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಐತಿಹಾಸಿಕ ಆಯಾಮಗಳಿಂದ ಪಾಡ್ದನಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಂದು ರೀತಿಯಲ್ಲಿ ಪಾಡ್ದನಗಳ ಬಹುಶಿಸ್ತೀಯ ಅಧ್ಯಯನ

ಮಾದರಿಗಳು ಇಲ್ಲಿ ಗೋಚರವಾಗುತ್ತಿವೆ. ಅಧ್ಯಯನ ಸಂದರ್ಭದಲ್ಲಿ ಪಾಡ್ದನಗಾಯಕರ ಪಾತ್ರವನ್ನೂ ಪರಿಗಣಿಸಿರುವುದು ಮಹತ್ವದ ಸಂಗತಿಯಾಗಿದೆ. 'ತುಳು ಸಾಹಿತ್ಯದ ಸುತ್ತಮುತ್ತ' ಎಂಬ ಭಾಗದಲ್ಲೂ ಪಾಡ್ದನ ಸಂಬಂಧ ಬರಹಗಳು ಕಾಣಿಸಿಕೊಂಡಿವೆ. ಇದು ಲೇಖಕರ ಪಾಡ್ದನಾಸಕ್ತಿಯ ದ್ಯೋತಕವೂ ಹೌದು. ನಿಜವಾಗಿ ಹೇಳಬೇಕೆಂದರೆ ಈ ಭಾಗದ ಲೇಖನಗಳು 'ತುಳು ಸಾಹಿತ್ಯದ ಸುತ್ತಮುತ್ತ' ಮಾತ್ರ ಸುಳಿದಾಡುತ್ತವೆ. ಕೇಂದ್ರ ಸ್ಥಾನಕ್ಕೆ ಇನ್ನೂ ತಲುಪಿಲ್ಲ.

ಲೇಖಕರ ಮತ್ತೊಂದು ಆಸಕ್ತಿಯ ಕ್ಷೇತ್ರ ಭಾಷಾಧ್ಯಯನ. ಪ್ರಸ್ತುತ ಕೃತಿಯಲ್ಲಿ ತುಳು ಭಾಷೆಗೆ ಸಂಬಂಧಪಟ್ಟ ಬರೆಹಗಳಿವೆ. ಅವುಗಳಲ್ಲಿ ಒಂದು ತುಳು ನಿಘಂಟುಗಳ ಕುರಿತಾದುದು. ಮತ್ತೆರಡು ಲೇಖನಗಳು ಪರಿಸರದ ಇತರ ಭಾಷೆಗಳಲ್ಲಿ ತುಳುವಿನ ಚಹರೆಗಳನ್ನು ಗುರುತಿಸುವತ್ತ ಗಮನಹರಿಸಿವೆ. 'ಕುಂದಾಪುರದ ಬೆಳಾರಿ ಭಾಷೆಯಲ್ಲಿ ತುಳುವಿನ ಚಹರೆ' ಎಂಬುದು ಅವುಗಳಲ್ಲೊಂದು. ಇಲ್ಲಿ ಲೇಖಕರು ಉದಾಹರಿಸುವ ಅನೇಕ ಭಾಷಾರೂಪಗಳು ವಿಚಾರಯೋಗ್ಯವಾಗಿವೆ. ಬೆಳಾರಿಗಳು ಹೆಂಡತಿ ಎಂಬರ್ಥದಲ್ಲಿ ಬಳಸುವ 'ಮೇತಿ' ಪದವನ್ನೇ ಗಮನಿಸಬಹುದಾಗಿದೆ. ಇದು 'ಮೊರ' ಪದದ ಸ್ತ್ರೀಲಿಂಗ ರೂಪವೂ ಹೌದು. ಅಂದರೆ ಮುಗ್ಗೇರರ ಹೆಂಗಸು ಎಂದರ್ಥ. ಮೇರತಿ-ಮೇತಿರ - ಮೇತಿ ಎಂಬುದಾಗಿ ಇದರ ನಿಷ್ಪತ್ತಿಯನ್ನು ಗುರುತಿಸಬಹುದಾಗಿದೆ.

"ದ್ರಾವಿಡ ಭಾಷೆಗಳಲ್ಲಿ ತುಳುವಿನ ಸ್ಥಾನ"ವೆಂಬ ಪುಟ್ಟ ಲೇಖನವೊಂದು ಮೊದಲನೆಯ ಭಾಗದಲ್ಲಿ ಸೇರ್ಪಡೆಗೊಂಡಿದೆ. ಇಲ್ಲಿ ಲೇಖಕರು ತುಳುವಿನ ಬಗೆಗೆ ಇದುವರೆಗೆ ಅಧ್ಯಯನ ನಡೆಸಿದ ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸಿ, "ಒಟ್ಟಿನಲ್ಲಿ ಪ್ರಾದೇಶಿಕವಾಗಿ ಸಾಮೀಪ್ಯದ ಫಲವಾಗಿ ಇಂದು ತುಳು ದಕ್ಷಿಣ ದ್ರಾವಿಡದ ಅಂಶಗಳನ್ನು ಹೆಚ್ಚು ತೋರುತ್ತಿದ್ದರೂ ವ್ಯಾಕರಣಾತ್ಮಕವಾಗಿ ಮಧ್ಯ ದ್ರಾವಿಡ ಗುಂಪಿಗೆ ಸೇರಬೇಕಾದ ಭಾಷೆ ಅನ್ನಿಸುತ್ತದೆ" ಎನ್ನುತ್ತಾರೆ. ಇಲ್ಲಿ ಈ ಅಭಿಪ್ರಾಯಕ್ಕೆ ಪೂರಕವಾದ ಕೆಲವು ಆಧಾರಗಳನ್ನು ಕೊಡಬೇಕಾದ ಅವಶ್ಯಕತೆಯಿತ್ತೆನಿಸುತ್ತದೆ. ಸ್ವತಃ ಭಾಷಾಧ್ಯಯನಕಾರರಾದ ಪ್ರೊ. ನಾವಡರ ಭಾಷಾಶೈಲಿಯು ವಿಶಿಷ್ಟವಾಗಿದೆ. ಅವರು ಬಳಸುವ ಕೆಲವು ವಿಶಿಷ್ಟ ಭಾಷಾ ರೂಪಗಳನ್ನೇ ಇಲ್ಲಿ ಗಮನಿಸಬಹುದು. **ನಿಡುಗಾಲ**(ಪು. ೧೧೭) = ದೀರ್ಘಕಾಲ; **ಹಿನ್ನಾಡಿನ**(ಪು. ೧೧೭) = ಹಿಂದಿನ ದಿನ/ಮುನ್ನಾದಿನ; ನಿಮ್ನವರ್ಗ(ಪು. ೧೧೮) = ತಳವರ್ಗ; ಏಕನಿ(ಪು. ೨೩೨) = ಐಕಮತ್ಯ ಮುಂತಾದ ಪದಪ್ರಯೋಗಗಳು ಅವರ ಭಾಷಾಶೈಲಿಯ ದ್ಯೋತಕವಾಗಿ ಕಂಡುಬರುತ್ತವೆ.

ಇಲ್ಲಿನ ಬಹುಪಾಲು ಬರೆಹಗಳು ಬೇರೆ ಬೇರೆ ಸಂದರ್ಭಗಳಲ್ಲಿ ರಚನೆಗೊಂಡವುಗಳು. ಅಂಥ ಲೇಖನಗಳಿಗೆ ಅವುಗಳು ರಚನೆಗೊಂಡ ಸಂದರ್ಭಗಳನ್ನು ಸೂಚಿಸಬೇಕಾದುದು ಅಪೇಕ್ಷಣೀಯವೆನಿಸುತ್ತದೆ. ಇಲ್ಲದಿದ್ದರೆ ಕೆಲವೊಮ್ಮೆ ಆಭಾಸಕ್ಕೆಡೆಯಾಗುವ ಸಾಧ್ಯತೆಯೂ ಇದೆ. ಉದಾಹರಣೆಗೆ "ಕುಂದಾಪುರದ ಬೆಳಾರಿ ಭಾಷೆಯಲ್ಲಿ ತುಳುವಿನ ಚಹರೆ"

ಎಂಬ ಲೇಖನವನ್ನೇ ಗಮನಿಸಬಹುದು. ಲೇಖನವು "ಬೆಳಾರಿ ದಕ್ಷಿಣ ಕನ್ನಡದ ಕುಂದಾಪುರ ತಾಲೂಕಿನ, ಒಳನಾಡಿನಲ್ಲಿ ಅಂದರೆ ಘಟ್ಟದ ಸರಹದ್ದಿನಲ್ಲಿ ವಾಸ ಮಾಡುವ ಒಂದು ಜನಾಂಗ" - ಎಂದು ಪ್ರಾರಂಭವಾಗುತ್ತದೆ. ಆದರೆ ಇಂದು ಆ ಪ್ರದೇಶವು ಉಡುಪಿ ಜಿಲ್ಲೆಯಲ್ಲಿದೆ. ಇದರಂತೆ ಈ ಲೇಖನವು ಉಡುಪಿ ಜಿಲ್ಲೆ ರಚನೆಯಾಗುವುದಕ್ಕಿಂತ ಪೂರ್ವದಲ್ಲಿ ಬರೆದುದೆಂಬುದು ಸ್ಪಷ್ಟವಾಗುತ್ತದೆ. ಲೇಖನಗಳ ವಿಭಾಗ ಕ್ರಮದಲ್ಲೂ ಸ್ವಲ್ಪಮಟ್ಟಿನ ಸಮಸ್ಯೆಯಿದ್ದಂತಿದೆ. 'ತುಳುನಾಡು' ಎಂಬ ಮೊದಲ ಭಾಗದಲ್ಲಿ "ದ್ರಾವಿಡ ಭಾಷೆಗಳಲ್ಲಿ ತುಳುವಿನ ಗಾನ' ಎಂಬ ತುಳುಭಾಷಾ ಸಂಬಂಧಿ ಲೇಖನವಿದೆ. "ತುಳು ಸಾಹಿತ್ಯದ ಸುತ್ತಮುತ್ತ" ಎಂಬ ಭಾಗದಲ್ಲಿ "ತುಳುನಾಡಿನ ಧರ್ಮನೇಮ" ಎಂಬ ಆರಾಧನೆಗೆ ಸಂಬಂಧಿಸಿದ ಲೇಖನವಿದೆ. ಇಂಥವುಗಳೇನಿದ್ದರೂ ಬರಹಗಳನ್ನು ಗ್ರಂಥರೂಪದಲ್ಲಿ ಹೊರತರುವಾಗಿನ ತಾಂತ್ರಿಕ ಮಿತಿಗಳೆನ್ನಬಹುದು. ಇವುಗಳಿಂದ ಕೃತಿಯ ಮೌಲಿಕತೆಗೇನೂ ಕುಂದುಂಟಾಗುವುದಿಲ್ಲ.

ಒಟ್ಟಿನಲ್ಲಿ ತುಳು ಭಾಷೆ, ಸಂಸ್ಕೃತಿಯ ಹೆಚ್ಚುಗಾರಿಕೆಯನ್ನು ವಾಸ್ತವದ ನೆಲೆಯಲ್ಲಿ ಪರಿಶೀಲಿಸುವ "ತುಳುಪೊಲಿ"ಯು ತುಳು ಜಾನಪದಾಧ್ಯಯನ ಕ್ಷೇತ್ರವನ್ನು ಹುಲುಸಾಗಿಸಿದೆಯೆಂಬುದರಲ್ಲಿ ಎರಡು ಮಾತಿಲ್ಲ.

ಡಾ. ಎ. ಸುಬ್ಬಣ್ಣ ರೈ

೨. ದೇಸಿ ಆಹಾರ ಪದ್ಧತಿ

ಪ್ರಸನ್ನ
ಪುಟ ೧೧೨, ಬೆಲೆ ರೂ. ೮೦/-
ಪ್ರಥಮ ಮುದ್ರಣ ೨೦೧೩
ಒಂಟಿದನಿ ಪ್ರಕಾಶನ
ಹೊನ್ನೇಸರ ೫೭೭ ४೧೭
ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

ಶೀರ್ಷಿಕೆಯೇ ಸೂಚಿಸುವಂತೆ ದೇಸಿ ಆಹಾರ ಪದ್ಧತಿ ಕೃತಿ ನಮ್ಮ ಪರಂಪರಾಗತ ಆಹಾರ ಪದ್ಧತಿಯ ಕಡೆಗೆ ಗಂಭೀರವಾಗಿ ಮೆಲುಕು ಹಾಕುವ ಮಹತ್ವದ ಮತ್ತು ಅವಶ್ಯಕ ಕಾರ್ಯವನ್ನು ಮಾಡಿದೆ. ನಾಡಿನ ಹೆಸರಾಂತ ರಂಗಕರ್ಮಿ, ಸಾಮಾಜಿಕ ಹೋರಾಟಗಾರರಾದ ಶ್ರೀ ಪ್ರಸನ್ನ ಅವರು ದಿನಪತ್ರಿಕೆಗೆ ಬರೆದ ಲಘು ಬರಹಗಳ ಸಂಕಲನವಿದು.

ಸುಮಾರು ಮೂವತ್ತೊಂದು ವಿಮರ್ಶಾತ್ಮಕವಾದ, ಒಳನೋಟಗಳನ್ನು ತೆರೆದಿಡುವಂಥ ಪುಟ್ಟ ಪುಟ್ಟ ಲೇಖನಗಳು ಈ ಕೃತಿಯಲ್ಲಿವೆ. ಇಂದಿನ ನಮ್ಮ ಧಾವಂತದ

ಜೀವನವನ್ನು, ಜೀವನ ಶೈಲಿಯನ್ನು ಆಹಾರ ಪದ್ಧತಿಗಳಲ್ಲಿ ಆಗಿರುವ ಮಾರ್ಪಾಡುಗಳನ್ನು ಸರಳವಾಗಿ, ಪ್ರತಿಯೊಬ್ಬರಿಗೂ ಮನ ಮುಟ್ಟುವಂತೆ ಪೋಣಿಸಿದ್ದಾರೆ ಲೇಖಕರು. ಇಂದಿನ ಪ್ರತಿಯೊಂದು ತಿಂಡಿ ತಿನಿಸುಗಳೆಲ್ಲ ತಯಾರಾಗುವುದು, ಬಿಸಿಯಾಗುವುದು, 'ಫ್ರೆಶ್' ಆಗುವುದು ಯಂತ್ರಗಳಲ್ಲಿ. ಇದರಿಂದ ಏನೂ ಲಾಭವಿಲ್ಲ. "ಕೊಟ್ಟೆ ಕಡುಬು ತಿನ್ನುವಾಗ ಕೊಟ್ಟೆಯ ಪರಿಮಳವು ನಿಮ್ಮ ಹಸಿವನ್ನು ಹೆಚ್ಚಿಸಿದರೆ, ಅದರ ಔಷಧೀಯ ಗುಣವು ನಿಮ್ಮ ಹೊಟ್ಟೆಯನ್ನು ಕಾಪಾಡುತ್ತದೆ. ಊಟವೆಂದರೆ ಬರಿದೆ ಆಹಾರವಲ್ಲ, ಅದು ಸ್ವಾದವೂ ಹೌದು, ಪರಿಮಳವೂ ಹೌದು, ಔಷಧವೂ ಹೌದು ಎಂಬ ಸಮನ್ವಯ ತತ್ವವು ಈ ಕೊಟ್ಟೆ ಕಡುಬಿನಲ್ಲಿ ಅಡಗಿದೆ"(ಪು. ೫) ಎಂಬ ಲೇಖಕರ ಮಾತು ನೂರಕ್ಕೆ ನೂರು ಅಕ್ಷರಶಃ ಸತ್ಯ ಎನ್ನುವುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಹಲಸಿನೆಲೆ, ಬಾಳೆಲೆ, ಮುಂಡಿಗೆ, ಸಾಗುವಾನಿ, ಬಾದಾಮಿ ಎಲೆ, ಅರಿಶಿಣದ ಎಲೆಗಳಿಂದ ಮಾಡುವ ಕಡುಬುಗಳಲ್ಲಿ ಪರೋಕ್ಷವಾದ ಔಷಧಿಯ ಗುಣಗಳಿರುವುದನ್ನು ನಾವೆಲ್ಲ ಮರೆತಿದ್ದೇವೆ. ನಾಗರ ಪಂಚಮಿಯ ಸಂದರ್ಭದಲ್ಲಿ ಗಂಟಲು ಬೇನೆ, ನೆಗಡಿ ಬಂದಾಗ ಈ ಅರಿಶಿಣ ಎಲೆಯ, ಆಹಾರ ಅತ್ಯುಪಯುಕ್ತ ಎನ್ನುವುದನ್ನು ಮರೆತಿದ್ದೇವೆ ಎಂದು ಲೇಖಕರು ಎಚ್ಚರಿಸಿದ್ದಾರೆ.

ಪ್ರಸಕ್ತ ಕಾಲಮಾನದಲ್ಲಿ ಅಡುಗೆಯಲ್ಲಿ ಅತ್ಯಂತ ಭೀಕರವಾದ ಅತಿರೇಕಗಳು ನಡೆಯುತ್ತಿರುವುದನ್ನು ರುಚಿಯ ಅತಿರೇಕಗಳು ಎಂಬ ಅಧ್ಯಾಯದಲ್ಲಿ ಮನಮುಟ್ಟುವಂತೆ ವಿಚಾರ ಮಾಡಿದ್ದಾರೆ ಲೇಖಕರು. ಅತಿರೇಕಗಳಿಂದ ನಮ್ಮ ದೇಹಕ್ಕೆ ಬೇಡದ ಪದಾರ್ಥಗಳು, ಬೇಡದ ವ್ಯಂಜನಗಳು ಸೇರಿ ಅನಾರೋಗ್ಯವನ್ನು, ವಿಕಾರತೆಯನ್ನು ತಂದೊಡ್ಡುತ್ತಿವೆ ಎಂದು ಎಚ್ಚರಿಸಿದ್ದಾರೆ. ಬ್ರೆಡ್ ತಯಾರಿಸಿ ಅದರಿಂದ ಮತ್ತೊಂದು ಬ್ರೆಡ್ ಉಪ್ಪಿಟ್ಟು ಮಾಡುವುದು, ಅತಿಯಾದ ವ್ಯಂಜನಗಳನ್ನು ಸೇರಿಸಿ ಅಡುಗೆ ಮಾಡುವುದು. ಗೋಬಿಮಂಚೂರಿ, ಕರಿದ ತಿಂಡಿ–ತಿನಿಸುಗಳು, ರಾಸಾಯನಿಕಪೂರಿತ ಬಣ್ಣ ಬಣ್ಣದ ತಿಂಡಿ-ತಿನಿಸುಗಳು ಗ್ರಾಮೀಣ ಪ್ರದೇಶಗಳನ್ನು ಹೊಕ್ಕಿವೆ. ಯುವ ಪೀಳಿಗೆಗೆ ಕರಿದ ತಿಂಡಿಗಳು, ವಾತಾವರಣಕ್ಕೆ ಒಗ್ಗದ ತಿಂಡಿಗಳು, ಹೊಟೇಲುಗಳ ತಿಂಡಿಗಳೇ ಪ್ರಿಯವಾಗುತ್ತಿರುವುದರ ಬಗ್ಗೆ ಲೇಖಕರು ವಿಷಾದಿಸುತ್ತಾರೆ. "ಅತಿರೇಕದ ರುಚಿಯನ್ನು ಬಯಸದಿರಿ, ಸೌಮ್ಯ ರುಚಿಗಳನ್ನು ಇಷ್ಟಪಡಿ. ಆಹಾರವನ್ನು ಅವಸರಿಸಿ ತಿನ್ನದಿರಿ, ನಿಧಾನವಾಗಿ ಅಗಿದು ರುಚಿಯನ್ನು ಆನಂದಿಸಿರಿ"(ಪು. ೧೩) ಎಂದು ಕರೆ ನೀಡಿದ್ದಾರೆ.

ಅತ್ಯಂತ ಕಡಿಮೆ ಖರ್ಚಿನಲ್ಲಿ ಸರಳವಾಗಿ ತಯಾರಿಸುವ ಕುರುಬರ ಮೇಲೋಗರ ವನ್ನು, ಊರಿಂದೂರಿಗೆ ಕೆಡದಂತೆ ತಯಾರಿಸಿ, ತೆಗೆದುಕೊಂಡು ಹೋಗುವ ಬಿಹಾರದ ಸತ್ತುಗಳ ಬಗ್ಗೆ ಕುತೂಹಲಕಾರಿಯಾದ ಚರಿತ್ರೆಯೇ ಈ ಸಂಕಲನದಲ್ಲಿರುವುದು ಗಮನಾರ್ಹ.

ತರಕಾರಿಗಳ ನಡುವಿನ ವರ್ಗ ಸಂಘರ್ಷ ಎಂಬ ಲೇಖನದಲ್ಲಿ ನಾವು ಸತ್ವವಿಲ್ಲದ ಬಣ್ಣ ಬಣ್ಣದಿಂದ ಕೂಡಿದ್ದ ದುಂಡು ದುಂಡಾಗಿರುವ ತರಕಾರಿಗಳನ್ನೇ ಎರಡು ಮಾತಿಲ್ಲದೇ ಕೊಂಡು ತರುತ್ತೇವೆ. ದುಪ್ಪಟ್ಟು ಬೆಲೆ ಕೊಟ್ಟು ಆರೋಗ್ಯ ಕೆಡಿಸಿಕೊಳ್ಳುವ ನಾವು ನಮ್ಮ ದೇಸಿ ತರಕಾರಿ, ಹಣ್ಣು ಹಂಪಲುಗಳನ್ನು ದೂರವಿಡುತ್ತಿದ್ದೇವೆ ಎಂದು ಒಂದು ರೀತಿಯ ವರ್ಗ ಸಂಘರ್ಷವನ್ನು ಬಿಡಿಸಿ ತೋರಿಸಿದ್ದಾರೆ.

"ಬೌದ್ಧರ ಧರ್ಮಗುರು ದಲಾಯಿಲಾಮ ಹಾಗೂ ಟಿಬೆಟ್ಟಿನ ಬೌದ್ಧ ಸನ್ಯಾಸಿಗಳು ಮಾಂಸಾಹಾರಿಗಳು. ಕಾಶ್ಮೀರದ ಘನ ಪಂಡಿತರು ಜಾತಿಯಿಂದ ಬ್ರಾಹ್ಮಣರು, ಮಾಂಸಾಹಾರಿಗಳು. ಆರೋಗ್ಯದ ದೃಷ್ಟಿಯಿಂದ ಹಾಗೂ ವೈವಿಧ್ಯತೆಯ ದೃಷ್ಟಿಯಿಂದ ಸಸ್ಯಾಹಾರವು ಉತ್ತಮ ಆಹಾರ ಪದ್ಧತಿ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಉತ್ತಮ ಸಸ್ಯಾಹಾರವೆಂಬುದು ಉಳ್ಳವರ ಆಹಾರ ಎಂಬುದು ಕೂಡ ಸತ್ಯ" (ಪು. ೨೪) ಎಂದು ವಾಸ್ತವತೆಯನ್ನು ನಮ್ಮ ಮುಂದಿಡುವ ಲೇಖಕರು, ಪ್ರವಾಸದ ವೇಳೆಯಲ್ಲಿ ನಡೆದ ಘಟನೆಯನ್ನು 'ಹಿಂದು ಮೀಲ್ಸ್' ಲೇಖನದಲ್ಲಿ ವಿವರಿಸಿದ್ದಾರೆ. ಘಟನೆಯ ಮೂಲಕ ಹೊರದೇಶಗಳಲ್ಲಿ 'ಸಸ್ಯಾಹಾರ'ಕ್ಕೆ ಹಿಂದೂ ಮೀಲ್ಸ್ ಎಂಬ ಹೆಸರಿರುವುದನ್ನು ತಿಳಿಸುತ್ತಾರೆ. ಜೊತೆಗೆ ಗೌತಮಬುದ್ಧನ ಆಹಾರದ ವಿಚಾರ ಮತ್ತು ತಮ್ಮ ಭಿಕ್ಷೆಯ ವಿಚಾರಗಳನ್ನು ಹಂಚಿಕೊಂಡಿರುವುದನ್ನು ಕಾಣಬಹುದು.

ಕಾಲ ಬದಲಾದಂತೆ ನಾವು, ನಮ್ಮ ಯುವಪೀಳಿಗೆ ಸಂಪೂರ್ಣವಾಗಿ ಬದಲಾಗಿದೆ. ಅಗತ್ಯಕ್ಕಿಂತ ಹೆಚ್ಚಾಗಿ ಅನಗತ್ಯ ವಿಚಾರಗಳಲ್ಲಿ ಬದಲಾವಣೆ ಹೊಂದುತ್ತಿದ್ದಾರೆ. ಆಹಾರದ ಭದ್ರತೆ, ಪಡಿತರ ವ್ಯವಸ್ಥೆ ಹೀಗೆ ನೂರಾರು ಯೋಜನೆ-ಅನುದಾನಗಳ ಮೂಲಕ ಆಹಾರದ ಭದ್ರತೆಯಿದ್ದರೂ ಲಕ್ಷಾಂತರ ಜನರಿಗೆ ಒಂದೊತ್ತು ಊಟ ಸಿಗದಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಪ್ರತಿದಿನ ಮಿತಿಮೀರಿ ತಿನ್ನುವುದರಲ್ಲಿ ಹಿಂದೆ ಬಿದ್ದಿಲ್ಲ. "ಹೆಂಗಸರು, ಮಕ್ಕಳು, ಯುವಕ-ಯುವತಿಯರು, ಯಜಮಾನ-ಯಜಮಾನತಿಯರು ಕುರೂಪಿ ಹೊಟ್ಟೆಗಳನ್ನು ಹೊತ್ತುಕೊಂಡು, ಜೋತುಬಿದ್ದ ಪೃಷ್ಠಗಳನ್ನು ಜಾರಿಸಿಕೊಂಡು ಓಡಾಡುತ್ತಿರುತ್ತಾರೆ. ಅಡ್ಡಾದಿಡ್ಡಿಯಾಗಿ ಬೆಳೆದು, ಮೈ ಉಬ್ಬಸ ಪಡುತ್ತ.... ಏಳಲಾರದೆ, ಕೂರಲಾರದೆ... ಅತಿಯಾಗಿ ತೇಗುತ್ತ, ಅತಿಯಾಗಿ ಅಪಾನವಾಯು ಸೂಸುತ್ತ ಸಂಕಟಪಡುತ್ತಿದ್ದಾರೆ. ಆದರೂ ತಿನ್ನುವುದನ್ನು ಕಡಿಮೆ ಮಾಡಲಾರರು ಅವರು. ಏಕೆ ಹೀಗಾದೆವು ನಾವು?"(ಪು. ೨೭) ಎಂದು ಪ್ರಶ್ನಿಸುತ್ತಿದ್ದಾರೆ ಲೇಖಕರು. ಇದು ನಮ್ಮ ಪಟ್ಟಣ, ನಗರಗಳಲ್ಲಿ ಕಂಡುಬರುವ ವಾಸ್ತವ ಚಿತ್ರಣ. ಜಾಹೀರಾತುಗಳನ್ನು ನಂಬಿ ಯುವಜನರು ಕೋಲ, ಪೆಪ್ಸಿ ಕುಡಿದರೆ ನೀರಡಿಕೆ ಕಡಿಮೆ ಮಾಡುವ ಅಂಶದ ಜೊತೆಗೆ ಇತರೆ ಏನೇನೋ ರಾಸಾಯನಿಕಗಳು ಸೇರಿ ನಿಧಾನವಾಗಿ ಅನಗತ್ಯ ವ್ಯಂಜನಗಳು ನಮ್ಮ ದೇಹವನ್ನು ಸೇರುವುದರ ಬಗ್ಗೆ ಲೇಖಕರು ಎಚ್ಚರಿಸಿದ್ದಾರೆ.

ಬೆರಕೆ ಅಡುಗೆಗಳ ಕುರಿತ 'ಕುದುಕಲಾಂಬ್ರ, ಮಿಸಳಭಾಜಿ... ಇತ್ಯಾದಿ ಲೇಖನ ನಮ್ಮ ನಾಡಿನ ದೇಸಿ ಅಡ್ಡುಗೆಯ ವಿಶಿಷ್ಟತೆಯನ್ನು, ಅದರ ಉದ್ದೇಶವನ್ನು ಮನದಟ್ಟು ಮಾಡುವಲ್ಲಿ ಸಫಲವಾಗುತ್ತದೆ. 'ಊಟ ದೇವರು ಕೊಟ್ಟದ್ದು, ಹಾಳಾಗಬಾರದು. ಹಾಳಾದರೆ ಊಟ ಕೊಟ್ಟವನು ಮುನಿದಾನು' ಎಂಬ ನಮ್ಮ ಹಿರಿಯರ ಲೋಕದೃಷ್ಟಿ (ಪು. ೩೧) ಈ ರೀತಿಯ ಆಹಾರಗಳಲ್ಲಿ ಅನಾವರಣಗೊಂಡಿರುವುದನ್ನು ಲೇಖಕರು ತಿಳಿಸುತ್ತಾರೆ.

ನಮ್ಮ ನಾಡಿನ ದೇಶಿ ಆಹಾರವಾದ ರಾಗಿಮುದ್ದೆಯನ್ನು ಮತ್ತು ಗೋಬಿ ಮಂಚೂರಿಯನ್ನು ಹೋಲಿಸಿದ ಲೇಖನ ಕುತೂಹಲಕಾರಿಯಾಗಿದೆ. ಇದುವರೆಗೂ ಯಾವುದೇ ಪಂಚತಾರ ಹೋಟೆಲ್‌ಗಳಲ್ಲಿ ರಾಗಿಮುದ್ದೆ ಕಂಡುಬಂದಿಲ್ಲವೆಂದು ಲೇಖಕರ ಅಭಿಪ್ರಾಯ. ವಿದೇಶಿ ಆಹಾರವಾದ ಗೋಬಿ ಮಂಚೂರಿಯನ್ನು ನಮ್ಮ ನಾಡಿನ ಆಹಾರವನ್ನಾಗಿಸಿಕೊಂಡು ತಿನ್ನುವ ಹಂಬಲ, ಉತ್ಸಾಹವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ ಲೇಖಕರು. ಈ ಮೂಲಕ ಮಾಂಸಾಹಾರಿಯಾದ ಗೋಬಿ ಮಂಚೂರಿ ನಮ್ಮ ದೇಶದಲ್ಲಿ ಶಾಖಾಹಾರಿಯಾದ ಪಯಣವನ್ನು ವಿವರಿಸಿದ್ದಾರೆ. "ಮುದ್ದೆ ಸೊಪ್ಪಿನಸಾರು ನಮಗೇ ಇರಲಿ. ಶ್ರೀಮಂತ ವರ್ಗದವರು ಗೋಬಿ ಮಂಚೂರಿ, ಬಟರ್‌ಚಿಕನ್ ತಿಂದು ರಕ್ತದೊತ್ತಡ, ಸಕ್ಕರೆ ಖಾಯಿಲೆ, ಸ್ಥೂಲಕಾಯ, ಹೊಟ್ಟೆಬೇನೆ, ಕರುಳುಬೇನೆ ಇತ್ಯಾದಿ ಖಾಯಿಲೆಗಳಿಗೆ ಆತಿಥ್ಯ ನೀಡುತ್ತಿರಲಿ. ಹೇಗೂ ಖರ್ಚು ಮಾಡಲು ಅವರ ಬಳಿ ಧಂಡಿಯಾಗಿ ಹಣವಿದೆ"(ಪು. ೩೫) ಎಂದು ಲೇಖಕರು ನಮ್ಮನ್ನು ನಿರಾಳರಾಗಿಸುತ್ತಾರೆ.

'ಹುರುಳಿ ಸಾರಿನ ರಮ್ಯಕಥೆ' ಲೇಖನದಲ್ಲಿ ಹುರುಳಿಯ ಬಗ್ಗೆ ವಿವರಿಸಿದ್ದಾರೆ. ನಮ್ಮ ಹುರುಳಿಕಾಳಿನ ಸ್ಥಾನಕ್ಕೆ ಇತರೆ ಬೆಳೆಕಾಳುಗಳು ಬಂದು ಬೆಲೆ ಪಡೆದುಕೊಂಡಿರುವುದನ್ನು ಉದಾಹರಣೆ ಸಮೇತವಾಗಿ ವಿವರಿಸಿದ್ದಾರೆ. ಬಿಹಾರದ ದೇಸಿ ತಿಲ್‌ಕುಟ್(ಎಳ್ಳಿನ ತಿಂಡಿ) ತಿಂಡಿಯ ವಿಶೇಷತೆಗಳನ್ನು ವಿವರಿಸಿದ್ದಾರೆ. ತಿಲ್‌ಕುಟ್‌ನ ಸ್ಥಳಪುರಾಣ, ಋತುಮಾನವನ್ನೆಲ್ಲ ವಿವರಿಸಿರುವ ಲೇಖಕರು ಕನ್ನಡದ ತಾಲಿಪೆಟ್ಟು, ತೊವ್ವೆ(ದಾಲ್)ಯ ಬಗೆಗೂ ತಿಳಿಸುತ್ತಾರೆ. ನಮ್ಮಲ್ಲಿ ಒಂದೊಂದು ಧರ್ಮದವರ ಆಹಾರ ಪದ್ಧತಿಯನ್ನು ಒಂದೊಂದು ರೀತಿಯಲ್ಲಿ ಅಣಕಿಸುವ(ವಾಸ್ತವ) ರೀತಿಯಲ್ಲಿ ರುವುದನ್ನು 'ಪಾಕಂಪೊಪ್ಪು, ತುಳಿಚಾರು... ಇತ್ಯಾದಿ' ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. ಬಡವರ ಆಹಾರವೆಂದೇ ಖ್ಯಾತಿ ಗಳಿಸಿದ ಚಿತ್ರಾನ್ನದ ಬಗೆಗಿನ ಲೇಖನ ಓದುಗರಿಗೆ ಅದರ ವಿಶೇಷತೆಯನ್ನು ನೀಡುತ್ತದೆ. ಕಾರಣ ಅಂತಹ ನಮ್ಮ ದೇಸಿ ಆಹಾರಗಳನ್ನು, ತಿಂಡಿ-ತಿನಿಸುಗಳನ್ನು ನಾವು ಆಗಾಗ ತಿಂದಿರುತ್ತೇವೆ. ಆದರೆ ಅದರ ಬಗೆಗಿನ ಇತಿಹಾಸ, ಪ್ರಸಾರ, ವ್ಯಂಜನಗಳ ಬಗ್ಗೆ ಏನೂ ತಿಳಿದಿರುವುದಿಲ್ಲ. ಅದನ್ನು ತಿಳಿಯುವ ಗೋಜಿಗೇ ಹೋಗುವುದಿಲ್ಲ ನಾವು.

ನಮ್ಮ ನೆರೆಯ ತಮಿಳುನಾಡಿನ ದೇಸಿ ಸಾರು ಮಳುಗತಣ್ಣಿ. ಹೊರದೇಶದಲ್ಲೆಲ್ಲ ಅಡ್ಡಾಡಿ ಮುಲಗಟ್ಟಾನಿ ಎಂಬ ಹೆಸರನ್ನು ಬದಲಿಸಿಕೊಂಡ ರೋಚಕ ಕತೆಯನ್ನು "ಮಳುಗತಣ್ಣಿಯು ಮುಲಗಟ್ಟಾನಿಯಾದ ಕತೆ" ಲೇಖನದಲ್ಲಿ ಪ್ರಸನ್ನ ಅವರು ವಿವರಿಸಿದ್ದಾರೆ. ಮೆಣಸಿನಕಾಯಿಯ ಸಾರು ಪಂಚತಾರ ಹೋಟೆಲ್‌ಗಳಲ್ಲಿ ಸ್ಥಾನ ಪಡೆದಿರುವುದು ವಿಶೇಷವೇ ಸರಿ. "ತಮಿಳಿನಲ್ಲಿ ಮಳುಗು ಎಂದರೆ ಮೆಣಸಂತೆ, ಮುಳುಗಾಯ್ ಎಂದರೆ ಮೆಣಸಿನಕಾಯಿಯಂತೆ. ಮಳುಗತಣ್ಣಿ ಎಂದರೆ ಮೆಣಸಿನ ಸಾರು ಎಂದು ಅರ್ಥವಂತೆ"(ಪು. ೪೬). ಇಂಗ್ಲೆಂಡಿನಲ್ಲಿ ಮುಲಗಟ್ಟಾನಿಯಾಗಿ ಹೆಸರುವಾಸಿಯಾದ ಸಾರು ಅಂದರೆ ಆಶ್ಚರ್ಯವಾಗುತ್ತದೆ. ತಮಿಳು ಐಯ್ಯರಿ ಲಂಡನ್ನಿನಲ್ಲಿ ಭಾರತೀಯರಿಗೆ ಸುಲಭವಾಗಿ, ಸರಳವಾಗಿ ತಯಾರಿಸಿ ಕೊಡುತ್ತಿದ್ದ ಸಾರೇ ಇಂಗ್ಲಿಷರಿಗೆ ಅತ್ಯಂತ ಪ್ರಿಯವಾದುದನ್ನು ಲೇಖಕರು ವಿವರಿಸಿದ್ದಾರೆ.

"ಇಂದಿನ ಜೀವನಶೈಲಿಯು ನಿಸರ್ಗವನ್ನು ಕಂಡರೇ ಹೆದರುತ್ತಿದೆ ಎಂದು ನನಗನ್ನಿಸುತ್ತದೆ. ನಾವು ಬರುಬರುತ್ತ ನಿಸರ್ಗವನ್ನು ನಮ್ಮ ಶತ್ರು ಎಂದು ತಿಳಿಯ ತೊಡಗಿದ್ದೇವೆ. ಮಣ್ಣು, ನೀರು, ಗಾಳಿ ಎಲ್ಲವೂ ಅಶುದ್ಧ ಎಂಬ ಆತಂಕ ನಮ್ಮದು. ಕೈಗಾರಿಕಾ ಪದಾರ್ಥಗಳನ್ನು ಮಾರಲು ಹೊರಟಿರುವ ಜಾಹೀರಾತುಗಳು ಇಂತಹ ಆತಂಕವನ್ನು ಬೆಳೆಸುತ್ತವೆ"(ಪು. ೬೯) ಎಂದು 'ಹಸಿಯಾಗಿ ತಿನ್ನುವುದು' ಎಂಬ ಲೇಖನದಲ್ಲಿ ತಿನ್ನುವ ಬಗೆಗಿನ ನಮ್ಮ ಅನವಶ್ಯಕ ಆತಂಕಗಳ ಬಗ್ಗೆ ತಿಳಿಸುತ್ತಾರೆ ಪ್ರಸನ್ನ. ನಮ್ಮ ಪಾರಂಪರಿಕ ಗಂಜಿಯೂಟದ ಬಗೆಗೂ ಚಿಂತಿಸಿರುವ ಲೇಖಕರು, "ನಮ್ಮದೇ ನಿಯಮ ಹಾಕಿಕೊಂಡು ಊಟಗಳನ್ನು ಸರಳಗೊಳಿಸುವುದು ಒಳ್ಳೆಯದು. ಇದು ಆರೋಗ್ಯದ ದೃಷ್ಟಿಯಿಂದಲೂ ಒಳ್ಳೆಯದು"(ಪು. ೭೪) ಎಂದು ಅಭಿಪ್ರಾಯ ಪಡುತ್ತಾರೆ.

ಒಟ್ಟಾರೆಯಾಗಿ ದೇಸಿ ಆಹಾರ ಪದ್ಧತಿ ಕೃಷಿ ಚಿಕ್ಕದಾಗಿದ್ದರೂ ಜ್ಞಾನ ಪಸರಿಸಲು, ತಿಳುವಳಿಕೆ ಮೂಡಿಸಲು ಬಯಸುವ ಅತ್ಯಮೂಲ್ಯ ಲೇಖನಗಳಿಂದ ಸಮೃದ್ಧವಾಗಿದೆ.

ದಿನಪತ್ರಿಕೆಗಳಲ್ಲಿ ಬರುವ ಅಂಕಣಗಳಲ್ಲಿನ ಬರಹಗಳಿಗೆ ಮಹತ್ವವಿಲ್ಲ. ಅದರ ಆಯುಷ್ಯ ಒಂದೇ ದಿನ, ಗಂಭೀರತೆ ಇಲ್ಲ ಎಂದು ಮೂದಲಿಸುವ, ದೂರೀಕರಿಸುವ ಪ್ರವೃತ್ತಿ ನನ್ನ ಜ್ಞಾನಿಗಳಲ್ಲಿ, ಉನ್ನತ ವಿದ್ಯಾಭ್ಯಾಸ ಮಾಡಿದವರಲ್ಲಿದೆ. ನಮ್ಮಲ್ಲಿರುವ ಜ್ಞಾನ ಪರಂಪರೆಯನ್ನು ಗಮನಿಸದೇ ತಿರಸ್ಕರಿಸುತ್ತೇವೆ. ಪಾಶ್ಚಾತ್ಯ ದೇಶಗಳಿಂದ ಬಂದ ಇಂಚು ಇಂಚು ಪೊಳ್ಳು ಜ್ಞಾನವನ್ನು ಕಣ್ಣುಮುಚ್ಚಿ ಸ್ವೀಕರಿಸುತ್ತೇವೆ. ಕಸವನ್ನು, ರಾಸಾಯನಿಕದೊಂದಿಗೆ ಹುರಿದು ಕೊಟ್ಟರೆ 'ವಿದೇಶಿ ಆಹಾರ'ವೆಂದು ಸ್ವೀಕರಿಸುವ ನಮಗೆ, ನಮ್ಮ ಯುವ ಪೀಳಿಗೆಗೆ ಈ ರೀತಿಯ ಕೃತಿಗಳು ಮಾರ್ಗದರ್ಶನ ನೀಡುವುದರಲ್ಲಿ ಸಂಶಯವಿಲ್ಲ. ದಿನಪತ್ರಿಕೆಗಳಲ್ಲಿನ ಈ ರೀತಿಯ ಬರಹಗಳನ್ನು ತಿರಸ್ಕರಿಸಿದರೆ(ಎಲ್ಲವೂ ಅಲ್ಲ) ನಮ್ಮತನವನ್ನು ನಾವು ತಿರಸ್ಕರಿಸಿದಂತೇ ಸರಿ. ಪ್ರತಿಯೊಬ್ಬರೂ ಈ ಕೃತಿಯನ್ನೊಮ್ಮೆ

ಓದಿದರೆ ನಮ್ಮತನ, ಕೀಳರಿಮೆ, ನಮ್ಮ ದಡ್ಡತನ, ಹೆಮ್ಮೆ ಎಲ್ಲವನ್ನು ತಿಳಿದುಕೊಳ್ಳಲು ಸಾಧ್ಯ. ಅಭಿವೃದ್ಧಿ, ಅಭಿವೃದ್ಧಿ ಎಂದು ಬೊಬ್ಬೆ ಹೊಡೆಯುವ ನಮ್ಮ ಆಡಳಿತಶಾಹಿ ವರ್ಗ, ನಮ್ಮ ಮಾಧ್ಯಮಗಳು, ಶಿಕ್ಷಕರು, ವಿಜ್ಞಾನಿಗಳು ಶ್ರೀ ಪ್ರಸನ್ನ ಅವರು ವಿವರಿಸಿದಂಥ, ಹೇಳಿದಂಥ ವಿಚಾರಗಳನ್ನು ಮನನ ಮಾಡಿಕೊಂಡರೆ ನಮ್ಮ ದೇಹ ರೋಗ ಮುಕ್ತ ವಾಗುವುದು; ನಮ್ಮ ಸಮಾಜ ರೋಗ ಮುಕ್ತವಾಗುವುದು. ಹೊರಗಿನಿಂದ ಬಂದವು ಗಳೆಲ್ಲವನ್ನು ಅಭಿವೃದ್ಧಿ ಎಂದು ತುಟಿಪಿಟಕ್ಕೆನ್ನದೇ ಒಪ್ಪಿಕೊಳ್ಳುವ ನಮ್ಮ ಜಾಯಮಾನ ವನ್ನು ಬಿಡಬೇಕು. ನಮ್ಮ ಪೂರ್ವಜರ, ಅನುಭವಜನ್ಯ ಆಹಾರ, ವಿಚಾರ, ನಡೆ-ನುಡಿಗಳಿಂದ ಭೂಮಿ, ಸಂಪತ್ತು, ಪರಿಸರ ನಮಗೆ ದಕ್ಕಿದೆ. ಅದನ್ನು ನಮ್ಮ ಮುಂದಿನ ಪೀಳಿಗೆಗೆ ಉಳಿಸಿ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. "ನಾಗರಿಕತೆಯೆಂಬ ಸುಂದರ ಕಟ್ಟಡವನ್ನು ನಾವು ಕಟ್ಟುತ್ತಲೇ ನಡೆದಿದ್ದೇವೆ. ಪ್ರಕೃತಿಯ ನಿಯಮಗಳನ್ನು ಧಿಕ್ಕರಿಸುತ್ತ ಹಟದಿಂದ ಕಟ್ಟುತ್ತಿದ್ದೇವೆ. ಪೇರಿಸಿ ಪೇರಿಸಿ ಕಟ್ಟುತ್ತಿದ್ದೇವೆ. ನಾವು ಕಟ್ಟುತ್ತಿರುವುದು ಬುಡ ಭದ್ರವಿಲ್ಲದ ಬಹುಮಹಡಿ ಕಟ್ಟಡ! ನೋಟದ ಕಟ್ಟಡ ಅಥವಾ ನೋಟಿನ ಕಟ್ಟಡ! ಎಂದು ಕಳಚಿ ಬೀಳುವುದೋ ಈ ಬೂಟಾಟಿಕೆಯ ಕಟ್ಟಡ. ದೇವರೇ ಬಲ್ಲ" (ಪು. ೬೦).

ಡಾ. ಎಸ್. ಮೋಹನ್

೩. ಬಹುರೂಪ

ಡಾ. ಪುರುಷೋತ್ತಮ ಬಿಳಿಮಲೆ
ಪುಟ ೨೫೨, ಬೆಲೆ ರೂ. ೨೦೦/-
ಪ್ರಥಮ ಮುದ್ರಣ ೨೦೧೩
ಯಾಜಿ ಪ್ರಕಾಶನ, 'ಭೂಮಿ', ಎಂ.ಪಿ. ಪ್ರಕಾಶ್‌ನಗರ
ಹೊಸಪೇಟೆ

ವಿಜಯ ಕರ್ನಾಟಕ, ಉದಯವಾಣಿ, ಮುಂಗಾರು ಮೊದಲಾದ ಕನ್ನಡದ ದಿನಪತ್ರಿಕೆಗಳಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು ಕಾಲಕಾಲಕ್ಕೆ ಬರೆದ ಲೇಖನಗಳು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. 'ಬಹುರೂಪ' ಪುಸ್ತಕವು ಅಂತಹ ಲೇಖನಗಳ ಸಂಗ್ರಹವಾಗಿದೆ. ಯಾಜಿ ಪ್ರಕಾಶನ('ಭೂಮಿ', ಎಂ.ಪಿ. ಪ್ರಕಾಶ್‌ನಗರ), ಹೊಸಪೇಟೆ. ಇವರು ಈ ಪುಸ್ತಕವನ್ನು ೨೦೧೩ರಲ್ಲಿ ಪ್ರಕಟಿಸಿದ್ದಾರೆ. ಇದರ ಬೆಲೆ ೨೦೦/-ರೂ.ಗಳು, ಪ್ರೊ. ಬಿ.ಎ. ವಿವೇಕ ರೈ ಅವರು ಇದಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ೧. ಕಿರುತೊರೆಯ ನೀರು ಮತ್ತು ಕಾಗೆ ಮುಟ್ಟಿನ ಕತೆ, ೨. ಇಲಿಗಳು ಬಿದಿರಕ್ಕಿ ಮತ್ತು

ಕಾಡಿನ ಹುಳುಗಳು, ೩. ವಿದ್ಯೆ ಇಲ್ಲದ ಜಾತಕ ಮತ್ತು ನನ್ನ ಶಾಲೆ, ೪. ಕುಟ್ಟು ಬ್ಯಾರಿಯ ಪುಟ್ಟ ಕತೆ, ೫. ಚೌರಿಗರ ಕೃಷ್ಣಪ್ಪನ ಕೀಚಕ ವೇಷ, ೬. ಕಳಕೊಂಡ ನಾಲ್ಕಾಣೆ ಮತ್ತು ಯಕ್ಷಗಾನ, ೭. ತುಳು ಪರಿಕಲ್ಪನೆಯ ಸುತ್ತ, ೮. ತುಳು ಭಾಷೆಗೆ ಸಂವಿಧಾನದ ಮಾನ್ಯತೆ, ೯. ತುಳು ಯಕ್ಷಗಾನಗಳು, ೧೦. ಯಕ್ಷಗಾನ: ಪರಂಪರೆ ಮತ್ತು ಬದಲಾವಣೆ, ೧೧. ತಾಳಮದ್ದಳೆಯ ವಿರಾಟ್‌ರೂಪ, ೧೨. ಅರೆಭಾಷೆಯ ಅನನ್ಯತೆಯ ಹುಡುಕಾಟದತ್ತ, ೧೩. ಮನೆಮುರುಕರು ಮತ್ತು ಮಂಗಳೂರು ಮಲ್ಲಿಗೆ ಮೊದಲಾದ ಲೇಖನಗಳಿವೆ. ಇದರಲ್ಲಿ ಕೆಲವು ಡಾ. ಬಿಳಿಮಲೆಯವರ ಬಾಲ್ಯದ ನೆನಪನ್ನು ತಿಳಿಸುವ ಲೇಖನಗಳಾದರೆ, ಇನ್ನು ಕೆಲವು ತುಳು ಭಾಷೆ ಮತ್ತು ಕರಾವಳಿಯ ಕುರಿತು ಬರೆದಿರುವ ಲೇಖನಗಳಾಗಿವೆ.

ಎರಡನೆಯ ಭಾಗದಲ್ಲಿ ೧೮ ಲೇಖನಗಳಿವೆ. ೧. ಕನ್ನಡ ಭಾಷೆಗಳ ಸಬಲೀಕರಣ, ೨. ಕನ್ನಡ ದೇಸಿ ಅಂದರೆ ನೀರುಳ್ಳಿ, ೩. ಕನ್ನಡ ಭಾಷೆಗೆ ರಾಷ್ಟ್ರೀಯ ಹಾಗೂ ಜಾಗತಿಕ ಮನ್ನಣೆ, ೪. ಪಠ್ಯ ವಿಸ್ತರಣೆಯ ಬಗೆಗೆ, ೫. ಎದೆಗೆ ಬಿದ್ದ ಅಕ್ಷರ, ೬. ಕಳಶದ ಕಥೆ, ೭. ಕರ್ನಾಟಕದ ಜಾನಪದ ಅಧ್ಯಯನಗಳು: ಹಳೆಯ ದಾರಿಯಲ್ಲಿಯೇ ನಡಿಗೆ, ೮. ಕರ್ನಾಟಕ ಐತಿಹ್ಯಗಳ ವಿಶ್ವಕೋಶ, ೯. ಕುಮ್ಮಟ ಜಾತ್ರೆಗೆ ಹೋಗಿ ಬನ್ನಿ, ೧೦. ಲಿಖಿತ ಪುರಾಣಗಳು ಮತ್ತು ಜನಪದ ಪುರಾಣಗಳು, ೧೧. ಮೈಲಾರಲಿಂಗ ಮತ್ತು ಖಂಡೋಬ: ಮರಾಠಿ-ಕನ್ನಡ ಸಂಬಂಧಗಳ ಕಿರುನೋಟ, ೧೨. ಕನ್ನಡ ಪಂಚಭೂತಗಳು, ೧೩. ಸಾವಿನ ಹಾಡುಗಳು, ೧೪. ಜಾತ್ರೆಗಳು ಮತ್ತು ವಚನ ಪಠ್ಯಗಳು, ೧೫. ವಿದೇಶೀ ವಿದ್ವಾಂಸರ ಕನ್ನಡ ಸೇವೆ, ೧೬. ಕರ್ನಾಟಕ ಜನಪದ ಕಲೆಗಳಿಗೆ ಯುನೆಸ್ಕೋ ಮನ್ನಣೆ ಏಕಿಲ್ಲ? ೧೭. ಒಂದರೊಳಗೆ ಇನ್ನೊಂದು ಹೆಣೆದುಕೊಂಡ ಪ್ರತಿ ಕಥನಗಳು, ೧೮. ಪ್ರಾದೇಶಿಕ ಪಕ್ಷಗಳು ಮತ್ತು ಪ್ರಜಾಪ್ರಭುತ್ವ-ಹೀಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಲೇಖನಗಳಿವೆ.

ಮೂರನೆಯ ಭಾಗದಲ್ಲಿ ೯ ಲೇಖನಗಳಿವೆ. ೧. ದೆಹಲಿಯಲ್ಲೊಂದು ಕನ್ನಡದ ಗುರುತು, ೨. ಕನ್ನಡಿಗರ ವಲಸೆಯ ಸುತ್ತಮುತ್ತ, ೩. ರಾಜಧಾನಿ ದೆಹಲಿಗೆ ನೂರು ವರುಷ, ೪. ರಾಷ್ಟ್ರೀಯ ಶಿಕ್ಷಣ ನೀತಿಗೆ ಒತ್ತಾಯ, ೫. ಜಾತೀಯತೆ, ಕೋಮುವಾದ ಮತ್ತು ಜನ ಸಂಸ್ಕೃತಿಗಳು, ೬. ಅರವನ್ ತಲೆಗಳು ಮತ್ತು ಸವದತ್ತಿಯ ಉಭಯಲಿಂಗಿಗಳು, ೭. ದಲಿತ ಬಹುಳತೆಯ ಕಡೆಗೆ, ೮. ಗಡಿದಾಟಿದ ಕಲೆ: ಯಕ್ಷಗಾನ, ೯. ಕೃಷ್ಣ ಮತ್ತು ಭಾರತೀಯ ರಂಗಭೂಮಿ ಎನ್ನುವ ಲೇಖನಗಳಿವೆ.

ನಾಲ್ಕನೆಯ ಭಾಗದಲ್ಲಿ ೧೨ ಲೇಖನಗಳಿವೆ. ೧. ಮತಾಂಧರಿಗೆ ಬಲಿಯಾದ ಬಾಮಿಯಾನ್ ಬುದ್ಧ, ೨. ಹಿಂದೂಗಳಿಲ್ಲದ ಸಿಂಧೂ ನದಿ, ೩. ಗಂಗೆಯ ಕತೆ, ೪. ಯಮುನೆಯ ವಾಸ್ತವಗಳು, ೫. ಕಳೆದುಹೋದ ಸರಸ್ವತಿ, ೬. ಮಥುರಾ ನಗರದಲ್ಲಿ ಇಂದು ಕೃಷ್ಣ ಮಾರಾಟದ ವಸ್ತು, ೭. ಕುರೂಪಗೊಂಡ ಕುರುಕ್ಷೇತ್ರ, ೮. ಬೆಳಕಿಲ್ಲದ

ನಗರ-ವಾರಣಾಸಿ, ೯. ಹನುಮಂತನ ಕಥೆ, ೧೦. ಹಲವು ಮಹಾಭಾರತಗಳ ಕತೆ, ೧೧. ಮಧ್ಯಕಾಲೀನ ಭಾರತದ ಪ್ರೇಮಕತೆಗಳು, ೧೨. ಮಾನವಿಕಗಳಲ್ಲಿ ಮೌಖಿಕ ನಿರೂಪಣೆಗಳಿಗೆ ಮನ್ನಣೆ ಮೊದಲಾದ ಲೇಖನಗಳಿವೆ.

ಐದನೆಯ ಭಾಗದಲ್ಲಿ ಐದು ಲೇಖನಗಳಿವೆ. ೧. ಆಡಂ ಮತ್ತು ಈವ್‌ಗಳನ್ನು ಬಿಟ್ಟು ಜಿಗಣೆಗಳ ಕಡೆಗೆ, ೨. ಕಮಿ ಮತ್ತು ಕುಲೆ, ೩. ಆಫ್ರಿಕಾದ ಕನ್ನಡ ಹಾಡುಗಳು, ೪. ದೇಹ ಮತ್ತು ಸಂಸ್ಕೃತಿ, ೫. ಇಚಿರೋ ಹೇಳಿದ ಕೊಜಿಕಿ ಕತೆ - ಇವೇ ಆ ಲೇಖನಗಳು.

ಈ ಪುಸ್ತಕದಲ್ಲಿರುವ ಲೇಖನಗಳನ್ನು ಹೀಗೆ ಪುಸ್ತಕ ರೂಪದಲ್ಲಿ ಪ್ರಕಟವಾಗುವ ಮೊದಲೇ ಬಹುಮಟ್ಟಿಗೆ ನಾನು ಪತ್ರಿಕೆಗಳಲ್ಲಿ ಓದಿದ್ದುಂಟು. ಅವುಗಳಲ್ಲಿ ಕೆಲವು ಲೇಖನಗಳು ಬಿಳಿಮಲೆಯವರ ಬಾಲ್ಯಜೀವನ, ಜಾನಪದ ಅಧ್ಯಯನ, ಯಕ್ಷಗಾನ, ಪ್ರವಾಸ ಕಥನ, ಕನ್ನಡ ಭಾಷೆ ಮತ್ತು ಸಂಸ್ಕೃತಿ, ಜಾತೀಯತೆ ಮತ್ತು ಕೋಮುವಾದ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳಾಗಿವೆ. 'ವಿದ್ಯೆ ಇಲ್ಲದ ಜಾತಕ ಮತ್ತು ನನ್ನ ಶಾಲೆ' ಎನ್ನುವ ಲೇಖನ ಹೀಗೆ ಆರಂಭವಾಗುತ್ತದೆ:

"ಕಾರಣಾಂತರಗಳಿಂದ ನನ್ನ ಅಪ್ಪ ಆಗ ಬಳ್ಪದ ಸಮೀಪದ ಹೊಪ್ಪಳೆ ಎಂಬಲ್ಲಿದ್ದರಂತೆ. ಭಯಾನಕ ಬಡತನದ ಕಾಲವದು. ಅಂಥ ಕೆಟ್ಟ ಕಾಲದಲ್ಲಿ ನಾನು ಒಂದು ಆದಿತ್ಯವಾರ, ಅಮಾವಾಸ್ಯೆಯ ದಿವಸ ರಣ ರಣ ಮಧ್ಯಾಹ್ನ ಜನಿಸಿದೆನಂತೆ. ನನ್ನ ತಂದೆ-ತಾಯಿಯರಿಗೆ ನಾನು ಮೂರನೇ ಮಗು, ಮೊದಲೆರಡು ಗಂಡಾಗಿದ್ದರಿಂದ ಸಹಜವಾಗಿ ಅವರಿಗೆ ಮೂರನೆಯದು ಹೆಣ್ಣಾಗಬೇಕೆಂಬ ಆಸೆ ಇದ್ದಿರಲೇಬೇಕು. ಆದರೆ ಅವರ ನಿರೀಕ್ಷೆಗೆ ಮೀರಿ, ಅವರ ಬಡತನಕ್ಕೆ ಕಳೆಯೇರಿಸುವಂತೆ, ಅದೂ ಅಮವಾಸ್ಯೆಯ ದಿನ ನಡುಮಧ್ಯಾಹ್ನ ನಾನು ಹುಟ್ಟಿಬಿಟ್ಟೆ. ಹಾಗೆ ನಾನು ಹುಟ್ಟುವಾಗ ತಂದೆ-ತಾಯಿಯರಿಗೆ ಅವರದ್ದೇ ಆದ ನೆಲ, ಮನೆ, ಬದುಕು ಯಾವುದೂ ಇರಲಿಲ್ಲ. ಕಠ್ರನೆ, ಕುಳ್ಳಗೆ, ಕುರೂಪದಲ್ಲಿ ಎಲ್ಲರನ್ನೂ ಮೀರಿಸುವಂತಿದ್ದ ನಾನು ತಂದೆ ತಾಯಿಯರ ಬಡತನವನ್ನು ಗಮನಾರ್ಹವಾಗಿ ಹೆಚ್ಚಿಸಿದ್ದಿರಬೇಕು. ಇಂಥ ಪರಿಸ್ಥಿತಿಯಲ್ಲಿ ಹೀಗೆ ಹುಟ್ಟಿದ ಮಗುವಿನ ಭವಿಷ್ಯ ಹೇಗಿರಬಹುದೆಂಬ ಕುತೂಹಲದಿಂದ ತಂದೆಯವರು ಕೇರಳ ಕರ್ನಾಟಕ ಗಡಿಭಾಗದ ಜ್ಯೋತಿಷಿಯೊಬ್ಬನಿಂದ ನನ್ನ ಜಾತಕ ಬರೆಯಿಸಿದರು. ಆತ ಯಥಾಪ್ರಕಾರ ಹುಟ್ಟಿದ ಕ್ಷಣ ಎಲ್ಲ ಗ್ರಹಗಳನ್ನು ಕರಾರುವಕ್ಕಾಗಿ ಕಂಡು ಹಿಡಿದು "ಈ ಜಾತಕನಿಗೆ ವಿದ್ಯಾ ಯೋಗ್ಯವಿಲ್ಲವು" ಎಂದು ಬರೆದು, ಅಪ್ಪನಲ್ಲಿ ಇರುವಷ್ಟು ದುಡ್ಡನ್ನು ಕಿತ್ತುಕೊಂಡ" (ಪು. ೧೫).

ಹಾಗೆಯೇ 'ಹಲವು ಮಹಾಭಾರತಗಳ ಕಥೆ' ಎನ್ನುವ ಲೇಖನವು ಹೀಗೆ ಆರಂಭವಾಗುತ್ತದೆ. "ವ್ಯಾಸರು ಬರೆದ ಮಹಾಭಾರತದ ನೂರಾರು ಪಠ್ಯಗಳನ್ನು ಸಂಗ್ರಹಿಸಿ, ಅವುಗಳಿಂದ 'ಒಂದು ಅಧಿಕೃತ' ಮಹಾಭಾರತವನ್ನು ಸಿದ್ಧಿಪಡಿಸಿಕೊಡಲು ಬ್ರಿಟಿಷರು ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾಗಿದ್ದ ಶ್ರೀ ವಿಷ್ಣು ಎಸ್. ಸೂಕ್ತಂಕರ್

ಅವರನ್ನು ೧೯೧೯ರಲ್ಲಿ ಕೇಳಿಕೊಂಡರು. ಸೂಕ್ತಂಕರ್ ಅವರು ಪಿ.ವಿ. ಕಾಣೆ, ಆರ್.ಡಿ. ಕರಮಕ್ಕರ್, ವಿ.ಜಿ. ಪರಾಂಜಪೆ, ವಿಂಟರ್‌ನೀಟ್ಜ್ ಮೊದಲಾದ ಸಮರ್ಥ ವಿದ್ವಾಂಸರ ತಂಡದೊಂದಿಗೆ ಸುಮಾರು ೧೫ ವರ್ಷಗಳ ಕಾಲ ದುಡಿದು, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವಿವಿಧ ಪ್ರದೇಶಗಳಲ್ಲಿ ಲಭ್ಯವಿದ್ದ ಸುಮಾರು ೧೬೦ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಕರ್ನಾಟಕ ಮತ್ತು ಒರಿಸ್ಸಾದಲ್ಲಿದ್ದ ಹಸ್ತಪ್ರತಿಗಳು ಏಕೋ ಅವರ ಕಣ್ಣಿಗೆ ಬೀಳಲಿಲ್ಲ. ಅವೆಲ್ಲವುಗಳನ್ನು ಅಧ್ಯಯನ ಮಾಡಿ 'ಮೂಲಕ್ಕೆ ಹತ್ತಿರ ಅನ್ನಬಹುದಾದ ಪಠ್ಯವೊಂದನ್ನು ಸಿದ್ಧಪಡಿಸಿ, ಅದನ್ನು ಪೂನಾದ ಭಂಡಾರ್‌ಕಾರ್ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನಿಂದ ಪ್ರಕಟಿಸಿದರು"(೧೯೩೩). ಹಾಗೆ ಪ್ರಕಟಿಸುವಾಗ ಸೂಕ್ತಂಕರ್ ಅವರು ಬರೆದ ಬಹಳ ಮಹತ್ವದ ವಾಕ್ಯವೊಂದು ಇಂತಿದೆ- "ವ್ಯಾಸರು ಬರೆದ ಮೂಲಪಠ್ಯ ಹೇಗಿದ್ದಿರಬಹುದೆಂದು ಸಾಧಿಸುವುದು ಸಾಧ್ಯವಿಲ್ಲದ ಕೆಲಸ, ಈಗ ನಾವು ಸಿದ್ಧಪಡಿಸಿದ್ದು ಮಹಾಭಾರತದ ಇನ್ನೊಂದು ಪಠ್ಯ ಅಷ್ಟೇ. ಆದರೆ, ಅವರು ಏನೇ ಹೇಳಲಿ, ನಾವೀಗ ಲಿಖಿತ ಪಠ್ಯಗಳನ್ನೇ ಆಧರಿಸಿ ಮಾತಾಡಲು ಕಲಿತಿದ್ದೇವೆ (ಪು. ೨೦೪).

ಮೇಲಿನ ಉಲ್ಲೇಖಗಳು ಬಿಳಿಮಲೆಯವರ ಗದ್ಯ ಶೈಲಿಗೆ ಮತ್ತು ಅವರ ವಿಚಾರ ಪ್ರತಿಪಾದನೆಗೆ ಕೆಲವು ಮಾದರಿಗಳು. 'ವಿದ್ಯೆ ಇಲ್ಲದ ಜಾತಕ ಮತ್ತು ನನ್ನ ಶಾಲೆ' ಎನ್ನುವ ಲೇಖನದಲ್ಲಿ ಅವರು ತರ್ಕಬದ್ಧವಾಗಿ ಜಾತಕವನ್ನು ನಿರಾಕರಿಸುತ್ತಾರೆ. ಇಂತಹ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದಾಗ ಸಹಜವಾಗಿಯೇ ಅವು ಓದುಗರಿಗೆ ಇಷ್ಟವಾಗುತ್ತವೆ. ಏಕೆಂದರೆ ಪತ್ರಿಕೆಯಲ್ಲಿ ಬರುವ ಲೇಖನಗಳನ್ನು ಓದುಗರು ಆಳವಾದ ಚರ್ಚೆಗೆ ಎಂದೂ ಒಳಪಡಿಸುವುದಿಲ್ಲ.

ಭವಿಷ್ಯ ಅಥವಾ ಜಾತಕದ ಕುರಿತು ನನಗೂ ನನ್ನದೇ ಆದ ಕೆಲವು ಅನುಭವಗಳಿವೆ. ನಾನು ಎಳವೆಯಲ್ಲಿದ್ದಾಗ ನನ್ನ ತಾಯಿ ನಮ್ಮ ಊರಿಗೆ ಬಂದಿದ್ದ, ಹಸ್ತಸಾಮುದ್ರಿಕವನ್ನು ಬಲ್ಲ ಗೌಡರೊಬ್ಬರಿಗೆ ನನ್ನ ಮತ್ತು ನನ್ನ ಅಣ್ಣನ ಕೈಯ ಲಕ್ಷಣವನ್ನು ಹೇಳುವಂತೆ ಕೇಳಿಕೊಂಡಿದ್ದಳು. ಅವರು ನಮ್ಮಿಬ್ಬರ ಕೈ ಲಕ್ಷಣವನ್ನು ನೋಡಿ-ಈಗ ನಲವತ್ತು ವರ್ಷಗಳ ಹಿಂದೆ ಭವಿಷ್ಯ ನುಡಿದಿದ್ದರು. ಅವರ ಪ್ರಕಾರ ನಮ್ಮ ಅಣ್ಣ ಹೆಂಚು ಹೊದಿಸಿದ ಮನೆಯನ್ನು ಕಟ್ಟಿಸುತ್ತಾನೆಂದು, ನಾನು ತುಂಬಾ ಓದುತ್ತೇನೆಂದು ಭವಿಷ್ಯ ನುಡಿದಿದ್ದರು. ಅದು ನಿಜವೂ ಆಗಿದೆ! ಅದಕ್ಕಿಂತ ಮುಖ್ಯವಾಗಿ ನಮ್ಮ ಅಮ್ಮನಿಗೆ ಆವಾಗ ತುಂಬಾ ಸಂತೋಷವೂ ಆಗಿತ್ತು. ಅವರು ತುಂಬಾ ಸಂಭ್ರಮಿಸಿದ್ದರು.

ಈ ವಿಷಯವನ್ನು ನಾನು ಉಲ್ಲೇಖಿಸುವುದಕ್ಕೆ ಸ್ಪಷ್ಟವಾದ ಕಾರಣವಿದೆ. ನಾವು ಯಾವ ಜ್ಯೋತಿಷರ ಬಳಿಗೆ ಹೋಗುತ್ತೇವೆಯೋ ಅಂತಹ ಭವಿಷ್ಯವೇ ನಮಗೆ ಸಿಗುತ್ತದೆ ಎಂದು ಇದಕ್ಕೆ ಅರ್ಥ. ಬ್ರಾಹ್ಮಣ ಜ್ಯೋತಿಷರ ಬಳಿಗೆ ಹೋಗಿ ಭವಿಷ್ಯ ಕೇಳಿದರೆ ಈತನಿಗೆ ವಿದ್ಯೆ ಬರುವುದಿಲ್ಲ ಎಂದರೆ ಬಿಳಿಮಲೆಯವರು ಪ್ರಾಧ್ಯಾಪಕರಾಗುವುದಿಲ್ಲ ಅಥವಾ ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ

ನಿರ್ದೇಶಕರಾಗುವುದಿಲ್ಲ ಎಂದು ಅದರರ್ಥವಲ್ಲ. ಬದಲಾಗಿ ಅವರು ಸಂಸ್ಕೃತವನ್ನು ಓದುವುದಿಲ್ಲ, ವೇದೋಪನಿಷತ್ತುಗಳನ್ನು ಓದುವುದಿಲ್ಲವೆಂದೇ ಅದರರ್ಥ. ಏಕೆಂದರೆ ಬ್ರಾಹ್ಮಣರ ಪ್ರಕಾರ ವಿದ್ಯೆ ಎಂದರೆ ಸಂಸ್ಕೃತದ ಜ್ಞಾನ, ವೇದೋಪನಿಷತ್ತು ಮೊದಲಾದ ಪಾರಂಪರಿಕ ವಿದ್ಯೆಗಳು. ನನಗೆ ಗೊತ್ತಿರುವ ಹಾಗೆ ಬಿಳಿಮಲೆಯವರು ಈವರೆಗೂ ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದಿಲ್ಲ. ಅಂದ ಮೇಲೆ ಜ್ಯೋತಿಷಿ ಹೇಳಿದ್ದು ಸತ್ಯವಾಯಿತು ತಾನೆ! ನಮ್ಮ ಭವಿಷ್ಯವನ್ನು ಹೇಳಿದ ಗೌಡರ ಪ್ರಕಾರ ವಿದ್ಯೆ ಎಂದರೆ ಆಧುನಿಕ ವಿದ್ಯಾಭ್ಯಾಸವೆಂದೇ ಅರ್ಥ. ಅವರು ಹೇಳಿದಂತೆಯೇ ನಮ್ಮ ಭವಿಷ್ಯದಲ್ಲಿ ಅದು ನಿಜವೂ ಆಯಿತು.

ಈ ವಿಷಯವನ್ನು ಜ್ಯೋತಿಷವನ್ನು ಸಮರ್ಥನೆ ಮಾಡುವುದಕ್ಕಾಗಲಿ ಬಿಳಿಮಲೆ ಅವರನ್ನು ಹಾಸ್ಯ ಮಾಡುವುದಕ್ಕಾಗಲಿ ನಾನು ಹೇಳುತ್ತಿಲ್ಲ. ನಮ್ಮಲ್ಲಿ ಜ್ಯೋತಿಷದ ಕಲ್ಪನೆ ಇರುವುದೇ ಹಾಗೆ. ಜ್ಯೋತಿಷ ಹೇಳುವವರಾಗಲಿ, ಅದನ್ನು ಕೇಳುವವರಾಗಲಿ ನೂರಕ್ಕೆ ನೂರು ಅದನ್ನೇ ನಂಬಿ ಜೀವನ ಮಾಡುವುದಿಲ್ಲ. ಬಿಳಿಮಲೆಯವರ ಲೇಖನದ ಹಿನ್ನೆಲೆಯಲ್ಲಿ ಹೇಳುವುದಾದರೂ ಅವರ ತಂದೆಯವರಿಗೆ ಇದು ಸ್ಪಷ್ಟವಾಗಿತ್ತು. ಆ ಕಾರಣಕ್ಕಾಗಿ ಅದೇ ಜ್ಯೋತಿಷರ ಬಳಿಗೆ ಹೋಗಿ ಶಾಲೆಗೆ ಹೋಗುವುದಕ್ಕೆ ಒಳ್ಳೆಯ ಮುಹೂರ್ತವನ್ನು ತಿಳಿಸುವಂತೆ ಕೇಳುತ್ತಾರೆ ಮತ್ತು ಜ್ಯೋತಿಷಿ ಅವರಿಗೆ ಒಳ್ಳೆಯ ಮುಹೂರ್ತವನ್ನೂ ಹೇಳುತ್ತಾನೆ. ಹಾಗೆಯೇ ನಾನು ಈಗಾಗಲೇ ಹೇಳಿದ ಹಾಗೆ ಜ್ಯೋತಿಷ ಎನ್ನುವುದು ಬೇರೆ ಬೇರೆ ಜಾತಿಯವರು ಬೇರೆ ಬೇರೆಯಾಗಿಯೇ ಹೇಳುವ ಭವಿಷ್ಯವಾಗಿದೆ. ಜನಸಾಮಾನ್ಯರು ಎಂದೂ ಗಂಭೀರವಾಗಿ ತೆಗೆದುಕೊಳ್ಳದ ಇಂಥ ವಿಷಯವನ್ನು ಬಿಳಿಮಲೆಯವರು ಬಹಳ ಗಂಭೀರವಾಗಿ ಪ್ರತಿಪಾದಿಸುತ್ತಾರೆ ಮತ್ತು ಸಹಜವಾಗಿಯೇ ದಿನಪತ್ರಿಕೆಗಳ ಓದುಗರ ಕುತೂಹಲವನ್ನು ಕೆರಳಿಸುತ್ತಾರೆ.

'ಹಲವು ಮಹಾಭಾರತಗಳ ಕಥೆ' ಎನ್ನುವ ಲೇಖನಕ್ಕೆ ಸಂಬಂಧಿಸಿದ ಆರಂಭಿಕ ಭಾಗವನ್ನು ಈಗಾಗಲೇ ಈ ಲೇಖನದ ಆರಂಭದಲ್ಲಿ ಹೇಳಿದ್ದಾಯಿತು. ಹಲವು ಮಹಾಭಾರತಗಳು ಭಾರತದಲ್ಲಿವೆ ಎನ್ನುವ ಬಿಳಿಮಲೆಯವರು "ಈ ಮೌಖಿಕ ಮಹಾಭಾರತಗಳನ್ನು ವ್ಯಾಸ ಭಾರತದೊಂದಿಗೆ ಹೋಲಿಸಿ ಬೆಲೆ ಕಟ್ಟುವುದು ತಪ್ಪು. ಇವೆಲ್ಲವು ಸ್ವತಂತ್ರ ರಚನೆಗಳು ಎನ್ನುತ್ತಾರೆ"(ಪು. ೨೦೮).

ಮಹಾಭಾರತ, ರಾಮಾಯಣ ಮೊದಲಾದ ಪ್ರಾಚೀನ ಕಾವ್ಯಗಳಿಗೆ ಸಂಬಂಧಪಟ್ಟ ಹಾಗೆ ಬರೆಯುತ್ತ ಹೋದರೆ ಅದುವೇ ಒಂದು ರಾಮಾಯಣ, ಮಹಾಭಾರತವಾದೀತು.

ಮೊದಲನೆಯದಾಗಿ ನಮ್ಮಲ್ಲಿ ಎಷ್ಟು ಜನರು ವ್ಯಾಸರು ಬರೆದ ಮಹಾಭಾರತವನ್ನು ಓದಿದ್ದಾರೆ? ಹಾಗೆಯೇ ಎಷ್ಟು ಜನರಿಗೆ ಮಹಾಭಾರತದ ನೂರಾರು ಪಠ್ಯಗಳು ದೊರೆಯುತ್ತವೆ ಎನ್ನುವ ಪರಿಕಲ್ಪನೆ ಇದೆ ಎನ್ನುವ ವಿಷಯವೇ ಒಂದು ಚರ್ಚಾಸ್ಪದವಾದ ವಿಷಯವಾಗಿದೆ. ಅದಿರಲಿ, ಆದರೆ ತಮ್ಮದೇ ಆದ ಪ್ರಾದೇಶಿಕ, ಜಾನಪದ, ಮಹಾಭಾರತ

ಗಳನ್ನು ಹೇಳುವ ಜನಸಾಮಾನ್ಯರು ಈಗ ವ್ಯಾಸರದೆಂದು ಹೇಳುವ ಸಂಸ್ಕೃತದ ಕಥೆಯನ್ನು ಹೇಳಿದಾಗ ಅದನ್ನು ಖಂಡಿತವಾಗಿಯೂ ನಿರಾಕರಿಸಲಾರರು ಎಂಬುದು ನನ್ನ ತಿಳುವಳಿಕೆಯಾಗಿದೆ. ಆದರೆ ಈಗಿನ ವಿದ್ವಾಂಸರು ಮಾತ್ರ ಈ ಮೂಲಭೂತವಾದ ವಿಷಯವನ್ನು ತಿಳಿಯದೇ ರಾಮಾಯಣಕ್ಕೂ, ಮಹಾಭಾರತಕ್ಕೂ ಸಂವಾದಿಯಾದ ಅಥವಾ ಆಗದ ಜಾನಪದ ಕತೆಯೊಂದು ಅವರ ಗಮನಕ್ಕೆ ಬರುತ್ತಿದ್ದ ಹಾಗೆ ವ್ಯಾಸರ ಮಹಾಭಾರತವನ್ನೂ ವಾಲ್ಮೀಕಿಯ ರಾಮಾಯಣವನ್ನೂ ತಿರಸ್ಕಾರ ಮಾಡುವುದಕ್ಕೆ ಆರಂಭಿಸುತ್ತಾರೆ. ಜನಪದರಲ್ಲಿಲ್ಲದ ಈ ಮನೋಭಾವ ವಿದ್ವಾಂಸರಲ್ಲಿ ಬರುವುದಾದರೂ ಹೇಗೆ? ಪುರಾಣಗಳು ಅಧಿಕೃತವೇ, ಅನಧಿಕೃತವೇ ಎಂಬ ಪ್ರಶ್ನೆಯನ್ನು ಭಾರತೀಯರು ಎಂದೂ ಕೇಳಿಲ್ಲ; ಭಾರತೀಯರಿಗೆ ಇದು ಮುಖ್ಯವಾದ ಪ್ರಶ್ನೆಯಲ್ಲ. ಹಾಗಾದರೆ ಈ ಪ್ರಶ್ನೆಗಳನ್ನು ನಾವು ಕೇಳಲು ಆರಂಭ ಮಾಡಿದ್ದು ಎಂದಿನಿಂದ? ಈ ಎರಡು ಲೇಖನಗಳನ್ನು ಗಮನದಲ್ಲಿರಿಸಿ, ಈ ಟಿಪ್ಪಣಿಯನ್ನು ಮಂಡಿಸುವುದಕ್ಕೆ ಕಾರಣವೂ ಇದೆ. ಇವುಗಳನ್ನು ನಾನು ಈ ಪುಸ್ತಕದ ಪ್ರಾತಿನಿಧಿಕ ಲೇಖನಗಳೆಂದು ಪರಿಗಣಿಸಿ ಹೀಗೆ ಮಾಡಬೇಕಾಯಿತು. ನಮ್ಮ ದಿನಪತ್ರಿಕೆಗಳಲ್ಲಿ ಪ್ರಕಟವಾಗುವ ಲೇಖನಗಳ ಒಟ್ಟಾರೆ ಗುಣಲಕ್ಷಣಗಳನ್ನೇ ಇವು ಹೇಳುತ್ತವೆ. ದಿನಪತ್ರಿಕೆಯ ಓದುಗರಿಗೆ ಗಂಭೀರವಾದ ಲೇಖನಗಳು ಬೇಕಾಗಿಲ್ಲ. ಸಾಮಾನ್ಯವಾಗಿ ದಿನಪತ್ರಿಕೆಯ ಓದುಗರು ತಮ್ಮ ಬೆಳಗಿನ ಉಪಹಾರದ ಜೊತೆಗೆ ಪತ್ರಿಕೆಗಳನ್ನು ಓದುತ್ತಾರೆ. ಅವರಿಗೆ "ಚಹಾದ ಜೋಡಿ ಚೂಡದ್ಹಾಂಗ" ಪತ್ರಿಕೆಯ ಲೇಖನಗಳು, ವರದಿಗಳು ಬೇಕಾಗುತ್ತವೆ.

ವಿಷಯದ ಆಳಕ್ಕೆ ಲೇಖಕರಾಗಲಿ, ಓದುಗರಾಗಲಿ ಇಳಿಯುವುದೇ ಇಲ್ಲ. ಬಿಳಿಮಲೆ ಅವರ ಮಾತಿನಲ್ಲೇ ಹೇಳುವುದಾದರೆ ಜ್ಯೋತಿಷರು ಇವನಿಗೆ ವಿದ್ಯೆ ಹತ್ತುವುದಿಲ್ಲ ಎಂದರು. ಇಲ್ಲಿ ವಿದ್ಯೆ ಎನ್ನುವುದಕ್ಕೆ ಬೇರೆ ಬೇರೆ ಅರ್ಥಗಳಿವೆ. ಹಳ್ಳಿಗಳಲ್ಲಿ ವಿದ್ಯಾವಂತ ಎಂದೆನಿಸಿಕೊಳ್ಳಬೇಕಾದರೆ ಕುಮಾರವ್ಯಾಸ ಭಾರತವನ್ನು, ಜೈಮಿನಿ ಭಾರತವನ್ನು ಓದಲು ಬರುವಂತಿರಬೇಕು. ಎಂ.ಎ., ಪಿಎಚ್.ಡಿ. ಪ್ರೊಫೆಸರ್‌ಗಿರಿ ಇವೆಲ್ಲ ಹಳ್ಳಿಗರ ಪ್ರಕಾರ ನಾವು ತಿಳಿದುಕೊಂಡಂತೆ ವಿದ್ಯೆಗಳಲ್ಲ. ಹಾಗೆಯೇ ಜ್ಯೋತಿಷರ ಪ್ರಕಾರವು ವಿದ್ಯೆ ಎಂದರೆ ಸಂಸ್ಕೃತದ ಜ್ಞಾನ, ವೇದೋಪನಿಷತ್ತುಗಳ ತಿಳುವಳಿಕೆ ಎಂದೇ ಅರ್ಥ. ಇನ್ನೂ ಕೆಲವರ ಪ್ರಕಾರ ವಿದ್ಯೆ ಎಂದರೆ ಔಷಧಿಯನ್ನು ಕೊಡುವ ತಿಳುವಳಿಕೆ ಎಂದು ಅರ್ಥ. ಹಾಗಾಗಿರುವುದರಿಂದಲೇ ನಾಟಿ ವೈದ್ಯರನ್ನು ಹಳ್ಳಿಗಳಲ್ಲಿ ಪಂಡಿತ ಎಂದು ಕರೆಯುತ್ತಾರೆ. ಕರಾವಳಿಯ ಕಡೆ ವಿದ್ಯಾವಂತರೆಂದರೆ ಯಕ್ಷಗಾನ ಕಲಾವಿದ ಎಂದೇ ಅರ್ಥ.

ಮಹಾಭಾರತದಲ್ಲಿ ಒಂದು ಶ್ಲೋಕ ಹೀಗಿದೆ :

ಗ್ರಸ್ತಾಂ ಸುಪರ್ಣಸ್ಯ ಬಲೇನ ವರ್ತಿಕಾ
ಮಮುಞ್ಚತಾಮಶ್ವಿನೌ ಸೌಭಗಾಯ ।

ತಾವತ್ಸುವೃತ್ತಾವನಮನ್ತ ಮಾಯಯಾ
ವಸತ್ತಮಾ ಗ್ರಾ ಅರುಣಾ ಉದಾವಹನ್ ॥
(ಶ್ರೀಮನ್ಮಹಾಭಾರತ ಪ್ರಥಮ ಸಂಪುಟ, ಪು. ೧೦೬-೧೦೭)

ಅಂದರೆ ಎಲೈ ಅಶ್ವಿನೀದೇವತೆಗಳೇ! ಗರುಡನಂತಹ ಪರಾಕ್ರಮ ಮತ್ತು ವೇಗಗಳುಳ್ಳ ಒಂದು ನಾಯಿಯು ಗುಬ್ಬಚ್ಚಿಯ ಜಾತಿಯ ಒಂದು ಹೆಣ್ಣು ಪಕ್ಷಿಯನ್ನು ಬಾಯಲ್ಲಿ ಕಚ್ಚಿಕೊಂಡಿದ್ದಾಗ ನೀವು ಅದನ್ನು ಬಿಡಿಸಿ ಅದಕ್ಕೆ ಪುನಃ ಜೀವನದ ಸೌಖ್ಯವು ಸಿಗುವಂತೆ ಮಾಡಿದ್ದೀರಿ. ಸೋಮಯಾಗದಲ್ಲಿ ಇಂದ್ರನೇ ಮೊದಲಾದ ದೇವತೆಗಳು ಇದ್ದರೂ-ತುಂಟ ಹಸುಗಳು ಮೇಯಿಸುವವರಿಗೆ ಬಹಳ ಶ್ರಮಪಡುವುದರಿಂದ ಯಜಮಾನನು ಅಂತಹ ಹಸುಗಳನ್ನು ಕಾಪಾಡುವ ಕೆಲಸವು ನಿಮ್ಮಿಬ್ಬರ ಹೊರತು ಬೇರೆ ಯಾರಿಗೂ ಸಾಧ್ಯವಿಲ್ಲವೆಂದು ತಿಳಿದು, ಆ ಹಸುಗಳನ್ನು ಕಾಪಾಡುವುದಕ್ಕೆ ನಿಮ್ಮಿಬ್ಬರನ್ನೇ ಪ್ರಾರ್ಥಿಸಿದ್ದಾನೆ. ಹೀಗೆ ದಯಾವಂತರು, ದಕ್ಷರು ಆದ ನಿಮ್ಮಿಬ್ಬರಿಗೂ ನಾನು ನಮಸ್ಕರಿಸುತ್ತೇನೆ. ಇದಕ್ಕೆ ಮೂಲವಾದ ಮಂತ್ರವೊಂದು ಋಗ್ವೇದದಲ್ಲಿ ಮಂಡಲ ೧ ಅಧ್ಯಾಯ ೧೨ ಸೂಕ್ತ ೧೧೬ರಲ್ಲಿ ಹೀಗೆ ಬರುತ್ತದೆ:

ಅಸ್ನೋರ್ವ್ಯಕಸ್ಯ ವರ್ತಿಕಾಮಭೀಕೇ ಯುವಂ ಹ ನಾಸತ್ಯಾ ಮುಮಕ್ತಮ್ ।
ಉತೋಕವಿಂ ಪುರುಭುಜಾ ಯುವಂ ಹ ಕೃಪಮಾಣಮಕೃತಂ ವಿಚಕ್ಷೇ ॥
ಇದು ಶ್ರೀಮನ್ ಮಹಾಭಾರತ (ಪ್ರಥಮ ಸಂಪುಟ, ಪು. ೧೦೬-೧೦೭).

ಹೀಗೆ ವ್ಯಾಸರ ಮಹಾಭಾರತವನ್ನು ಮೂಲ ಮಹಾಭಾರತ ಎಂದಾಗ ಅದಕ್ಕೊಂದು ಪರಂಪರೆಯನ್ನು ಹೇಳಲಾಗುತ್ತದೆ. ವೇದ, ಉಪನಿಷತ್ತುಗಳಲ್ಲಿರುವ ಅನೇಕ ಕಥೆಗಳು, ಶ್ಲೋಕಗಳು ಮಹಾಭಾರತದಲ್ಲಿಯೂ ಬರುತ್ತವೆ. ಆದುದರಿಂದಾಗಿಯೇ ಅದು ಪ್ರಾಚೀನವಾಗಿದೆ.

ಬಿಳಿಮಲೆಯವರು ಗುರುತಿಸುವ ಹಲವು ಮಹಾಭಾರತಗಳು ಎಷ್ಟು ಪ್ರಾಚೀನ ವಾದವು? ಅವುಗಳಲ್ಲಿ ವೇದಗಳ ಮಂತ್ರಗಳು ಉಪಖ್ಯಾನಗಳು ಎಷ್ಟು ಬರುತ್ತವೆ? ಎಲ್ಲಿ ಬರುತ್ತವೆ? ಹಾಗೆಯೇ ಮಹಾಭಾರತದಲ್ಲಿ ವೇದೋಪನಿಷತ್ತುಗಳಲ್ಲಿ ಬರುವ ಅನೇಕ ನೀತಿ, ಆದರ್ಶ, ಸಂಪ್ರದಾಯ, ರಾಜಮನೆತನಗಳು, ಪ್ರಾಚೀನ ಕಾಲದ ಆಚಾರ-ವಿಚಾರಗಳು ಮೊದಲಾದವು ಕಾಣಿಸಿಕೊಳ್ಳುತ್ತವೆ. ಜನಪದ ಮಹಾಭಾರತಗಳಲ್ಲಿ ಇದರ ಬದಲಾಗಿ ಬೆರಳು, ರಕ್ತ, ಸೆರಗು ಮತ್ತು ಲಂಗೋಟಿಗಳು ಕಾಣಿಸಿಕೊಳ್ಳುತ್ತವೆ. ಇದನ್ನು ವ್ಯಾಸರ ಮಹಾಭಾರತಕ್ಕೆ ಸಮಾನವೆಂದರೆ ತರ್ಕ ಆಕರ್ಷಣೀಯವಾಗಿ ಕೇಳಿ ಬರುತ್ತದೆ. ಆದರೆ ಇದರಿಂದ ಯಾವ ಸಿದ್ಧಾಂತವನ್ನು ಪ್ರತಿಪಾದಿಸಿದಂತಾಗುತ್ತದೆ? ತಮಗೆ ತೋಚಿದ ಹಾಗೆ ಯಾರಿಗೆ ಬೇಕಾದರೂ ಮಹಾಭಾರತವನ್ನು ಹೇಳುವ-

ಕೇಳುವ ಸ್ವಾತಂತ್ರ್ಯ ನಮ್ಮಲ್ಲಿ ಎಂದಿನಿಂದಲೂ ಇದೆ. ಯಕ್ಷಗಾನದಲ್ಲಿ ಬರುವ ಅನೇಕ ಪ್ರಸಂಗಗಳು ಮಹಾಭಾರತ್ತದಲ್ಲಿಲ್ಲ. ಅಷ್ಟೇಕೆ ಪಂಪ, ಕುಮಾರವ್ಯಾಸ ಮೊದಲಾದ ಕವಿಗಳ ಕಾವ್ಯದಲ್ಲಿಯೂ ಮೂಲ ಮಹಾಭಾರತದಲ್ಲಿಲ್ಲದ ಅನೇಕ ಪ್ರಸಂಗಗಳು ಬಂದಿವೆ.

ಕಥೆ ಮೇಯ್ಗಿಡಲೀಯದೆ(ಕಥೆಯ ಒಟ್ಟು ಅರ್ಥಕ್ಕೆ ಭಂಗ ಬಾರದ ಹಾಗೆ) ಮಹಾಭಾರತವನ್ನು ಹೇಳುವುದು ನಮ್ಮಲ್ಲಿ ಒಂದು ಸಂಪ್ರದಾಯವಾಗಿದೆ. ಆದರೆ ಜನಪದರು ವ್ಯಾಸನಿಗಿಂತಲೂ ಪೂರ್ವದ ಮಹಾಭಾರತವನ್ನು ಹೇಳಿದ್ದಾರೆ ಎಂದಾದರೆ ಅದಕ್ಕೆ ಭಾಷಿಕ, ಪಾರಂಪರಿಕ, ಐತಿಹಾಸಿಕ ಆಧಾರಗಳನ್ನು ಕೊಡಬೇಕು. ಈವರೆಗೆ "ಹಲವು ಮಹಾಭಾರತ"ಗಳನ್ನು ಕನ್ನಡದಲ್ಲಿ ಹೇಳುವವರು. ಅಂಥ ಯಾವ ಆಧಾರಗಳನ್ನು ನಮಗೆ ನೀಡಿಲ್ಲ. ಕಾವ್ಯವನ್ನೇ ಮುಖ್ಯ ಲಕ್ಷಣವನ್ನಾಗಿ ನೋಡಿದರೆ ಅವು ವ್ಯಾಸರ ಮಹಾಭಾರತದ ಹತ್ತಿರವೂ ಸುಳಿಯಲಾರವು.

ಹಾಗೆಯೇ 'ಕಮಿ ಮತ್ತು ಕುಲೆ' ಎನ್ನುವ ಲೇಖನದಲ್ಲಿಯೂ ತುಳುನಾಡಿನ ಕುಲೆ ಮತ್ತು ಜಪಾನಿನ ಕಮಿಗಳು ಒಂದೇ ಎಂದು ಬಿಳಿಮಲೆಯವರು ಹೇಳುತ್ತಾರೆ. ಆದರೆ ಅವರು ನೀಡಿರುವ ವಿವರಣೆಯಿಂದಲೇ ಅವು ಬೇರೆ ಬೇರೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ!

ನಮ್ಮ ದಿನಪತ್ರಿಕೆಗಳಿಗೆ ವಿಚಾರದ ಆಳಕ್ಕಿಳಿದು ಚರ್ಚೆ ಮಾಡುವುದು ಬೇಕಾಗಿಲ್ಲ. ಪ್ರತಿದಿನ ಏನಾದರೂ ಕುತೂಹಲಕಾರಿಯಾದ ವಿಷಯಗಳನ್ನು ಬರೆಯಬೇಕು. ಗಂಭೀರ ವಾದ ವಿಷಯಗಳನ್ನು ಬರೆದ ಕೂಡಲೇ ಅದನ್ನು ಶೈಕ್ಷಣಿಕ ಶಿಸ್ತು ಎಂದು ಅಲ್ಲಗಳೆಯುವುದು ಪತ್ರಿಕೆಗಳ ಜಾಯಮಾನವಾಗಿದೆ. ಹೀಗಾಗಿ ಅಂಕಣಕಾರರು ಆ ದಿನ ತಮಗೇನು ತೋಚುವುದೋ ಅದನ್ನೇ ಬರೆಯುತ್ತಾರೆ. ಓದುಗರಿಗೂ ಇದನ್ನು ಮೀರಿ ಯೋಚಿಸುವುದು ಅಗತ್ಯವೂ ಇಲ್ಲ; ಸಮಯವೂ ಇಲ್ಲ.

ಹಾಗಾದುದರಿಂದ ವಿದ್ವಾಂಸರಾದ ಬಿಳಿಮಲೆಯವರು ಯಾವುದೇ ಆಧಾರಗಳಿಲ್ಲದ ಕೇವಲ ಅಭಿಪ್ರಾಯ ಮುಖ್ಯವಾದ ಇಂತಹ ಬರಹಗಳನ್ನು ಬರೆಯುತ್ತಾರೆ. ಈ ಸಂಕಲನದಲ್ಲಿ ಹೀಗೆ ತಕ್ಷಣಕ್ಕೆ ತೋಚಿದ್ದನ್ನು ಹೇಳಿರುವ ಅನೇಕ ಲೇಖನಗಳಿವೆ. ಅವುಗಳು ಗಂಭೀರವಾದ ಅಧ್ಯಯನದಿಂಧ ರೂಪಿತವಾದ ಬರಹಗಳಲ್ಲ. ಇದರಿಂದ ಅವರಿಗೆ ಅಪಾರ ಓದುಗರ ವಲಯವೊಂದು ಈ ಅಂಕಣಗಳ ಮೂಲಕ ಲಭಿಸಿರುತ್ತದೆ ಎನ್ನುವುದರಲ್ಲಿಯೂ ನನಗೆ ಯಾವ ಅನುಮಾನವು ಇಲ್ಲ. ಏಕೆಂದರೆ ಇಂದು ದಿನ ಪತ್ರಿಕೆಗಳು ಅದನ್ನೇ ಮಾಡುತ್ತಿರುವುದು; ಓದುಗರಿಗೂ ಅದೇ ಬೇಕಾಗಿರುವುದು!

ಡಾ. ಮಾಧವ ಪೆರಾಜೆ

೪. ಯಕ್ಷಗಾನ ರಂಗಭಾಷೆ

ಡಾ. ಚಂದ್ರಶೇಖರ ದ್ಹಾಮ್ಲೆ
ಪುಟ ೧೧೨, ಬೆಲೆ ರೂ. ೧೦೦/-
ಮೊದಲ ಮುದ್ರಣ ೨೦೧೩
ಸ್ನೇಹ ಪ್ರಕಾಶನ, ಗಾಂಧಿನಗರ
ಸುಳ್ಯ - ೫೭೪ ೨೩೯, ದಕ್ಷಿಣ ಕನ್ನಡ ಜಿಲ್ಲೆ

ಯಕ್ಷಗಾನ ಕರಾವಳಿ ತೀರದ ಜನ ಸಂಸ್ಕೃತಿಯಲ್ಲಿ ಬೆರೆತುಹೋದ ಶಿಷ್ಟ ಕಲೆಗಳಲ್ಲೊಂದು ಎಂಬುದು ನಿರ್ವಿವಾದ. ಯಾವುದೇ ಕಲೆ ಪರಿಸರ ಮತ್ತು ಪರಿಸ್ಥಿತಿಗೆ ಹೊಂದಿಕೊಂಡು ಹೊಸ ರೂಪ ತಾಳುವುದು ಅಥವಾ ಸವಕಳಿ ಹೊಂದುವುದು ಸಹಜ. ಡಾ. ಚಂದ್ರಶೇಖರ ದಾಮ್ಲೆಯವರ 'ಯಕ್ಷಗಾನ-ರಂಗಭಾಷೆ' ಎನ್ನುವ ಕೃತಿಯಲ್ಲಿ ಚರ್ಚಿತವಾದ ಎಲ್ಲಾ ಅಂಶಗಳು ಹೊಸ ದೃಷ್ಟಿಕೋನದಿಂದ ಕೂಡಿದ್ದು, ಒಂದು ಕಲೆಯನ್ನು ಹೊಸ ಅಧ್ಯಯನ ಪ್ರಕ್ರಿಯೆಗೆ ಒಳಪಡಿಸಿದಂತಿದೆ.

ಪ್ರದರ್ಶನ ಕಲೆಯಾದ ಯಕ್ಷಗಾನವು ತನ್ನದೇ ಆದ ಚೌಕಟ್ಟನ್ನು ಹೊಂದಿದೆ. ಜಾನಪದ ಪ್ರಕಾರವನ್ನು ಹೋಲುವ ಈ ಕಲೆ ಮೌಖಿಕ ಮತ್ತು ಆಂಗಿಕವಾಗಿ ಸಂವಹನಗೊಳಿಸುವಲ್ಲಿ 'ರಂಗಭಾಷೆ'ಯ ಮಹತ್ವವನ್ನೇ ಈ ಕೃತಿ ಅರ್ಥಪೂರ್ಣವಾಗಿ ಪರಿಚಯಿಸಿದೆ. ಕಥಾನುಭವವನ್ನು ನಾಟ್ಯ, ಮಾತು, ಹಿಮ್ಮೇಳ ಮತ್ತು ಇತರ ತಾಂತ್ರಿಕ ಪರಿಕರಗಳ ಮೂಲಕ ಪ್ರೇಕ್ಷಕ ವರ್ಗದವರಿಗೆ ಸಂವಹನಗೊಳಿಸುವ ಕ್ರಿಯೆಯೇ 'ರಂಗಭಾಷೆ' ಎನ್ನುವಲ್ಲಿ ಕೃತಿಕಾರರ ಸೂಕ್ಷ್ಮ (Micro) ರೀತಿಯ ಅಧ್ಯಯನವನ್ನು ಮೆಚ್ಚುವಂತಹದ್ದು.

ಭರತನಾಟ್ಯ, ಕೂಚಿಪುಡಿ, ಕಥಕಳಿ ಮುಂತಾದ ಶಾಸ್ತ್ರೀಯ ನೃತ್ಯಗಳಲ್ಲಿನ ರಂಗಭಾಷೆಗೂ ಯಕ್ಷಗಾನ ಕಲೆಯ ರಂಗಭಾಷೆಗೂ ಇರುವ ವ್ಯತ್ಯಾಸವನ್ನು ತಿಳಿಸುವ ಲೇಖಕರ ಚಿಂತನಾಕ್ರಮ ಹೊಸತು ಮತ್ತು ಅಗತ್ಯವೂ ಕೂಡ. ಯಕ್ಷಗಾನ ಕಲಾ ಪ್ರಕಾರವನ್ನು ಅರಿಯಲು ಕೈಪಿಡಿಯಂತಿರುವ ಈ ಹೊತ್ತಗೆ ಒಟ್ಟು ಹನ್ನೆರಡು ಲೇಖನಗಳನ್ನು ಹೊಂದಿದೆ. ಎಲ್ಲಾ ಲೇಖನಗಳು ಯಕ್ಷಗಾನ ಕಲೆಯ ಉಳಿವಿಗೆ ಮತ್ತು ಬೆಳವಣಿಗೆಗೆ ಪೂರಕವಾದ ಚಿಂತನೆಯನ್ನು ಒದಗಿಸುತ್ತವೆ.

'ರಂಗಭಾಷೆ'ಯಲ್ಲಿನ ನ್ಯೂನತೆಗಳನ್ನು ಅರ್ಥವತ್ತಾಗಿ ವಿಶ್ಲೇಷಿಸುವ ಈ ಕೃತಿಯಲ್ಲಿ ಕೆಲವು ಯಕ್ಷಗಾನ ಪ್ರಸಂಗಗಳಲ್ಲಿನ ಪಾತ್ರಗಳ ಔಚಿತ್ಯವು ಪ್ರಸ್ತುತ ಸಂದರ್ಭಕ್ಕೆ ಅಗತ್ಯವೆಂಬಂತೆ ನಿರೂಪಿತವಾಗಿದೆ.

ಕರಾವಳಿಯಷ್ಟೇ ಅಲ್ಲ ಇಡೀ ಕನ್ನಡ ನಾಡಿನ ಮಣ್ಣಿನ ಕಲೆಯಾದ ಯಕ್ಷಗಾನ ೨೧ನೇ ಶತಮಾನದ ಈ ಹೊತ್ತಿನಲ್ಲಿ ಇತರ ರಂಗ ಪ್ರದರ್ಶನಗಳ ಒಟ್ಟೊಟ್ಟಿಗೆ

ಎದುರಿಸುವ ಸವಾಲುಗಳನ್ನು ಈ ಕೃತಿ ವಿಶದಪಡಿಸಿರುವುದನ್ನು ನಾವು ಕಾಣಬಹುದು. ಒಟ್ಟಿನಲ್ಲಿ ಈ ಕೃತಿ ಎಲ್ಲಾ ಲೇಖನಗಳು ರಂಗಕಲೆಯಾದ ಯಕ್ಷಗಾನವನ್ನು ಮತ್ತೆ ಕಟ್ಟಿ ಬೆಳೆಸುವಲ್ಲಿ ಸಹಕಾರಿಯಾಗಬಹುದೆಂಬುದು ವ್ಯಕ್ತವಾಗುತ್ತದೆ.

ಪರಿಗಣಿಸಬಹುದಾದ ಅಂಶಗಳು

ಡಾ. ಚಂದ್ರಶೇಖರ ದಾಮ್ಲೆಯವರು ಕೃತಿ ರಚನೆಯಲ್ಲಿ ತಾವೇ ಹೇಳಿಕೊಂಡಂತೆ 'ರಂಗಭಾಷೆ' ಹಾಗೂ ಇನ್ನಿತರ ಕೆಲವು ಲೇಖನಗಳು ಕರಾವಳಿಯ ಯಕ್ಷಗಾನ ಪರಂಪರೆಯಲ್ಲಿನ 'ತೆಂಕುತಿಟ್ಟ'ನ್ನು ಹೆಚ್ಚು ಆಧರಿಸಿದ್ದಾಗಿದೆ. ಬಡಗು ಹಾಗೂ ತೆಂಕು ಇವೆರಡೂ ತಿಟ್ಟುಗಳಲ್ಲಿ ಭಾಷೆ, ಅಭಿನಯ, ಹಿಮ್ಮೇಳ ಮತ್ತು ವೇಷಭೂಷಣಗಳಲ್ಲಿ ಸಾಕಷ್ಟು ಭಿನ್ನತೆ ಇರುವುದನ್ನು ನಾವು ಗಮನಿಸಬೇಕು. ಇತ್ತೀಚಿನ ದಿನಗಳಲ್ಲಿ ಇವೆರಡು ತಿಟ್ಟುಗಳು ಕೊಡು-ಕೊಳ್ಳುವಿಕೆಗೆ ಒಳಪಟ್ಟು ಅಸಹಜತೆಯನ್ನು ಮೂಡಿಸಿ ರಂಗಭಾಷೆಯನ್ನು ಗ್ರಹಿಸುವಲ್ಲಿ ಎಡವಿದ್ದನ್ನು ನಾವು ಮನಗಾಣಬಹುದು.

ದೀರ್ಘ ಪರಂಪರೆಯನ್ನು ಹೊಂದಿದ ಯಕ್ಷಗಾನ ರಂಗ ಪ್ರಕಾರವು ಆಧುನಿಕತೆಯ ಎದುರಿನಲ್ಲಿ ನಲುಗಿ ಹೋಗಿದೆ. ಅಂತೆಯೇ ಯಕ್ಷಗಾನವು ವ್ಯಾಪಾರೀಕರಣಕ್ಕೆ ಒಳಪಟ್ಟ ಮೇಲೆ ಶಾಸ್ತ್ರೀಯ ಮಟ್ಟಿಗೆ ಸಿಗಬೇಕಾದ ನ್ಯಾಯ ಸಿಗುತ್ತಿಲ್ಲ. ಯಕ್ಷಗಾನ ರಂಗಪ್ರದರ್ಶನದಲ್ಲಿ ಪ್ರಧಾನ ವೇಷಧಾರಿಗಳಿಗೂ- ಪೂರಕ ವೇಷಧಾರಿಗಳಿಗೂ ಹೊಂದಾಣಿಕೆ ಇಲ್ಲದಿರುವುದು, ಹಿಮ್ಮೇಳವು ಪ್ರಧಾನ ವೇಷಧಾರಿಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿ ಪೂರಕ ವೇಷಧಾರಿಗಳನ್ನು ಕಡೆಗಣಿಸುವುದು. ಇವೆಲ್ಲವನ್ನು ಯಕ್ಷಗಾನ ರಂಗಕಲೆ ಅಳಿವಿನಂಚಿಗೆ ತಲುಪುವ ಸಂದರ್ಭದಲ್ಲಿ ಚರ್ಚಿಸಬೇಕಾದ ವಿಷಯವಾಗಿದೆ.

ಯಕ್ಷಗಾನ ರಂಗಕಲೆಯನ್ನು ಮರುಕಟ್ಟುವಲ್ಲಿ ಲೇಖಕರ ಚಿಂತನಾಕ್ರಮ ಸ್ವೀಕಾರಾರ್ಹವೇ. ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಪದವಿ ಕಾಲೇಜು ಪಠ್ಯದಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದ ಪಠ್ಯವನ್ನಿಟ್ಟರೂ ಇಲ್ಲಿ ಆಸಕ್ತಿಯ ಕಲಿಕೆ ಎಷ್ಟು ಎಂಬುದನ್ನು ನಾವು ಅರಿಯಬೇಕಾಗಿದೆ. ಆಧುನಿಕ ಬದುಕಿಗೆ ಅಂಟಿದ ಪ್ರಧಾನ ಮಾಧ್ಯಮಗಳಾದ ಸಿನೆಮಾ, ಟಿ.ವಿ., ಮೊಬೈಲ್, ಕಂಪ್ಯೂಟರ್ ಇನ್ನಿತರ ಸಾಧನಗಳ ಮೂಲಕ ಅಂಗೈಯಲ್ಲೇ ಎಲ್ಲವನ್ನೂ ಕಾಣುವ ಮತ್ತು ಕಂಡು ಆನಂದಿಸುವ ಸಂದರ್ಭದಲ್ಲಿ ಇತಿಹಾಸದ ಹಿನ್ನೆಲೆಯಿರುವ ಯಕ್ಷಗಾನವು ಜನಸಮುದಾಯವನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ವಿಫಲವಾಗುತ್ತಿದೆ. ಜಾಗತೀಕರಣವು ಪರಂಪರೆಗೆ ಪ್ರತಿಸ್ಪರ್ಧಿಯಾಗಿ, ಬಲಿಷ್ಠವಾಗಿ ಬೆಳೆಯುತ್ತಿರುವಾಗ ಹೊಸತಿನ ಕಡೆಗೆ ಮುಖ ಮಾಡುವ ಸಮಾಜ ಸೃಷ್ಟಿಯಾಗುವುದು ಸಹಜವಷ್ಟೆ.

ಅದೇನೇ ಇದ್ದರೂ ಪ್ರಸ್ತುತ ಸಂದರ್ಭದಲ್ಲಿ ಡಾ. ಚಂದ್ರಶೇಖರ ದಾಮ್ಲೆಯವರ 'ಯಕ್ಷಗಾನ ರಂಗಭಾಷೆ' ಎನ್ನುವ ಕೃತಿಯು ಒಂದು ಉತ್ತಮ ಸಂಬೋಧನಾತ್ಮಕ ಕೃತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಆಯಾಯ ಕಾಲಕ್ಕೆ ಸಂಬಂಧಿಸಿದಂತೆ

ಸಂಸ್ಕೃತಿಯಲ್ಲಿ ಬದಲಾವಣೆ ಆಗುತ್ತಿದ್ದರೂ ಪರಂಪರೆಯನ್ನು ಮರೆಯಬಾರದೆನ್ನುವುದು ಸತ್ಯ. ನಮ್ಮ ಪರಂಪರೆಯಲ್ಲಿ ದೊರೆತ ಉತ್ತಮ ಮೌಲ್ಯಗಳನ್ನು ಜನಸಮುದಾಯಕ್ಕೆ ತಲುಪಿಸಿ ಎಚ್ಚರಿಸುವುದು ಆದ್ಯ ಕರ್ತವ್ಯವೂ ಹೌದು - ಅನಿವಾರ್ಯವೂ ಹೌದು.

ಡಾ. ಕೃಷ್ಣರಾಜ ಕರಬ

೫. ಹಾಲುಮತ : ಸಾಂಸ್ಕೃತಿಕ ಕಥನ

ಡಾ. ಚಂದ್ರಪ್ಪ ಸೊಬಟಿ
ಪುಟ ೧೨೪, ಬೆಲೆ ರೂ. ೬೦/-
ಮೊದಲ ಮುದ್ರಣ ೨೦೧೩
ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ
ಗದಗ - ೫೮೨ ೧೦೧

"ಹಾಲುಮತ: ಸಾಂಸ್ಕೃತಿಕ ಕಥನ" ಎಂಬ ಪುಸ್ತಕದಲ್ಲಿ ಏಳು ಲೇಖನಗಳಿವೆ. ಇವು ಹಾಲುಮತ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

ಇಲ್ಲಿರುವ ಲೇಖನಗಳು: ೧. ತಗರಜೋಗಿಗಳ ಸಾಂಸ್ಕೃತಿಕ ಅನನ್ಯತೆ, ೨. ಉಣ್ಣೆ ಕಂಕಣದ ಕುರುಬರು, ೩. ತೋಳದಕಲ್ಲುಗಳ ಆತ್ಮಕಥನ, ೪. ಮಾಳಿಂಗರಾಯ, ೫. ಡೊಳ್ಳಿನ ಮೇಳಗಳ ಹಾಡುಪಾಡು, ೬. ಕುರುಬ ಗುರುಒಡೆಯರ ಸ್ಥಿತಿಗತಿ, ೭. ತೋಪು ಜಾತ್ರೆ: ಕುಲ ಪ್ರತಿಷ್ಠಾಪನೆಯ ಆಚರಣೆ ಎಂಬ ಶೀರ್ಷಿಕೆಗಳ ಕೃತಿಯು ೧೨೪ ಪುಟಗಳ ವಿಸ್ತಾರವನ್ನು ಹೊಂದಿದೆ. ಇಲ್ಲಿ ಕೆಲವೊಂದು ವಿಷಯವನ್ನು ಭಾವಚಿತ್ರದೊಂದಿಗೆ ವಿವರಿಸಲಾಗಿದೆ.

ಅಮೋಘಸಿದ್ಧ, ರೇವಣಸಿದ್ಧ ಮತ್ತು ಶಾಂತಮುತ್ಯಾ ಗುರು ಸಂಪ್ರದಾಯಗಳು ಕುರುಬ ಸಮುದಾಯದ ಆಚರಣೆಯಲ್ಲಿರುವುದು ಒಂದು ವಿಶೇಷತೆ. 'ಗುರು' ಎಂಬುದು ಶೈವ ಆಚರಣೆಗಳ ತುತ್ತತುದಿಯಲ್ಲಿರುವ ಸಾಂಸ್ಕೃತಿಕ ನೆಲೆಯಾಗಿದೆ. ಲಿಂಗ, ವಿಭೂತಿ ಬಳಕೆ ಮಾಡುವುದು ರೇವಣಸಿದ್ಧ ಶಾಂತಮುತ್ಯಾರ ಗುರುವಿನ ಸಂಪ್ರದಾಯದಲ್ಲಿ; ಆದರೆ ಅಮೋಘಸಿದ್ಧನ ಆಚರಣೆಯಲ್ಲಿ ಭಂಡಾರ ಹೆಚ್ಚು ಬಳಕೆಯಲ್ಲಿ ಇದೆ. ಈ ಮೂರರಲ್ಲಿಯೂ ಪಲ್ಲಕ್ಕಿ ಉತ್ಸವ, ಮೂರ್ತಿಗಳ ಪೂಜೆ, ಹೇಳಿಕೆಗಳು(ಭವಿಷ್ಯವಾಣಿ) ಮತ್ತು ಕಂಬಳಿಗಳ ಬಳಕೆಯಿದೆ.

ತಗರಜೋಗಿಗಳಲ್ಲಿ ಕುರುಬ ಜೋಗಿಗಳು, ಹಳೆಮಕ್ಕಳು ಎಂಬ ಪದಗಳನ್ನು ಉಲ್ಲೇಖಿಸಿರುವುದು ವಿಶೇಷವಾಗಿದೆ. ಇವರ ಕುಲದೈವ ಭೈರವ. ಆದರೆ ಶಿವನ ರೂಪದಲ್ಲಿ ಅಮೋಘಸಿದ್ಧ ಇದ್ದಾನೆ ಎಂಬುದು ತಿಳಿಯುತ್ತದೆ. ಅದೇ ರೀತಿ ವೀರನಾದ

ಪದ್ಮಗೊಂಡ ಮತ್ತು ಮೈಲಾರಲಿಂಗ ಗುರುವಿನ ರೂಪದಲ್ಲಿ ಬೀರಪ್ಪ, ಶಾಂತಮುತ್ತಾ ಎಂಬ ಸಾಂಸ್ಕೃತಿಕ ನಾಯಕರನ್ನು ಆರಾಧಿಸುವ ಹಳೆಮಕ್ಕಳು ಮತ್ತು ತಗರ ಜೋಗಿಗಳ ಪ್ರಾಚೀನತೆಯನ್ನು ಈ ಕೃತಿಯಲ್ಲಿ ತೋರಿಸಿದ್ದಾರೆ. ಇದರಲ್ಲಿ 'ಜೋಗಿ' ಎಂಬ ಪದದ ಆಚರಣೆಯು ಮೈಲಾರಲಿಂಗನ ಪೂಜಾರಿಗಳಿಗೆ ಕರೆಯುವ ಅಂಶವನ್ನು ಕಲ್ಪಿಸಿಕೊಳ್ಳ ಬಹುದು. ಜೋಗಿ, ಜೋಗಯ್ಯ ಎಂಬ ಪ್ರಾಚೀನ ಪದಗಳು ಈಗಲೂ ಬಳಕೆಯಲ್ಲಿವೆ.

ಒಟ್ಟಿನಲ್ಲಿ ತಗರಜೋಗಿಗಳು, ಹಳೆಮಕ್ಕಳು ಕುರುಬ ಸಮುದಾಯದಲ್ಲಿರುವ ಈ ಪದಗಳು ಹಿಂದುಪುರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ, ಮೈಸೂರು, ಬೆಂಗಳೂರು ಮುಂತಾದ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿರುವುದನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಪ್ರದೇಶಗಳಲ್ಲಿ ತಗರಜೋಗಿ ಎಂಬ ಪದಗಳು ಇಂದಿಗೂ ಚಾಲ್ತಿಯಲ್ಲಿವೆ. ಈ ಸಾಂಸ್ಕೃತಿಕ ನೆಲೆ ಆಧುನಿಕತೆಯ ಸಂದರ್ಭದಲ್ಲಿ ರೂಪಾಂತರ ಗೊಂಡು ಲಿಂಗಾಯತ-ಕುರುಬರಾಗಿ, ಭೈರವ-ವೀರಭದ್ರರಾಗಿ ಕಂಡುಬರುತ್ತಾರೆ. ಇನ್ನು ಹಳೆಮಕ್ಕಳ ಕಥೆಯು ಇವರಂತೆ ಕಾಣುವುದು ವಿಶೇಷವಾಗಿದೆ. ಇವರು ಹೊಳೆನರಸೀಪುರ, ತಿಪಟೂರು, ಅರಸೀಕೆರೆ, ಹುಳಿಯಾರು, ಚೆನ್ನರಾಯಪಟ್ಟಣ, ಹೊಸದುರ್ಗ, ಚಿತ್ರದುರ್ಗ, ಚಳ್ಳಕೆರೆ, ಪಾವಗಡ, ಗೌರಿಬಿದನೂರು ಮುಂತಾದ ಭಾಗಗಳಲ್ಲಿರುವುದನ್ನು ಉಲ್ಲೇಖಿಸಿದ್ದಾರೆ. ಇಲ್ಲಿ ಕಥೆ ಹೇಳುವ ಮಕ್ಕಳೇ ಹಳೆಮಕ್ಕಳು. ಶಾಂತಮುತ್ತ್ಯಾನ ಮತ್ತು ತಗರ ಪವಾಡ ಪುರಾಣವನ್ನು, ಕಥೆಯನ್ನು ಕುರುಬ ಸಮುದಾಯದಲ್ಲಿ ಹೇಳುವ ವರ್ಗವೇ ಹಳೆಮಕ್ಕಳು. ಇತ್ತೀಚೆಗೆ ಹಳೆಮಕ್ಕಳು ಬದಲಾವಣೆಗೊಂಡು ಕುರುಬ ಸಮುದಾಯದಿಂದ ಹೊರಗೆ ಹೋಗುತ್ತಿರುವುದರ ಸಾಧಕಬಾಧಕಗಳನ್ನು ಡಾ. ಸೊಬಟಿಯವರು ಸಂಕ್ಷಿಪ್ತವಾಗಿ ಸೂಚಿಸಿದ್ದಾರೆ.

ಹಾಲುಮತ ಸಮುದಾಯದ ಸಾಂಸ್ಕೃತಿಕ ಪಂಗಡಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಾಡುಕುರುಬ, ಜೇನುಕುರುಬ, ಹಂಡೆಕುರುಬ, ಕುರುಬರ ಒಡೆಯರು, ಗೊಂಡ, ರಾಜುಗೊಂಡ ಮುಂತಾದ ಹೆಸರುಗಳ ಹಿನ್ನೆಲೆ ತಿಳಿಯುತ್ತದೆ. ಇವು ಕುರುಬ ಸಮುದಾಯ ಅಥವಾ ಹಾಲುಮತ(ಕ್ಷೀರಕುಲ)ಕ್ಕಿರುವ ಸಮಾನಾಂತರ ಹೆಸರುಗಳಾಗಿವೆ. ಕುರುಬ ಸಮುದಾಯದಲ್ಲಿ ಕಂಕಣ ಎಂಬ ಪದವು ಸಾಂಸ್ಕೃತಿಕವಾಗಿ ಬಳಕೆಯಲ್ಲಿದೆ. ಈ ಸಾಂಕೇತಿಕ ಹೆಸರುಗಳು ಎರಡು ರೀತಿಯಲ್ಲಿ ಹೋಳಾಗಿ ಹತ್ತಿಕಂಕಣ, ಉಣ್ಣೆಕಂಕಣವಾಗಿ ಬೆಳೆದದ್ದು ಪುರಾಣದಲ್ಲಿದೆ ಎಂಬುದನ್ನು ಗುರುತಿಸಿದ್ದಾರೆ.

ಈ ಎರಡು ಕಂಕಣಗಳು ತಾತ್ವಿಕ ಮತ್ತು ಸಾಂಸ್ಕೃತಿಕ ಪದಗಳಾಗಿ ಹೊರಹೊಮ್ಮಿ ಉಣ್ಣೆ ಕಂಕಣದವರು ತಮ್ಮ ತಮ್ಮ ಕಾಯಕವನ್ನು ಮಾಡುತ್ತ ಅಡವಿಗಳಲ್ಲಿ ತಿರುಗಾಡಿ ಬದುಕನ್ನು ಕಟ್ಟಿಕೊಂಡವರು. ಅದೇ ರೀತಿ ಹತ್ತಿಕಂಕಣದವರು ಒಂದೇ ಕಡೆ ನೆಲೆಯೂರಿ ಕುರಿ ಮತ್ತು ಕೃಷಿ ಕಾಯಕವನ್ನು ಮಾಡಿಕೊಂಡು ಜೀವನವನ್ನು ಸಾಗಿಸಿದವರು. ಈ ವಂಶಗಳು ಬೆಳೆಯುತ್ತ ಹತ್ತಿಕಂಕಣ, ಉಣ್ಣೆಕಂಕಣ ಎಂಬ ಎರಡು ಸಾಂಸ್ಕೃತಿಕ ನೆಲೆಗಳಾಗಿ ರೂಪಾಂತರಗೊಂಡಿವೆ. ಇವರಲ್ಲಿ ಆಹಾರ ಪದ್ಧತಿ, ಸಾಂಸ್ಕೃತಿಕ ರೂಢಿ

ಸಂಪ್ರದಾಯಗಳು ಮತ್ತು ಸಾಮಾಜಿಕ ಆಚರಣೆಗಳು ಅದರಲ್ಲಿಯೂ ವಿಶೇಷವಾಗಿ ಮದುವೆಯ ಆಚರಣೆಗಳು ಭಿನ್ನ ನೆಲೆಗಳಲ್ಲಿ ಕಂಡುಬರುತ್ತವೆ. ಇವರಲ್ಲಿ ಸಸ್ಯಹಾರವನ್ನೇ ಸ್ವೀಕರಿಸುವ ಪದ್ಧತಿ ಇದೆ. ಇವರು ಪಶುಪಾಲಕ ವೃತ್ತಿಯನ್ನು ಮಾಡಿಕೊಂಡು ಮತ್ತು ಪಶುಪಾಲನೆಯೊಂದಿಗೆ ಕೃಷಿ ಎರಡನ್ನೂ ಬೆಳೆಸಿಕೊಂಡು ಬಂದಿದ್ದಾರೆ. ಇವರು ಮೂರು ತೆರನಾದ ಪಶುಪಾಲನೆಯನ್ನು ಮಾಡಿದ್ದಾರೆ. ಅವುಗಳಲ್ಲಿ ಎಮ್ಮೆ ಮತ್ತು ಕೋಣ, ಆಕಳು ಮತ್ತು ಹೋರಿ(ಎತ್ತು) ಮತ್ತು ಕುರಿ, ಟಗರು, ಹೋತ ಹೀಗೆ ಈ ಪ್ರಕಾರದ ಪಶುಪಾಲನೆಯಿಂದ ಹೈನುಗಾರಿಕೆಯನ್ನು ಮಾಡುತ್ತಾ ಬಂದಿದ್ದಾರೆ. ಕುರಿ ಕಾಯುವವರನ್ನು 'ಕುರಿಗಾರ'ರು ಎಂಬ ಹೆಸರಿನಿಂದ ಕರೆಯಲಾಗಿದೆ. ಮಧ್ಯ ಕರ್ನಾಟಕದಲ್ಲಿ ಈ ಬಗೆಯಲ್ಲಿ ಕರೆಯುವ ಅನೇಕ ಅಡ್ಡಹೆಸರುಗಳಿವೆ. ಉಣ್ಣೆ ಕಂಕಣದವರು ಬೆಟ್ಟ, ಅಡವಿ, ಬಯಲು ಪ್ರದೇಶಗಳಲ್ಲಿ ಕುರಿಗಳನ್ನು ಕಾಯುವ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಆದರೆ ಹತ್ತಿಕಂಕಣದವರು ಒಕ್ಕಲುತನ ಹಾಗೂ ಕುರಿ ಕಾಯುವ ವೃತ್ತಿಯನ್ನು ಮಾಡಿಕೊಂಡು ಬಂದಿದ್ದಾರೆ. ಈ ಎರಡು ಪಂಗಡಗಳಲ್ಲಿ ಹೋಲಿಕೆಯಾಗುವ ಅನೇಕ ಸಾಮ್ಯತೆಗಳನ್ನು ಈ ಕೃತಿಯಲ್ಲಿ ನಿರೂಪಿಸ ಲಾಗಿದೆ. ಇವರ ವೈವಾಹಿಕ ಜೀವನ, ಕಂಕಣಗಳ ಸಂಬಂಧ ಮತ್ತು ಹಾಲುಮತಕ್ಕಿರುವ ಇನ್ನಿತರ ಶಬ್ದಗಳಾದ ಕಾಡುಕುರುಬ, ಜೇನುಕುರುಬ, ಗೊಂಡ, ರಾಜಗೊಂಡ ಇತ್ಯಾದಿ ಪದಗಳ ವಿಶ್ಲೇಷಣೆಯನ್ನು ಈ ಕೃತಿಯ ಅಂತರಂಗದಲ್ಲಿದೆ.

ತೋಳದ ಕಲ್ಲು ಆತ್ಮಕಥನ ಲೇಖನದಲ್ಲಿ ಮುಂಬೈ-ಕರ್ನಾಟಕದಲ್ಲಿ ಆಚರಣೆ ಯಲ್ಲಿರುವ ಹಾಲುಮತ ಸಮುದಾಯದ ಧಾರ್ಮಿಕ ಪುರುಷರು, ಇವರ ಸಾಂಸ್ಕೃತಿಕ ನಾಯಕರಾದ ಬೀರಪ್ಪ, ಕರಿಸಿದ್ಧ, ಮಾಯವ್ವ, ಸಣ್ಣದೇವರ ಭಿನ್ನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಲಾಗಿದೆ. ಪ್ರಮುಖವಾಗಿ ಕುರಿಕಾಯುವ ಕಾಯಕವನ್ನು ಮಾಡಿಕೊಂಡು ಬೆಟ್ಟ ಅಡವಿಗಳಲ್ಲಿ ಅಲೆಯುತ್ತ ಹೋಗುವುದು. ಇಂತಹ ಸಂದರ್ಭಗಳಲ್ಲಿ ಮೃಗಗಳಿಂದ ಕುರಿಗಳನ್ನು ರಕ್ಷಣೆ ಮಾಡುವ ವಿಧಾನವು ಸಾಹಸದ ಪ್ರತೀಕವಾಗಿದೆ. ಮೃಗಗಳಲ್ಲಿ ಅತಿಹೆಚ್ಚು ಕುರಿಯನ್ನು ಬೇಟೆಯಾಡುವ ಪ್ರಾಣಿಯೆಂದರೆ ತೋಳ. ಈ ತೋಳಗಳಿಂದ ಕುರಿಗಳನ್ನು ರಕ್ಷಿಸುವ ಅನಿವಾರ್ಯತೆ ಇದೆ. ಕುರಿಗಳನ್ನು ರಕ್ಷಿಸುವ ಪ್ರಾಣಿಯೇ 'ನಾಯಿ', ಅಂತೆಯೇ ಮೈಲಾರನ ಅನುಯಾಯಿಯಾಗಿ ನಾಯಿಯನ್ನು ಮಲ್ಲಯ್ಯ ಎಂಬ ಇನ್ನೊಂದು ಹೆಸರಿನಿಂದ ಕರೆಯುವುದುಂಟು. ಅಂತೆಯೇ ಪುರಾಣ ದಲ್ಲಿ ಪದುಮಗೊಂಡನು ಕುರಿ ಕಾಯುತ್ತ ಹೋಗುವ ಸಂದರ್ಭದಲ್ಲಿ, ಹೋಗುವ ದಾರಿಯಲ್ಲಿ ಹಾಲು ಕಾಯಿಸಿ ಕುಡಿಯಬೇಕೆಂಬ ಆಸೆಯಿಂದ ಬೆಂಕಿಗಾಗಿ ಹುಡುಕಾಟ ಮಾಡುತ್ತಾನೆ. ಈ ಪ್ರಸಂಗದ ವಿವರಣೆಯೂ ಈ ಕೃತಿಯಲ್ಲಿದೆ.

ತೋಳಗಳಿಂದ ಕುರಿಗಳನ್ನು ರಕ್ಷಿಸುವ ಕೆಲಸ ತೋಳದ ಕಲ್ಲಿನ ಆತ್ಮಕಥನವಾಗಿ ರೂಪಾಂತರಗೊಂಡಿದೆ. ತೋಳ, ತೋಪ, ಗೊರವರು, ಈರಗಾರರು, ದಳವಾಯಿಗಳು ಇವೆಲ್ಲ ಪದಗಳಲ್ಲಿ ಇವರನ್ನು ಹೇಳುವುದುಂಟು. ಇವರೆಲ್ಲರೂ ಮೈಲಾರಲಿಂಗನ,

ಬೀರಪ್ಪನ ಅನುಯಾಯಿಗಳಾಗಿದ್ದಾರೆ. ತಮ್ಮ ಬದುಕಿಗಾಗಿ ಹಾಗೂ ಕುರಿಗಳ ರಕ್ಷಣೆಗಾಗಿ ಸಂದರ್ಭಾನುಸಾರವಾಗಿ ಸಾಹಸಮಯವಾದ ಕೆಲಸಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಉಣ್ಣೆ ಹಾಗೂ ಹತ್ತಿಕಂಕಣಗಳೆಂಬ ಕುಲ, ಬೆಡಗುಗಳ ಸಂರಚನೆಯಾದ ಸಂದರ್ಭವಿರಬಹುದು ಎಂಬುದನ್ನು ಸರಿಯಾಗಿ ಗುರುತಿಸಲಾಗಿದೆ.

ಕರ್ನಾಟಕ ಪ್ರದೇಶದಲ್ಲಿ ಕುರುಬ ಸಮುದಾಯದ ಅನೇಕ ಸಾಂಸ್ಕೃತಿಕ ಧಾರ್ಮಿಕ ವರ್ಗದ ನಾಯಕರಿದ್ದಾರೆ. ಅವರಲ್ಲಿ ಮಾಳಿಂಗರಾಯನು ಒಬ್ಬನು. ಈ ನಾಯಕ ಶರಣ, ಸಂತ ಹಾಗೂ ಸಾಹಸಿಗನಾಗಿ ಪುರಾಣ ಮತ್ತು ಐತಿಹ್ಯದಲ್ಲಿ ಕಾಣಿಸಿಕೊಳ್ಳುತ್ತಾನೆ. ಈತನ ಆಚರಣೆಗಳು, ವ್ಯಾಪ್ತಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಗಡಿಭಾಗಗಳಲ್ಲಿವೆ. ಮತ್ತೊಂದು ವಿಶೇಷತೆ ಎಂದರೆ ಈತ ಕುರುಬ ಸಮುದಾಯದ ಆರಾಧ್ಯದೈವ ಹಾಗೆಯೇ ಸಾಂಸ್ಕೃತಿಕ ನಾಯಕನಾದ ಬೀರಪ್ಪನ ಶಿಷ್ಯ.

ಮಾಳಿಂಗರಾಯನ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಡೊಳ್ಳಿನ ಹಾಡಿನಲ್ಲಿ ಹೇಳಲಾಗಿದೆ.

"ಹಾಲಕರಾಯ ಪಾಲಕರಾಯ ಅವರು ಜೋಡಿಬ್ಬರು ಅಣ್ಣತಮ್ಮದೇರಾ
ಪಾಲಕರಾಯನ ಹೊಟ್ಟಿಲೆಪ್ಪ ಜೋಡಿಬ್ಬರು ಗಂಡಸಮಕ್ಕಳ
ಸೋರಿಕರಾಯನಲ್ಲಪ್ಪ ಭೀಮರಾಯನಿದ್ದಾರೆ.
ಇವರ ಒಬ್ಬರ ಹೊಟ್ಟಿಲೆಪ್ಪ ಅಲ್ಲಿ ಇಬ್ಬರು ಮಕ್ಕಳಾದರೆ
ಜೋತಿಕರಾಯ ದೀಪಕರಾಯ ಜೋಡಿಬ್ಬರ ಮಕ್ಕಳ
ಇವರ ಹೊಟ್ಟಿಲಿ ಅಲ್ಲೇನಪ್ಪ ಕರಿಯಗೌಡನಿದ್ದಾನೆ
ಕರಿಯಗೌಡ ಕೆಂಪಗೌಡ ಜೋಡಿಬ್ಬರು ಮಕ್ಕಳು ಆದಾರೆ.
ಕೆಂಪೆಗೌಡನ ಹೊಟ್ಟೇಲಿ ಸ್ವಾಮಿರಾಯ ಹುಟ್ಯಾನೆ.
ಸ್ವಾಮಿರಾಯ ತುಕ್ಕಪ್ಪರಾಯ ಜೋಡಿಬ್ಬರು ಅಣ್ಣ ತಮ್ಮದೇರಾ"

ಈ ಹಾಡಿನಲ್ಲಿ ಮಾಳಿಂಗರಾಯನ ತಂದೆ, ತಾಯಿ, ಸಹೋದರ, ಚಿಕ್ಕಪ್ಪ, ಮಕ್ಕಳು ಹೀಗೆ ಅವರ ವಂಶದ ಬಗ್ಗೆ ವಿವರಣೆಯನ್ನು ಕೊಡಲಾಗಿದೆ. ಇವನ ಇಡೀ ಬದುಕೇ ಹೋರಾಟದ ಹಾದಿಯಲ್ಲಿದೆ. ಕುರಿ ಕಾಯುವ ಕಾಯಕವನ್ನು ಮಾಡಿಕೊಂಡು ಜೀವನವನ್ನು ಸಾಗಿಸುವುದು, ಜೊತೆಗೆ ಕೃಷಿಯನ್ನು ಮಾಡುವುದು, ಹುಲಿಗಿಣ್ಣ ತರುವುದು, ಹುಲಿಮರಿಯೊಂದಿಗೆ ಆಟವಾಡುವುದು ಹಾಗೂ ಹುಲಿಗೆ ನೀತಿಯನ್ನು ಕಲಿಸುವುದು. ಕುರಿಕಾಯುವ ಸಂಸ್ಕೃತಿಯು (ಕಾಯಕ) ಅದು ಬೆಟ್ಟಗಳಲ್ಲಿ, ಅಡವಿಗಳಲ್ಲಿ, ಹುಲ್ಲುಗಾವಲಿ ನಲ್ಲಿ ತಿರುಗಾಡಿ ಕುರಿಗಳ ಜೀವನಕ್ಕೆ ಕುರುಬರ ಜೀವನಕ್ಕೆ ಅಗತ್ಯವಾಗಿ ಬೇಕಾಗಿರುವ ಪ್ರಮುಖವಾದ ಆಧಾರವಾಗಿದೆ. ಇದರಿಂದ ಬದುಕು ಸಾಗಿಸುವುದು ಇವರಿಗೆ ಅನಿವಾರ್ಯ. ಇಂತಹ ಸಂದರ್ಭಗಳಲ್ಲಿ ಹುಲಿ ಎಂದು ಡೊಳ್ಳಿನ ಹಾಡಿನಲ್ಲಿ ಕರೆದಿರಬಹುದಾಗಿದೆ.

ಒಟ್ಟಿನಲ್ಲಿ ಮಾಳಿಂಗರಾಯನು ಬದುಕನ್ನು ಕಟ್ಟಿಕೊಳ್ಳುವ ವಿಧಾನ, ಅವನು ಸಾಂಸ್ಕೃತಿಕವಾಗಿ ಬೆಳೆಯುವ ಮೈಲುಗಲ್ಲುಗಳು, ಆತನ ಜೀವನ ವೃತ್ತಾಂತ ಹೀಗೆ ಅನೇಕ ಅಂಶಗಳ ಬಗ್ಗೆ ವಿವರವಾದ ಚಿತ್ರಣ ಇಲ್ಲಿದೆ. ಈ ವಿಷಯದಲ್ಲಿ ಹುಲಿ ಎಂಬ ಪದವನ್ನು ಮನುಷ್ಯನಲ್ಲಿರುವ ಕ್ರೂರ ವ್ಯಕ್ತಿತ್ವದ ಗುಣಗಳಿಗೆ ಸಾಂಕೇತಿಕವಾಗಿ ಬಳಸಲಾಗಿದೆ. ಅದನ್ನು ಹೆಕ್ಕಿ ತೆಗೆಯುವ ಸೂಕ್ಷ್ಮ ಭಾವನೆಗಳನ್ನು ಅನುಸರಿಸುವ ಕಲೆ ಮಾಳಿಂಗರಾಯನ ವ್ಯಕ್ತಿತ್ವದ ವಿಶೇಷತೆಯಾಗಿದೆ. ಅದರಲ್ಲಿಯೂ ಅವನು ಹೆಮ್ಮರದಂತೆ ಬೆಳೆದು ನಿಂತು ಸಾಂಸ್ಕೃತಿಕ ಮತ್ತು ಧಾರ್ಮಿಕ ರಂಗಗಳಲ್ಲಿ ನಾಯಕನಾಗಿ ರೂಪಾಂತರ ಗೊಂಡಿದ್ದಾನೆ.

ಜನಪದ ಸಾಹಿತ್ಯದಲ್ಲಿ ಡೊಳ್ಳಿನ ಹಾಡಿಗೆ ಪ್ರಮುಖ ಸ್ಥಾನವಿದೆ. ಆದರೆ ಇಲ್ಲಿ ಡೊಳ್ಳಿನ ಕಾರ್ಯ ನಿರ್ವಹಣೆ ಮಾಡುವುದಕ್ಕೆ ಗೀತಮೇಳದ ಪಾತ್ರವೇನು? ಈ ಮೇಳವು ತಾನು ಹುಟ್ಟಿದಾಗಿನಿಂದ ಎದುರಿಸಿದ ಸಮಸ್ಯೆಯೇನು? ಸಮಸ್ಯೆಗೆ ಪ್ರತಿಯಾಗಿ ರೂಪಿಸಿಕೊಂಡ ಬದಲಾವಣೆಗಳೇನು? ಡೊಳ್ಳಿನ ಹಾಡುಗಳ ಮೂಲ, ಸ್ವರೂಪ, ಲಕ್ಷಣ, ಉದ್ದೇಶ ವ್ಯಾಪ್ತಿಗಳಲ್ಲಿ ಆದಂತಹ ಬದಲಾವಣೆಗಳು ಮತ್ತು ಪ್ರೇಕ್ಷಕ ಸಮುದಾಯವು ಒಪ್ಪಿಕೊಂಡ ವಿಧಾನಗಳಾವುವು! ಹೀಗೆ ಇವೆಲ್ಲ ಪ್ರಶ್ನೆಗಳ ಜೊತೆಗೆ ಜಾಗತೀಕರಣ, ಆಧುನೀಕರಣ, ಖಾಸಗೀಕರಣ, ಉದಾರೀಕರಣ ಹಾಗೂ ಸಮೂಹ ಮಾಧ್ಯಮಗಳು ತಮ್ಮದೇ ಪರಿಧಿಯಲ್ಲಿ ಡೊಳ್ಳಿನ ಮೇಳಗಳಿಗೆ ಅವಕಾಶ ಸೃಷ್ಟಿಸಿ ಡೊಳ್ಳಿನ ಹಾಡುಗಳನ್ನು ಮಟ್ಟಹಾಕಲು ಪ್ರಯತ್ನಪಟ್ಟರೂ ಈ ಹಾಡುಗಳು ತನ್ನಷ್ಟಕ್ಕೇ ತಾನೇ ಸೂಕ್ಷ್ಮವಾಗಿ ಬಲಿಯಾಗುತ್ತ ಬಂದ ವಿವರವೂ ಇಲ್ಲಿದೆ.

ಹಾಲುಮತ ಸಮುದಾಯದ(ಕುರುಬರ) ಗುರುಗಳಾದ ಒಡೆಯರರ ಇಂದಿನ ಬದುಕಿನ ಸ್ಥಿತಿಗತಿ ಅವರ ಭವಿಷ್ಯ ಕುರಿತು ತೌಲನಿಕ ವಿಶ್ಲೇಷಣೆಯನ್ನೂ ಇಲ್ಲಿ ಮಾಡಲಾಗಿದೆ. ಇವರು, ಕುರುಬರ ಕುಲಕ್ಕೆ ಗುರುಗಳಾಗಿ, ಮಾರ್ಗದರ್ಶಕರಾಗಿ, ಒಡೆಯರಾಗಿ ಅಪಾರ ಪ್ರಮಾಣದ ಸೇವೆಯನ್ನು ಮಾಡಿಕೊಂಡು ಸಮಾಜವನ್ನು ಮುನ್ನಡೆಸಿಕೊಂಡು ಬಂದವರು. ಶೈವ ಸಂಸ್ಕೃತಿಯನ್ನು ಅದರಲ್ಲಿ ರೇವಣಸಿದ್ಧ, ಸಿದ್ಧರಾಮರ ಆಚರಣೆಗಳನ್ನು ಮುನ್ನಡೆಸಿಕೊಂಡು ಬಂದವರು. ಅದೇ ರೀತಿಯಾಗಿ ಅಮೋಘಸಿದ್ಧ, ಮೈಲಾರಲಿಂಗರ ಆಚರಣೆಗಳನ್ನು ರೂಢಿ ಸಂಪ್ರದಾಯಗಳನ್ನು ಮುನ್ನಡೆಸಿಕೊಂಡು ಬಂದಿರುವ ಕುರುಬರನ್ನು ಒಗ್ಗೆಯರು ಎನ್ನುತ್ತಾರೆ.

ಬೀರಪ್ಪನಿಗೆ ಸಂಬಂಧಿಸಿದ ಆಚರಣೆಗಳಲ್ಲಿ ತೋಪು ಜಾತ್ರೆಯು ಪ್ರಮುಖವಾಗಿದೆ. ಬೀರಪ್ಪನ ಜಾತ್ರೆಗಳಲ್ಲಿ ಗಂಗೆ ಪೂಜೆ, ನವಗ್ರಹ ಪೂಜೆ, ಗುರುಕಾಣಿಕೆ ಒಪ್ಪಿಸುವ ಆಚರಣೆ ಇದಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹಿರೇನಲ್ಲೂರು ಗ್ರಾಮದ ಶ್ರೀಯರೆಬೀರಲಿಂಗೇಶ್ವರನ ಜಾತ್ರೆಯ ವಿಶೇಷತೆಯನ್ನು ಹಿಡಿದಿಡುವ ಪ್ರಯತ್ನವು ಈ ಲೇಖನದಲ್ಲಿದೆ. ಈ ಭಾಗದಲ್ಲಿಯೇ 'ದಳವಾಯಿ' ಎಂಬ ಪದ ಚಾಲ್ತಿಯಲ್ಲಿದೆ. ಈ ಗ್ರಾಮದಲ್ಲಿ ಒಂಬತ್ತು ಅಮವಾಸೆ ಮನೆ ಎಂಬ ಹೆಸರಿನ ಮನೆಗಳಿವೆ. ಅವುಗಳಲ್ಲಿ ಮುಖ್ಯವಾಗಿ ಗೌಡಗುಲ, ತೋವುಗುಲ, ಅರಸುಗುಲ, ಮನ್ನೆಗುಲ, ಎಮ್ಮೆಗುಲ,

ಬೀರಗುಲ, ಅರೆಗುಲ, ಗುವಯ್ಯನಗುಲ ಕೊನೆಯದಾಗಿ ಸಾವಂತಗುಲ ಇತ್ಯಾದಿಯಾಗಿ ಕಂಡುಬರುತ್ತವೆ ಎಂಬುದ್ದನ್ನು ಲೇಖಕರು ಸವಿವರವಾಗಿ ಇಲ್ಲಿ ದಾಖಲಿಸಿದ್ದಾರೆ.

ಬೀರಲಿಂಗ ಎಂಬ ಹೆಸರಿನ ದೇವಾಲಯಗಳು ಬೆಟ್ಟ, ಗುಡ್ಡಗಳಲ್ಲಿ ಇರುವುದು ಸಹಜ. ಆದರೆ, 'ಯರೆ' ಎಂಬ ಹೆಸರಿನಿಂದ ಕರೆಸಿಕೊಳ್ಳುವ ಬೀರಲಿಂಗ ಬಹುಶಃ ಬಯಲು ಪ್ರದೇಶದಲ್ಲಿ ಸಮತಟ್ಟಾದ ಪ್ರದೇಶ ಭಾಗದಲ್ಲಿ ಅನಾವರಣಗೊಂಡ ಬೀರಲಿಂಗನೇ 'ಯರೆಬೀರಲಿಂಗ' ಎಂದು ಕರೆಸಿಕೊಂಡಿರಬಹುದು. ಇಲ್ಲಿ ನಡೆಯುವ ಜಾತ್ರೆ, ಹೊಳೆಪೂಜೆ ಉತ್ಸವ, ರೇವಣಸಿದ್ಧ-ಬೀರಲಿಂಗರ ಪಲ್ಲಕ್ಕಿ ಉತ್ಸವ, ಗುರುಶಿಷ್ಯರು ಎದುರುಗೊಳ್ಳುವ ಜಾತ್ರೆಯು, ಮೀಸಲು ಒಪ್ಪಿಸುವ ಜಾತ್ರೆ, ಗುಡೆ ಅರ್ಪಿಸುವುದು ಮುಂತಾದ ಆಚರಣೆಗಳು ಆಯಾ ಪ್ರದೇಶಕ್ಕೆ ತಕ್ಕಂತೆ ಮೂಡಿಬಂದಿರುವುದನ್ನು ಇಲ್ಲಿ ಸೋದಾಹರಣವಾಗಿ ವಿಶ್ಲೇಷಿಸಲಾಗಿದೆ.

ಇಡೀ ಹಾಲುಮತ ಸಮುದಾಯದವರು ಪ್ರಸ್ತುತ ಸಂದರ್ಭದಲ್ಲಿ ಹೊಸ ರೂಪವನ್ನು ಪಡೆದು ಸಾಂಸ್ಕೃತಿಕ ಸ್ಥಿತ್ಯಂತರದಲ್ಲಿ ಜೀವನವನ್ನು ಸಾಗಿಸುತ್ತಿದ್ದಾರೆ. ಇಂದಿನ ಆಧುನಿಕ ಸಂದರ್ಭದಲ್ಲಿ ಇವರು ಸಾಮಾಜಿಕವಾಗಿ ಹೊಸತನವನ್ನು ಪಡೆಯುವ ಸಂದರ್ಭದಲ್ಲಿ ಸ್ಥಾನಪಲ್ಲಟಗೊಳ್ಳುತ್ತಿರುವುದು ನೈಸರ್ಗಿಕ ವಿಧಾನವಾಗಿದೆ. ಈ ಸಮುದಾಯವು ಆಧುನಿಕ ಸಂದರ್ಭದಲ್ಲಿ ತನ್ನ ಮೂಲತನವನ್ನು ಬಿಟ್ಟು ಸಾಂಸ್ಕೃತಿಕವಾಗಿ ಬಡವಾಗುತ್ತಿದೆ ಎಂಬ ಕೊರಗು ಈ ಕೃತಿಯುದ್ದಕ್ಕೂ ಕಂಡುಬರುತ್ತದೆ. ಜೊತೆಗೆ ಪ್ರಸ್ತುತ ಸಂದರ್ಭದಲ್ಲಿ ಇವರ ಪ್ರಗತಿಪರ ವಿಚಾರಗಳನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆಯೂ ಇದೆ ಎಂಬುದನ್ನು ಸಹ ಕೃತಿಯು ಮನದಟ್ಟು ಮಾಡಿಕೊಡುತ್ತದೆ. ಇದುವೇ ಈ ಕೃತಿಯ ಹಿರಿಮೆಯಾಗಿದೆ. ಇಂತಹ ಅಪರೂಪದ ದಾಖಲಾರ್ಹ ಸಾಂಸ್ಕೃತಿಕ ಸ್ಥಿತ್ಯಂತರದ ಮಾಹಿತಿಯನ್ನು ಒದಗಿಸಿದ ಡಾ. ಚಂದ್ರಪ್ಪ ಸೊಬಟಿಯವರು ಅಭಿನಂದನಾರ್ಹರು.

ಮಹಾದೇವಪ್ಪ ಎಸ್. ಪೂಜಾರಿ

೬. ತೀಡಿದಷ್ಟು ಗಂಧ

ಡಾ. ಪೂವಪ್ಪ ಕಣಿಯೂರು
ಪುಟ ೧೪೦, ಬೆಲೆ ರೂ. ೧೧೦/-
ಮೊದಲ ಮುದ್ರಣ ೨೦೧೩
ತರಂಗಿಣಿ ಪ್ರಕಾಶನ
ಸುಳ್ಯ - ೫೭೪ ೨೩೯, ದಕ್ಷಿಣ ಕನ್ನಡ ಜಿಲ್ಲೆ

ಡಾ. ಪೂವಪ್ಪ ಕಣಿಯೂರು ಅವರ 'ತೀಡಿದಷ್ಟು ಗಂಧ' ಕೃತಿಯು ವಿಮರ್ಶಾ ಸಂಕಲನವಾಗಿದೆ. ಇದರಲ್ಲಿರುವ ಮೂರು ಲೇಖನಗಳು ಜಾನಪದೀಯ ನೆಲೆಯಲ್ಲಿವೆ.

ಕಳೆದೆರಡು ದಶಕಗಳ ಜಾನಪದೀಯ ಅಧ್ಯಯನ 'ತೀಡಿದಷ್ಟು ಗಂಧ' ಎಂಬ ಲೇಖನದಲ್ಲಿ ಜನಪದ ಸಂಸ್ಕೃತಿಯ ಅಧ್ಯಯನ ಕರ್ನಾಟಕದಲ್ಲಿ ಆರಂಭಗೊಂಡು ಶತಮಾನವೇ ಸರಿದಿದೆ. ಹೀಗೆ ಸುದೀರ್ಘವಾಗಿ ಸಾಗಿ ಬಂದ ಜಾನಪದ ಅಧ್ಯಯನದ ವಿಭಿನ್ನ ಆಯಾಮಗಳನ್ನು ಪರಿಚಯಿಸಲಾಗಿದೆ. ೧೯೩೧ರಲ್ಲಿ ದೇಸಿ ಮೂಲವಾಗಿ ಹಲಸಂಗಿ ಗೆಳೆಯರಿಂದ ಪ್ರಕಟಗೊಂಡ ಮೊದಲ 'ಗರತಿಯ ಹಾಡು' ಕೃತಿಯಿಂದ ಇಲ್ಲಿಯವರೆಗೆ ಜಾನಪದ ಭಂಡಾರ ಅಪಾರವಾಗಿ ಬೆಳೆದು ಬಂದಿದೆ. ಜಾನಪದ ಅಧ್ಯಯನ ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ದೇಸಿ ಚಿಂತನಾ ಪರಿಧಿಯನ್ನು ವಿಸ್ತರಿಸಿಕೊಂಡಿದೆ. ಆದರೆ ಇದೊಂದು ಬೌದ್ಧಿಕ ಶಿಸ್ತಾಗಿದೆಯೇ ಹೊರತು, ಸಮುದಾಯದ ಜೀವನಮುಖಿಯಾಗಿ, ಆರ್ಥಿಕ ರಚನಾ ಮೂಲವಾಗಿ ರೂಪಾಂತರ ವಾಗಿಲ್ಲ. ಜಾಗತೀಕರಣವು ಒಡ್ಡುವ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಲು ಮತ್ತಷ್ಟು ಗಟ್ಟಿಗೊಳ್ಳಬೇಕೆಂಬ ಕಳಕಳಿ ಕೃತಿಕಾರರದ್ದಾಗಿದೆ.

ಕರ್ನಾಟಕದಲ್ಲಿನ ಜಾನಪದ ಅಧ್ಯಯನ ಕ್ಷೇತ್ರವನ್ನು ಮೂರು ತಲೆಮಾರುಗಳಾಗಿ ಗುರುತಿಸಲಾಗಿದೆ. ಇಂಗ್ಲಿಷ್ ಪ್ರಭುತ್ವದಲ್ಲಿ ಅಧಿಕಾರಿಗಳು ಮತ್ತು ಮಿಶನರಿಗಳಾಗಿದ್ದ ವಿದೇಶಿಯರೊಂದಿಗೆ ದೇಶಿಯರು ಸೇರಿ ಸಂಗ್ರಹಿಸಿದ ಜಾನಪದ ಮೊದಲ ತಲೆಮಾರಿನದು, ೧೯೬೬ರಿಂದ ಮೈಸೂರು ವಿಶ್ವವಿದ್ಯಾನಿಲಯ ಮೂಲಕ ವಸ್ತುನಿಷ್ಠ ಮತ್ತು ವೈಜ್ಞಾನಿಕ ನೆಲೆಯಲ್ಲಿ ಆರಂಭಗೊಂಡ ಅಧ್ಯಯನ ಎರಡನೇ ತಲೆಮಾರಿನದು. ೧೯೮೦ರ ಬಳಿಕ ಆಧುನಿಕ ಸಾಧನಗಳ ಮೂಲಕ ಸಂಗ್ರಹಿಸಿ, ಅಂತರ್‌ಶಿಸ್ತೀಯ ನೆಲೆಯಲ್ಲಿ ಜಾನಪದವನ್ನು ವಿಶ್ಲೇಷಿಸಿದ ತಲೆಮಾರು ಮೂರನೆಯದಾಗಿದೆ. ಇಂದು ಜಾನಪದವನ್ನು ಶಾಸ್ತ್ರೀಯವಾಗಿ ಶೋಧಿಸಬೇಕೆನ್ನುವ ವೈಜ್ಞಾನಿಕತೆ ಪ್ರಧಾನವಾಗಿದೆ. ಕಳೆದೆರಡು ದಶಕದ ಜಾನಪದ ಅಧ್ಯಯನದ ಆಯಾಮವನ್ನು ಸಾಂಸ್ಥಿಕ ನೆಲೆ, ತಾತ್ವಿಕ ನೆಲೆ, ಪ್ರೇರಣೆ ಮತ್ತು ಗತಿಶೀಲತೆಯ ನೆಲೆ, ಜಾಗತೀಕರಣದ ನೆಲೆಗಳೆಂದು ವಿಭಾಗಿಸಿ, ಪ್ರಾತಿನಿಧಿಕವಾಗಿ ಕೆಲವು ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಕರ್ನಾಟಕದ ಜಾನಪದ ಅಧ್ಯಯನದಲ್ಲಿಯ ಜ್ಞಾನ ಶೋಧನೆ ಮೌಲಿಕವಾದುದು, ವೈಶಿಷ್ಟ್ಯಪೂರ್ಣ ವಾದುದು. ಜನಪದರಲ್ಲಿರುವ ಈ ದೇಸಿ ಚಿಂತನೆಗಳು ಜಗತ್ತಿಗೆ ಬಿತ್ತರಗೊಳ್ಳಬೇಕಾದರೆ ಅಂತರ್ಜಾಲ ಮಾಧ್ಯಮಗಳ ಬಳಕೆ ಹೆಚ್ಚಬೇಕಾದುದು ಅತ್ಯಾವಶ್ಯಕ.

ಸಸ್ಯಶಾಸ್ತ್ರದ ಪ್ರಕಾರ 'ಮಾಮ್ಮಿಯಾ ಲೊಂಜೆ ಫೋಲಿಯಾ' ಎಂದು ಕರೆಯಲ್ಪಡುವುದು ಸುರಗಿಮರ. ಇದು ತಾಯ್ತನದ ಪ್ರತೀಕ; ವಸಂತ ಮಾಸದಲ್ಲಿ ಸುರಗಿ ಹೂ ಬಿಡುವುದರ ಮೂಲಕ ಸುಗ್ಗಿಯನ್ನು ಸ್ವಾಗತಿಸುತ್ತದೆ. ಪರಿಸರವನ್ನು ಸುಗಂಧಮಯವಾಗಿರಿಸುತ್ತದೆ. ಸುರಗಿ ಹೂ ಜೇನು ಹಾಗೂ ದುಂಬಿಗಳನ್ನು ಆಕರ್ಷಿಸುತ್ತದೆ. ತುಳುವರ ಸಾಂಸ್ಕೃತಿಕ ವೀರರ ದೈವಾರಾಧನೆಯ ಸಮಯದಲ್ಲಿ ಸುರಗಿ ಹೂ ಬಿಡುತ್ತದೆ. ಈ ದೈವಾರಾಧನೆಯಲ್ಲಿಯ 'ಪುರುಷ' ಎನ್ನುವ ನಾಯಕನಿಗೆ

ಶಿರಸ್ತ್ರಾಣ ಟೊಪ್ಪಿಗೆಗೆ ಸುರಗಿ ಮಾಲೆಯನ್ನು ಸ್ತ್ರೀಯರು ಹಾಕುವ ಸಂಪ್ರದಾಯವಿದೆ. ಜಾತ್ರೆಯಂತಹ ಜನ ಸೇರುವ ಸ್ಥಳಗಳಲ್ಲಿ ನೆರಳನ್ನೊದಗಿಸುತ್ತದೆ. ನೈಸರ್ಗಿಕವಾಗಿ ಔಷಧಿಯ ಗುಣ ಹೊಂದಿದೆ. ಹೀಗೆ ತನ್ನ ಬಹುರೂಪಿ ಪರೋಪಕಾರದ ನೈಜಶಕ್ತಿಯಿಂದ ಜನಪದರ ಬದುಕಿನೊಂದಿಗೆ ಸುರಗಿ ಹೊಂದಿದ ಅವಿನಾಭಾವ ಸಂಬಂಧವನ್ನು ಇಲ್ಲಿ ತಿಳಿಸಲಾಗಿದೆ.

ವಿದ್ಯಾವಂತರು ಕೃಷಿರಂಗವನ್ನು ನಿರಾಕರಿಸುವುದರ ಔಚಿತ್ಯ ಲೇಖನದಲ್ಲಿ ಕೃಷಿರಂಗ ಇಂದು ನಿರಾಕರಣ ಭಾವಕ್ಕೆ ಒಳಗಾದುದನ್ನು ವಿಭಿನ್ನ ಕಾರಣಗಳಿಂದ ವಿಮರ್ಶಿಸಲಾಗಿದೆ. ಜಾಗತೀಕರಣ, ಹವಾಮಾನ ಬದಲಾವಣೆ, ನಗರೀಕರಣದಂಥ ಅಭಿವೃದ್ಧಿ ಪರಿಕಲ್ಪನೆಗಳಿಂದ ವಿದ್ಯಾವಂತರು ಕೃಷಿರಂಗ ನಿರಾಕರಿಸಲು ಕಾರಣವಾಗಿರಬೇಕು. ಈ ಪರಿಕಲ್ಪನೆಗಳ ಬಗ್ಗೆ ಕನಸು ಕಾಣುವ ರೈತ ಸಮುದಾಯವನ್ನು ಪ್ರಧಾನವಾಗಿ ಮೂರು ಪಂಗಡಗಳಾಗಿ ವಿಂಗಡಿಸಲಾಗಿದೆ. ೧. ಕೃಷಿ ಭಾವನೆಯೊಂದಿಗೆ ಭೂಮಿಗೆ ಅಂಟಿಕೊಂಡವರು. ೨. ತಮ್ಮ ಹೊಲದಲ್ಲಿ ದುಡಿಯುವ ರೈತ, ೩. ದಲ್ಲಾಳಿ ಮನೋಗತರು. ಇಂದು ಕೃಷಿ ದುಡ್ಡು ಮಾಡುವ ದಂಧೆಯಾಗಿದೆ. ಜಾಗತೀಕರಣವು ಕುಲಾಂತರಿ ಬೀಜ, ಗೊಬ್ಬರ, ತರಕಾರಿ, ಧಾನ್ಯಗಳಿಗೆ ಬಣ್ಣ, ಆಕಾರ ಕೊಡಬಹುದು. ಆದರೆ ರುಚಿ ತುಂಬಲು ಸಾಧ್ಯವಿಲ್ಲ. ಗೊಬ್ಬರ ಬೀಜಗಳ ಪರಾವಲಂಬನೆಯು ರೈತನನ್ನು ಜಡವಾಗಿಸಿದೆ. ನಗರೀಕರಣದಿಂದ ಉಂಟಾದ ಸೌಲಭ್ಯಗಳು ಕೃಷಿಕರನ್ನು ನಗರಗಳತ್ತ ವಲಸೆ ಹೋಗುವಂತೆ ಪ್ರೇರೇಪಿಸುತ್ತಿವೆ. ಹೀಗೆ ಮಣ್ಣಿನ ಮಕ್ಕಳು ನಗರವಾಸಿಗಳಾಗುವುದಕ್ಕೆ ಹಲವಾರು ಸೂಕ್ತ ಕಾರಣಗಳನ್ನು ಪಟ್ಟಿ ಮಾಡಲಾಗಿದೆ.

ಡಾ. ಎ.ಎನ್. ಸಿದ್ದೇಶ್ವರಿ

೭. ಕೃಷಿ ಸಂಸ್ಕೃತಿಯಲ್ಲಿ ಹೆಣ್ಣಿನ ಪ್ರತಿನಿಧೀಕರಣ

ಡಾ. ರಾಜಶ್ರೀ

ಪುಟ ೧೨೪, ಬೆಲೆ ರೂ. ೧೨೫/-

ಪ್ರಥಮ ಮುದ್ರಣ ೨೦೧೩

ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು

ತುಳುನಾಡಿನ ಜಾನಪದದಲ್ಲಿ 'ಕಬಿತ'ಗಳ ಸ್ಥಾನ ಅತ್ಯಂತ ಮಹತ್ವದ್ದು. ಒಟ್ಟು ತುಳು ಮೌಖಿಕ ಸಾಹಿತ್ಯದಲ್ಲಿ 'ಕಬಿತ'ಗಳನ್ನು ಒಂದು ಪ್ರಕಾರವಾಗಿಯೇ ಗಮನಿಸುತ್ತ ಬರಲಾಗಿದೆ. ಪ್ರಸ್ತುತ ಡಾ. ರಾಜಶ್ರೀಯವರು ತುಳು ಅಧ್ಯಯನ ಪೀಠದ ಯೋಜನೆಗಳಲ್ಲಿ ತೊಡಗಿಸಿಕೊಂಡು ಕ್ಷೇತ್ರಾಧ್ಯಯನದ ಮೂಲಕ ಸಂಗ್ರಹಿಸಿದ ಕಬಿತಗಳ ಒಳಹೊಕ್ಕು

ನೋಡುವ ಪ್ರಯತ್ನ ಮಾಡಿದ್ದಾರೆ. ಸಾಮಾನ್ಯವಾಗಿ 'ಕಬಿತ' ಎಂಬ ಶಬ್ದ ಬಂದಾಗಲೇ ಬೇಸಾಯ, ನೇಜಿ ಎಂಬ ಶಬ್ದಗಳು ಸಹಜವಾಗಿಯೇ ಬಂದುಬಿಡುವುದರಿಂದಾಗಿ 'ಶ್ರಮದ ಸಂಕೇತ'ವೆಂದೇ ಭಾವಿಸಲಾಗುತ್ತಿದೆ. ಹಾಗೆಯೇ ನೇಜಿ, ಬೇಸಾಯ ಎಂದಾಗ ಸ್ತ್ರೀಯರು ಇರಲೇಬೇಕು. ಹಾಗಾಗಿ ರಾಜಶ್ರೀಯವರು ಕಬಿತಗಳಲ್ಲಿ ಸ್ತ್ರೀಯ ಹೆಜ್ಜೆ ಗುರುತುಗಳನ್ನು ಮತ್ತು ಸವೆಸಿದ ದಾರಿಯನ್ನು, ದಾರಿಯಲ್ಲಿ ಕಾಣಬರುವ ಕಲ್ಲುಮುಳ್ಳು ಗಳನ್ನು ಅವಲೋಕಿಸುವ, ಒಳಹೊಕ್ಕು ಗಮನಿಸುವ ಪ್ರಯತ್ನ ಮಾಡಿದ್ದಾರೆ.

ಕಬಿತಗಳನ್ನು ಕೃಷಿ ಸಂಬಂಧಿಸಿದ ಕಬಿತಗಳು, ಕಥನ ಕವನದ ಮಾದರಿಯ ಕಬಿತಗಳು, ಆಭರಣ ವಿಶೇಷಗಳಿರುವ ಕಬಿತಗಳು, ತರಕಾರಿಗಳ ಹೆಸರುಗಳಿಂದ ಕಬಿತಗಳು, ಮರದ ಹೆಸರುಗಳಿರುವ ಕಬಿತಗಳು, ಹೂವಿನ ಹೆಸರುಗಳಿರುವ ಕಬಿತಗಳು, ಪ್ರಾಣಿಗಳ ಹೆಸರುಗಳಿರುವ ಕಬಿತಗಳು, ಊರಿನ ಹೆಸರುಗಳಿರುವ ಕಬಿತಗಳು, ಮನುಷ್ಯರ ಹೆಸರುಗಳಿರುವ ಕಬಿತಗಳು, ಜಾತಿಯ ಹೆಸರುಗಳಿರುವ ಕಬಿತಗಳು, ಅಸಂಭವನೀ ಯತೆಯ ವರ್ಣನೆಗಳಿರುವ ಕಬಿತಗಳು, ವರ್ಣನಾತ್ಮಕ ಕಬಿತಗಳು ಮತ್ತು ಹಾಸ್ಯ ಕಬಿತಗಳು ಹೀಗೆ ಹದಿಮೂರು ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಈ ವರ್ಗೀಕರಣದಿಂದ ತುಳು ಸಂಸ್ಕೃತಿಯ ಓರ್ವ ಸ್ತ್ರೀಯ ಇಡೀ ಜೀವನವನ್ನೇ ನೋಡಿದಂತಾಗುವುದು. ವರ್ಗೀಕರಣದ ಮೂಲಕ ವಿಂಗಡಿಸಿದ ವಸ್ತುಗಳೆಲ್ಲ ಬದುಕಿನ ಮೂಲಭೂತ ಅವಶ್ಯಗಳಿಗೆ ಸಂಬಂಧಿಸಿವೆ. ಊರು, ಹೆಸರು, ಜಾತಿ, ಹಾಸ್ಯ. ವರ್ಣನೆಗಳನ್ನು ಹೊರತುಪಡಿಸಿ ಜೀವನವೇ ಇಲ್ಲ. ಈ ಹಿನ್ನೆಲೆಯಲ್ಲಿಯೂ ಕೃಷಿ ಸಂಸ್ಕೃತಿಯನ್ನು ನೋಡಬಹುದು. ಬೆವರಿಳಿಸಿ ಶ್ರಮಪಡುವ ಹೆಣ್ಣುಮಕ್ಕಳ ಸ್ಥಿತಿಗತಿಗಳನ್ನು, ಅವರ ಮನೋಸ್ಥೈರ್ಯವನ್ನು, ಗ್ರಹಿಕೆಗಳನ್ನು ನೋಡಲು ಸಾಧ್ಯ. ಈ ಎಲ್ಲ ಉದ್ದೇಶಗಳನ್ನಿಟ್ಟುಕೊಂಡೇ ಲೇಖಕರಾದ ಡಾ. ರಾಜಶ್ರೀಯವರು ಶ್ರಮವಹಿಸಿದ್ದಾರೆ. "ಈ ರಚನೆಗಳಲ್ಲಿ ದುಡಿಯುವ ಹೆಣ್ಣು ಕೆಲಸದಲ್ಲಿ ನಿರತಳಾಗಿರುವಾಗ ಮನಸ್ಸು ಪಟ್ಟ ಪಾಡಿನ ಅಭಿವ್ಯಕ್ತಿ ಇದೆ. ಆಕೆಯ ಬಯಕೆಗಳಿವೆ, ಆಸೆ-ಆಕಾಂಕ್ಷೆಗಳಿವೆ, ಕನಸುಗಳಿವೆ- ಅಪೇಕ್ಷೆಗಳಿವೆ. ದುಡಿಯುವ ವರ್ಗದ ಹೆಂಗಸರು ದಿನನಿತ್ಯ ಎದುರಿಸುವ ಕಷ್ಟ, ನಷ್ಟ, ಸಂಕಟ, ನೋವು, ಒತ್ತಡಗಳಿವೆ" (ಪು. ೨೦). ಅದಕ್ಕಾಗಿಯೇ ಕಬಿತಗಳು ತುಳು ಮಹಿಳೆಯರ ಜೀವನ ಚರಿತ್ರೆಯಾಗಿದೆ ಎಂದು ಹೇಳಿದ್ದು. ಜಾತಿ, ಧರ್ಮ, ಪಂಥಗಳನ್ನು ಮೀರಿ ನಾವೆಲ್ಲರೂ ಒಂದೇ ಎನ್ನುವ ಭಾವೈಕ್ಯತೆ, ಮಾನವೀಯ ಸಂಬಂಧ ನೇಜಿ ನೆಡುವ ಸಂದರ್ಭದ 'ಓ ಬೇಲೇ' ಕಬಿತದಲ್ಲಿದೆ (ಪು. ೨೩). ಕರ್ನಾಟಕದ ಇತರೆ ಪ್ರದೇಶ, ಸಂಸ್ಕೃತಿಗಳಲ್ಲಿರುವುದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯ ತುಳು ಸಂಸ್ಕೃತಿಯ ಹೆಣ್ಣಿಗಿದೆ. ಅದು 'ಓ ಬೇಲೇ' ಕಬಿತದಲ್ಲಿ ಪ್ರಕಟವಾಗಿರುವುದನ್ನು ಲೇಖಕರು ಗುರುತಿಸುತ್ತಾರೆ. ಅಂದರೆ ಪೂರ್ಣತೆಯ ಸ್ವಾತಂತ್ರ್ಯ ಮಹಿಳೆಯರಿಗಿತ್ತು ಎಂದರ್ಥವಲ್ಲ. ಗಂಡು ಮಗುವಿನಷ್ಟೇ ಮಹತ್ವ ಹೆಣ್ಣು ಮಗುವಿಗಿತ್ತು. ಹಾಗೆಯೇ ಮಡದಿಯ ಒಡವೆಗಳನ್ನು ಮಾರಿ, ಮನೆಯ ವಸ್ತುಗಳನ್ನು ಮಾರಿ

ಹೆಂಡ ಸರಾಯಿಯ ಸಹವಾಸ ಮಾಡಿದ ಗಂಡಂದಿರಿಗೆ ಕೊರತೆಯಿರಲ್ಲಿಲ್ಲವೆಂಬುದು ಕಬಿತಗಳಲ್ಲಿ ದಾಖಲಾಗಿದೆ(ಪು. ೩೫-೩೬).

"ಜಾಗತೀಕರಣ ಇಂದು ಕೃಷಿಯ ಮೇಲೂ ಗಾಢವಾದ ಪರಿಣಾಮ ಬೀರುತ್ತಿದೆ. ಇದರ ನೇರ ಪ್ರಭಾವ ಜಾನಪದದ ಮೇಲೂ ಉಂಟಾಗುತ್ತಿದೆ. ಈ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಗದ್ದೆ ಬೇಸಾಯದ ಭವಿಷ್ಯದ ಕುರಿತಂತೆ ಯೋಚಿಸಬೇಕಾಗಿದೆ. ಗದ್ದೆ ಬೇಸಾಯದ ಜೊತೆ ಜೊತೆಗೇ ಸಂಬಂಧವನ್ನು ಹೊಂದಿದ ಹಾಡುಗಳು ಎಷ್ಟರಮಟ್ಟಿಗೆ ಉಳಿಯಬಹುದು ಎಂಬ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾದ ಅಗತ್ಯತೆ ಇದೆ" (ಪು. ೭೫) ಎಂದು ತಮ್ಮ ಕಳಕಳಿಯನ್ನು ಲೇಖಕರು ವ್ಯಕ್ತಪಡಿಸಿದ್ದಾರೆ. ಈ ರೀತಿಯ ಕಳಕಳಿ ಅತ್ಯಾವಶ್ಯಕ ಹಾಗೂ ಸಹಜವಾದದ್ದೇ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಜಿಲ್ಲೆಯ ಅರ್ಧದಷ್ಟು ರೈತರು ಭತ್ತದ ಬೇಸಾಯವನ್ನೇ ಮರೆತಿದ್ದಾರೆ. ಗ್ರಾಮೀಣ ಪ್ರದೇಶದವರು ಅಡಿಕೆ, ರಬ್ಬರ್‌ಗಳ ಮೊರೆಹೋದರೆ, ಪಟ್ಟಣ ನಗರಗಳ ಹತ್ತಿರವಿರುವವರು ಎಲ್ಲ ಗದ್ದೆ, ಹೊಲಗಳಿಗೆ ಮಣ್ಣು ತುಂಬಿಸಿ ಲೇಔಟ್, ಕಾಂಕ್ರೀಟ್ ಕಟ್ಟಡಗಳನ್ನಾಗಿ ನಿರ್ಮಿಸುತ್ತಿರುವುದು ಕಳೆದ ಒಂದೆರಡು ದಶಕಗಳಿಂದಲೇ ತೀವ್ರತೆಯನ್ನು ಪಡೆದಿದೆ. ಎತ್ತುಗಳಿರಬೇಕಾದ ಹಟ್ಟಿಗಳು ನಾಲ್ಕೈದು ದನಕರುಗಳಿಗೆ ಸೀಮಿತವಾಗಿವೆ. ನೇಗಿಲು, ನೊಗ, ಹಲಗೆಗಳು ಗೆದ್ದಲಿಗೆ ಆಹಾರವಾಗಿದೆ ಎಂಬುದು ಅತ್ಯಂತ ನೋವಿನ ಸಂಗತಿಗಳಾಗಿವೆ. ಉದ್ಯಮದ ನೆಪದಲ್ಲಿ ಸಾವಿರಾರು ರೈತಾಪಿ ಕುಟುಂಬ ನಗರವಾಸಿಗಳಾಗಿದ್ದಾರೆ. ಹಟ್ಟಿಯಲ್ಲಿ ದನ ಗಂಡು ಕರು ಹಾಕಿದರೆ ಸಂಭ್ರಮ ಪಡುವ ಕಾಲವೊಂದಿತ್ತು. ಆದರೆ ಇಂದು ಗಂಡು ಕರು ಹಾಕಿದರೆ ಬೇಸರಪಡುವ, ಪುಕ್ಕಟೆಯಾಗಿ ಇತರರಿಗೆ ನೀಡುವ ಅಥವಾ ಕಸಾಯಿಖಾನೆಗೆ ನೀಡುವ ಸತ್ಯವನ್ನು ಮರೆಮಾಚಲು ಸಾಧ್ಯವೆ?

ಒಟ್ಟಾರೆ ಶ್ರೀಮಂತಿಕೆಯನ್ನು ಹೊಂದಿರುವ ತುಳು ಕಬಿತಗಳು ತುಳು ಜೀವನ ಪದ್ಧತಿಯ ಆಕರ ಗ್ರಂಥಗಳಿದ್ದಂತೆ. ಅವುಗಳ ಒಡಲೊಳಗೆ ಏನುಂಟು? ಏನಿಲ್ಲ? ಒಡಲೊಳಗೆ ಒಳಹೊಕ್ಕು ಒಳದನಿಯನ್ನು ಹೆಕ್ಕಿದ್ದಾರೆ ಲೇಖಕರಾದ ಡಾ. ರಾಜಶ್ರೀ ಅವರು.

ಕೃತಿಯಲ್ಲಿ ನೀಡಿರುವ ಪಾರಿಭಾಷಿಕ ಪದಕೋಶ ನಮ್ಮಂಥ ದೂರದಲ್ಲಿ ನಿಂತು ನೋಡುವವರಿಗೆ ಅರ್ಥೈಸಿಕೊಳ್ಳಲು ಸಹಕಾರಿ. ಸುಂದರ ಪರಿಸರ, ಅತ್ಯಧಿಕ ಮಳೆ, ಅದರಿಂದ ಅತ್ಯಧಿಕ ಬೆಳೆ, ಆ ಮೂಲಕ ಸುಖೀಜೀವನ ಎಂದು ಅರ್ಥೈಸುವ ತುಳುನಾಡಿನವರಲ್ಲದವರಿಗೆ ತುಳು ಸಂಸ್ಕೃತಿ, ತುಳುವ ಹೆಣ್ಣಿನ ಜೀವನ ಯಾವ ರೀತಿಯಲ್ಲಿತ್ತು, ಯಾವ ರೀತಿಯಲ್ಲಿದೆ ಎಂದು ತಿಳಿಯಲು ಈ ಕೃತಿ ಸಹಕಾರಿ. ಈ ಹಿನ್ನೆಲೆಯಲ್ಲಿ ಡಾ. ರಾಜಶ್ರೀ ಅವರು ಅಭಿನಂದನಾರ್ಹರು.

ಡಾ. ಜ್ಯೋತ್ಸ್ನಾ ಚಂದ್ರಕಾಂತ

೮. ಯಕ್ಷಕೇದಗೆ

ಪ್ರಧಾನ ಸಂಪಾದಕರು: ಡಾ. ಕೆ. ಚಿನ್ನಪ್ಪ ಗೌಡ
ಸಂಪಾದಕರು: ರಾಜಶ್ರೀ ಮತ್ತು ಸತೀಶ್ ಕೊಣಾಜೆ
ಪುಟ ೧೨೦, ಬೆಲೆ ರೂ. ೭೫/-
ಪ್ರಥಮ ಮುದ್ರಣ ೨೦೧೩
ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ
ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ-೫೭೪ ೧೯೯

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಯಕ್ಷಗಾನ ಕೇಂದ್ರ ಆರಂಭವಾದ ಮೇಲೆ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕೆಲವೊಂದು ಪುಸ್ತಕಗಳು ಪ್ರಕಟವಾಗಿವೆ. ಈ ಪುಸ್ತಕವು ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ಏರ್ಪಡಿಸಿದ್ದ ಉಪನ್ಯಾಸಗಳ ಸಂಕಲನವಾಗಿದೆ. ಇದರಲ್ಲಿ ಯಕ್ಷಗಾನ ಪುನರುಜ್ಜೀವನದ ಕನಸು(ಕೆ.ಎಂ. ರಾಘವ ನಂಬಿಯಾರ್), ತುಳು ಯಕ್ಷಗಾನ: ಬೆಳವಣಿಗೆ ಮತ್ತು ಸ್ಥಿತ್ಯಂತರ(ಸಿದ್ಧಕಟ್ಟೆ ವಿಶ್ವನಾಥ ಶೆಟ್ಟಿ), ಯಕ್ಷಗಾನ ರಂಗಭಾಷೆ(ಚಂದ್ರಶೇಖರ ದಾಮ್ಲೆ), ಯಕ್ಷಗಾನ ಸಂಗೀತ(ಎ. ಈಶ್ವರಯ್ಯ), ಪ್ರವೃತ್ತಿ ಕಲೆಯಾಗಿ ಯಕ್ಷಗಾನ(ದಿನಕರ ಎಸ್. ಪಚ್ಚನಾಡಿ), ಯಕ್ಷಗಾನ ಹೆಣ್ಣು ಬಣ್ಣದ ವೇಷಗಳು: ಒಂದಷ್ಟು ಸಾಧ್ಯತೆಗಳು(ಪ್ರಭಾಕರ ಶಿಶಿಲ), ಸ್ಥಳೀಯತೆ ಮತ್ತು ಯಕ್ಷಗಾನ (ಮಹಾಲಿಂಗ), ಭೀಷ್ಮ ವಿಜಯ: ಮೂಲ ಮತ್ತು ರಂಗದ ನಡೆ(ನಾರಾಯಣ ಯಾಜಿ), ಅರ್ಥಗಾರಿಕೆಯಲ್ಲಿ ಪಾತ್ರ ಚಿತ್ರಣ(ವಾಸುದೇವ ರಂಗಭಟ್), ಮಹಾಭಾರತ ದಲ್ಲಿ ಕರ್ಣ(ಗುಡ್ಡಪ್ಪ ಗೌಡ ಬಲ್ಯ) ಮತ್ತು ಮಲ್ಪೆ ಶಂಕರನಾರಾಯಣ ಸಾಮಗ: ಶತಮಾನ ನಮನ(ಶ್ರೀಕರ ಭಟ್) ಮೊದಲಾದ ಲೇಖನಗಳಿವೆ.

ಇಲ್ಲಿರುವ ಬಹುತೇಕ ಲೇಖನಗಳಲ್ಲಿ ಯಕ್ಷಗಾನದ ಬಗೆಗೆ ಒಂದು ರೀತಿಯ ವಿಷಾದವಿದೆ. ಮುಖ್ಯವಾಗಿ ಯಕ್ಷಗಾನ ಕಲೆಯು ದಾರಿ ತಪ್ಪಿದೆ ಎನ್ನುವ ಅಳಲು ಕಂಡುಬರುತ್ತಿದೆ. ಮೊದಲೆಲ್ಲ ಹೀಗೆ ಯಕ್ಷಗಾನದ ಬಗೆಗೆ ಪುಸ್ತಕಗಳು ಬರುತ್ತಿದ್ದರೆ ಯಾರೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಏಕೆಂದರೆ ಯಕ್ಷಗಾನ ಪ್ರಿಯರು ಈ ಪುಸ್ತಕಗಳನ್ನು ಓದಿಕೊಂಡೇನೂ ಯಕ್ಷಗಾನ ಕಲೆಯನ್ನು ಸವಿಯುತ್ತಿರಲಿಲ್ಲ. ಆದರೆ ಈಗ ಕಾಲ ಬದಲಾಗಿದೆ. ಯಕ್ಷಗಾನಕ್ಕೆ ಪ್ರೇಕ್ಷಕರೇ ಇಲ್ಲದ ಕಾಲವಿದು! ಹಾಗಾದುದರಿಂದ ಇಂತಹ ಪುಸ್ತಕಗಳು, ಉಪನ್ಯಾಸಗಳು, ಚಿಂತನ-ಮಂಥನಗಳೇ ಇನ್ನು ಮುಖ್ಯವಾದರೂ ಆಗಬಹುದೇನೋ!

ಈ ಸಂಕಲನದಲ್ಲಿ 'ಮಹಾಭಾರತದಲ್ಲಿ ಕರ್ಣ'(ಗುಡ್ಡಪ್ಪ ಬಲ್ಯ) ಎನ್ನುವ ಲೇಖನವಿದೆ. ಈ ಲೇಖನದ ಬಗೆಗೆ ಇಲ್ಲಿ ನಾನು ಪ್ರಸ್ತಾಪಿಸಬೇಕೆನಿಸುತ್ತದೆ. ಈ ಲೇಖನದ ಕೊನೆಯ

ಸಾಲು ಹೀಗಿದೆ - 'ಆದುದರಿಂದ ಕರ್ಣನನ್ನು ಯಾವ ನೆಲೆಯಲ್ಲಿಯೂ ಬೆಂಬಲಿಸಲು ಸಾಧ್ಯವಿಲ್ಲ'. ಇದೇ ಧಾಟಿಯಲ್ಲಿ ಮುಂದುವರಿದು ನಾವು ಹೀಗೊಂದು ಪ್ರಶ್ನೆಯನ್ನು ಕೇಳಬಹುದು-ಹಾಗಾದರೆ ಈ ಲೇಖನವನ್ನು ಬರೆದಿರುವುದಾದರೂ ಏಕೆ?

ಮೇಲ್ನೋಟಕ್ಕೇ ಸ್ಪಷ್ಟವಾಗುವ ಹಾಗೆ ಅವರು ಕೆ.ಎಸ್. ನಾರಾಯಣಾಚಾರ್ಯರ ಕೃತಿಗಳಿಂದ ಪ್ರೇರೇಪಿತರಾದವರು. ಕೆ.ಎಸ್. ನಾರಾಯಣಾಚಾರ್ಯರು ದೊಡ್ಡ ವಿದ್ವಾಂಸರು. ಅವರೇ ಹೇಳುವಂತೆ ಅವರು ಮಹಾಭಾರತ-ರಾಮಾಯಣಗಳನ್ನು ಸಂಪೂರ್ಣವಾಗಿ ಓದಿದವರು. ಆದುದರಿಂದಲೇ ಅವರು ತ್ರೇತಾಯುಗ, ದ್ವಾಪರ ಯುಗದಲ್ಲಿದ್ದವರ ಹಾಗೆ ರಾಮ, ಕರ್ಣರೊಂದಿಗೆ ಕಾಫಿ-ಟೀ ಕುಡಿದವರ ಹಾಗೆ-ಮಾತಾಡುತ್ತಾರೆ! ಇಲ್ಲದೇ ಹೋದರೇ ಋಷಿಮೂಲ, ಮಾತೃಮೂಲ ಹಾಗೂ ನದೀಮೂಲಗಳನ್ನು ಕೇಳಬಾರದು ಎಂದು ತಾನೇ ನಮ್ಮ ಪರಂಪರೆ ಹೇಳುವುದು? ಹಾಗಿರುವಾಗಲೂ ಆಚಾರ್ಯರು ವಾಲ್ಮೀಕಿಯ ಮೂಲವನ್ನು ಕೆದಕುವುದಕ್ಕೆ ಹೊರಟಿರುವುದೇಕೆ? ಆದುದರಿಂದ ಗ್ರಂಥಗಳನ್ನು ಓದಿದ ಮಾತ್ರಕ್ಕೆ ಸರ್ವಜ್ಞರಾಗಬೇಕಿಲ್ಲ. ಅದರ ಆಚೆಗೂ ಕೆಲವೊಂದು ಸತ್ಯಗಳು, ಸೂಕ್ಷ್ಮಗಳು ಇರುತ್ತವೆ ಎಂದೇ ತಿಳಿಯಬೇಕು.

ಇಲ್ಲಿಯೂ ಅದೇ ರೀತಿಯ ಸೂಕ್ಷ್ಮಗಳಿವೆ. ಒಂದು ವೇಳೆ ಕರ್ಣನ ಪಾತ್ರ ಅಂತಹ ನಿಕೃಷ್ಟವಾದ ಪಾತ್ರವಾಗಿದ್ದರೆ ಪಂಪ, ಕುಮಾರವ್ಯಾಸರಂತಹ ಕವಿಗಳು ಕರ್ಣನ ಕುರಿತು ಉತ್ಸಾಹದಿಂದ ಬರೆಯುತ್ತಿದ್ದರೇಕೆ? ಪಂಪನಂತೂ 'ಕರ್ಣಂಗೊಡ್ಡಿತು ದಲ್ ಭಾರತಂ' ಎನ್ನುವಲ್ಲಿಯವರೆಗೆ ಮಹಾಭಾರತದಲ್ಲಿ ಕರ್ಣನನ್ನು ನೆನೆಸಿದ್ದಾನೆ. ಅವರೆಲ್ಲ ದಡ್ಡರಾಗಿದ್ದು ನಾವಷ್ಟೇ ಬುದ್ಧಿವಂತರೇ?

ಯಕ್ಷಗಾನದ ಸಂದರ್ಭದಲ್ಲಿಯೇ ಹೇಳುವುದಾದರೆ ಕೇದಗಡಿ ಗುಡ್ಡಪ್ಪ ಗೌಡರಂಥವರ ಕರ್ಣನ ಪಾತ್ರ ನೋಡುವುದಕ್ಕೇ ಪ್ರೇಕ್ಷಕರು ಯಕ್ಷಗಾನಕ್ಕೆ ಬರುತ್ತಿದ್ದರು. ಹಾಗೆಯೇ ಕುಂಬಳೆ ಸುಂದರರಾವ್ ಅವರ ಕರ್ಣನ ಪಾತ್ರ ಕೂಡ ಮರೆಯಲಾಗದಿರುವಂತಹದ್ದು. ಬೇರೇನೂ ಅಲ್ಲದಿದ್ದರೂ ಯಕ್ಷಗಾನದ ಈ ಮತ್ತು ಇಂತಹ ಕಲಾವಿದರು ತಮ್ಮ ಪ್ರತಿಭೆಯ ಮೂಲಕ ಕರ್ಣ ಪಾತ್ರಕ್ಕೆ ಒಂದು ಉನ್ನತಿಕೆಯನ್ನು ಕೊಟ್ಟರಲ್ಲ - ಅದು ಸುಳ್ಳೇ? ಧರ್ಮರಾಯ, ಸಹದೇವ, ನಕುಲ ಮೊದಲಾದ ಸಾತ್ವಿಕ ಪಾತ್ರಗಳನ್ನು ನೋಡುವ ಸಲುವಾಗಿ ಯಾವ ಪ್ರೇಕ್ಷಕ ಯಕ್ಷಗಾನಕ್ಕೆ ಬರುತ್ತಾನೆ? ದುಶ್ಯಾಸನ, ಕರ್ಣ, ದುರ್ಯೋಧನ ಮೊದಲಾದ ಖಳ ಪಾತ್ರಗಳಿಗಾಗಿ ಒಂದು ಕಾಲದಲ್ಲಿ ಜನ ಯಕ್ಷಗಾನಕ್ಕೆ ಮುಗಿಬೀಳುತ್ತಿದ್ದುದು ತಾನೇ? ಅವರಿಂದ ಬಣ್ಣದ ವೇಷದಂತಹ ಅದ್ಭುತ ವೇಷವೊಂದರ ಪರಿಕಲ್ಪನೆ ಯಕ್ಷಗಾನದಲ್ಲಿ ಸಾಧ್ಯವಾದುದು ತಾನೇ?

ಹಾಗಿರುವಾಗ ವ್ಯಾಸ, ವಾಲ್ಮೀಕಿಯರ ಕಾವ್ಯಗಳಲ್ಲಿರುವ ಇಂತಹ ಪಾತ್ರಗಳನ್ನು ನೀತಿ-ಅನೀತಿಯಿಂದ ನೋಡುವಾಗಲೇ ನಾವು ಆ ಕಾವ್ಯವನ್ನು ಸರಿಯಾಗಿ ಓದುತ್ತಿಲ್ಲವೆಂದೆನಿಸುತ್ತದೆ. ಅವುಗಳಿಗೆ ಬೇರೆ ಬೇರೆ ಆಯಾಮಗಳಿವೆ. ಅಷ್ಟಕ್ಕೂ ಸೂರ್ಯ

ಮತ್ತು ಕುಂತಿಯರ ಮಗ, ಕುರುಕುಲದ ಹಿರಿಯ, ದಾನಶೂರನೂ, ವೀರನೂ ದ್ವಾಪರಯುಗದ ವ್ಯಕ್ತಿಯೂ ಆದ ಕರ್ಣನ ಗುಣಾವಗುಣಗಳನ್ನು ಹೇಳಲು ನಮಗೇನು ಅರ್ಹತೆ ಇದೆ? ಬೇರೆ ಬೇಳ್ಕೆ ಕಾಲದಲ್ಲಿ ನಮ್ಮ ಜನ ಅವುಗಳನ್ನು ಬೇರೆ ಬೇರೆಯಾಗಿ ನೋಡಿದುದರಿಂದಲೇ ಯಕ್ಷಗಾನದಂತಹ ಕಲಾ ಪ್ರಕಾರವೊಂದು ಹುಟ್ಟಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಯಕ್ಷಗಾನದಲ್ಲಿರುವ ಕರ್ಣಪರ್ವ ಪ್ರಸಂಗವು ಮೂಲ ಮಹಾಭಾರತದ ಕಥೆಯಲ್ಲ. ಹಾಗಿದ್ದರೂ ಅದು ಅತ್ಯಂತ ಜನಪ್ರಿಯ ಪ್ರಸಂಗವಾಗಿದೆ. ಹಾಗಾದುದರಿಂದ ಯಕ್ಷಗಾನಕ್ಕೆ, ಯಕ್ಷಗಾನ ಪ್ರಸಂಗಗಳಿಗೆ ಆದರದ್ದೇ ಪರಂಪರೆ ಇದೆ. ಆ ದೃಷ್ಟಿಯಲ್ಲಿ 'ಸ್ಥಳೀಯತೆ ಮತ್ತು ಯಕ್ಷಗಾನ (ಡಾ. ಮಹಾಲಿಂಗ) ಲೇಖನದಲ್ಲಿ ಇಂತಹ ಸಮಸ್ಯೆಗಳನ್ನು ಗಮನಿಸಲಾಗಿದೆ ಎಂದೆನಿಸುತ್ತದೆ.

'ಯಕ್ಷಕೇದಗೆ' ಪುಸ್ತಕದ ಕುರಿತು ಈ ಲೇಖನದಿಂದಲೇ ಆರಂಭ ಮಾಡಲು ಕಾರಣಗಳಿವೆ. ಇವು ಯಕ್ಷಗಾನದ ಕುರಿತು ಬರೆದ ಕೆಲವೊಂದು ವಿಮರ್ಶಾ ಲೇಖನಗಳಾಗಿವೆ. ಕನ್ನಡದಲ್ಲಿರುವ ಸಾಹಿತ್ಯ ವಿಮರ್ಶೆ ಎನ್ನುವ ಬರವಣಿಗೆಯ ಪ್ರಕಾರದಿಂದ ಇಂತಹ ಬರಹಗಳು ಪ್ರಭಾವಿತವಾಗಿವೆ. ಇಂತಹ ಬರವಣಿಗೆಗಳಿಗೆ ಒಂದು ಸುದೀರ್ಘವಾದ ಇತಿಹಾಸವೇ ಇದೆ. ಮುಳಿಯ ತಿಮ್ಮಪ್ಪಯ್ಯ, ಕುಕ್ಕಿಲ ಕೃಷ್ಣಭಟ್ ಮೊದಲಾದವರೆಲ್ಲ ಹೀಗೆ ಬರೆಯುತ್ತಿರಲಿಲ್ಲ. ಅವರ ಬರವಣಿಗೆಗಳು ಯಕ್ಷಗಾನದ ಕುರಿತ ಸಂಶೋಧನೆಗಳಾಗಿರುತ್ತಿದ್ದವು. ಆಮೇಲೆ ಯಕ್ಷಗಾನಕ್ಕೆ ಸಂಬಂಧಿಸಿದ ಆ ಮೇಲಿನ ಬರವಣಿಗೆಗಳು ಸಾಹಿತ್ಯ ವಿಮರ್ಶೆ, ಜಾನಪದ ಅಧ್ಯಯನದಿಂದಲೇ ಹೆಚ್ಚು ಪ್ರೇರಣೆ ಪಡೆದವುಗಳಾಗಿವೆ. ಇದು ಹೌದಾದರೆ, ಸಾಹಿತ್ಯ ವಿಮರ್ಶೆಯಲ್ಲಿರುವ ದೋಷಗಳೇ ಇಂತಹ ಬರವಣಿಗೆಗಳಲ್ಲಿ ಕಂಡುಬರುತ್ತವೆ.

ನಮ್ಮ ಸಾಹಿತ್ಯ ವಿಮರ್ಶೆಯ ಮೊದಲ ಸಮಸ್ಯೆಯೇ ಅವುಗಳನ್ನು ನಮ್ಮ ಸಂದರ್ಭದಲ್ಲಿ ಅಳವಡಿಸಲಾಗದಿರುವುದು. ಹೆಚ್ಚಿನ ವಿಮರ್ಶಾ ಸಿದ್ಧಾಂತಗಳೆಲ್ಲ ಮೇಲ್ ತೋರಿಕೆಯ ಹಂತದಲ್ಲಿ ನಿಂತು ಬಿಡುತ್ತವೆ. ಸಾಹಿತ್ಯದ ಕೃತಿಗಳೊಂದಿಗೆ ಅವುಗಳಿಗೆ ಯಥಾರ್ಥ ಸಂಬಂಧವೇ ಇರುತ್ತದೆ. ಯಕ್ಷಗಾನದಲ್ಲಿಯೂ ಹಾಗೆಯೇ ಆಗಿದೆ. ಯಕ್ಷಗಾನದ ವಿಮರ್ಶೆಗೂ ಯಕ್ಷಗಾನದ ಪ್ರೇಕ್ಷಕರಿಗೂ ಯಾವುದೇ ಸಂಬಂಧವಿರುವುದಿಲ್ಲ. ಹಾಗಾದರೆ ಅವುಗಳ ಉಪಯೋಗವಾದರೂ ಏನು?

ಈಗಂತೂ ಕರಾವಳಿಯ ಯಕ್ಷಗಾನದಿಂದ ಸ್ವತಃ ಪ್ರೇಕ್ಷಕರೇ ದೂರ ಸರಿದಿದ್ದಾರೆ. ಶತಾಯಗತಾಯ ಯಕ್ಷಗಾನದ ಅಭಿಮಾನಿಗಳು ಯಕ್ಷಗಾನವನ್ನುಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆ ಪ್ರಯತ್ನಗಳು ಇಲ್ಲಿಯ ಕೆಲವೊಂದು ಲೇಖನಗಳಲ್ಲಿಯೂ ಇವೆ. ಆದರೆ ಅವು ಅಳಿವಿನಂಚಿನಲ್ಲಿರುವ ಯಕ್ಷಗಾನಕ್ಕೆ ಕಾಯಕಲ್ಪದ ರೀತಿಯಲ್ಲಿರಬೇಕೇ ವಿನಃ ಅನಗತ್ಯ ಪಾಂಡಿತ್ಯ ಪ್ರದರ್ಶನವಾದರೆ ಏನು ಪ್ರಯೋಜನ?

ಈ ಸಂಕಲನದಲ್ಲಿ ಅಂತಹ ಎರಡೂ ಬಗೆಯ ಲೇಖನಗಳಿವೆ. ಅವುಗಳನ್ನು ಹೆಸರಿಸಿದರೆ ಇಲ್ಲಿಯ ವಿಮರ್ಶಕರೇ ನನ್ನ ಮೇಲೆ ಮುನಿಸಿಕೊಂಡಾರು!

ಡಾ. ಮಾಧವ ಪೆರಾಜೆ

೯. ಇಹ ಪರ ಹಾದಿ

ಡಾ. ರಾಜಶ್ರೀ
ಪುಟ ೧೭೦, ಬೆಲೆ ರೂ. ೧೫೦/-
ಪ್ರಥಮ ಮುದ್ರಣ ೨೦೧೩
ಆಕೃತಿ ಆಶಯ ಪಬ್ಲಿಕೇಷನ್ಸ್
ಮಂಗಳೂರು–೫೭೫೦೦೧

'ಇಹ ಪರದ ಹಾದಿ' ಡಾ. ರಾಜಶ್ರೀಯವರು ಕೃಷಿ ಜಾನಪದ ತುಳು ಸಂಸ್ಕೃತಿ, ವಿಷಯನಿಷ್ಠ ಜಾನಪದ, ಕೃತಿ ವಿಮರ್ಶೆಗೆ ಸಂಬಂಧಿಸಿ ಬರೆದ ಹನ್ನೊಂದು ಸಂಶೋಧನ ಲೇಖನಗಳನ್ನೊಳಗೊಂಡ ಕೃತಿ. 'ತುಳುವಿಗೆ ಅದರದೇ ಆದ ಒಂದು ಸಾಹಿತ್ಯ, ಮೀಮಾಂಸೆಯನ್ನು ರೂಪಿಸಬೇಕಾಗಿರುವ ಹಿನ್ನೆಲೆಯಲ್ಲಿ ಮೊದಲಿಗೆ ತುಳು ಸಾಹಿತ್ಯ, ಬದುಕನ್ನು ತುಳು ಸಂಸ್ಕೃತಿಯ, ತುಳುವರ ಲೋಕದೃಷ್ಟಿಯ ಹಿನ್ನೆಲೆಯಲ್ಲಿ ಗ್ರಹಿಸಬೇಕು' ಎಂಬ ಪ್ರೊ. ಎ.ವಿ. ನಾವಡ ಅವರ ಮಾತು ಮಹತ್ವದ್ದಾಗಿದೆ. ತಮ್ಮ ಸಂಸ್ಕೃತಿಯ ರೀತಿ-ರಿವಾಜು, ಒಳತಲ್ಲಣಗಳನ್ನು ಅರಿತು ಬರೆಯುವ ಲೇಖಕರು ಇಂದು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಡಾ. ರಾಜಶ್ರೀ ಅವರ ಪ್ರಸ್ತುತ ಕೃತಿಯನ್ನು ಲೌಕಿಕ ಹಾಗೂ ಪಾರಮಾರ್ಥಿಕ ಅರ್ಥದಲ್ಲಿ ಪರಿಭಾವಿಸಬೇಕು. ಅಸ್ತಿತ್ವದ ಉಳಿಯುವಿಕೆಗಾಗಿ ಮನುಷ್ಯ ನಡೆಸುವ ಹೋರಾಟ, ಅನುಭವಿಸುವ ವೇದನೆ, ಪರಂಪರಾನುಗತವಾಗಿ ಬಂದ ಬದುಕಿನ ಕುರಿತಾದ ಸಂವೇದನೆಗಳು ಅವರ ಲೇಖನದ ಮೂಲ ಸೆಲೆಗಳಾಗಿವೆ. ತುಳುವರ ಲೋಕದೃಷ್ಟಿ, ವ್ಯವಸಾಯ ದೃಷ್ಟಿ ಹಾಗೂ ಪರಮಾರ್ಥ ಸಾಧನೆಯ ದೃಷ್ಟಿ ಚಿಂತನಾರ್ಹವಾಗಿದೆ.

ತುಳುವರು 'ದೇಹ ಮತ್ತು ಬುದ್ಧಿ'ಯನ್ನು ಉಪಯೋಗಿಸಿ ಮಾಡುವ ಎಲ್ಲ ಚಟುವಟಿಕೆಗಳ ಕುರಿತು ಡಾ. ರಾಜಶ್ರೀಯವರು ಇಲ್ಲಿ ಅವಲೋಕನ ನಡೆಸಿದ್ದಾರೆ. 'ಈ ನೆಲದ ಸಂಬಂಧ ಮತ್ತು ಮಹತ್ವವನ್ನು ಪ್ರಬಲ ತತ್ವವಾಗಿ ಮಂಡಿಸಲಾಗಿದೆ. ಹುಟ್ಟುವುದಕ್ಕಿಂತ ಮೊದಲಿನ ಲೋಕ, ಬದುಕನ್ನು ನಡೆಸುವ ಲೋಕ ಮತ್ತು ಸಾವಿನ ನಂತರದ ಲೋಕ ಈ ಮೂರು ಲೋಕಗಳಲ್ಲಿ ಬದುಕುವ ಲೋಕವೇ ಹೆಚ್ಚು ಮಹತ್ವದ್ದಾಗಿ ಪ್ರೀತಿ ಮತ್ತು ಸಂಭ್ರಮದಿಂದ ಕಾಣಲೇಬೇಕಾದ ಲೋಕವಾಗಿ ತುಳುವರು ಪರಿಭಾವಿಸಿದ್ದಾರೆ' ಎಂಬ ಲೇಖಕರ ಮಾತು ಗಮನಾರ್ಹವಾಗಿದೆ. ಕನ್ನಡ ಸಾಹಿತ್ಯ

ರಚನೆಯ ಸಂದರ್ಭದಲ್ಲಿ ಈ ಲೌಕಿಕ ಆಗಮಿಕ ದೃಷ್ಟಿಕೋನ ಬದುಕಿನ ಇಹ-ಪರ ಸಾಧನೆಗೆ ಇರುವ ಒಂದು ಮಾರ್ಗವೇ ಆಗಿದೆ. ಜೈನರ ಕಾವ್ಯದ, ಶರಣರ ವಚನದ, ದಾಸರ ಹಾಡಿನ ಈ ನಾಡಿನಲ್ಲಿ ಪ್ರಪಂಚ ದೃಷ್ಟಿ -ಪರಮಾರ್ಥ ದೃಷ್ಟಿ ಸಮರ್ಥವಾಗಿ ಬಿಂಬಿತವಾಗಿವೆ. ಒಂದು ಜನಾಂಗದ ಅಸ್ಮಿತೆಗೆ ಅವರ ಸಂಪ್ರದಾಯ, ಆಚರಣೆ ಹಾಗೂ ನಂಬಿಕೆಗಳು ಪ್ರಧಾನ ಭೂಮಿಕೆಯಲ್ಲಿ ಕೆಲಸ ಮಾಡುತ್ತವೆ. ರಾಜಶ್ರೀಯವರು 'ತುಳುವರ ನೆಲ, ದುಡಿಮೆ, ಕುಟುಂಬ, ಕಾಲ, ಸೃಷ್ಟಿ, ನಾಶ, ಬೇಟೆ, ಮದುವೆ' ಮೊದಲಾದ ಪರಿಕಲ್ಪನೆಗಳ ಕುರಿತು ಇಲ್ಲಿ ಮಾತನಾಡಿದ್ದಾರೆ.

ರಾಜಶ್ರೀಯವರ 'ತುಳು ಮೌಖಿಕ ಕಾವ್ಯ: ಬೇಟೆಯ ಪರಿಕಲ್ಪನೆ' ತುಳುವರ ಸಾಹಸ, ಪ್ರತಿಷ್ಠೆ ಹಾಗೂ ಯೋಧತ್ವದ ಪ್ರತೀಕವಾಗಿ, ಮನರಂಜನೆಯ ಮಾಧ್ಯಮವಾಗಿ ಗಮನ ಸೆಳೆಯುತ್ತದೆ. ಮಹಾಕಾವ್ಯಗಳಲ್ಲಿ ಬೇಟೆಯ ಪ್ರಕರಣ ರಾಜರುಗಳ ಎದೆಗಾರಿಕೆಯ ಕುರುಹಾಗಿ ಬಂದರೆ ಇಲ್ಲಿ ಜನತೆಯ ಬದುಕಿನ ಭಾಗವಾಗಿ ಬರುತ್ತದೆ. ಲೇಖಕರು ಇಲ್ಲಿ ಬೇಟೆಯನ್ನು ೧. ಆಚರಣಾತ್ಮಕ ನೆಲೆ, ೨. ಬೆಳೆಯ ರಕ್ಷಣೆ, ೩. ಸಾಹಸ, ಪ್ರತಿಷ್ಠೆ, ಶಕ್ತಿ ಪ್ರದರ್ಶನದ ನೆಲೆ, ೪. ಯುದ್ಧ ವಿದ್ಯೆಯ ಪರಿಣಿತಿ ಹಾಗೂ ಮನರಂಜನೆಯ ಭಾಗವಾಗಿ ಕಂಡಿದ್ದಾರೆ. ಕೋಟಿ ಚೆನ್ನಯ ಪಾಡ್ದನ, ಸಿರಿ ಪಾಡ್ದನ, ಕಲ್ಕುಡ-ಕಲ್ಲುರ್ಟಿ ಪಾಡ್ದನ, ಮುದ್ದಕಳಲ ಪಾಡ್ದನ, ಪಂಜುರ್ಲಿ ಪಾಡ್ದನ ಹೀಗೆ ವೈವಿಧ್ಯಮಯ ಪ್ರಸಂಗಗಳಲ್ಲಿ ತುಳುವರ ವೀರರ ಶಕ್ತಿ ಸಾಮರ್ಥ್ಯಗಳ ಪಾಡ್ದನಗಳು ಸೃಷ್ಟಿಯಾಗಿವೆ.

'ತಮ್ಮ ಯೋಧತ್ವದ ವೃತ್ತಿಯಲ್ಲಿ ಅಸಾಮಾನ್ಯ ಶೂರರಾಗಿ, ಸ್ವಾಭಿಮಾನಿಗಳಾಗಿ, ಅನ್ಯರಿಗೆ, ಅನ್ಯಾಯಕ್ಕೆ ತಲೆ ತಗ್ಗಿಸದೆ ಪ್ರತಿಭಟನೆ ಸಲ್ಲಿಸುವ ಪ್ರವೃತ್ತಿಯವರಾಗಿ ಕಾಣಿಸಿಕೊಳ್ಳುವ ಕೋಟಿ ಚೆನ್ನಯರ ಪಾಡ್ದನ ತುಳುವರ ಲೋಕದೃಷ್ಟಿಯನ್ನು ಬಿಂಬಿಸುತ್ತದೆ ಎಂದಿರುವ ಲೇಖಕಿ, ವೀರರ ಸಾಹಸದ ಜೊತೆಗೆ ಕೃಷಿ ಸಂಸ್ಕೃತಿಯ ಬೆಳವಣಿಗೆಯ ಕುರಿತು ಇಲ್ಲಿ ಅವಲೋಕನ ನಡೆಸಿದ್ದಾರೆ. ಪ್ರತಿ ಪಾಡ್ದನಗಳ ಹಿಂದೆ 'ಐತಿಹಾಸಿಕ-ಪೌರಾಣಿಕ' ವಿವರಗಳು ಸೇರಿವೆ. ಪರ್ಮಲೆ ಬಲ್ಲಾಳನ ಕಥೆ, ಕೃಷ್ಣ ಕಥೆ, ಈಶ್ವರನ ಹಂದಿ ಬೇಟೆಯ ಕಥೆ ಮೊದಲಾದವು ಸೃಷ್ಟಿ-ನಾಶ-ಮರುಸೃಷ್ಟಿಯ ಬಗೆಗೆ ತುಳುವರ ಲೋಕದೃಷ್ಟಿಯನ್ನು ಅನಾವರಣಗೊಳಿಸುತ್ತವೆ. ಇದಕ್ಕೆ ಪೂರಕವಾಗಿ ಬರಗೂರರ ಸಂಸ್ಕೃತಿ ಉಪ-ಸಂಸ್ಕೃತಿ ಹಾಗೂ ಪುರುಷೋತ್ತಮ ಬಿಳಿಮಲೆಯವರ ಬೇಟೆಯ ವ್ಯಾಖ್ಯಾನ, ಕ್ರೀಡೆ ಹಾಗೂ ಬೇಟೆಗಳ ಕುರಿತು ನರೇಂದ್ರ ರೈ ಹಾಗೂ ಕೆ. ಚಿನ್ನಪ್ಪ ಗೌಡರ ವ್ಯಾಖ್ಯಾನಗಳು ಗಮನ ಸೆಳೆಯುತ್ತವೆ.

ತುಳುವರ ಪಾಡ್ದನಗಳಲ್ಲಿ ಕಂಡುಬರುವರ ಲೌಕಿಕ ದೃಷ್ಟಿ, ಪ್ರಯೋಜನ ದೃಷ್ಟಿ ಹಾಗೂ ಜನಾಂಗೀಯ ಜಾಣ್ಮೆಗಳು ಎದ್ದು ಕಾಣುವಂತಿದ್ದು 'ಗಡಿಯ ರಕ್ಷಣೆ, ಕೃಷಿಯ ರಕ್ಷಣೆ, ಪ್ರಭುತ್ವದ ದರ್ಶನ, ಸಾಹಸದ ಅಭಿವ್ಯಕ್ತಿಯಾಗಿ ಗಮನ ಸೆಳೆದಿವೆ ಎಂಬುದು ಮಹತ್ವದ್ದಾಗಿದೆ. ತಮ್ಮ ನಿರೂಪಣೆಗೆ ತಕ್ಕ ಸಮರ್ಥನೆಯನ್ನು ಬೇಟೆ ಜಾನಪದಕ್ಕೆ

ಸಂಬಂಧಿಸಿದ ವಿವಿಧ ಗ್ರಂಥಗಳಿಂದ ಪಡೆದುಕೊಂಡಿದ್ದು ಅವರ ಶಿಸ್ತಿನ ಅಧ್ಯಯನವನ್ನು ಎತ್ತಿತೋರಿದೆ.

ಡಾ. ರಾಜಶ್ರೀಯವರ 'ನೇಜಿಯ ಹಾಡುಗಳು : ಸಂದರ್ಭ ಮತ್ತು ಪ್ರದರ್ಶನ'ವೆಂಬ ಲೇಖನ ತುಳು ಕೃಷಿಕರ ಭತ್ತದ ಕೃಷಿಯ ರೀತಿ-ನೀತಿಯನ್ನು ಕಣ್ಮುಂದೆ ತರುತ್ತದೆ. 'ಹರಿವಾಣದಂತೆ ಉರುಟಾದ, ಬಂಗಾರದ ನಾಣ್ಯದಂತೆ ಸುಂದರವಾದ ತುಳುನಾಡು ಸಹ್ಯಾದ್ರಿ, ನೀಲ ಸಮುದ್ರ, ಚಂದ್ರಗಿರಿ ಹೊಳೆ, ಗಂಗೊಳ್ಳಿ ಹೊಳೆಗಳಿಂದ ನಾಲ್ಕು ದಿಕ್ಕುಗಳನ್ನು ವ್ಯಾಪಿಸಿದ್ದು ಭೌಗೋಳಿಕ ವೈಶಿಷ್ಟ್ಯದೊಂದಿಗೆ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಹೊಂದಿದೆ. ಈ ಲೇಖನದಲ್ಲಿ ತುಳು ಜಾನಪದದ ಸ್ವರೂಪ, ಸಾಂಸ್ಕೃತಿಕ ಚಿಂತನೆ, ಬಹುಭಾಷಿಕರ ತಾಣವಾದರೂ ತುಳು ಮಾತೃಭಾಷೆಯಾಗಿ ಪ್ರಧಾನ ಭೂಮಿಕೆಯಲ್ಲಿ ಹೃದಯ ಬೆಸೆದ ರೀತಿ, ಗದ್ದೆ ಉಳುವಾಗ, ನೇಜಿ (ಸಸಿ) ತೆಗೆಯುವಾಗ, ನೇಜಿ ನೆಡುವಾಗ, ಭೂತಾರಾಧನೆಯ ಸಂದರ್ಭದಲ್ಲಿ ಜನರ ಕಷ್ಟ-ಸುಖ, ಸಂತೋಷ-ಸಂಭ್ರಮವಾಗಿ ಕೃಷಿಕರು ಪದ ಕಟ್ಟಿ ಹಾಡುವ ರೀತಿಯನ್ನು ಗಮನಕ್ಕೆ ತರುತ್ತದೆ. 'ಬೇಸಾಯವು ತುಳು ಜನಪದರ ಸಾಂಪ್ರದಾಯಿಕ ಕಸುಬಾಗಿರುವಂತೆ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಕಸುಬು ತುಳುವರ ಭಾವನಾತ್ಮಕ ಸಂಬಂಧಗಳನ್ನು ಕೂಡ ನಿರೂಪಿಸುತ್ತದೆ' ಎನ್ನುವ ಲೇಖಕಿ ತಮ್ಮ ಆಲೋಚನೆಗೆ ಪೂರಕವಾಗಿ ಶಿವರಾಮ ಕಾರಂತ, ವಿವೇಕ ರೈ, ಅಮೃತ ಸೋಮೇಶ್ವರ, ಟಿ. ಕೇಶವಭಟ್ಟ ಮೊದಲಾದ ವಿದ್ವಾಂಸರ ಹೇಳಿಕೆಗಳನ್ನು ಬಳಸಿಕೊಂಡಿದ್ದಾರೆ.

ತುಳು ಕಬಿತ(ಕವಿತೆ)ಗಳು ದುಡಿಮೆಯ ದಕ್ಷತೆ ಹೆಚ್ಚಿಸುವಲ್ಲಿ, ಆಯಾಸ ಮರೆಸುವಲ್ಲಿ, ಆಹ್ಲಾದಗೊಳಿಸುವಲ್ಲಿ, ಏಕತಾನತೆ ಹೋಗಲಾಡಿಸುವಲ್ಲಿ, ಜಾತಿ, ಮತ, ಭೇದ ಹೋಗಲಾಡಿಸುವಲ್ಲಿ ಪ್ರಧಾನ ಭೂಮಿಕೆಯಾಗಿ ಕಾರ್ಯ ನಿರ್ವಹಿಸುತ್ತವೆ. 'ಗದ್ದೆಯಲ್ಲಿ ಸಾಲಾಗಿ ನಿಂತು ಬೆಳಿಗ್ಗೆಯಿಂದ ಸಂಜೆಯವರೆಗೂ ನೇಜಿ ನೆಡುವ ಹೆಂಗಳೆಯರು ಕಬಿತಗಳನ್ನು ಹಾಡುತ್ತಾರೆ. ಅವು ಅವರ ಅನುಭವದ ವಿಸ್ತಾರ, ಜಾಣ್ಮೆ, ಹಾಸ್ಯ ಪ್ರಜ್ಞೆ, ನೆನಪಿನ ಶಕ್ತಿಯನ್ನು ಅನುಸರಿಸಿ ಬರುತ್ತವೆ. ಆಭರಣ, ಊರಿನ ಮರ, ಹೂ ಇತ್ಯಾದಿಗಳ ಮೇಲಿನ ಕಬಿತಗಳು ದುಡಿವ ವರ್ಗದ ದುಃಖ ದುಮ್ಮಾನ, ಸುಖ-ಸಂತೋಷ, ಆಸೆ-ಆಶೋತ್ತರ, ವಿನೋದ ವಿಡಂಬನೆಗಳಿಗೆ ಧ್ವನಿಯಾಗಿವೆ (ಪು. ೪೦) ಎಂದಿರುವುದು ಗಮನಾರ್ಹವಾಗಿದೆ. ಈ ಲೇಖನದಲ್ಲಿ ರಾಜಶ್ರೀಯವರು ತುಳು ಕಬಿತಗಳ ಸಂದರ್ಭ ಸೃಷ್ಟಿ, ಉಳಿವಿನ ದೃಷ್ಟಿ, ಪ್ರದರ್ಶನ ಸಿದ್ಧಾಂತಗಳ ಅಗತ್ಯತೆಯ ಕುರಿತು ಒತ್ತು ಕೊಟ್ಟಿದ್ದಾರೆ.

ಪರ್ಯಾಯ ಸಂಸ್ಕೃತಿಯ ನಿರ್ವಚನ ಎಂಬ ಅವರ ತೃತೀಯ ಲೇಖನ ಜಾಗತೀಕರಣದ ಸಂದರ್ಭದಲ್ಲಿ ದೇಸಿ ಸಂಸ್ಕೃತಿಯ ಉಳಿವಿನ ಅಗತ್ಯತೆಯನ್ನು ಎತ್ತಿ ತೋರಿದೆ. ಕೃಷಿ ಸಂಸ್ಕೃತಿಯನ್ನು ಹೊರತುಪಡಿಸಿ, ಆರಾಧನೆ, ಬೇಟೆ, ದುಡಿಮೆ ಜೀವನಾವರ್ತನ ಆಚರಣೆಗಳಾದ ಸೀಮಂತ, ಬಾಣಂತನ, ಮದುವೆ ಮೊದಲಾದವುಗಳು ಪ್ರಕಟಪಡಿಸುವ 'ಲೋಕದೃಷ್ಟಿ'ಯ ಕುರಿತು ಇಲ್ಲಿ ಮಾತನಾಡಿದ್ದಾರೆ.

ತುಳುವರಿಗೆ ನೆಲದ ಬದುಕು ಮುಖ್ಯವೇ ಹೊರತು ಬಾನಿನ ಅಗೋಚರ ಶಕ್ತಿಗಳಲ್ಲ. ಬಾನಿನ ಬಗ್ಗೆ ಭಯ ಭಕ್ತಿಗಳಿದ್ದರೂ ಅವರು ನೆಲವನ್ನು ತಾಯಿಯಂತೆ ಕಂಡಿದ್ದಾರೆ. ಜೀವನದ ವೈವಿಧ್ಯಮಯ ಸಂದರ್ಭಗಳಲ್ಲಿ ಈ ಲೋಕದ ಬದುಕನ್ನು ಗೌರವದಿಂದ ಎತ್ತಿಹಿಡಿದಿದ್ದಾರೆ. ತುಳುವರ ಮೌಖಿಕ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ಆಚರಣೆಗಳು, ರಂಗ ಪ್ರದರ್ಶನ ಕಲೆಗಳು ಅಧ್ಯಯನಯೋಗ್ಯವಾಗಿವೆ.

ತುಳುನಾಡಿನ ಗೌಡ, ಬಿಲ್ಲವ, ಮುಗೇರ, ಹವ್ಯಕ, ಬ್ಯಾರಿ, ಭೈರ, ಮರಾಠಿ, ನಲಿಕೆ ಮೊದಲಾದ ಸಮುದಾಯಗಳ ಸಾಂಸ್ಕೃತಿಕ ಆಚರಣೆಗಳಲ್ಲಿ ದೇಶಿ ಚಿಂತನೆ ಅಡಗಿದೆ. ಪರ್ಯಾಯ ಸಂಸ್ಕೃತಿಗೂ ದೇಶಿ ಚಿಂತನೆಗೂ ಬೇರ್ಪಡಿಸಲಾಗದ ಸಂಬಂಧವಿದೆ. ಜನಾಂಗೀಯ ಅಸ್ಮಿತೆಗೆ ಪರ್ಯಾಯ ಸಂಸ್ಕೃತಿಯ ಚಿಂತನೆ ಮುಖ್ಯವಾಗಿದೆ. 'ಜಾಗತೀಕರಣ, ಉದಾರೀಕರಣ ಇತ್ಯಾದಿ ಆರ್ಥಿಕ ಮತ್ತು ರಾಜಕೀಯ ಪರಿಭಾಷೆಗಳು ಒಳಗೊಳ್ಳುವ ಆಧುನೀಕರಣದ ಪ್ರಸ್ತುತ ಸನ್ನಿವೇಶದಲ್ಲಿ ಇಡಿಯ ಜಗತ್ತು ಏಕಮಾದರಿ ಮತ್ತು ಏಕತೆಯ ಅಪಾಯದ ಕಡೆ ಚಲಿಸುತ್ತದೆ(ಪು. ೫೩) ಎಂಬ ಲೇಖಕಿಯು ಆತಂಕ ಸತ್ಯವಾಗಿದೆ. 'ಅಭಿನವ' ತ್ರೈಮಾಸಿಕದಲ್ಲಿ ಜಾಗತೀಕರಣದಿಂದಾಗುವ ಅಪಾಯಗಳ ಕುರಿತು ಮುರಾರಿ ಬಲ್ಲಾಳ್ ಚಿಂತಿಸಿದ್ದಾರೆ. ಹಾಗೆ ರಾಜಶ್ರೀಯವರು ಈ ಲೇಖನದಲ್ಲಿ 'ಆಧುನೀಕರಣಗೊಂಡ ಜಗತ್ತಿನಲ್ಲಿ ಸ್ಪರ್ಧೆ ಮಾತ್ರ ಇರುತ್ತದೆ. ಅಲ್ಲಿ ಪ್ರದರ್ಶನಕ್ಕೆ ಅವಕಾಶವಿಲ್ಲ. ಈ ಸ್ಪರ್ಧೆ ಅಸಮಾನರ ನಡುವೆ ನಡೆವಂತೆ ನೋಡಿಕೊಳ್ಳಲಾಗುತ್ತದೆ. ದುರ್ಬಲರು ಇನ್ನಷ್ಟು ದುರ್ಬಲರಾಗುತ್ತಾರೆ. 'ಬಳಸು' ಮತ್ತು 'ಎಸೆ' ಎಂಬ ಪ್ರವೃತ್ತಿ ವಸ್ತು ಹಾಗೂ ಮನುಷ್ಯರ ಸಂಬಂಧದಲ್ಲಿಯೂ ಕಾಣಿಸಿಕೊಳ್ಳುತ್ತದೆ(ಪು. ೫೩) ಎಂದಿರುವುದು ಜಾಗತೀಕರಣ ತಂದಿಡುವ ಅಪಾಯಗಳ ಕುರಿತು ಗಮನ ಸೆಳೆಯುತ್ತದೆ. ರಹಮತ್ ತರೀಕೆರೆ, ಸುಬ್ಬಣ್ಣ ರೈ ಅವರ ವ್ಯಾಖ್ಯಾನ ಗಳೊಂದಿಗೆ ಲೇಖಕಿ ಪರ್ಯಾಯ ಸಂಸ್ಕೃತಿಯ ಕುರಿತು ಆಲೋಚನೆಗಳನ್ನು ಕಟ್ಟಿಕೊಟ್ಟಿರುವುದು ಮಹತ್ವದ್ದಾಗಿದೆ.

'ಮೌಖಿಕ ಮಹಾಕಾವ್ಯ ಸಿರಿ : ರಾಜಕೀಯ ಸಂಘರ್ಷ' ಎಂಬ ನಾಲ್ಕನೆಯ ಲೇಖನ 'ಖಂಡಕಾವ್ಯ', ಮಹಾಕಾವ್ಯ, ಐತಿಹ್ಯ, ಪುರಾಣ, ಆರಾಧನ ಪಠ್ಯ, ಸಾಂಸ್ಕೃತಿಕ ಪಠ್ಯವಾಗಿ ಪರಿಭಾವಿಸಲಾಗಿದೆ. ದೇಸಿ-ವಿದೇಶಿ ವಿದ್ವಾಂಸರ ಮಹಾಕಾವ್ಯ ಆಲೋಚನೆ ಯೊಂದಿಗೆ ತಳುಕು ಹಾಕಿ ನೋಡಿದ ಲೇಖಕಿ 'ಸಿರಿ ಪಾಡ್ದನವು ಕೃಷಿಕರಾದ ಬಂಟ ಜಾತಿಯ ಕುಟುಂಬವೊಂದರ ನಾಲ್ಕು ತಲೆಮಾರುಗಳ ಏಳುಬೀಳುಗಳನ್ನು ವಿವರಿಸುವ ಸುದೀರ್ಘ ಪಠ್ಯ. ಹೆಣ್ಣು ತನಗಾದ ಅನ್ಯಾಯಕ್ಕಾಗಿ ಹೋರಾಡಿದುದನ್ನು, ಪ್ರತಿಭಟಿ ಸಿದುದನ್ನು ಸಿರಿ ಪಾಡ್ದನದಲ್ಲಿ ಗಮನಿಸಬಹುದು'(ಪು. ೫೯) ಎಂದಿರುವುದು ತುಳುವರ ಮಹಾಕಾವ್ಯದ ವಸ್ತುವನ್ನು ಕುರಿತದ್ದಾಗಿದೆ. ಪುರುಷನ ದೃಷ್ಟಿಯಲ್ಲಿ, ಆತನ ಅಧೀನಕ್ಕೆ ಸಿಗದೆ, ಎಲ್ಲೆ ಮೀರಿದ ಹೆಣ್ಣಾಗಿ, ಸಂಸಾರ ಮೀರಿದ ಪದಾರ್ಥವಾಗಿ, ಶುಂಠಿ ಮೀರಿದ

ಕಷಾಯವಾಗಿ ಕಾಣಿಸುತ್ತಾಳೆ(ಪು. ೫೯) ಎಂಬುದು ತುಳು ಸಿರಿಯ ಘಾಟಿತನಕ್ಕೆ ಸಾಕ್ಷಿಯಾಗಿದೆ. ಪತ್ತೇರಿಕೂಟದಲ್ಲಿ (ಪಂಚಾಯಿತಿ ಕಮಿಟಿ) ಸಿರಿಯು ನಡೆಸಿದ ಸಂಘರ್ಷ, ಕಾಂತಪೂಂಜನ ನೈತಿಕ ಅಧಃಪತನ, ಗಂಡ-ಹೆಂಡತಿಯರ ನಡುವಿನ ಸಂಘರ್ಷಕ್ಕೆ ಕಾರಣವಾಗುವುದಲ್ಲದೆ ಅದು ರಾಜಕೀಯದ, ಆಡಳಿತದ, ಅಧಿಕಾರದ ಪ್ರಶ್ನೆಯಾಗಿಯೂ ಮುಂದುವರೆಯುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ಹಿಂದೆ ಸರಿದು ಮಾತೃಪ್ರಧಾನ ವ್ಯವಸ್ಥೆ ಪ್ರಧಾನವಾಗುತ್ತದೆ. 'ತನ್ನನ್ನು ಅಂಚಿಗೆ ಸರಿಸುವವರ ವಿರುದ್ಧದ ದನಿ ಎತ್ತುವ ರೀತಿ, ಪುರುಷರು ಮಾಡುವುದು ತಪ್ಪು ಎಂದು ದನಿ ಎತ್ತುವ ಮೂಲಕ ಇದು ತಪ್ಪು, ಇದು ಸರಿ ಅನ್ನುವುದೂ ಒಂದು ರಾಜಕೀಯವೇ' (ಪು. ೬೩) ಎಂಬ ಲೇಖಕಿಯ ನಿರ್ಣಯ ಚಿಂತನೆಗೆ ತೊಡಗಿಸುತ್ತದೆ.

'ಕಬಿತ'ಗಳು ಸ್ತ್ರೀ ಸಂವೇದನೆಯ ನೆಲೆಗಳು ಎಂಬ ರಾಜಶ್ರೀಯವರ ಐದನೆಯ ಲೇಖನ ಗದ್ಯ-ಪದ್ಯ ರೂಪದಲ್ಲಿರುವ ಕಬಿತಗಳಲ್ಲಿ ಜನಪದರ ಕಲ್ಪನೆ, ವರ್ಣನೆಗಳು, ರೂಪಕಗಳು, ಪದವಿನ್ಯಾಸ, ಲಯಗಳ ಕುರಿತು ಗಮನ ಸೆಳೆಯುತ್ತದೆ. ಭೂತಾರಾಧನೆಯ ಸಂದರ್ಭದಲ್ಲಿ ನೇಜಿ ನೆಡುವಾಗ, ನೇಜಿ ತೆಗೆಯುವಾಗ, ಭತ್ತ ಕುಟ್ಟುವಾಗ, ಉಳುವಾಗ, ಗಾಡಿ ಹೊಡೆಯುವಾಗ, ತೊಟ್ಟಿಲು ತೂಗುವಾಗ, ಸಂತೋಷದಿಂದ ಕುಣಿಯುವಾಗ (ಪು. ೬೫) ಕಬಿತಗಳ (ಕವಿತೆ) ಸೃಷ್ಟಿಯಾಗಿದೆ. ಇಲ್ಲಿ ಹೆಣ್ಣಿನ ಪ್ರತಿಭೆ, ಜಾಣತನ, ಅನುಭವ ವಿಸ್ತಾರ, ಹಾಸ್ಯ ಪ್ರಜ್ಞೆ ಎದ್ದು ಕಾಣುತ್ತವೆ ಎನ್ನುವ ಲೇಖಕಿ ತ್ವರಿತಗತಿಯಲ್ಲಿ ಕೆಲಸ ಸಾಗಿಸಲು, ಒಡೆಯರಿಗೆ ಲಾಭದಾಯಕವಾಗಲು ತುಳು ಹೆಣ್ಣುಮಕ್ಕಳು ಸಮೃದ್ಧಿ, ಸಾಮರಸ್ಯದ ಆಶಯವನ್ನಿಟ್ಟುಕೊಂಡು ಹಾಡುತ್ತಾರೆ ಎಂದಿದ್ದಾರೆ.

ಕಬಿತಗಳು ಕೇವಲ ಮನೋರಂಜನೆಯ ಸಾಧನವಾಗದೆ, ಜಾನಪದ ಗರತಿಯರ ಆಸೆ-ಆಕಾಂಕ್ಷೆ, ನೋವು-ಕನಸು, ಅಪೇಕ್ಷೆ, ಪುರುಷ ಪ್ರಧಾನ ವ್ಯವಸ್ಥೆಯ ನಿರಾಕರಣೆ, ಆಕ್ರೋಶದ ದನಿಯಾಗಿ ಮೂಡಿ ಬಂದಿರುವುದು ಗಮನಾರ್ಹವಾಗಿದೆ. ಇದಕ್ಕೆ ಪೂರಕವಾಗಿ ಲೇಖಕಿ ಸ್ತ್ರೀವಾದಿ ಚಿಂತನೆಗೆ ಸಿರಿಪಾಡ್ದನ ಕೂಡ ಆಕರ ಸಾಮಗ್ರಿಯಾಗಿದೆ ಎಂದಿರುವುದು ಮಹತ್ವದ್ದಾಗಿದೆ. ರಾಜಶ್ರೀಯವರು ವಿಶ್ವಾಸಾರ್ಹ ಮೂಲಗಳಿಂದ, ಕೃತಿಗಳಿಂದ ತಮ್ಮ ಆಲೋಚನೆಗಳಿಗೆ ಸಮರ್ಥನೆ ಒದಗಿಸಿಕೊಂಡಿರುವುದರಿಂದ ಅವರ ಚಿಂತನೆಗಳಲ್ಲಿ ಮೌಲಿಕತೆಯಿದೆ.

ಡಾ. ರಾಜಶ್ರೀಯವರ ಆರನೆಯ ಲೇಖನ 'ಸಂಸ್ಕೃತಿ ಚಿಂತನೆ: ಹೆಣ್ಣ'ನ್ನು ಕುರಿತಾಗಿದೆ. ಸಮಾಜದ ಒಳಿತಿಗಾಗಿ ಹೋರಾಡಿದ ಹಿರಿಯರ ಬಗ್ಗೆ, ಅವರ ಆಚಾರ-ವಿಚಾರ, ಅವರ ಜೀವನ ಕ್ರಮವನ್ನು ತಿಳಿಸುವ, ಮುಂದಿನ ಪೀಳಿಗೆಗೆ ಅದನ್ನು ಮರೆಯದಂತೆ ಕೊಂಡೊಯ್ಯುವ, ಪೀಳಿಗೆಯಿಂದ ಪೀಳಿಗೆಗೆ ದಾಟಿಸುವ ಮಹತ್ವದ ಕೆಲಸವನ್ನು ಹೆಂಗಸರು ಮಾಡುತ್ತಾರೆ(ಪು. ೭೬) ಎಂದಿರುವುದು ಜಾನಪದ ಹೆಣ್ಣು ಮಕ್ಕಳ ಅಸ್ತಿತ್ವ ಅಸ್ಮಿತೆಗೆ ತಳಹದಿಯಾಗಿದೆ. ಭೂತಾರಾಧನೆಯ ಹಿಂದಿನ ಸಂಸ್ಕೃತಿ, ಕೃಷಿ ಸಂಸ್ಕೃತಿ,

ಕುಲಕಸುಬುಗಳಲ್ಲಿ ಹೆಂಗಳೆಯರ ದುಡಿತ, ಕಲ್ಲುರ್ಟಿ ಶಿಲ್ಪಿ ಅಣ್ಣನಿಗೆ ಅನ್ಯಾಯವಾದಾಗ ಧೈರ್ಯ ತುಂಬಿದ ರೀತಿ, ಆಸ್ತಿ ಅಧಿಕಾರಕ್ಕೆ ಹೆಣ್ಣು ಬಾಧ್ಯಸ್ಥಳಾಗುವ, ಮಾತೃಮೂಲೀಯ ಸಂಸ್ಕೃತಿಯ ಬಗ್ಗೆ ಲೇಖಕಿ ಇಲ್ಲಿ ವಿವರಣೆ ನೀಡಿದ್ದಾರೆ. 'ತುಳುನಾಡಿನಲ್ಲಿ ಬೇರೆ ಬೇರೆ ವರ್ಗದ ಬೇರೆ ಬೇರೆ ಜಾತಿಯ ಹೆಂಗಸರು ಇದ್ದರೂ ಎಲ್ಲರನ್ನು ಒಟ್ಟಾಗಿ ಪರಿಗಣಿಸ ಬೇಕಲ್ಲದೆ ಅದನ್ನು ಒಂದು ವರ್ಗದ ಅಥವಾ ಸಮುದಾಯದ ಹಿನ್ನೆಲೆಯಲ್ಲಿ ಹೇಳಲಾಗುವುದಿಲ್ಲ (ಪು. ೮೦) ಎಂಬುದು ರಾಜಶ್ರೀಯವರ ವ್ಯಾಪಕ ದೃಷ್ಟಿಕೋನವನ್ನು ಎತ್ತಿತೋರುತ್ತದೆ. ದುಡಿತಕ್ಕೆ ಇಂದು ಜಾಗತೀಕರಣದ ವ್ಯಾಪ್ತಿಯಲ್ಲಿ ಅರ್ಥ ಬದಲಾಗುತ್ತಿದೆ. ವಾಣಿಜ್ಯ ಸಂಸ್ಕೃತಿಯಲ್ಲಿ ಜಗತ್ತೇ ಕಿರಿದಾಗಿರುವಾಗ ತುಳು ಸಂಸ್ಕೃತಿಯ ಮೇಲೂ ಅದರ ಪರಿಣಾಮ ಪ್ರಭಾವಗಳಾಗಿವೆ. ಈ ಕುರಿತು ಲೇಖಕಿ ತುಳು ಪಾಡ್ದನ, ಸಿರಿಪಾಡ್ದನ, ಸ್ತ್ರೀವಾದಿ ನೆಲೆಗಳಿಂದ ಅವಲೋಕಿಸಿರುವುದು ಅವರ ಪ್ರೌಢ ಆಲೋಚನೆಗೆ ಸಾಕ್ಷಿಯಾಗಿದೆ.

ಉಳುವಾಗ ಹೇಳುವ 'ಉರಲ್' ದ್ವಿಪದಿಯಾಗಿದ್ದು ತುಳು ಜನಪದರ 'ಒಡಲದನಿ' ಯಾಗಿ ಕಾಣಿಸಿಕೊಂಡ ರೀತಿಯನ್ನು ಲೇಖಕಿ ಏಳನೆಯ ಲೇಖನದಲ್ಲಿ ಚಿಂತಿಸಿದ್ದಾರೆ. ಗದ್ದೆ ಉತ್ತ ಬಳಿಕ ಎತ್ತುಗಳನ್ನು ಗದ್ದೆಯಿಂದ ಮೇಲೆ ಅಟ್ಟಿದ ನಂತರ 'ಉರಲ್' ಹಾಡು ಹಾಡುತ್ತಾರೆ. ಕೋಣಗಳು ಗದ್ದೆಯಲ್ಲಿದ್ದಾಗ ಉರಲ್ ಹಾಡಬಾರದು ಎನ್ನುವ ಲೇಖಕಿ 'ಗಾಡಿ ಎಳೆಯುವ ಎತ್ತುಗಳಿಗೆ ಉತ್ತೇಜನವನ್ನು, ಹೊಸ ಚೈತನ್ಯ ನೀಡಿ, ಅವು ಲವಲವಿಕೆಯಿಂದ ಮುಂದೆ ಹೋಗಲು 'ಉರಲ್' ಹಾಡು ಸಹಕರಿಸುತ್ತವೆ. ಇಲ್ಲಿ ಶಬ್ದಾರ್ಥದ ಸೊಗಸು, ನವುರಾದ ಹಾಸ್ಯ, ಪಶು-ಪಕ್ಷಿಯ ಸ್ಮರಣೆ ಹಾಗೂ ಅನ್ಯಸಂಸ್ಕೃತಿಯ ಜನರ ಕುರಿತ ವಿಂಡಬನೆ(ಪು. ೮೫) ಇದೆ ಎಂದಿರುವುದು ತುಳುವರ ಸ್ವಭಾವ, ಸೂಕ್ಷ್ಮತೆಗೆ ಕನ್ನಡಿ ಹಿಡಿದಿದೆ.

'ಉರಲ್'ಗಳಲ್ಲಿ ಎತ್ತು-ಕೋಣಗಳ ದುಡಿತಕ್ಕೆ ಪ್ರಸಂಸೆ, ದಲಿತ ವರ್ಗದ ಹೆಣ್ಣು-ಗಂಡು ಒಡೆಯನ ಕುರಿತು ವ್ಯಕ್ತಪಡಿಸುವ ಪ್ರಶಂಸೆ, ತುಳುವರ ಜನಪ್ರಿಯ ಕ್ರೀಡೆ ಕಂಬಳದ ಕುರಿತ ಪ್ರಸ್ತಾಪ, ಪ್ರಕೃತಿಯ ವಿಕೋಪದಲ್ಲಿ ಗಮನಿಸುವ ವ್ಯಕ್ತಿ, ವಸ್ತು, ಪಶುಪಕ್ಷಿಗಳ ಕುರಿತು ಉರಲ್‌ಗಳು ಗಮನ ಸೆಳೆಯುತ್ತವೆ. 'ಉರಲ್'ನ ಎಲ್ಲ ಹಾಡು ಗಳಿಗೂ ಸಂದರ್ಭ, ಸನ್ನಿವೇಶಗಳೇ ಮೂಲವಾಗಿದ್ದು 'ನಿಜವಾದ ಸಂದರ್ಭವಿಲ್ಲದಿದ್ದರೆ' ಅವು ಕೇವಲ ಹಾಡು ಅಥವಾ ಕುಣಿತದ ಹಾಡಾಗಿ ಫಲವಂತಿಕೆ ಇರಲಾರದು' ಎಂದು ರಾಜಶ್ರೀ 'ಉರಲ್' ಹಾಡುವ ಸಂದರ್ಭಗಳ ಮಹತ್ವವನ್ನು ಎತ್ತಿ ತೋರಿದ್ದಾರೆ.

ಶಿಷ್ಟ ಸಾಹಿತ್ಯಕ್ಕಿಂತ ಜಾನಪದ ಇಂದು ವಿಶ್ವವ್ಯಾಪ್ತಿಯಾಗಿದ್ದು ಅದರ ವಸ್ತುನಿಷ್ಠ ವಿವೇಚನೆ ವಿದ್ವಾಂಸರ ಪ್ರಮುಖ ಗುರಿಯಾಗಿದೆ. ಜೀ.ಶಂ.ಪ. ಅವರು 'ಪ್ರತಿಯೊಂದು ರಾಷ್ಟ್ರವೂ ತನ್ನ ಪ್ರೌಢ ಸಾಹಿತ್ಯ ಪರಂಪರೆಯ ಶ್ರೀಮಂತ ಭಂಡಾರನ್ನು ಪಡೆದಿರುವಂತೆ ಅಪೂರ್ವವಾದ ಜನಪದ ಸಾಹಿತ್ಯ ಶ್ರೀಯನ್ನು ತನ್ನ ಕಣಜದಲ್ಲಿ ತುಂಬಿಕೊಂಡಿರುತ್ತದೆ"

ಎಂದಿರುವುದು ಜಾನಪದ ಅಧ್ಯಯನಕ್ಕೆ ಪ್ರೇರಣೆ ನೀಡಿದೆ. ಅಲ್ಲಿನ ರೀತಿ-ರಿವಾಜು, ನಂಬಿಕೆ, ಆಚರಣೆಗಳಿಗೆ ತನ್ನದೇ ಆದ ಮಹತ್ವವಿದೆ. ರಾಜಶ್ರೀಯವರ 'ಜಾನಪದದಲ್ಲಿ ಕಾಗೆ' ಎಂಬ ಎಂಟನೆಯ ಲೇಖನ ಕಾಗೆ ಕುರಿತ ಪರಿಕಲ್ಪನೆಯನ್ನು ಒಳಗೊಂಡಿದೆ.

ವಿಷಯನಿಷ್ಠ ಜಾನಪದಕ್ಕೆ ಆಧಾರವಾಗಿ ನಡೆಸಿದ ಈ ಚಿಂತನೆಯಲ್ಲಿ ಕಾಗೆಯ ಭೌತಿಕ ಲಕ್ಷಣ, ಅದರ ಕುರಿತ ತುಳು ಜನಪದರ ನಂಬಿಕೆಗಳು, ವೈದ್ಯ ಪದ್ಧತಿಗಳು, ಒಗಟು, ಗಾದೆ, ಕಥೆ ಇತ್ಯಾದಿಗಳನ್ನು ಬಳಸಿಕೊಂಡು ಲೇಖಕಿ ಅಧ್ಯಯನಪೂರ್ಣ ಮಾಹಿತಿ ಒದಗಿಸಿದ್ದಾರೆ. ಕಾಗೆ ಪ್ಯಾಸರೀ ಫಾರ್ಮಿಸ್ ಗಣದ ಕಾರ್ವಿಡೀ ಕುಟುಂಬಕ್ಕೆ ಸೇರಿದ ಕಾರ್ವಸ್ ಜಾತಿಯ ಹಕ್ಕಿ(ಪು. ೯೪) ಎನ್ನುವ ಲೇಖಕಿ ಅದರ ಆಕಾರ, ಬಣ್ಣ, ವಸತಿ, ಆಹಾರ, ಸಾಂಘಿಕ ಬದುಕು ಮೊದಲಾದ ವಿಷಯಗಳನ್ನು ಅವಲೋಕಿಸಿ ರುವರಲ್ಲದೆ ಅದಕ್ಕೆ ಸಂಬಂಧಿಸಿದ ಪಾಲ್ತಾಡಿ ರಾಮಕೃಷ್ಣ ಆಚಾರ್ ವ್ಯಾಖ್ಯಾನಿಸಿದ ಅರ್ಥದ ಪಟ್ಟಿಯನ್ನೇ ಒದಗಿಸಿದ್ದಾರೆ. ಪುರಾಣಗಳಲ್ಲಿ, ಆಚರಣೆಗಳಲ್ಲಿ, ನಂಬಿಕೆಗಳಲ್ಲಿ, ಜನಪದ ವೈದ್ಯದಲ್ಲಿ, ಜನಪದ ಆಟದಲ್ಲಿ, ಬೈಗುಳದಲ್ಲಿ, ಜನಪದ ಗೀತೆಗಳಲ್ಲಿ ಕಾಗೆಯ ಕುರಿತಂತೆ ವಿಶಿಷ್ಟ ವಿವರಣೆ ನೀಡಿದ್ದಾರೆ. ಅಷ್ಟೇ ಅಲ್ಲದೆ ಕಾಗೆ-ಗಿಳಿ ಜನಪದ ಆಟದಲ್ಲಿ ಜಾತಿ ವ್ಯವಸ್ಥೆ, ಸ್ಪೃಶ್ಯ-ಅಸ್ಪೃಶ್ಯ ಭಾವನೆಗಳಿಗೆ ಕಾರಣವಾಗುವ ರೀತಿಯ ಕುರಿತು ವಿಶ್ಲೇಷಿಸಿದ್ದಾರೆ. ಪಿತೃಗಳ ಪಿಂಡವನ್ನು ತಿನ್ನುವ ಕಾಗೆ, ಕಥೆಗಳಲ್ಲಿ ಪಾಪದ ಪ್ರತಿರೂಪವಾಗಿ ಬರುವ ಕಾಗೆ, ಗಾದೆಗಳಲ್ಲಿ, ಒಗಟುಗಳಲ್ಲಿ, ತುಳು ಕತೆಗಳಲ್ಲಿ ಬರುವ ಕಾಗೆಗಳ ಕುರಿತ ಆಲೋಚನೆ ಲೇಖಕ ಆಸಕ್ತಿಯ, ಕುತೂಹಲದ ಎಲ್ಲೆಯನ್ನು ಎತ್ತಿತೋರಿದೆ.

ಡಾ. ರಾಜಶ್ರೀಯವರು ಒಂಬತ್ತನೆಯ ಲೇಖನ The Devil Worship of Tuluvas ಎಂಬ 'ಪಾಡ್ದನಗಳ ಸಂಪುಟ ಸಮೀಕ್ಷೆ'ಯ ಕುರಿತಾಗಿದೆ. ಈ ಲೇಖನದಲ್ಲಿ ಎ. ಮ್ಯಾನರ್, ಎಂ.ಜೆ. ವಾಲ್‌ಹೌಸ್, ಎ.ಸಿ. ಬರ್ನಲ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ಭೂತಾರಾಧನೆಯ ಕುರಿತ ಅಭಿಪ್ರಾಯಗಳಿವೆ. ಭೂತಾರಾಧನೆಯ ಕುರಿತು ಹಿಂದಿನಿಂದ ನಡೆದು ಬಂದ ಅಧ್ಯಯನ ದೇಸಿ-ವಿದೇಶಿ ವಿದ್ವಾಂಸರ ಅವಲೋಕನವನ್ನೊಳಗೊಂಡಿದೆ. ಭೂತಗಳ ಉಗಮದ ಕಥೆ, ಆರಾಧನೆಯ ಕಥೆ, ಆಚರಣೆಯ ಸ್ವರೂಪದ ಬಗೆಗೆ ಈ ಲೇಖನದಲ್ಲಿ ವಿವರಣೆಗಳಿವೆ. ಭೂತಗಳ ವಾಸಸ್ಥಾನ ನೇಮ, ನಿತ್ಯಗಳ ಬಗೆಗೆ ವಿವರಣೆ ನೀಡಲಾಗಿದೆ.

ಭೂತಾರಾಧನೆ ಪ್ರದರ್ಶನ ಕಲೆಯಾಗಿ, ಅನ್ನ ಸಂತರ್ಪಣೆಯ ಸಾಧನವಾಗಿ, ಸಾಂಸ್ಕೃತಿಕ ಆಚರಣೆಯ ಭಾಗವಾಗಿ ಕಾಣಿಸಿಕೊಂಡಿದ್ದು 'ಭೂತಾರಾಧನೆಯಲ್ಲಿ ಭಾಗವಹಿಸುವ ಜನಪದರ ಸಂಖ್ಯೆ, ಭೂತಗಳ ಆಭರಣಗಳ ಸಂಖ್ಯೆ ಕಾಲಾನುಕ್ರಮವಾಗಿ ಹೆಚ್ಚುತ್ತಲೇ ಬಂದಿದೆ ಎಂದಿರುವುದು ಅಲ್ಲಿಯ ಜನರ ಮನೋಸ್ಥಿತಿಯನ್ನು ಬಿಂಬಿಸುತ್ತದೆ. ಭೂತಗಳಲ್ಲಿ ಭೈರವ, ಚಾಮುಂಡಿ, ದುಗ್ಗಲ್ಲಾಯ, ಗುಳಿಕ, ಮಹಿಸಂದಾಯ, ಪಂಜುರ್ಲಿ, ಪಿಲಿಚಂಡಿ ಮೊದಲಾದ ಜನಪ್ರಿಯ ಭೂತಗಳ(ಪು. ೧೩೦) ಕುರಿತು ವಿವರಿಸಿದ

ಲೇಖಕಿ ಭೂತಾರಾಧನೆಯ ಪರಿಕರಗಳ ಕುರಿತು ಮಾಹಿತಿ ಒದಗಿಸಿದ್ದಾರೆ. ದೇಸಿ-ವಿದೇಶಿಯರ ವ್ಯಾಖ್ಯಾನಗಳನ್ನು ಗಮನಿಸಿದರೆ ಭೂತಾರಾಧನೆ ಕಲಾ ಸಾಧನೆಯಾಗಿ, ಉಪಜೀವನಕ್ಕೆ ದಾರಿಯಾಗಿ-ಸಂಸ್ಕೃತಿಯ ಭಾಗವಾಗಿ ಗಮನ ಸೆಳೆಯುತ್ತಿರುವ ಬಗ್ಗೆ ಅರಿವಾಗುತ್ತದೆ.

'ಇಹ ಪರದ ಹಾದಿ'ಯ ಮತ್ತೊಂದು ಮಹತ್ವದ ಲೇಖನ 'ಜನ್ಮ-ಪುನರ್ಜನ್ಮ: ಜನಪದರ ಲೋಕದೃಷ್ಟಿ'ಯ ಕುರಿತಾಗಿದೆ. 'ತುಳುವರಲ್ಲಿ ಆತ್ಮ-ಪರಮಾತ್ಮ, ಸ್ವರ್ಗ-ನರಕ, ಪಾಪ-ಪುಣ್ಯ, ಪುನರ್ಜನ್ಮಗಳ ಕಲ್ಪನೆಯಿಲ್ಲ'(ಪು. ೧೩೪) ಎಂದಿರುವ ಲೇಖಕ ಇಹ-ಪರದ ಹಾದಿಯ ಕುರಿತು ಪ್ರೌಢವಾಗಿ ಅವಲೋಕಿಸಿದ್ದಾರೆ. 'ಪ್ರತಿಯೊಂದು ಜಂತುವೂ-ಮನುಷ್ಯನು ಕೂಡ ಸಾಯಲೇಬೇಕು.. ದಾನಧರ್ಮ ಮಾಡಿದವನಿಗೆ ಪುಣ್ಯ ಲಭಿಸುತ್ತದೆ. ಅವರವರ ಕರ್ಮ ಫಲಕ್ಕೆ ತಕ್ಕಂತೆ ಅಲ್ಲಿ ಜೀವಿಸುತ್ತಾರೆ... ಲೌಕಿಕ ಬದುಕಿನಲ್ಲಿ ದಬ್ಬಾಳಿಕೆ, ಶೋಷಣೆಗೆ ಒಳಗಾದವರು ಸತ್ತ ಬಳಿಕ ಮಾಯಕ್ಕೆ ಸಲ್ಲುತ್ತಾರೆ. ಸಾಂಸ್ಕೃತಿಕ ವೀರರಾಗುತ್ತಾರೆ' ಎಂಬ ರಾಜಶ್ರೀಯವರ ವ್ಯಾಖ್ಯಾನ ಇಹ ಪರದ ಹಾದಿಯನ್ನು ಅರ್ಥೈಸಿದೆ. ತುಳುವರ ಪಾಡ್ದನಗಳು ಲೌಕಿಕ-ಅಲೌಕಿಕ ಎರಡೂ ದೃಷ್ಟಿಕೋನದಿಂದ ಖ್ಯಾತವಾಗಿವೆ. ಪೂಜೆ-ಆರಾಧನೆ, ಮಾಯ ಹೊಂದಿರುವವರ ಬಗೆಗಿನ ಸ್ಮರಣೆ-ಆಚರಣೆ ಎಲ್ಲದಕ್ಕೂ ಮಹತ್ವವಿದೆ ಎನ್ನುವ ಲೇಖಕಿ ಪರದ-ವೈಭವಕ್ಕಿಂತ ಇಹದ ಬದುಕಿಗೆ ಪ್ರಾಮುಖ್ಯತೆ ನೀಡಿದ್ದಾರೆ.

ತುಳುವರಲ್ಲಿ 'ಸಾವು ಮತ್ತು ಸಾವಿನ ನಂತರ ನಡೆಸುವ ಎಲ್ಲಾ ಆಚರಣೆಗಳು ವಿವರಗಳು ಪುನರ್ಜನ್ಮದ ಕಲ್ಪನೆಯನ್ನು ನಿರಾಕರಿಸುತ್ತವೆ ಮತ್ತು ಆತನ ಮುಂದಿನ ಸ್ಥಿತಿಗೆ ಅನುಕೂಲ ಹಾಗೂ ಪೂರಕವಾಗಿರುತ್ತವೆ'(ಪು. ೧೪೦) ಎಂದಿರುವುದು ಮಹತ್ವದ್ದಾಗಿದೆ. ಇಹಲೋಕ-ಪರಲೋಕದ ದಾರಿಯ ಬಗ್ಗೆ ವೈದಿಕ ಸಂಸ್ಕೃತಿಗಿಂತ ಜನಪದ ಸಂಸ್ಕೃತಿ ಭಿನ್ನವಾಗಿದೆ. ಹುಟ್ಟುವುದಕ್ಕಿಂತ ಮೊದಲಿನ ಮತ್ತು ಅನಂತರದ ಲೋಕಗಳು ತುಳುವರ ದೃಷ್ಟಿಯಲ್ಲಿ ನಿಗೂಢವಾದವುಗಳಾಗಿವೆ. ಅಭಯ ಅಜ್ಞಾನದಿಂದ ಹುಟ್ಟಿದ್ದು ಎನ್ನುವುದಕ್ಕಿಂತ ಅನುಭವ, ತರ್ಕ, ವಿವೇಚನೆಗೆ ನಿಲುಕದ್ದು(ಪು. ೧೪೨) ಎಂಬ ರಾಜಶ್ರೀಯವರ ಅಭಿಪ್ರಾಯ ಸಮತೂಕದ ವಿಮರ್ಶೆಯಾಗಿದೆ.

ಹಾಡು ಕೆಲಸ ಮತ್ತು ಬಿಡುವಿನ ಕಲ್ಪನೆಯೂ ಸೇರಿದಂತೆ ಇಹ ಪರದ ಹಾದಿಯ ಹನ್ನೊಂದು ಲೇಖನಗಳು ತುಳು ಜನಾಂಗದ ಅರಿವು-ಆಚರಣೆ, ಪ್ರದರ್ಶನ ಕಲೆ ಹಾಗೂ ಕೃಷಿ ಸಂಸ್ಕೃತಿಯ ವೈವಿಧ್ಯಮಯ ಮಗ್ಗಲುಗಳನ್ನು ಪರಿಚಯಿಸುತ್ತವೆ. ಪಂಚ ದ್ರಾವಿಡ ಭಾಷೆಗಳಲ್ಲಿ ತನ್ನ ನೆಲೆ-ಬೆಲೆ ಕಂಡುಕೊಳ್ಳುತ್ತಿರುವ ತುಳುವಿಗೆ ಪ್ರೊ. ಎ.ವಿ. ನಾವಡ, ವಿವೇಕ ರೈ, ನಾ. ಸೋಮೇಶ್ವರ ಮೊದಲಾದವರ ಸಾಹಿತ್ಯಾವಲೋಕನದ ಸೈದ್ಧಾಂತಿಕ ಒಳನೋಟಗಳಿವೆ. ರಾಜಶ್ರೀಯವರು 'ತುಳು' ಸಂಸ್ಕೃತಿಯ ಶಿಸ್ತುಬದ್ಧ ಅಧ್ಯಯನ ಮಾಡಿರುವುದಲ್ಲದೆ, ಅಲ್ಲಿಯ ಪಾಡ್ದನ ಹಾಗೂ ಪ್ರದರ್ಶನ ಕಲೆಗಳ ಬಗ್ಗೆ

ಸಂಶೋಧನಾತ್ಮಕ ನೆಲೆಯಿಂದ ವಿವೇಚಿಸಿದ್ದಾರೆ. 'ಇಹ ಪರ ಹಾದಿ' ತುಳುವರ ಲೋಕದೃಷ್ಟಿಯ ತವನಿಧಿಯಾಗಿದೆ. ವಾಸ್ತವದ ನೆಲೆಗಟ್ಟಿನ ಮೇಲೆ ವ್ಯಾಖ್ಯಾನಿಸಿದ ಮಹತ್ವದ ಲೇಖನಗಳ ಸಂಗ್ರಹವಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಸಂದರ್ಭ ಗ್ರಂಥಗಳು

೧. ಅಭಿನವ, ಸಂಪಾದಕರು ನ. ರವಿಕುಮಾರ (ಪರ್ಯಾಯ ಸಂಸ್ಕೃತಿ ಚಿಂತನೆ), ಡಾ. ಮುರಾರಿ ಬಲ್ಲಾಳ, ಪ್ರಕಟಣೆ ಪ್ರತಿಭಾ ಯುವ ವೇದಿಕೆ, ರಾಜಾಜಿನಗರ, ಬೆಂಗಳೂರು–೨೧.

೨. ಹೊನ್ನ ಬಿತ್ತೇವು ಹೊಲಕೆಲ್ಲ, ಪ್ರ. ಎರಡನೆಯ ಆವೃತ್ತಿ, ಡಾ. ಎಸ್. ಪ್ರಸಾದಸ್ವಾಮಿ, ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ೨೦೦೯.

ಡಾ. ಸುರೇಶ ಎಲ್. ಜಾಧವ ಮತ್ತು
ಡಾ. ಸುರೇಂದ್ರ ಕೆರಮಗಿ

೧೦. ಜಾನಪದ ಜಾಗೃತಿ

ಡಾ. ಮಳಲಿ ವಸಂತಕುಮಾರ್
ಪುಟ ೨೧೮, ಬೆಲೆ ರೂ. ೧೩೦/-
ಪ್ರಥಮ ಮುದ್ರಣ ೨೦೧೩
ಸಪ್ನ ಬುಕ್‌ಹೌಸ್
ಬೆಂಗಳೂರು

ನಾಡಿನ ಹೆಸರಾಂತ ಕವಿ, ವಿಮರ್ಶಕ, ಕಥೆಗಾರ, ನಾಟಕಕಾರ, ಜಾನಪದ ತಜ್ಞರಾದ ಡಾ. ಮಳಲಿ ವಸಂತಕುಮಾರ್ ಅವರದು ಬಹುಮುಖ ಪ್ರತಿಭಾ ವ್ಯಕ್ತಿತ್ವ. 'ಜಾನಪದ ಜಾಗೃತಿ' ಕೃತಿ ಮಳಲಿಯವರ ಕಾರ್ಯಕ್ಷೇತ್ರ ಆಧಾರಿತ ಅಧ್ಯಯನವನ್ನು, ಸೂಕ್ಷ್ಮ ಚಿಂತನೆಗಳನ್ನು ಹೊರಗೆಡಹುವಲ್ಲಿ ಸಫಲವಾಗಿದೆ. ಸುಮಾರು ಹತ್ತೊಂಬತ್ತು ಕ್ಷೇತ್ರಕಾರ್ಯಾಧಾರಿತ ಲೇಖನಗಳನ್ನು ಒಳಗೊಂಡ ಈ ಕೃತಿ ಜಾನಪದ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಅಧ್ಯಯನಕಾರರಿಗೆ ಒಂದು ಆಕರ ಗ್ರಂಥವಿದ್ದಂತೆ ತೋರುತ್ತದೆ.

ಕರ್ನಾಟಕ ಜನಪದ ವೈದ್ಯವನ್ನು ತುಂಬಾ ವಿವರಣಾತ್ಮಕವಾಗಿ, ತೌಲನಿಕವಾಗಿ ವಿಶ್ಲೇಷಿಸಿರುವುದನ್ನು ನೋಡಿದರೆ ಲೇಖಕರ ಜ್ಞಾನದ ಪರಿಚಯ ನಮಗಾಗುತ್ತದೆ. ಅಲೋಪತಿ, ಯುನಾನಿ, ಆಯುರ್ವೇದ, ಹೋಮಿಯೋಪತಿ ಮತ್ತು ಜನಪದ ವೈದ್ಯ ಪದ್ಧತಿಗಳ ಹುಟ್ಟು, ಬೆಳವಣಿಗೆಗಳ ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ್ದಾರೆ. ಸರಳ ರೀತಿಯಲ್ಲಿ ಅವುಗಳ ಮಧ್ಯೆ ಕಂಡುಬರುವ ವ್ಯತ್ಯಾಸ, ಪರಿಣಾಮಗಳನ್ನು ನೀಡುವ ಮೂಲಕ ಸಾಮಾನ್ಯ ಓದುಗನಿಗೂ ಅರ್ಥವಾಗುವಂತೆ ನೀಡಿದ್ದಾರೆ. "ಕೆಲವು

ಜನಪದ ಔಷಧ ದ್ರವ್ಯಗಳು ವಿಷದ ಅಂಶವನ್ನು ಒಳಗೊಂಡಿರುವುದರಿಂದ ಅವುಗಳ ನೇರವಾದ ಬಳಕೆಯಿಂದ ಶರೀರಕ್ಕೆ ಅಪಾಯ ಉಂಟಾಗಬಹುದು(ಎಕ್ಕದ ಹಾಲು, ಕೋಡುಗಳ್ಳಿಯ ಹಾಲು ಮುಂತಾದ ಔಷಧಿಗಳನ್ನು ಇದಕ್ಕೆ ಉದಾಹರಣೆಯಾಗಿ ಹೇಳಬಹುದು). ಆದರೆ ಆಯುರ್ವೇದದಂತಹ ಪರಿಷ್ಕರಣಗೊಂಡ ವೈದ್ಯ ಪದ್ಧತಿಯಲ್ಲಿ ಔಷಧ ದ್ರವ್ಯಗಳನ್ನು ಶುದ್ಧಿಪಡಿಸಿ ಅದರಲ್ಲಿನ ನಂಜಿನ ಅಂಶವನ್ನು ಹೊರಹಾಕಿ ಔಷಧವನ್ನು ಹದಗೊಳಿಸಿ ಬಳಸಲಾಗುತ್ತದೆ. ಉದಾ: ಚಿತ್ರಮೂಲದ ಬೇರನ್ನು ಸೀಳಿ ಮಧ್ಯದ ನಾರನ್ನು ತೆಗೆದು ಉಳಿದಿದ್ದನ್ನು ಕತ್ತರಿಸಿ, ಅದನ್ನು ಸುಣ್ಣದ ತಿಳಿನೀರಿನಲ್ಲಿ ಒಂದು ರಾತ್ರಿ ನೆನೆಸಿ ಅನಂತರ ಒಳ್ಳೆಯ ನೀರಿನಲ್ಲಿ ತೊಳೆಯುತ್ತಾರೆ"(ಪು. ೩). ಅಲೋಪತಿ ವೈದ್ಯ ಪದ್ಧತಿ ವೈಜ್ಞಾನಿಕ ದೃಷ್ಟಿಕೋನದಿಂದ ಹುಟ್ಟುಪಡೆದರೂ ಅದರಿಂದಲೇ ಎಲ್ಲಾ ರೋಗಗಳನ್ನು ವಾಸಿ ಮಾಡಲು ಸಾಧ್ಯವಿಲ್ಲ ಎಂಬುದನ್ನು ಸ್ವತಃ ಅದರಲ್ಲಿಯೇ ಪದವಿ ಪಡೆದ ಡಾ. ಸ್ಯಾಮುಯಲ್ ಹಾನಿಮನ್‌ಗೆ ತಿಳಿಯುತ್ತದೆ. ನಂತರದಲ್ಲಿ ಹಾನಿಮನ್ ಹೋಮಿಯೋಪತಿ ಎಂಬ ವೈದ್ಯ ಪದ್ಧತಿಯನ್ನು ಶುರು ಮಾಡಿದ ವಿಚಾರಗಳೆಲ್ಲವನ್ನು ಡಾ. ಮಳಲಿ ವಸಂತಕುಮಾರ್ ಅವರು ವಿವರಿಸಿದ್ದಾರೆ. ಪ್ರಸ್ತುತ ಕಾಲಮಾನದಲ್ಲಿರುವ ಎಲ್ಲಾ ವೈದ್ಯ ಪದ್ಧತಿಗಳಿಗೆ ಮೂಲವಾದದ್ದು ಜನಪದ ವೈದ್ಯ ಪದ್ಧತಿ ಎಂಬುದನ್ನು ನಿರ್ವಿವಾದವಾಗಿ ದೃಢಪಡಿಸುತ್ತಾರೆ. "ಜನಪದ ವೈದ್ಯದ ಇತಿಹಾಸ ದೊಡ್ಡದಾಗಿದ್ದರೂ ಗುರುತಿಸಲು ಸಾಧ್ಯವಾಗದ್ದು. ಏಕೆಂದರೆ ಅದು ಮಾನವನ ಇತಿಹಾಸದೊಂದಿಗೇ ಬೆಳೆಸಿಕೊಂಡಿದೆ"(ಪು. ೫) ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ರೋಗಗಳು ಬರುವುದಕ್ಕಿಂತ ಮೊದಲೇ ಬಾರದಂತೆ ತಡೆಯುವುದು ಜಾಣತನವೆಂಬ ಮಾತಿನಂತೆ ಜನಪದರು ಕೆಲವೊಂದು ಕ್ರಿಯೆಗಳನ್ನು ಕಾಲಬದ್ಧವಾಗಿ ಮಾಡುತ್ತಿದ್ದರು. ಎಲ್ಲಾ ಸಮಯಗಳಲ್ಲಿ ಕಾರ್ಯನಿರ್ವಹಿಸುವುದಕ್ಕೆ ನಿಷೇಧ ಹೇರಿದ್ದರು. ಆದರೆ ಆ ನಿಷೇಧಗಳ ಹಿಂದೆ ರೋಗ-ರುಜಿನಗಳಿಂದ ದೂರವಿರುವಂತಹ ಮುಂಜಾಗ್ರತಾ ಕ್ರಮವಿದ್ದುವು. ಉದಾ:- ಹೀಗೆ ನಾನಾ ರೀತಿಯಲ್ಲಿ ಖಾಯಿಲೆಗಳ ಪ್ರವೇಶಕ್ಕೆ ಎಡೆಮಾಡಿ ಕೊಡುತ್ತಿರಲಿಲ್ಲ ಎಂಬುದನ್ನು ಲೇಖಕರು ಕೆಲವೊಂದು ನಂಬಿಕೆ, ನಿಷೇಧಗಳ ಉದಾಹರಣೆಗಳೊಂದಿಗೆ ವಿಶ್ಲೇಷಿಸಿದ್ದಾರೆ.

ಮಾಟ-ಮಂತ್ರ-ತಂತ್ರಗಾರಿಕೆಗಳ ಕುರಿತು ಇನ್ನೂ ಅಧ್ಯಯನ ಮಾಡಬೇಕಾಗಿದೆ ಎಂದು ಅಭಿಪ್ರಾಯಪಡುವ ಲೇಖಕರು ಆಯಾಕಾಲಕ್ಕೆ ಸಂಬಂಧಪಟ್ಟಂತೆ ವೈದ್ಯ ವಿಧಾನಗಳ ಬಗೆಗೂ ವಿಶ್ಲೇಷಣೆ ಮಾಡುತ್ತಾರೆ(ಪು. ೧೩). ಜನಪದ ವೈದ್ಯದಲ್ಲಿರುವುದೆಲ್ಲವೂ ನಿಜ ಎಂಬ ಏಕಾಭಿಪ್ರಾಯಕ್ಕೆ ಬಾರದ ಲೇಖಕರು ತೊಡಕುಗಳಿರುವುದನ್ನು ಒಪ್ಪಿಕೊಳ್ಳುತ್ತಾರೆ.

ನಮ್ಮ ಕನ್ನಡ ನಾಡಿನ ಅತ್ಯಂತ ಪ್ರಾಚೀನ ವೈವಿಧ್ಯಮಯ ಜಾನಪದ ಕಲೆಯಲ್ಲಿ ಕೋಲಾಟವೂ ಒಂದು. ಪ್ರಸ್ತುತ ಕೃತಿಯ 'ಕೋಲಾಟ ಮತ್ತು ಕೋಲುಪದಗಳು' ಎಂಬ ಶೀರ್ಷಿಕೆಯ ಲೇಖನದಲ್ಲಿ ಕೋಲಾಟ ಕಲೆಯ ಸಾಧನಗಳಾದ ಆಳು,

ಕೋಲುಗೂಟ, ಗೆಜ್ಜೆ, ದಮ್ಮಡಿ, ತಾಳ ಮತ್ತು ಮರಗಾಲುಗಳ ಬಗ್ಗೆ ಲೇಖಕರು ಸಂಕ್ಷಿಪ್ತ ವಿವರಣೆಗಳನ್ನು ಮಾಡಿದ್ದಾರೆ. ಹಾಗೆಯೇ ಉಯ್ಯಾಲೆಕೋಲು, ಗೀಜುಗನ ಕೋಲು, ಬಾಗ್ಗೋಲು, ಚಿತ್ತಾರ್‌ಗೊಂಬೆ ಕೋಲು (ಜೋಡ್ಗೋಲು), ಹರಿಗೋಲು, ತೇರುಗೋಲು, ಜಡೆಗೋಲು, ಸೋಬಾನದ ಕೋಲು, ದಂಡೆಕೋಲು, ಕರಿಬಂಟನ ಕೋಲು, ಸುಕ್ಕೋಲು, ನೀರ್‌ಕೋಲು, ಹಾಶ್‌ಗಟಕು, ತಾಳಗಟಕು, ಕೊರವಂಜಿಕೋಲು ಮುಂತಾದ ಕೋಲಾಟಗಳ ಬಗೆಗಳನ್ನು, ಅವುಗಳ ಸ್ವರೂಪಗಳನ್ನು ನೀಡಿರುವುದು ಅತ್ಯಂತ ಸಮಯೋಚಿತವೇ ಸರಿ.

"ಕೋಲು ಪದಗಳಲ್ಲಿರುವ ಮುಖ್ಯವಾದ ಕೊರತೆ ಎಂದರೆ ಅರ್ಥದ ಅಪ್ರಧಾನ್ಯತೆ ಮತ್ತು ಸಾಹಿತ್ಯಾಕಾಂಶಗಳ ಬಡತನ. ನೂರಕ್ಕೆ ಐವತ್ತು ಭಾಗ ಗೀತೆಗಳಲ್ಲಿ ಅರ್ಥವು ಸ್ಪಷ್ಟವಾಗಿ ಕಂಡುಬರುವುದಿಲ್ಲ. ಎಷ್ಟೋ ಗೀತೆಗಳಲ್ಲಿ ಗೀತೆಯ ಒಂದು ಭಾಗಕ್ಕೂ ಇನ್ನೊಂದು ಭಾಗಕ್ಕೂ ಸಂಬಂಧವೇ ಇರುವುದಿಲ್ಲ. ಇದಕ್ಕೆ ಒಂದು ಕಾರಣ ಗೀತೆಗಳು ಪರಂಪರೆಯ ಪೀಳಿಗೆಯಲ್ಲಿ ಹಾದು ಬರುವಾಗ ಎದುರಿಸುವ ಎಡರುತೊಡರುಗಳಿಂದಾಗಿ, ತುಂಡು ತುಂಡಾಗಿ, ಒಂದು ಗೀತೆಯ ಒಂದು ತುಂಡು ಇನ್ನೊಂದು ಗೀತೆಯ ಮತ್ತೊಂದು ತುಂಡಿನೊಡನೆ ಸೇರಿಕೊಂಡು ಹೋಗುವ ಸಂಭವ ಉಂಟು" (ಪು. ೩೦) ಎಂಬುದಾಗಿ ಕೋಲಾಟದ ಕೋಲುಪದಗಳಲ್ಲಿನ ಸಮಸ್ಯೆಯನ್ನು ವಿವರಿಸಿದ್ದಾರೆ ಲೇಖಕರು. ಪರಂಪರಾಗತ ಸಂಪ್ರದಾಯ, ಆಚರಣೆ, ಕ್ರೀಡೆ, ಮನರಂಜನೆ ಮುಂತಾದ ಕ್ಷೇತ್ರಗಳಲ್ಲಿ ಜಾನಪದವು ಯಾವ ರೀತಿಯಲ್ಲಿ ಸ್ಥಿತ್ಯಂತರಗೊಳ್ಳುತ್ತದೆ ಎಂಬುದನ್ನು ತಿಳಿಯಲು ಇದೊಂದು ಉದಾಹರಣೆ. ಹಾಗೆಯೇ ಕರ್ನಾಟಕದ ಪ್ರಾದೇಶಿಕತೆಯಲ್ಲಿಯೂ ಭಿನ್ನತೆಗಳುಂಟಾಗಿರಬಹುದು. ದಕ್ಷಿಣ ಕರ್ನಾಟಕದ ಕೋಲಾಟದ ಬಗೆಗಿನ ಕೊರತೆ ಇದಾದರೆ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಬೇರೊಂದು ರೀತಿಯಲ್ಲಿ ಸಮಸ್ಯೆಗಳಿರಬಹುದು.

'ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಕಲೆಗಳು' ಎಂಬ ಲೇಖನದಲ್ಲಿ ಡಾ. ಮಳಲಿ ವಸಂತಕುಮಾರ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಆಟಿಕಳೆಂಜ, ಗೊಂದಲ ಪೂಜೆ, ದುಡಿಕುಣಿತ, ಹೋಳಿ ಕುಣಿತ, ಸೋಣಜೋಗಿ ಮತ್ತು ಯಕ್ಷಗಾನ ಇತ್ಯಾದಿ ಜನಪದ ಕಲೆಗಳನ್ನು ಪರಿಚಯಿಸಿದ್ದಾರೆ. ಯಕ್ಷಗಾನದ ಹಿನ್ನೆಲೆ ಪ್ರಕಾರ ಮತ್ತು ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ನೀಡಿದ್ದಾರೆ. ಕರ್ನಾಟಕದಾದ್ಯಂತ ವಿವಿಧ ಪ್ರಕಾರಗಳು ಕಂಡುಬಂದರೂ ದಕ್ಷಿಣ ಕನ್ನಡದ ಯಕ್ಷಗಾನ ಹೆಚ್ಚು ಹೆಸರುವಾಸಿಯಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ(ಪು. ೪೬-೪೭). ವಲಸಿಗರಾಗಿ ಬಂದ ಬ್ರಾಹ್ಮಣರಿಂದ ಬ್ರಾಹ್ಮಣೀಕರಣಗೊಂಡ ನಾಗಮಂಡಲದ ಬಗ್ಗೆಯೂ ಸಂಕ್ಷಿಪ್ತವಾದ ವಿವರಣೆ ಇಲ್ಲಿದೆ. ಗೊಂದಲ ಪೂಜೆಯ ಬಗ್ಗೆ ವಿವರಿಸುತ್ತ ಲೇಖಕರು "ಬೇಸಿಗೆಯ ರಾತ್ರಿಯಲ್ಲಿ ಕೈಯಲ್ಲಿ ಪಂಜು ಹಿಡಿದು ಜನ ಉಗ್ರನರ್ತನ ಮಾಡುವುದು ಇದರ ವೈಶಿಷ್ಟ್ಯ"(ಪು. ೫೧) ಎಂದು ಹೇಳಿದ್ದಾರೆ.

ಆದರೆ ಉಗ್ರನರ್ತನ ಇಲ್ಲಿ ಕಂಡು ಬರುವುದಿಲ್ಲ. ದೀವಟಿಗೆಗಳನ್ನು ಹಿಡಿದು ಬೆಸಸಂಖ್ಯೆಯ ನೃತ್ಯಗಾರರು ಸರಳವಾಗಿ, ದೇವಿಯ ಹುಟ್ಟು, ಪ್ರಸಾರ, ಕಾರಣಿಕಕ್ಕೆ ಕುರಿತ ಹಾಡಿಗೆ ಅನುಗುಣವಾಗಿ ಕುಣಿಯುತ್ತಾರೆ. "ದೇವಿಯ ಮೂರ್ತಿಯನ್ನಿಟ್ಟು ಮಂಡಲಾಕಾರದಲ್ಲಿ ಕುಣಿಯುವರು"(ಪು. ೫೧) ಎಂದಿದ್ದಾರೆ. ದೇವಿಯ ಗದ್ದುಗೆಯನ್ನು ಪೂಜಾ ದಿನವೇ ಮನೆಯೊಳಗೆ ಮಾಡಿ ಅಂಗಳದಲ್ಲಿ ಮಂಡಲಾಕಾರದ ಕುಣಿತವನ್ನು ಕಾಣುತ್ತೇವೆ. ಬಹುಶಃ ಲೇಖಕರು ಕ್ಷೇತ್ರಕಾರ್ಯ ಮಾಡದೇ ಮಾಹಿತಿ ನೀಡಿದ್ದಾರೆ ಎಂಬುದು ನನ್ನ ಅಭಿಪ್ರಾಯ. "ಗ್ರಾಮದೇವತೆಯನ್ನು ಊರಿಂದ ಊರಿಗೆ ಕೊಂಡೊಯ್ಯುವಾಗ ಸಹ ಊರಿನ ಗಡಿಗಳಲ್ಲಿ ಗೋಂದೆಗಳ ಪೂಜೆ ನಡೆಯುತ್ತದೆ"(ಪು. ೫೧) ಎಂದು ಹೇಳಿದ್ದಾರೆ. ಉಡುಪಿ ಜಿಲ್ಲೆಯ ಮಾತ್ರ ಈ ರೀತಿಯ ಗೋಂದೋಳು ಪೂಜೆ(ಮಾರಿ ಗೋಂದೋಳು) ಕಂಡು ಬರುತ್ತದೆಯೇ ವಿನಃ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಲಾರೆವು ಎಂಬುದನ್ನು ಗಮನಿಸಬೇಕು. ಲೇಖಕರು ಅವಿಭಜಿತ ದಕ್ಷಿಣ ಕನ್ನಡವನ್ನು ವ್ಯಾಪ್ತಿಯನ್ನಾಗಿಸಿಕೊಂಡು ವಿವರಿಸಿರಲೂಬಹುದು ಎಂಬುದು ನನ್ನ ನಂಬಿಕೆ. ಆದರೆ ಬಹಳ ಹಿಂದಿನ ಕ್ಷೇತ್ರಕಾರ್ಯಾಧಾರಿತ ಲೇಖನಗಳನ್ನು ಪ್ರಕಟಿಸುವ ಸಂದರ್ಭದಲ್ಲಿ ಪರಿಷ್ಕರಿಸಿಕೊಳ್ಳಬೇಕೆಂಬುದು ಪ್ರಕಟಣಪೂರ್ವದ ಅತ್ಯಂತ ಮಹತ್ವದ ವಿಚಾರ ಗಳಲ್ಲೊಂದು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹೌಂದರಾಯನ ಓಲಗ, ಕೊರಗರ ಕುಣಿತ, ಕುಡುಬಿಯರ ಹೋಳಿ ಕುಣಿತ, ದುಡಿ ಕುಣಿತ, ಸೋಣ ಜೋಗಿ ಮತ್ತು ಎರ್ಕೋಲ ಇತ್ಯಾದಿ ಕಲೆಗಳನ್ನು ಪರಿಚಯಾತ್ಮಕ ರೀತಿಯಲ್ಲಿ ನೀಡಿದ್ದಾರೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ, ಮಳಲಿಯಲ್ಲಿರುವ ಗಿಡ್ಡಮ್ಮ ದೇವತೆಯನ್ನು ಪರಿಚಯಿಸುವ ಲೇಖನ 'ಮಳಲಿ ಗಿಡ್ಡಮ್ಮ' ಪ್ರಸ್ತುತ ಕೃತಿಯ ಅತ್ಯಂತ ವಿಸ್ತಾರವಾದ ಲೇಖನ. ಕಾರಣ ಲೇಖಕರು ಅದೇ ಊರಿನವರು. 'ನಮ್ಮೂರು' ಎನ್ನುವುದು ಎಲ್ಲರಿಗೂ ಒಂದು ರೀತಿಯಲ್ಲಿ ಹೆಚ್ಚಿನ ಬಾಂಧವ್ಯ, ಪ್ರೀತಿ, ಹೆಮ್ಮೆ ಇರುವುದು ಸಹಜವೆಂಬಂತೆ ಮಳಲಿ ವಸಂತಕುಮಾರ್ ಅವರು ಮಳಲಿ ಗಿಡ್ಡಮ್ಮನ ಕುರಿತಾದ ಇತಿಹಾಸ, ಆಚರಣೆ, ನಂಬಿಕೆ, ಸಂಪ್ರದಾಯಗಳನ್ನೆಲ್ಲಾ ವಿಸ್ತಾರವಾಗಿ ನೀಡಿದ್ದಾರೆ. ಮಳಲಿ ಗಿಡ್ಡಮ್ಮ ಐತಿಹಾಸಿಕ ಪರಂಪರೆಯನ್ನು ಹೊಂದಿದ್ದಾಳೆ ಎನ್ನುವುದಕ್ಕೆ ಆಕೆಯ ಮೇಲೆ ರಚಿತವಾದ ಜನಪದ ಗೀತೆಗಳೇ ಸಾಕ್ಷಿಯಾಗಿವೆ(ಪು. ೬೦–೬೫).

ಕರ್ನಾಟಕದಲ್ಲಿ ಕೆಲವು ದೇವತೆಗಳ ಬೆನ್ನಿಗೆ ಪೂಜೆ ಸಲ್ಲಿಸುವುದನ್ನು ಕಾಣುತ್ತೇವೆ. ಆದರೆ ಗಿಡ್ಡಮ್ಮಳ ಗಂಡನೆಂದೆನಿಸಿಕೊಂಡ ನರಸಿಂಹಸ್ವಾಮಿಯ ಬೆನ್ನಿಗೆ ಪೂಜೆ ಆಗುತ್ತಿರುವುದನ್ನು ಲೇಖಕರು ಗುರುತಿಸಿದ್ದಾರೆ. ಆ ಬಗೆಗಿನ ಐತಿಹ್ಯವನ್ನು, ಜನಪದರ ಮನೋಭಾವನೆಯನ್ನು ಮತ್ತು ಜನಪದ ಹಾಡುಗಳನ್ನು ಸಾಕ್ಷೀಕರಿಸಿ ವಿಶ್ಲೇಷಿಸಿದ್ದಾರೆ. ಮಳಲಿ ಗಿಡ್ಡಮ್ಮಳ ಜೀವನ ವೃತ್ತಾಂತವೆಲ್ಲ ಜನಪದರ ಬಾಯಲ್ಲಿ ಹಾಡಿನ ಮೂಲಕ ಶಾಶ್ವತವಾಗಿರುವುದು ಅತ್ಯಂತ ಸೋಜಿಗದ ವಿಷಯವೇ ಸರಿ. ಯಾಕೆಂದರೆ ನಮ್ಮ

ರಾಜ್ಯದಲ್ಲಿ ದೇಶ-ವಿದೇಶಿಗರು ಸಂದರ್ಶಿಸುವ ಕ್ಷೇತ್ರಗಳಿದ್ದು, ಅವು ಜನರ ಬಾಯಲ್ಲಿ ಇಷ್ಟು ಪ್ರಮಾಣದ ಹಾಡುಗಳಾಗಿ ಹರಿದಾಡುವುದು ವಿರಳವೆಂದೇ ನನ್ನ ಅಭಿಪ್ರಾಯ.

ರಾಮನಾಥಪುರ ಜಾತ್ರೆ, ಹಾಸನಾಂಬ ಜಾತ್ರೆ, ಸಿದ್ಧೇಶ್ವರ ರಥೋತ್ಸವ, ಸೌಮ್ಯಕೇಶವ ಜಾತ್ರೆ, ಗೊರೂರು ಯೋಗಾನರಸಿಂಹಸ್ವಾಮಿ ಜಾತ್ರೆ, ಕೆಂಚಾಂಬಿಕಾ ಜಾತ್ರೆ, ರಂಗನಾಥೇಶ್ವರ ಜಾತ್ರೆ, ಆಡಿಬೈಲು ಶ್ರೀರಂಗದ ಜಾತ್ರೆ, ಕಣತೂರಮ್ಮನ ಜಾತ್ರೆ, ಪಾಳ್ಯದ ಲಕ್ಷ್ಮೀ ಜನಾರ್ದನ ಜಾತ್ರೆ, ಭೂಕನಬೆಟ್ಟದ ಜಾತ್ರೆ, ನಲ್ಲೂರು ದೊರೆಕಾಳಿ ಜಾತ್ರೆ, ಮಾವಿನಕೆರೆ ರಂಗನಾಥಸ್ವಾಮಿ ಜಾತ್ರೆ, ಬಾಗಿದಾಳು ಬಿಂದಿಗೆ ಜಾತ್ರೆ, ಹುಲಿಕಲ್ಲು ಲಕ್ಷ್ಮೀ ಜನಾರ್ದನ ಜಾತ್ರೆ, ಮಾಲೆಕಲ್ಲು ತಿರುಪತಿ ಜಾತ್ರೆ, ಕೋಡಿಹಳ್ಳಿ ಮಠದ ಜಾತ್ರೆ, ಸಕಲೇಶ್ವರಸ್ವಾಮಿ ಜಾತ್ರೆ, ಬಸವಣ್ಣನ ಜಾತ್ರೆ, ಮಳಲಿಯಮ್ಮನ ಜಾತ್ರೆ, ಅಂತಘಟ್ಟದ ಅಮ್ಮನ ಜಾತ್ರೆ, ಹಂಡ್ರಂಗಿ ಜಾತ್ರೆ, ಹೀಗೆ ಹಾಸನ ಜಿಲ್ಲೆಯ ತಾಲೂಕುಗಳ ದೊಡ್ಡ ದೊಡ್ಡ ದೈವ-ದೇವರುಗಳ ಜಾತ್ರೆಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ ಮಳಲಿ ವಸಂತಕುಮಾರ್ ಅವರು. "ಜಾತ್ರೆಗಳಿಂದ ಜನಪದ ಕಲೆಗಳ ಉಳಿವು ಕಂಡುಬರುತ್ತದೆ. ಜಾತ್ರೆಗಳ ಅಂಗವಾಗಿ ನಡೆಯುವ ವಸ್ತು ಪ್ರದರ್ಶನಗಳು ಜನರಿಗೆ ನಾನಾ ವಿಷಯಗಳಲ್ಲಿ ತಿಳುವಳಿಕೆಯನ್ನು, ಮನೋರಂಜನೆಯನ್ನು ನೀಡುತ್ತವೆ. ದನಗಳ ಜಾತ್ರೆಗಳಿಂದ ರೈತರಿಗೆ ಮಹದುಪಕಾರವಾಗುತ್ತದೆ. ಜಾತ್ರೆಗಳು ಸಾಂಸ್ಕೃತಿಕ ಕೇಂದ್ರಗಳಾಗುವುದರ ಜೊತೆಗೆ ಒಳ್ಳೆಯ ವ್ಯಾಪಾರೋದ್ಯಮಗಳಾಗಿಯೂ ಪರಿಣಮಿಸಿವೆ. ಒಮ್ಮೊಮ್ಮೆ ಅವು ಸುಗ್ಗಿಯ ಸುಖದ ಮಾಧ್ಯಮಗಳಾಗುವುದೂ ಉಂಟು"(ಪು. ೧೧೧) ಎಂಬ ಲೇಖಕರ ಮಾತು ಅಕ್ಷರಶಃ ನಿಜ. ಜಾತ್ರೆಗಳಲ್ಲಿನ ದೈವ-ದೇವರುಗಳ ಮೆರವಣಿಗೆಗೆ, ರಥೋತ್ಸವಗಳು ಜನರಲ್ಲಿ ಭಕ್ತಿ-ಭಾವಗಳನ್ನುಂಟುಮಾಡಿ ಅಡ್ಡದಾರಿ ಹಿಡಿಯದಂತೆ ಪರೋಕ್ಷವಾಗಿ ತಡೆಯುವುದನ್ನು ನಮ್ಮ ನಡುವೆ ಇರುವ 'ವಿಜ್ಞಾನ, ವಿಜ್ಞಾನ' ಎಂದು ಜಪ ಮಾಡುತ್ತಾ ಆಚರಣೆಗಳನ್ನೆಲ್ಲ ಸಾರಾಸಗಟಾಗಿ ಮೂಢನಂಬಿಕೆಗಳೆಂದು ಹೀಯಾಳಿ ಸುವವರು ಗಮನಿಸಬೇಕು. ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ಇತ್ತೀಚಿನ ಜಾನುವಾರು ಜಾತ್ರೆಗಳಲ್ಲಿ ಅಹಿತಕರ ಘಟನೆಗಳು ನಡೆಯುತ್ತಿರುವುದು ಮಾಧ್ಯಮಗಳ ಮೂಲಕ ತಿಳಿದಿದ್ದೇವೆ. ಕೇರಳದ ಕಸಾಯಿಖಾನೆಗೆ ಕರ್ನಾಟಕದ ದನ-ಕರು, ಎತ್ತುಗಳು ಸಾಗಿಸಲ್ಪಡುತ್ತಿವೆ. ಅಮಾನುಷವಾಗಿ, ಅಮಾನವೀಯವಾಗಿ ಚಿತ್ರಹಿಂಸೆ ನೀಡಿ ನದಿ ದಾಟಿಸುವ ರೀತಿ ಅತ್ಯಂತ ಹೇಯವಾಗಿದೆ. ದನಗಳ ಜಾತ್ರೆಯ ಉದ್ದೇಶವೇ ಮಣ್ಣು ಪಾಲಾಗುತ್ತಿದೆ.

'ದಕ್ಷಿಣ ಕನ್ನಡದ ಕ್ರೈಸ್ತರ ಅಡುಗೆಗಳು' ಎಂಬ ಲೇಖನದಲ್ಲಿ ಸೂಪಶಾಸ್ತ್ರವನ್ನೇ ತೆರೆದಿಟ್ಟಿದ್ದಾರೆ ಮಳಲಿ ವಸಂತಕುಮಾರ್ ಅವರು. ಕ್ರೈಸ್ತರ ಅಡುಗೆ ವಿಶೇಷತೆಗಳನ್ನು ತಿಳಿಸುವುದರೊಂದಿಗೆ ಗುಳಿಯಾ, ಕಿಡಿಯಾ, ಚಾಕ್ಲ್ಯೋ, ನೆವ್ರ್ಯೋ, ಖಾರಕಡ್ಡಿ, ಕೋಳಿಸಾರು, ಇಂದಾಲಿ (ಹಂದಿ ಮಾಂಸದ ಅಡುಗೆ), ಕುರಿ ಮಾಂಸದ ಸಾರು, ದೋಸೆ, ಮೀನಿನ

ಸಾರುಗಳ ಜೊತೆಗೆ ಹಲಸಿನ ಹಣ್ಣಿನ ಕಡುಬು, ಪಾಯಸ, ಅವಲಕ್ಕಿಗಳನ್ನು ಮಾಡುವ ವಿಧಾನಗಳನ್ನು ನೀಡಿರುವುದು ಗಮನಾರ್ಹ.

ಜನಪದರ ಆಟಗಳ ವೈಶಿಷ್ಟ್ಯ, ಪ್ರಯೋಜನಗಳನ್ನು ಕುರಿತು 'ಆಟ' ಲೇಖನ ವಿವರಿಸುತ್ತದೆ. ಮೂಡಲಪಾಯದ ಲಕ್ಷಣಗಳನ್ನು ಹೊಂದಿರುವ ಯಕ್ಷಗಾನ ನಾಟಕ ಮೇಳದ ಬಗೆಗಿನ ಲೇಖನ ಮಳಲಿಯಲ್ಲಿ ನಡೆಯುವ ಯಕ್ಷಗಾನ ಜೋಡಿ ಮೇಳವನ್ನು ಪರಿಚಯಿಸುತ್ತದೆ. ಜೋಡಾಟ ಆಡಲು ಬೇಕಿರುವ 'ಅಟ್ಟ'ದ ತಂತ್ರಗಾರಿಕೆಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಗ್ರಾಮೀಣ ಜನರು ಮನೋರಂಜನೆ ನೀಡುವ ಸಲುವಾಗಿ ಎಡವಿದರೂ ಮತ್ತೆ ಮತ್ತೆ ವಿಭಿನ್ನವಾಗಿ ಯೋಚಿಸಿ ಕಾರ್ಯಪ್ರವೃತ್ತರಾಗುವುದನ್ನು ವಿವರಿಸಿದ್ದಾರೆ(ಪು. ೧೨). 'ಉಡುಗೆ-ತೊಡುಗೆ' ಶೀರ್ಷಿಕೆಯ ಲೇಖನದಲ್ಲಿ ಕರ್ನಾಟಕ ದಲ್ಲಿರುವ ಪ್ರಾದೇಶಿಕ ಸಮುದಾಯಗಳಲ್ಲಿ ಯಾವ ಯಾವ ಉಡುಗೆಗಳಿವೆ ಎಂಬುದು ತಿಳಿಯುತ್ತದೆ. 'ಕಾಲಕ್ಕೆ ತಕ್ಕಂತೆ ಕೋಲ' ಎಂಬ ಮಾತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತದಲ್ಲಿದೆ. ಬದಲಾದ ಕಾಲಕ್ಕನುಗುಣವಾಗಿ ನಾವು ಬದಲಾಗಬೇಕೆನ್ನುವುದೇ ಇದರ ಒಳಾರ್ಥ. ಹಾಗೆಯೇ ನಮ್ಮ ಉಡುಗೆ-ತೊಡುಗೆಗಳಲ್ಲೂ ಸ್ಥಿತ್ಯಂತರ ಗಳಾಗಿರುವುದನ್ನು ಲೇಖಕರು ಇಲ್ಲಿ ವಿವರಿಸಿದ್ದಾರೆ.

ನಿಸರ್ಗ ಮತ್ತು ಋತುಮಾನಗಳು ಲೇಖನದಲ್ಲಿ ಪ್ರಕೃತಿ ನಾಶದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ ಲೇಖಕರು. ಅತಿಯಾಸೆಯಿಂದ, ವ್ಯಾಪಾರದ ದೃಷ್ಟಿಯಿಂದ ನಮ್ಮ ಫಲವತ್ತಾದ ಮಣ್ಣನ್ನು, ಪರಿಸರವನ್ನು ಹಾಳು ಮಾಡುತ್ತಿದ್ದೇವೆ. "ಧರೆಗೆ ವಿಷಗೊಬ್ಬರ ಹಾಕಿ ದಹಿಸಿದರೆ ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹತ್ತಿ ಉರಿದರೆ ನಿಲಲಾಗದು ಎಂಬ ಅಕ್ಕಮಹಾದೇವಿಯ ಮಾತು ಅರಿವಾಗುತ್ತದೆ"(ಪು. ೧೪೫). ಹಾಸನ ಜಿಲ್ಲೆಯಲ್ಲಿರುವ ಜಾನಪದ ಮತ್ತು ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿರುವ ವಿವಿಧ ಹವ್ಯಾಸಿ ಲೇಖಕರನ್ನು, ವಿದ್ವಾಂಸರನ್ನು, ಜಾನಪದ ತಜ್ಞರನ್ನು ಪರಿಚಯಿಸುವ ಕೆಲಸ 'ಹಾಸನ ಜಿಲ್ಲೆಯ ಜಾನಪದ' ಎಂಬ ಲೇಖನದಲ್ಲಾಗಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್.ಕೆ. ಕರೀಂಖಾನ್ ಮತ್ತು ಮತಿಘಟ್ಟ ಕೃಷ್ಣಮೂರ್ತಿಯವರಂತಹ ವಿದ್ವಾಂಸರಿಂದ ಸ್ವಾತಂತ್ರ್ಯಪೂರ್ವದಲ್ಲಿ ಆರಂಭವಾದ ಜಾನಪದ ಅಧ್ಯಯನ ಎಪ್ಪತ್ತರ ದಶಕದವರೆಗೆ ನಡೆದು ಬಂದ ಹಾದಿಯನ್ನು ಲೇಖಕರು ಅವಲೋಕಿಸಿದ್ದಾರೆ. ಹಿರಿಯಡ್ಕದ ಜಾತ್ರೆಯನ್ನು ಕ್ಷೇತ್ರಾಧ್ಯಯನದ ಮೂಲಕ ಅಧ್ಯಯನ ಮಾಡಿದ ಲೇಖಕರು ಈ ಜಾತ್ರೆಯನ್ನು ಸಮಾಜ, ಸರಕಾರ ಬಹಿಷ್ಕರಿಸಬೇಕೆಂದು ಆಗ್ರಹಪಡಿಸಿದ್ದಾರೆ(ಪು. ೧೬೪). ವೈದ್ಯಕೀಯ ನಂಬಿಕೆಗಳನ್ನು ವಿಶ್ಲೇಷಣೆ ಮಾಡುತ್ತ ಎಲ್ಲ ನಂಬಿಕೆಗಳಿಂದ ರೋಗ ನಿವಾರಣೆ ಅಸಾಧ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೧೯೭೭ರ ಜಾನಪದ, ದಕ್ಷಿಣ ಕರ್ನಾಟಕದ ಅಡುಗೆ, ದೇಜಗೌ ಮತ್ತು ಜಾನಪದ, ಮೂಢನಂಬಿಕೆಗಳು, ಸಿಡಿ, ಮಳಲಿ ಹವಳಪ್ಪ ಇತ್ಯಾದಿ ಲೇಖನಗಳು ಜಾನಪದ

ಅಧ್ಯಯನದ ಚಲನಶೀಲತೆಯನ್ನು, ಆಹಾರ ವೈವಿಧ್ಯತೆಯನ್ನು ಜಾನಪದ ವಿದ್ವಾಂಸ ದೇ. ಜವರೇಗೌಡರ ಕೊಡುಗೆಗಳನ್ನು ಅವಲೋಕಿಸುವಲ್ಲಿ ಯಶಸ್ಸು ಕಂಡಿವೆ. ಗ್ರಾಮೀಣ ಜನರಲ್ಲಿರುವ ಮೂಢನಂಬಿಕೆಗಳನ್ನು, ಸಿಡಿ ಎಂಬ ವಿಚಿತ್ರ ಪದ್ಧತಿ ಕುರಿತು ವಿಶ್ಲೇಷಿಸಿರುವ ಜಾನಪದ ತಜ್ಞರು, ಭೂತಾರಾಧನೆಯನ್ನು ಹೋಲುವ ಹಾಸನದ ಹವಳಪ್ಪ ದೇವರನ್ನು ಪರಿಚಯಿಸಿದ್ದಾರೆ.

ಒಟ್ಟಾರೆಯಾಗಿ ಜಾನಪದ ಜಾಗೃತಿಯಲ್ಲಿ ಜಾನಪದ ಬಗೆಗಿನ ಗಂಭೀರವಾದ ಚಿಂತನೆಗಳಾಗಿವೆ. ಕೃತಿಯ ಅಲ್ಲಲ್ಲಿ ಅಕ್ಷರ ದೋಷಗಳು ಉಳಿದುಕೊಂಡಿವೆ. ೭೦-೮೦ರ ದಶಕಗಳಲ್ಲಿ ರೂಪಿಸಿದ ಲೇಖನಗಳನ್ನು ೨೦೧೩ರಲ್ಲಿ ಪ್ರಕಟಿಸುವಾಗ ಉನ್ನತೀಕರಿಸದಿರುವುದು (Update) ಗ್ರಂಥದ ಕೊರತೆಯಾಗಿ ಕಾಣುತ್ತದೆ. ಉಳಿದಂತೆ ಜಾನಪದ ಜಾಗೃತಿ ಒಂದು ಆಕರ ಗ್ರಂಥವಾಗಿ ನಿಲ್ಲುವುದರಲ್ಲಿ ಎರಡು ಮಾತಿಲ್ಲ.

ಡಾ. ಎಸ್. ಮೋಹನ್

೧೧. ಕರ್ನಾಟಕ ಯಕ್ಷಗಾನ ಕವಿಚರಿತ್ರೆ

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ
ಪುಟ ೨೪೯, ಬೆಲೆ ರೂ. ೧೫೦/-
ಪ್ರಥಮ ಮುದ್ರಣ ೨೦೧೩
ಯಕ್ಷಗಾನ ಕೇಂದ್ರ, ಶಿವಪ್ರಭಾ, ಹಯಗ್ರೀವನಗರ
ಉಡುಪಿ–೫೭೬೧೦೨

ಯಕ್ಷಗಾನ ಕರಾವಳಿ ಕರ್ನಾಟಕದ ಅಭಿಜಾತ ಕಲೆ. ಪ್ರಾಚೀನ ಕಾಲದಿಂದಲೂ ಈ ಪ್ರದೇಶದಲ್ಲಿ ಯಕ್ಷಗಾನ ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದೆ. ಇದಕ್ಕೆ ಕಾರಣ ಹಿಮ್ಮೇಳ ಮತ್ತು ಮುಮ್ಮೇಳದ ಪ್ರಬುದ್ಧ ಕಲಾವಿದರ ಕಲಾಭಿಜ್ಞತೆ, ಕಲಾವಿದರು, ಅಭಿವ್ಯಕ್ತಿ ವಾಡಿಕೆ. ರಂಗಸ್ಥಳದಲ್ಲಿ ವೇಷಧಾರಿಗಳು ಚರ್ಚಿಸಲ್ಪಡದ ವಿಷಯವೇ ಇಲ್ಲ. ಕಥಾವಸ್ತು ಯಾವುದೇ ಆದರೂ ವಿಷಯಾಂತರಕ್ಕೆ ಯಾವುದೇ ಕುಂದು ಬರುವುದಿಲ್ಲ. ವೇದ, ಧರ್ಮ, ಶಾಸ್ತ್ರ, ಪುರಾಣಗಳಿಂದ ತೊಡಗಿ, ಸಮಕಾಲೀನ ಸಂದರ್ಭದ ವಿಚಾರಗಳವರೆಗೆ ಪಾತ್ರದ ಸಂಭಾಷಣೆಗೆ ಅನೌಚಿತ್ಯವಾಗದ ರೀತಿಯಲ್ಲಿ ಬಳಸಿಕೊಳ್ಳುವುದಿದೆ. ಆ ಮೂಲಕ ಪ್ರೇಕ್ಷಕನಿಗೆ ರಸಾನುಭೂತಿಯ ಜೊತೆಗೆ ಲೋಕಜ್ಞಾನದ ಶಿಕ್ಷಣವನ್ನು ನೀಡುವ ಶಕ್ತಿ ಯಕ್ಷಗಾನಕ್ಕಿದೆ. ವೇಷಧಾರಿ ಒಂದು ಪಾತ್ರವನ್ನು ರಂಗದಲ್ಲಿ ಅಭಿವ್ಯಕ್ತಿಸುವಾಗ ಪ್ರಸಂಗ ಕರ್ತೃವಿನ ಪ್ರಭಾವವೂ ಅವನ ಮೇಲೆ ಪರಿಣಾಮ ಬೀರುತ್ತವೆ. ಪ್ರಸಂಗ ಕರ್ತೃವು ಉತ್ತಮ ಪ್ರಸಂಗವನ್ನು ನಿರ್ಮಿಸಿದರೆ ಕಲಾವಿದನ ವಾಕ್ಚಾತುರ್ಯದಿಂದ ಪಾತ್ರಕ್ಕೆ ಜೀವಂತಿಕೆಯನ್ನು ತುಂಬಲು ಸಾಧ್ಯ. ಇಂತಹ ಪ್ರಬುದ್ಧ

ಕಲಾ ಪ್ರಕಾರವಾದ ಯಕ್ಷಗಾನ ಕ್ಷೇತ್ರದಲ್ಲಿ ಸುಮಾರು ಒಂಬೈನೂರಕ್ಕೂ ಹೆಚ್ಚು ಮಂದಿ ಕವಿಗಳು ಪ್ರಸಂಗ ನಿರ್ಮಿಸಿ ಯಕ್ಷಗಾನ ಸಾಹಿತ್ಯವನ್ನು ಬೆಳೆಸಿದ್ದಾರೆ. ಪ್ರಾಚೀನದಿಂದ ಪ್ರಸ್ತುತ ಸಂದರ್ಭದವರೆಗೆ ಯಕ್ಷಗಾನ ಕವಿಗಳು ನಿರ್ಮಿಸಿರುವ ಪ್ರಸಂಗಗಳೇ ಯಕ್ಷಗಾನದ 'ಲಿಖಿತ ಸಾಹಿತ್ಯ'ವೆಂದು ಪರಿಗಣಿಸಲ್ಪಟ್ಟಿದೆ. ಯಕ್ಷಗಾನದ ಕವಿಗಳ 'ಕವಿ ಚರಿತ್ರೆ' ಬಿಡಿ ಬಿಡಿಯಾಗಿ ಉಪಲಬ್ಧವಾಗುತ್ತಿತ್ತೇ ಹೊರತು ಏಕತ್ರ ಗ್ರಂಥ ರೂಪದಲ್ಲಿ ಪ್ರಕಟಗೊಂಡಿರಲಿಲ್ಲ. ಈ ಪ್ರಕಾರದ ಮೊದಲನೆಯ ಕೃತಿಯಾಗಿ 'ಕರ್ನಾಟಕ ಯಕ್ಷಗಾನದ ಕವಿಚರಿತ್ರೆ' ಕೃತಿಯು ಪ್ರಕಟಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಯಕ್ಷಗಾನದ ಇತಿಹಾಸದ ಅಧ್ಯಯನಕ್ಕೆ ಕರ್ನಾಟಕ ಯಕ್ಷಗಾನ ಕವಿಚರಿತ್ರೆ ಹೊಸ ದಿಕ್ಕನ್ನು ತೋರಬಲ್ಲುದು.

ಕರ್ನಾಟಕದ ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆಯ ಪ್ರದೇಶಗಳಲ್ಲಿ ಯಕ್ಷಗಾನ ಕೃತಿ ರಚಿಸಿದ ಕವಿಗಳ ಕುರಿತು ಇಲ್ಲಿ ವಿವರಗಳನ್ನು ಸಂಗ್ರಹಿಸಿ ನೀಡಲಾಗಿದೆ. ಹದಿನಾಲ್ಕನೇ ಶತಮಾನದ ಆದಿಪರ್ವಕಾಲ(೧೩೦೦-೧೩೫೦)ದಿಂದ ತೊಡಗಿ ವರ್ತಮಾನ ಕಾಲದವರೆಗೆ ಯಕ್ಷಗಾನ ಕಾವ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ ಕವಿಗಳ ವಿವರ ಚಿತ್ರಿಸಿದೆ. ಯಕ್ಷಗಾನ ಸಾಹಿತ್ಯದ ರಚನೆಯಲ್ಲಿ ಬ್ರಾಹ್ಮಣರು, ವೀರಶೈವರು, ದಲಿತರು, ಬಿಲ್ಲವರು, ಬಂಟರು, ಒಕ್ಕಲಿಗರು, ಜೈನರು, ರಜಪೂತರು, ಮುಸ್ಲಮಾನರು, ಕ್ರೈಸ್ತರು ಮೊದಲಾದ ಎಲ್ಲ ಜಾತಿ, ಪಂಗಡ, ಧರ್ಮಗಳ ಕವಿಗಳು ಗುರುತಿಸಿಕೊಂಡಿದ್ದಾರೆ. ರಾಜ ಮಹಾರಾಜರೊಂದಿಗೆ ಸನ್ಯಾಸಿಗಳು ಪ್ರಸಂಗ ರಚನೆಯಲ್ಲಿ ತೊಡಗಿಸಿ ಕೊಂಡಿರುವುದು ಯಕ್ಷಗಾನದ ಜನಪ್ರಿಯತೆ, ಮನರಂಜನೆಗೆ ಸಾಕ್ಷಿಯಾಗಿದೆ. ಬದಲಾದ ಕಾಲಕ್ಕೆ ತಕ್ಕಂತೆ ನಶಿಸದೇ ಉಳಿದುಕೊಂಡು ಬಂದಿರುವ ಯಕ್ಷಗಾನವೆಂಬ ಜಾನಪದ ಪ್ರಕಾರಕ್ಕೆ ಸಮಾಜಕ್ಕೆ ಪ್ರತಿಕ್ರಿಯಿಸುವ ಶಕ್ತಿ-ಸಾಮರ್ಥ್ಯವಿರುವುದೇ ಕಾರಣವೆನ್ನಬಹುದು. ದೇಶ-ವಿದೇಶಗಳ ಕಲಾಭಿಮಾನಿಗಳ ಮನ ಗೆದ್ದಿರುವ ಯಕ್ಷಗಾನದ ಪರದೆ ಹಿಂದೆ ಕೆಲಸ ಮಾಡಿರುವ ಕವಿಗಳ ಜ್ಞಾನ ಪರಂಪರೆಯನ್ನು, ಜ್ಞಾನ ಭಂಡಾರವನ್ನು ನಾವು ಪ್ರಶಂಸಿಸಲೇಬೇಕು.

ಡಾ. ಪುತ್ತಿ ವಸಂತಕುಮಾರ್

೧೨. ಚಲುವು ಚಪ್ಪರ

ಎಂ. ಜೈಕುಮಾರ್
ಪುಟ ೧೪೬, ಬೆಲೆ ರೂ. ೧೫೦/-
ಪ್ರಥಮ ಮುದ್ರಣ ೨೦೧೩
ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ
ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶ್‌ನಗರ
ಹೊಸಪೇಟೆ ೫೮೩ ೨೦೧

ಎಂ. ಜೈಕುಮಾರ್‌ರವರ 'ಚಲುವು ಚಪ್ಪರ' ಕೃತಿಯು ಕುರುಬ ಸಮಾಜದ ಸಂಸ್ಕೃತಿ ಕರಿತ ೧೫ ಸಂಪ್ರಬಂಧಗಳ ಗುಚ್ಛ. ಕಾಲದ ಸ್ಥಿತ್ಯಂತರದ ವೇಗಕ್ಕೆ ಅನುಗುಣವಾಗಿ ಸಂಸ್ಕೃತಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಅನಿವಾರ್ಯ. ಇಂಥ ಹೋರಾಟ ದಲ್ಲಿ ಸಿಲುಕಿದ ಸಂಸ್ಕೃತಿಗಳಲ್ಲಿ ಕುರುಬ ಜನಾಂಗದ ಸಂಸ್ಕೃತಿ ಒಂದೆಂಬುದನ್ನು ನಿರೂಪಿಸುವ ಪ್ರಯತ್ನ ಈ ಕೃತಿಯಲ್ಲಿದೆ.

'ನಿರಾಕಾರ ಪೂಜೆ ಒಂದು ವಿಚಾರ' ಎಂಬ ಸಂಪ್ರಬಂಧವು, ಸಂಸ್ಕೃತಿಯ ಆರಂಭ ಘಟ್ಟದಲ್ಲಿರುವ ಜನಾಂಗಗಳ ನಿರಾಕಾರ ಪೂಜೆಗಳು, ಲಿಂಗಪೂಜೆಯ ಉಗಮ ಸೂಚಕಗಳೆಂಬುದನ್ನು ತಿಳಿಸುತ್ತದೆ. ನಿರಾಕಾರ ಪೂಜೆ ವಿಗ್ರಹಾರಾಧನೆಗಿಂತ ಹಿಂದಿನದೆಂಬ ಅಭಿಪ್ರಾಯ ಚಿಂತನಾರ್ಹವಾದುದು.

ಚಿಕ್ಕಬುರ್ಗಿಯ ಜೇನು ಕುರುಬ ಸಮುದಾಯದವರು ಸಂಪೂರ್ಣ ಅಲೆಮಾರಿ ಗಳಾಗಿದ್ದವರು. ಅರಣ್ಯದಲ್ಲಿ ಬೇಟೆ ನಿಷೇಧಗೊಂಡ ಕಾರಣ ನೆಲೆಸು ಜೀವನಕ್ಕೆ ಒಗ್ಗಿಕೊಂಡು ಕೂಲಿಗಳಾಗುತ್ತಿದ್ದಾರೆ. ಸರ್ಕಾರ ಇವರಿಗೆ ಕೃಷಿ ಭೂಮಿ, ಕೃಷಿ ಉಪಕರಣ ಗಳನ್ನು ನೀಡಿದರೂ ಅದರ ಸದುಪಯೋಗ ಪಡೆಯದಿರುವುದು ವಿಷಾದನೀಯ. ನಾಗರಿಕರ ಸಂಪರ್ಕವಿರದ, ಮುಕ್ತವಾಗಿ ಜೀವಿಸಿದ ಅಲೆಮಾರಿ ಸಮುದಾಯವಿಂದು ತಮ್ಮ ಮೂಲವೃತ್ತಿ ತ್ಯಜಿಸಿ ಮತ್ತೊಂದು ವೃತ್ತಿಗೆ ಹೊಂದಿಕೊಳ್ಳುವಲ್ಲಿ ಉಂಟಾಗುವ ತೊಡಕುಗಳು, ಅವರಿಗಿರುವ ಸ್ಥಿತ್ಯಂತರದ ಅನಿವಾರ್ಯತೆಯ ಬಗ್ಗೆ ತಿಳಿಸಲಾಗಿದೆ.

ದಕ್ಷಿಣ ಭಾರತದ ಪ್ರಮುಖ ದ್ರಾವಿಡ ಸಂಸ್ಕೃತಿಗಳಲ್ಲಿ ಕುರುಬ ಜನಾಂಗದ ಸಂಸ್ಕೃತಿಯು ಒಂದು. ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಹರಡಿರುವ ಈ ಸಮುದಾಯದ ಉಗಮ, ಕುರುಬ ಪದದ ಅರ್ಥ, ಅವರ ಸಂಪ್ರದಾಯ, ಆಚರಣೆಗಳು ಮತ್ತು ಅವರ ಸಾಮಾಜಿಕ ಜೀವನವನ್ನು ಕುರಿತ ಪಕ್ಷಿನೋಟವೇ 'ಕುರುಬ ಜನಾಂಗದ ಸಂಸ್ಕೃತಿ ಪರಂಪರೆ' ಲೇಖನ. ಹತ್ತಿ ಕಂಕಣ, ಉಣ್ಣೆ ಕಂಕಣ ಹಾಗೂ ಕುರುಬ ಪದದ ಅರ್ಥವನ್ನು ಹಲವಾರು ವಿದ್ವಾಂಸರ ವ್ಯಾಖ್ಯಾನಗಳ ಮೂಲಕ ವಿಷಯ ವಿಶ್ಲೇಷಿಸಲಾಗಿದೆ. ಕುರುಬ ಸಂಸ್ಕೃತಿಯನ್ನು ಅರ್ಥೈಸುವಲ್ಲಿ ಸಾಂಸ್ಕೃತಿಕ ಪದಕೋಶದ ಪಾತ್ರ ಮಹತ್ವದ್ದು. ಈ ಕೃತಿಯಲ್ಲಿರುವ ಪದಕೋಶವು ಅವರ ಸಾಂಸ್ಕೃತಿಕ ಸಂಕಥನದ ವಾಸ್ತವಾಂಶವನ್ನು ಪರಿಚಯಿಸಿದೆ.

ಮಾನವನ ಆರಾಧನಾ ವಿಧಾನದಲ್ಲಿ ನರಬಲಿ ಪದ್ಧತಿಯಷ್ಟು ಹೇಯವಾದುದು, ದಾರುಣವಾದುದು ಮತ್ತೊಂದಿಲ್ಲ. ಮಾನವನ ವಿಕಾಸದ ಹಾದಿಯಲ್ಲಿ ದ್ರಾವಿಡ ಸಂಸ್ಕೃತಿಯ ಕಾಲಘಟ್ಟದಲ್ಲಿ ನರಬಲಿ ಆಚರಣೆಯಲ್ಲಿರುವುದನ್ನು 'ನರಬಲಿ ದ್ರಾವಿಡ ಶೈಲಿ ಲೇಖನದಿಂದ ತಿಳಿದುಬರುತ್ತದೆ. ದೈವಗಳ ಪ್ರೀತ್ಯರ್ಥವಾಗಿ ಹಾಗೂ ಪ್ರಕೃತಿಯಲ್ಲಿನ ಚೈತನ್ಯವನ್ನು ಅಂಕೆಯಲ್ಲಿರಿಸಿಕೊಳ್ಳಲು ಹುಟ್ಟಿಕೊಂಡ ನರಬಲಿಯಲ್ಲಿನ ಕ್ರೌರ್ಯದ

ಸತ್ಯತೆಯನ್ನು ತಿಳಿಸಲಾಗಿದೆ. ಸಂಸ್ಕೃತಿಯ ವಿಕಾಸದೊಂದಿಗೆ ಮಾನವನ ತಿಳುವಳಿಕೆ ಹೆಚ್ಚಾದಂತೆಲ್ಲ ನರಬಲಿಯಿಂದ್ಲು ಪ್ರಾಣಿಬಲಿ, ವಸ್ತುಬಲಿ ನೀಡಿಕೆಯಾಗಿ ಸರಳೀಕರಣ ಗೊಂಡಿರುವುದರ ಹಿನ್ನೆಲೆಯನ್ನು ಮತ್ತಷ್ಟು ಚರ್ಚಿಸುವ ಅಗತ್ಯತೆಯಿದೆ.

ಇತಿಹಾಸದ ಪುಟದಲ್ಲಿ ಮರೆಯಾದ ಕುರುಬದೊರೆ ಕಾಮಾಂಡ ಕುರುಂಬ ಪ್ರಭುವಿನ ಜೀವನ ಸಾಧನೆ, ಹೋರಾಟದ ಬದುಕನ್ನು ಮೆಕೆಂಜಿ ಸಂಗ್ರಹಿಸಿದ ಹಸ್ತಪ್ರತಿಗಳ ಆಧಾರದನ್ವಯ 'ಮುಸುಕು ಇತಿಹಾಸದಲ್ಲೊಂದು ವೀರರತ್ನ' ಲೇಖನದ ಮೂಲಕ ಹಿಡಿದಿಡಲಾಗಿದೆ. ಕಾಮಾಂಡ ಕುರುಂಬ ಪ್ರಭುವಿನ ಬಗೆಗಿನ ಮತ್ತಷ್ಟು ಚಾರಿತ್ರಿಕ, ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸುವವರಿಗೆ ಈ ಲೇಖನ ಮಾರ್ಗಸೂಚಿಯಾಗಿ ರುವುದು ಗಮನಾರ್ಹ.

ಕರ್ನಾಟಕದಲ್ಲಿ ಬೌದ್ಧ, ಜೈನ ಮತ್ತು ವೀರಶೈವ ಧರ್ಮಗಳ ಪ್ರಚಾರ ಆರಂಭವಾದಾಗ ಅದಕ್ಕೆ ಅನುಯಾಯಿಗಳಾದವರಲ್ಲಿ ಕುರುಬ ಜನಾಂಗವೂ ಒಂದು. ಜೈನ ಧರ್ಮ ಪ್ರವರ್ಧಮಾನಕ್ಕೆ ಬರುವ ವೇಳೆಗಾಗಲೇ ಐತಿಹಾಸಿಕವಾಗಿ ಮುಂದುವರಿದ ಸಮುದಾಯ ಕುರುಬರದಾಗಿತ್ತು. ಇದಕ್ಕೆ ಕುರುಬ ಹಾಗೂ ಜೈನ ಧರ್ಮಗಳ ಆಚರಣೆಗಳಲ್ಲಿರುವ ಸಾಮ್ಯತೆಗಳು ಸಾಕ್ಷಿಯಾಗಿವೆ. ಕುರುಬ ಸಮುದಾಯದ ಉಚ್ಛ್ರಾಯ ಕಾಲಘಟ್ಟದ ಬಗೆಗಿನ ಮಾಹಿತಿಯನ್ನು ತಿಳಿಯುವಲ್ಲಿ ಕುರುಬ ಜನಾಂಗ ಮತ್ತು ಜೈನ ಧರ್ಮ ಎಂಬ ಲೇಖನ ಹೊಸ ಚಿಂತನೆಗೆ ದಾರಿ ಮಾಡಿಕೊಟ್ಟಿದೆ.

ಕರ್ನಾಟಕದ ಕುರುಬರು ತಮಿಳುನಾಡಿಗೆ ಹೋಗಿ ಅಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿ ಬಾಳಿದರು ಎಂಬುದು ಇತಿಹಾಸದಿಂದ ತಿಳಿದ ಸಂಗತಿ. 'ಇತಿಹಾಸದಲ್ಲೊಂದು ಕ್ರೂರ ಕೈತವ' ಸಂಪ್ರಬಂಧವು ತಮಿಳುನಾಡಿನ ನೆರುಂಪೂರಿನಲ್ಲಿ ನಡೆದ ಕುರುಬರ ನರಮೇಧವನ್ನು ಕಥನವೊಂದರ ಮೂಲಕ ಸಾಬೀತುಪಡಿಸುತ್ತದೆ. ಹೊರಗಿನಿಂದ ಬಂದವರೆಂದೋ, ಅವರ ಶೌರ್ಯವನ್ನು ಕಂಡು ಕೊಲೆಯ ಪ್ರಯತ್ನಗಳು ನಡೆದಿರ ಬಹುದಾಗಿದೆ. ನರಮೇಧದ ನಂತರ ಅವರ ಪತ್ನಿಯರು ಚಿತೆಯೇರಿ ಅಸುನೀಗುವಾಗ ಕೊಟ್ಟ ಶಾಪದಿಂದ ಅಲ್ಲಿನ ಭೂಮಿ ಇಂದಿಗೂ ಬಂಜರಾಗಿದೆ. ಈ ಧಾರುಣ ಘಟನೆಯ ವೃತ್ತಾಂತದ ಮೂಲಕ ಅಂದು ಪ್ರಚಲಿತದಲ್ಲಿದ್ದ ಸತಿ ಸಹಗಮನ ಪದ್ಧತಿಯ ಪ್ರಖರತೆಯನ್ನು ತಿಳಿಯಲು ಸಾಧ್ಯವಿದೆ. ಗಿರಿಜನ ಕುರುಬರ(ಜೇನು ಕುರುಬರು), ಕಾಡುಕುರುಬರು(ಬೆಟ್ಟ ಕುರುಬರು) ಪರಂಪರೆ, ಸಂಸ್ಕೃತಿ, ಸಂಪ್ರದಾಯಗಳ ಸೂಕ್ಷ್ಮ ಪರಿಚಯವಿದೆ.

ಒಟ್ಟಾರೆಯಾಗಿ ಕುರುಬ ಸಂಸ್ಕೃತಿಯ ಸಂಪೂರ್ಣ ಪರಿಚಯ ಈ ಕೃತಿಯಿಂದ ಸಾಧ್ಯವಿಲ್ಲವಾದರೂ, ಮುಂದಿನ ಸಂಶೋಧಕರಿಗೆ ಮತ್ತಷ್ಟು ವಾಸ್ತವಾಂಶ ಬೆಳಕಿಗೆ ತರಲು ಮಾರ್ಗಸೂಚಿಯಾಗಿದೆ. ಸಮಗ್ರ ಕ್ಷೇತ್ರಕಾರ್ಯ ಹಾಗೂ ಹಲವಾರು ವಿದ್ವಾಂಸರ

ಸಂಶೋಧನೆಗಳ ಮಾಹಿತಿಯ ಹಿನ್ನೆಲೆಯಲ್ಲಿ ಕಾಡ ಸಂಸ್ಕೃತಿಯಿಂದ ನಾಡ ಸಂಸ್ಕೃತಿಗೆ ಸ್ಥಿತ್ಯಂತರಗೊಂಡಾಗ ಉಂಟಾದ ತೊಳಲಾಟವನ್ನು ಪ್ರತಿಹಂತದಲ್ಲೂ ನಿರೂಪಿಸುವ ಪ್ರಯತ್ನ ಈ ಕೃತಿ ಮಾಡಿದೆ.

ಡಾ. ಎ.ಎನ್. ಸಿದ್ದೇಶ್ವರಿ

೧೩. ಕೋಟ ಶಿವರಾಮ ಕಾರಂತರು
(ಯಕ್ಷಗಾನ ಚಿಂತನೆ ಮತ್ತು ಪ್ರಯೋಗ)

ಪ್ರಧಾನ ಸಂಪಾದಕರು: ಡಾ. ಕೆ. ಚಿನ್ನಪ್ಪ ಗೌಡ
ಸಂಪಾದಕರು: ರಾಜಶ್ರೀ ಮತ್ತು ಸತೀಶ್ ಕೊಣಾಜೆ
ಪುಟ ೭೨, ಬೆಲೆ ರೂ. ೪೫/-
ಪ್ರಥಮ ಮುದ್ರಣ ೨೦೧೩
ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ
ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ - ೫೭೪ ೧೯೯

ಈ ಕೃತಿಯಲ್ಲಿ ಶಿವರಾಮ ಕಾರಂತರು ಯಕ್ಷಗಾನವನ್ನು ಪ್ರಭಾವಿಸಿದ ರೀತಿ, ಅವರ ಕೊಡುಗೆ ಇತ್ಯಾದಿ ವಿಷಯಗಳ ಬಗೆಗೆ ಚರ್ಚಿಸಲಾಗಿದೆ. ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ ಇವರು ಇದನ್ನು ಪ್ರಕಟಿಸಿರುತ್ತಾರೆ. ಇದು ೨೪ ಸೆಪ್ಟೆಂಬರ್ ೨೦೧೧ರಂದು ಪೀಠವು ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನವಾಗಿದೆ. ಇದರಲ್ಲಿ ಉದ್ಘಾಟನಾ ಭಾಷಣ (ಹೊಸ್ತೋಟ ಮಂಜುನಾಥ ಭಾಗವತ), ಯಕ್ಷರಂಗದ ಹುಟ್ಟು, ಅನುಷ್ಠಾನ ಮತ್ತು ಪ್ರಸ್ತುತತೆ (ರಾಘವ ನಂಬಿಯಾರ್), ಕಾರಂತರ ಯಕ್ಷ ಸಂಶೋಧನೆಗಳ ಮರುಚಿಂತನೆ (ಮುರಳಿ ಕಜೆಕಾರ್), ಬಡಗು-ಬಡಾಬಡಗುತಿಟ್ಟಿನ ಹೊಸ ಸಾಧ್ಯತೆಗಳು (ಸುಜಯೀಂದ್ರ ಹಂದೆ), ಸಮಾರೋಪ ಭಾಷಣ(ಎಂ. ಪ್ರಭಾಕರ ಜೋಷಿ) ಮೊದಲಾದ ಲೇಖನಗಳಿವೆ.

ಕಾರಂತರು ಯಕ್ಷಗಾನವನ್ನು ಸಮಕಾಲೀನಗೊಳಿಸುವ ನಿಟ್ಟಿನಲ್ಲಿ ದುಡಿದವರು. ಅವರಿಗೆ ಯಕ್ಷಗಾನವನ್ನು ಜಾಗತಿಕ ಮಟ್ಟಕ್ಕೆ ಏರಿಸುವ ಮಹತ್ವಾಕಾಂಕ್ಷೆ ಇತ್ತು. ಅದರಲ್ಲಿ ಅವರಿಗೆ ತಾತ್ಕಾಲಿಕ ಯಶಸ್ಸು ಸಿಕ್ಕಿತ್ತು. ಯಕ್ಷಗಾನಕ್ಕೆ ಅದರಿಂದ ಸಾರ್ವತ್ರಿಕ ಮನ್ನಣೆ ಬಂದಂತೆ ಕಾರಂತರಿಗೂ ಅದರಿಂದ ಹೆಚ್ಚಿನ ಮನ್ನಣೆ ಸಿಕ್ಕಿರುವುದು ಸುಳ್ಳಲ್ಲ. ಆದರೆ ಇಂದು ಕಾರಂತರೂ ಇಲ್ಲ. ಯಕ್ಷಗಾನಕ್ಕೆ ಜಾಗತಿಕ ಮನ್ನಣೆ ಬಂದಿದೆ ಎಂದಾದರೂ ಕರಾವಳಿಯಲ್ಲಿ ಯಕ್ಷಗಾನಕ್ಕೆ ಮೊದಲಿನ ಜನಪ್ರಿಯತೆಯೂ ಇಲ್ಲ.

ಯಾವುದೇ ಒಂದು ಕಲೆ ಉಳಿದು ಬೆಳೆಯಬೇಕಾದರೆ ಯುವಜನತೆ ಅದರಲ್ಲಿ ಆಸಕ್ತಿ ತೋರಿಸಬೇಕು. ಕರಾವಳಿಯ ಯುವಜನತೆಗೆ ಈಗ ಯಕ್ಷಗಾನದ ಬಗೆಗೆ ಅಂತಹ ಯಾವ ಆಸಕ್ತಿಯೂ ಉಳಿದಿಲ್ಲ. ಯುವಸಮುದಾಯದಲ್ಲಿ ಪ್ರಸಿದ್ಧರಾದ ಕಲಾವಿದರು ಯಾರು ಎನ್ನುವ ಪ್ರಶ್ನೆಗೆ ಖಚಿತವಾದ ಉತ್ತರ ನೀಡುವುದೇ ಇಂದು ಕಷ್ಟವಾಗಿದೆ.

ಹಾಗಾದುದರಿಂದ ಯಕ್ಷಗಾನದ ಕುರಿತು ಕಾರಂತರ ಪ್ರಯೋಗಗಳನ್ನು ಈಗ ನಿಜವಾಗಿಯೂ ಒರೆಗೆ ಹಚ್ಚುವ ಕಾಲ ಬಂದಿದೆ. ಪ್ರಸ್ತುತ ಕೃತಿಯಲ್ಲಿ ಕೆಲವು ಲೇಖನಗಳಲ್ಲಿ ಪ್ರಾಸಂಗಿಕವಾಗಿ ಅಂತಹ ಪ್ರಯತ್ನಗಳು ನಡೆದಿವೆ.

ಕಾರಂತರು ತೆಂಕುತಿಟ್ಟು ಯಕ್ಷಗಾನವನ್ನು ಯಕ್ಷಗಾನವೆಂದೇ ಪರಿಗಣಿಸಿರಲಿಲ್ಲ. ಹಾಗಾದುದರಿಂದ ತೆಂಕುತಿಟ್ಟು ಯಕ್ಷಗಾನದ ಮೇಲೆ ಅವರು ಯಾವ ಪ್ರಯೋಗಗಳನ್ನು ಮಾಡಲಿಲ್ಲ ಅಥವಾ ಬೇರೆ ಮಾತಿನಲ್ಲಿ ಹೇಳುವುದಿದ್ದರೆ ಕಾರಂತರು ಯಕ್ಷಗಾನದ ಬಗೆಗೆ ಬರೆಯುತ್ತಿದ್ದ ಕಾಲದಲ್ಲಿ ಶೇಣಿ ಗೋಪಾಲಕೃಷ್ಣ ಭಟ್, ಕುಕ್ಕಿಲ ಕೃಷ್ಣಭಟ್, ಕುಬಣೂರು ಬಾಲಕೃಷ್ಣರಾವ್ ಮೊದಲಾದ ಘಟಾನುಘಟಿಗಳು ತೆಂಕುತಿಟ್ಟಿನಲ್ಲಿದ್ದರು. ಅವರು ಕಾರಂತರ ಪ್ರಭಾವವನ್ನು ತಡೆಯುವಷ್ಟರಮಟ್ಟಿಗೆ ಯಶಸ್ವಿಗಳೂ ಆಗಿದ್ದರು! ಕಾರಂತರ ಯಕ್ಷಗಾನ ಬಯಲಾಟಕ್ಕೆ ಪ್ರತಿಕ್ರಿಯೆ ಎನ್ನುವಂತೆ ಕುಬಣೂರು ಅವರು 'ಯಕ್ಷಗಾನ' ಪುಸ್ತಕವನ್ನು ಬರೆದರು. ಶೇಣಿಯವರು 'ಯಕ್ಷಗಾನ ಮತ್ತು ನಾನು' ಕುಕ್ಕಿಲ ಕೃಷ್ಣಭಟ್ಟರ 'ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು' ಈ ನಿಟ್ಟಿನಲ್ಲಿ ಬಂದಿರುವ ಬಹುಮುಖ್ಯ ಕೃತಿಗಳು. ತೆಂಕುತಿಟ್ಟಿನ ಈ ಕಲಾವಿದರು(ವಿದ್ವಾಂಸರು) ತೆಂಕುತಿಟ್ಟಿನ ಯಕ್ಷಗಾನ ಕಥಕ್ಕಳಿಯಿಂದ ಪ್ರೇರಿತವಾದುದು ಹಾಗೂ ಪಾರ್ತಿಸುಬ್ಬನು ಕುಂಬಳೆ ಯವನಲ್ಲ ಎನ್ನುವ ಕಾರಂತರ ವಾದವನ್ನು ಬಲವಾದ ನಿರಾಕರಿಸುತ್ತ ಬಂದರು. ಹೀಗಾಗಿ ಕಾರಂತರ ಪ್ರವೇಶವಾಗದಿದ್ದರೂ ತೆಂಕುತಿಟ್ಟು ತನ್ನ ಪಾಡಿಗೆ ಸಶಕ್ತವಾಗಿಯೇ ಬೆಳೆಯಿತು. ಕಾರಂತರ ಪ್ರಯೋಗ, ಪ್ರಭಾವಗಳಿಂದ ಬಡಗುತಿಟ್ಟು ಕೆಲವೊಂದು ವಲಯದಲ್ಲಿ ತನ್ನದೇ ಛಾಪನ್ನು ಮೂಡಿಸಿತು.

ಯಕ್ಷಗಾನದ ಇಂದಿನ ಪರಿಸ್ಥಿತಿಯನ್ನು ನೋಡಿದಾಗ ಕನ್ನಡ ಭಾಷೆಯ ಸ್ಥಿತಿಗತಿಗಳೂ ನೆನಪಿಗೆ ಬರುತ್ತವೆ. ಏಕೆಂದರೆ ಭಾಷೆಯನ್ನು ಹೊರತುಪಡಿಸಿ ಯಕ್ಷಗಾನವಿಲ್ಲ. ಕನ್ನಡ ಭಾಷೆ ಇಂದು ಅಳಿವಿನಂಚಿಗೆ ಸರಿಯುತ್ತಿರುವ ಭಾಷೆಯಾಗಿದೆ. ಕೆಲವರು ಕನ್ನಡದ ಉಳಿವಿಗಾಗಿ ವಿದೇಶಗಳಿಗೆ, ದೆಹಲಿಯಲ್ಲಿ ಕನ್ನಡ ಪೀಠಗಳನ್ನು ತೆರೆಯಬೇಕೆಂದು ಸಲಹೆ ಕೊಡುತ್ತಾರೆ. ಇದರಿಂದ ಹೆಚ್ಚೆಂದರೆ ನಿವೃತ್ತಿಯಾಗಿ ಮನೆಯಲ್ಲಿ ಕುಳಿತಿರುವ ಕೆಲವೊಂದು ಪ್ರಾಧ್ಯಾಪಕರಿಗೆ ವೇತನ ದೊರಕೀತು. ಆದರೆ ಕನ್ನಡ ಸತ್ತ್ವಯುತವಾದೀತೇ? ವಿದೇಶಿಗರು ಕನ್ನಡ ಕಲಿತು ಕನ್ನಡವನ್ನು ತಮ್ಮ ದೇಶಗಳಲ್ಲಿ ಎಷ್ಟರಮಟ್ಟಿಗೆ ಜನಪ್ರಿಯ ಗೊಳಿಸಿಯಾರು?

ಅದರ ಬದಲು ಕರ್ನಾಟಕದಲ್ಲೇ ಕನ್ನಡ ಭಾಷೆಯನ್ನು ಗಟ್ಟಿಗೊಳಿಸಿದರೆ, ಅದು ಅನ್ನ ನೀಡುವ ಭಾಷೆ ಎನ್ನುವ ಧೈರ್ಯ ಬಂದರೆ ಇಲ್ಲಿಯ ಜನ ತಮ್ಮ ಮಕ್ಕಳಿಗೆ

ಕನ್ನಡವನ್ನು ಕಲಿಸುತ್ತಾರೆ. ಆಗ ಕನ್ನಡ ಭಾಷೆಯು ಈಗ ಪ್ರವೇಶಿಸದ ವಲಯಗಳಿಗೆ ಮುಂದೆ ಪ್ರವೇಶ ಮಾಡುವ ಅವಕಾಶ ಉಂಟಾಗುತ್ತದೆ. ವಿಶ್ವದ ಜ್ಞಾನವನ್ನು ಕನ್ನಡದಲ್ಲಿ ಪಡೆಯಬಹುದು ಎನ್ನುವ ಭರವಸೆ ಮೂಡಿದಾಗ ಮುಂದಿನ ತಲೆಮಾರು ಕನ್ನಡವನ್ನು ಬಳಸಲು ಪ್ರಯತ್ನಿಸುತ್ತದೆ. ಅದರ ಹೊರತು ಭಾಷೆಯೊಂದಿಗೆ ಭಾವನಾತ್ಮಕವಾದ ಸಂಬಂಧವಿಲ್ಲದ ವಿದೇಶದಲ್ಲಿ, ಕನ್ನಡವನ್ನು ಕಲಿಸುವ ಪ್ರಯತ್ನವನ್ನು ಮಾಡುವುದೇಕೆ?

ಯಕ್ಷಗಾನದಲ್ಲಿಯೂ ಹಾಗೇ ಆಗಿರುವುದು. ಕಾರಂತರು ಯಕ್ಷಗಾನವನ್ನು ಸಾರ್ವತ್ರಿಕಗೊಳಿಸಬೇಕೆನ್ನುವಾಗ ಅವರಿಗೆ ಗುಣಮಟ್ಟದ ಪ್ರಶ್ನೆ ಎದುರಾಯಿತು. ಅವರ ದೃಷ್ಟಿಯಲ್ಲಿದ್ದ ಪ್ರೇಕ್ಷಕರು, ವಿದೇಶಿಗರು, ವಿದ್ಯಾವಂತರು, ನುರಿತವರು ಮೊದಲಾದವರೇ ಹೊರತು ಜನಸಾಮಾನ್ಯರಲ್ಲ. ಆ ಕಾರಣದಿಂದಲೇ ಅವರು ಮಾತಿಗೆ ಕತ್ತರಿ ಹಾಕಿದರು. ಮಾತು ಯಕ್ಷಗಾನದ ಜೀವಾಳ. ಅದರಿಂದಲೇ ಕರಾವಳಿಯ ಅನೇಕ ಕನ್ನಡೇತರರು ಕನ್ನಡವನ್ನು ಕಲಿತಿರುವುದು. ನಮ್ಮ ಅಸ್ಮಿತೆಯನ್ನು ಇತರರು ಗುರುತಿಸಬಾರದು ಎಂದಲ್ಲ. ಆದರೆ ನಮಗೆ ಇತರರು ಗುರುತಿಸದಿದ್ದರೂ ಒಂದು ಅಸ್ಮಿತೆ ಇದ್ದೇ ಇರುತ್ತದೆ! ನಮಗೆ ಖಚಿತವಾದ ಅಸ್ಮಿತೆ ಇದ್ದಾಗಲೇ ಬೇರೆಯವರು ಅದನ್ನು ಗುರುತಿಸುವುದು.

ಭಾಷೆ, ಸಂಸ್ಕೃತಿ ಮತ್ತು ಕಲೆಗಳಿಗೆ ಇಂತಹ ಅಸ್ಮಿತೆಗಳಲ್ಲದಿದ್ದರೆ ಅವು ಎಂದೂ ಬಾಳಿ ಬದುಕಲಾರವು. ಕನ್ನಡದ ಪರಿಸ್ಥಿತಿಯೇ ಯಕ್ಷಗಾನಕ್ಕೆ ಇಂದು ಎದುರಾಗಿದೆ. ಕಾರಂತರ ಪ್ರಯೋಗಗಳು ಅಳಿವಿನಂಚಿಗೆ ಭರದಿಂದ ಸಾಗುತ್ತಿರುವ ಯಕ್ಷಗಾನವನ್ನು ಉಳಿಸಲಾರವು. ಅದೇನಿದ್ದರೂ ತೆಂಗುತಿಟ್ಟು ಯಕ್ಷಗಾನವು ಕಾರಂತರಿಗೆ ತೋರಿದ ಜಿಗುಟುತನದಿಂದಲೇ ಉಳಿದರೆ ಉಳಿದೀತು!

ಇಲ್ಲಿರುವ ಲೇಖನಗಳು ಇಂತಹ ಖಚಿತ ದೃಷ್ಟಿಕೋನವನ್ನು ಹೊಂದಿಲ್ಲ. ಹಾಗೆಂದು ಇದುವೇ ಸರಿಯಾದ ದೃಷ್ಟಿಕೋನವೆಂದು ನಾನೇನು ಹೇಳುವುದಿಲ್ಲ. ಆದರೆ ಕಣ್ಣ ಮುಂದಿನ ವಾಸ್ತವಕ್ಕೆ ಕಣ್ಣುಪಟ್ಟಿ ಏಕೆ ಬೇಕು?

ಡಾ. ಮಾಧವ ಪೆರಾಜೆ

೧೪. ಯಕ್ಷಗಾನ ಸ್ಥಿತ್ಯಂತರ

ಡಾ. ಮೋಹನ ಕುಂಟಾರ್

ಪುಟ ೨೭೪, ಬೆಲೆ ರೂ. ೨೦೦/-

ಪ್ರಥಮ ಮುದ್ರಣ ೨೦೧೩

ಯಾಜಿ ಪ್ರಕಾಶನ, 'ಭೂಮಿ', ಎಂ.ಪಿ. ಪ್ರಕಾಶ್‌ನಗರ

ಹೊಸಪೇಟೆ

ಡಾ. ಮೋಹನ ಕುಂಟಾರ್ ಅವರ ಈ ಕೃತಿಯಲ್ಲಿ ಯಕ್ಷಗಾನಕ್ಕೆ ಸಂಬಂಧಪಟ್ಟ ೨೩ ಸಂಶೋಧನ ಲೇಖನಗಳಿವೆ. ಇವುಗಳು ಬಿಡಿ ಬಿಡಿ ಲೇಖನಗಳಾಗಿದ್ದು ಬೇರೆ ಬೇರೆ ಉದ್ದೇಶಕ್ಕೆ ಹಾಗೂ ಶೀರ್ಷಿಕೆಯನ್ನು ಇತರರು ಸೂಚಿಸಿದ ಕಾರಣಕ್ಕೆ ಬರೆದುದರಿಂದ ಒಂದು ಲೇಖನದ ಕೆಲವೊಂದು ವಿಚಾರಗಳು ಮತ್ತೊಂದರಲ್ಲಿ ಪುನರಾವರ್ತನೆಯಾಗಿವೆ ಎಂದು ಲೇಖಕರು ಹೇಳಿದ್ದಾರೆ. ೨೦ನೇ ಶತಮಾನದ ಉತ್ತರಾರ್ಧವು ಯಕ್ಷಗಾನದ ಸುವರ್ಣಯುಗವಾದರೆ, ೨೧ನೇ ಶತಮಾನವು ಯಕ್ಷಗಾನ ರಂಗಭೂಮಿಯ ಉಜ್ವಲ ಅಧ್ಯಾಯವೊಂದು ಕೊನೆಗೊಂಡ ಸ್ಥಿತಿ ಎಂದು ಡಾ. ಪುರುಷೋತ್ತಮ ಬಿಳಿಮಲೆಯವರು ಮುನ್ನುಡಿಯಲ್ಲಿ ಅಭಿಪ್ರಾಯಪಡುತ್ತಾರೆ.

ಜಾಗತೀಕರಣ ಪ್ರಕ್ರಿಯೆಗೆ ಒಳಗಾದ ನಮ್ಮ ಸಮಾಜ ಎಲ್ಲದರಲ್ಲೂ ಆಧುನಿಕತೆಯನ್ನು ನಿರೀಕ್ಷಿಸುವುದರಿಂದ ಸಾಂಪ್ರದಾಯಿಕ ಕಲೆಗಳ ಮಹತ್ವ ಕ್ಷೀಣಿಸುತ್ತಿದೆ. ಆದರೂ ಇಂದಿನ ಪೀಳಿಗೆಗೆ ಯಕ್ಷಗಾನ ಎಂಬ ಗಂಡುಮೆಟ್ಟಿನ ಕಲೆಯ ಹಿಂದಿನ ವೈಭವದ ಚಿತ್ರಣವನ್ನು ನೀಡುವಲ್ಲಿ ಕುಂಟಾರ್ ಅವರ ಈ ಕೃತಿ ಸಹಾಯಕವಾಗುತ್ತದೆ.

ಪ್ರಸ್ತುತ ಈ ಕೃತಿಯಲ್ಲಿನ ಲೇಖನಗಳು ಯಕ್ಷಗಾನದ ಪ್ರಮುಖ ಅಂಗಗಳ ಬಗೆಗೆ ವಿವರಣಾತ್ಮಕ ಮಾಹಿತಿಯನ್ನು ನೀಡುತ್ತವೆ. 'ಕಲೆಗಳ ಹುಟ್ಟು ಮತ್ತು ಸಮಕಾಲೀನ ಪ್ರಸ್ತುತತೆ' ಎಂಬ ಲೇಖನದಲ್ಲಿ ಕಲೆಯ ಬಗೆಗಿನ ನಿರ್ವಚನ, ಅದು ಕಾಲಕಾಲಕ್ಕೆ ಬದಲಾಗುವ ರೀತಿ, ಅದರ ಸ್ವರೂಪದ ಚಿತ್ರಣವನ್ನು ನೀಡಿದ್ದಾರೆ. ಮನುಷ್ಯರ ಆಸಕ್ತಿಗನುಗುಣವಾಗಿ ಬದಲಾಗುತ್ತಿರುವ ಕಲಾ ಪ್ರಕಾರಗಳು ಸಮಕಾಲೀನ ಸಾಂಸ್ಕೃತಿಕ ಸನ್ನಿವೇಶದ ಪ್ರತಿಬಿಂಬವೂ ಆಗಿರುತ್ತವೆ. ಸಮಕಾಲೀನ ಪ್ರಸ್ತುತಗೊಳ್ಳದೇ ಯಾವ ಕಲಾರೂಪವು ಉಳಿದುಕೊಳ್ಳಲಾರವು ಎನ್ನುತ್ತಾರೆ.

'ಅಭಿನಯ' ಎಂಬ ಲೇಖನದಲ್ಲಿ ಪೂರ್ವ ಮೀಮಾಂಸಕರ ವಿವರಣೆಗೆ ಕಟ್ಟು ಬೀಳದೆ ಸಮಕಾಲೀನ ಅಭಿನಯಗಳನ್ನು ಗಮನಿಸಿ ಆ ಮೂಲಕ ಅದರ ಅರ್ಥ, ಸ್ವರೂಪಗಳ ವ್ಯಾಪ್ತಿಯನ್ನು ವಿವರಿಸಿದ್ದಾರೆ. ವ್ಯವಹಾರಿಕ ಬದುಕಿನ ಅಭಿನಯ ನಿರಾಕರಣ ಯೋಗ್ಯವಾದರೆ ಕಲಾಜಗತ್ತಿನ ಅಭಿನಯ ಮೆಚ್ಚುಗೆ ಯೋಗ್ಯವೆನಿಸಿದೆ ಎನ್ನುವುದರ ಮೂಲಕ ಅವುಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿದ್ದಾರೆ. ಅಭಿನಯದ ಅರ್ಥ ವ್ಯಾಪ್ತಿ, ಅದರ ಸ್ವರೂಪ ಹೇಗಿರುತ್ತದೆ, ಅದನ್ನು ಗುರುತಿಸುವುದು ಹೇಗೆ ಎಂಬ ಬಗ್ಗೆಯೂ ಲೇಖನದಲ್ಲಿ ಚರ್ಚಿಸಿದ್ದಾರೆ.

'ಯಕ್ಷಗಾನ ಬಯಲಾಟ ಪರಿಕಲ್ಪನೆ, ವಿಕಾಸ ಮತ್ತು ಸಮಕಾಲೀನ ಪ್ರಸ್ತುತತೆ' ಹಾಗೂ 'ನಾಗಾರಾಧನೆಯಿಂದ ಯಕ್ಷಗಾನದೆಡೆಗೆ ಧಾರ್ಮಿಕ ಸಂಚಲನ' ಎಂಬ ಲೇಖನಗಳಲ್ಲಿ ನಾಗಾರಾಧನೆಯ ಯಾವುದೋ ಒಂದು ಸಂಪ್ರದಾಯವನ್ನು ಯಕ್ಷಗಾನ ಕೂಡ ತನ್ನ ವಿಕಾಸದ ಸಂದರ್ಭದಲ್ಲಿ ಅಳವಡಿಸಿಕೊಂಡಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಧಾರ್ಮಿಕ ಕಲೆಯಾಗಿ ರೂಪು ಪಡೆದ ಯಕ್ಷಗಾನವು ಕಾಲಾಂತರದಲ್ಲಿ ಮನರಂಜನೆಯ

ಸಾಧನವೂ ಆಗಿ ಸಮಾಜದಲ್ಲಿ ನೈತಿಕ ಸಂದೇಶವನ್ನು ಸಾರುತ್ತಾ ಸೌಂದರ್ಯಾತ್ಮಕವಾಗಿ ಬೆಳೆದುನಿಂತ ಬಗೆಯನ್ನು ವಿವರಿಸಿದ್ದಾರೆ.

'ತೆಂಕುತಿಟ್ಟು ಯಕ್ಷಗಾನ-ಸಾಂಸ್ಕೃತಿಕ ಹಿನ್ನೆಲೆ' ಎಂಬ ಲೇಖನದಲ್ಲಿ ಕಥಕಳಿ, ಕೃಷ್ಣನಾಟಂ, ತುಳ್ಳಲ್ ಕಲೆ ಹಾಗೂ ತೆಂಕುತಿಟ್ಟಿನ ಯಕ್ಷಗಾನ ಸಮಾನ ಹಿನ್ನೆಲೆಯುಳ್ಳವುಗಳು. ಇವುಗಳು ಪ್ರಾದೇಶಿಕವಾಗಿ ಸ್ವತಂತ್ರ ಕಲೆಗಳಾದರೂ ಕೆಲವು ಪಾರಿಭಾಷಿಕ ಪದಗಳು ಸಮಾನವಾಗಿದೆ. ಹಿಮ್ಮೇಳ, ವೇಷಭೂಷಣಗಳಲ್ಲಿ ಕೆಲವು ಸಾಮ್ಯತೆಗಳಿದ್ದು ಇವುಗಳ ನಡುವೆ ಕೊಡು-ಕೊಳುಗೆಗಳು ನಡೆದಿರುವ ಸಾಧ್ಯತೆಯನ್ನು ಕಂಡುಕೊಂಡಿದ್ದಾರೆ.

'ಯಕ್ಷಗಾನದ ಸ್ಥಿತ್ಯಂತರ' ಲೇಖನದಲ್ಲಿ ಯಕ್ಷಗಾನದ ಪ್ರಸಂಗ, ವೇಷಭೂಷಣ, ಮುಖವರ್ಣಿಕೆಗಳು ಕಾಲಕಾಲಕ್ಕೆ ಬದಲಾದ ಬಗೆಯನ್ನು ವಿವರಿಸಿದ್ದಾರೆ. ಯಕ್ಷಗಾನ ಬಯಲಾಟದ ಪ್ರಭೇದಗಳಾದ ಮೂಡಲಪಾಯ, ಪಡುವಲಪಾಯ, ಬಡಗುತಿಟ್ಟು, ತೆಂಕುತಿಟ್ಟು, ಗೊಂಬೆಯಾಟ, ತಾಳಮದ್ದಲೆ -ಇವುಗಳ ಸ್ವರೂಪದ ಬಗ್ಗೆ ವಿವರಿಸುತ್ತ ಯಕ್ಷಗಾನದ ನಾಟಕೀಯ ತಿರುವುಗಳ ಬಗೆಗಿನ ವಿವರ ನೀಡಿದ್ದಾರೆ. ಕಾಲದ ಅಗತ್ಯಕ್ಕೆ ತಕ್ಕಂತೆ ಪ್ರಸಂಗಗಳು ಹೇಗೆ ಬದಲಾಗುತ್ತವೆ ಎಂದು ತುಳು ಯಕ್ಷಗಾನದ ಸ್ವರೂಪ, ಯಕ್ಷಗಾನ ಅಧ್ಯಯನ ಹಾಗೂ ತರಬೇತಿ ಕೇಂದ್ರಗಳ ವಿವರ, ವಿನೂತನವಾದ ಆವಿಷ್ಕಾರಗಳ ಪರಿಚಯ, ಸೀನು-ಸೀನರಿಗಳು, ಜೋಡಾಟ, ದೊಂದಿ ಬೆಳಕಿನ ಆಟ, ಅನ್ಯಭಾಷೆಗಳ ಆಟಗಳು, ಮಕ್ಕಳ ಮತ್ತು ಮಹಿಳೆಯರ ಯಕ್ಷಗಾನ ಪರಂಪರೆಯ ರಕ್ಷಣೆ, ದೇಶ-ವಿದೇಶಗಳಲ್ಲಿ ಯಕ್ಷಗಾನ ಪ್ರದರ್ಶನದ ವಿವರ, ಆಧುನಿಕ ತಂತ್ರಜ್ಞಾನದ ಪ್ರಭಾವ ಇವೇ ಮೊದಲಾದ ವಿಷಯಗಳ ಬಗ್ಗೆ ಬಹಳ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಯಕ್ಷಗಾನವು ಭಾರತೀಯ ರಂಗಭೂಮಿಯ ಎಲ್ಲಾ ಲಕ್ಷಣಗಳನ್ನು ಧ್ವನಿಪೂರ್ಣವಾಗಿ ಸಂಕೇತಿಸುವ ಒಂದು ಪರಿಪೂರ್ಣ ರಂಗಭೂಮಿ ಎನ್ನುವ ಅಂಶವನ್ನು 'ರಂಗಭೂಮಿ ಪರಿಕಲ್ಪನೆಯಲ್ಲಿ ಯಕ್ಷಗಾನ' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

'ಕರ್ನಾಟಕದ ಪಾರಂಪರಿಕ ರಂಗಭೂಮಿ ಮತ್ತು ಆಧುನಿಕತೆ' ಎಂಬ ಲೇಖನದಲ್ಲಿ ಯಕ್ಷಗಾನವು ಇಂದಿಗೂ ಹೇಗೆ ಪರಂಪರೆಯ ಪ್ರತಿನಿಧಿಯಾಗಿದೆ ಎಂಬುದನ್ನು ವಿವರಿಸುತ್ತಾ ರಂಗಭೂಮಿ ಹೇಗೆ ಆಧುನಿಕವಾಗಿದೆ ಎನ್ನುವುದರ ಬಗ್ಗೆಯೂ ಚರ್ಚಿಸಿದ್ದಾರೆ. ಯಾವುದೇ ಪಾರಂಪರಿಕ ರಂಗಭೂಮಿಯು ಜನರ ನಡುವೆ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಮಕಾಲೀನ ಬದಲಾವಣೆಗಳು ಅನಿವಾರ್ಯ ಎಂಬುದನ್ನು ಕೆಲವು ಉದಾಹರಣೆಯ ಮೂಲಕ ವಿವರಿಸಿದ್ದಾರೆ. ಇಡೀ ಆಶಯವನ್ನು 'ಯಕ್ಷಗಾನ ಪರಂಪರೆ ಮತ್ತು ಸಮಕಾಲೀನತೆ' ಎಂಬ ಲೇಖನದಲ್ಲೂ ಕಾಣಬಹುದಾಗಿದೆ.

ಯಕ್ಷಗಾನದ ಅರ್ಥಗಾರಿಕೆಯ ಭಿನ್ನ ಭಿನ್ನ ವಲಯಗಳನ್ನು ತಿಳಿಸುವುದಕ್ಕಾಗಿ ಈ ಕೃತಿಯಲ್ಲಿ ೫ ಲೇಖನಗಳನ್ನು ನೀಡಿದ್ದಾರೆ. 'ಯಕ್ಷಗಾನದಲ್ಲಿ ಅರ್ಥಗಾರಿಕೆ ಭಾಷಿಕ ನೆಲೆಗಳು', 'ಯಕ್ಷಗಾನದಲ್ಲಿ ಅರ್ಥ ನಿರ್ಮಾಣ ಪ್ರಕ್ರಿಯೆ', 'ಯಕ್ಷಗಾನದಲ್ಲಿ

ಅರ್ಥಗಾರಿಕೆ ಪ್ರಯೋಗ ಮತ್ತು ಸ್ವರೂಪ', 'ಯಕ್ಷಗಾನ ಅರ್ಥಗಾರಿಕೆ ಮತ್ತು ಆಧುನಿಕತೆ', 'ಯಕ್ಷಗಾನದ ಅರ್ಥಗಾರಿಕೆ ಮತ್ತು ಐತಿಹಾಸಿಕ ಪ್ರಸಂಗಗಳು' - ಈ ಲೇಖನಗಳಲ್ಲಿ ಅರ್ಥಗಾರಿಕೆಯ ಸೃಜನಶೀಲ ಶಾಬ್ದಿಕ ಕಲೆ, ಅರ್ಥಗಾರಿಕೆ ಮಾದರಿ ಬಂದಿರ ಬಹುದಾದರೂ ನಿಜರೂಪ ಎಂಬುವುದಿಲ್ಲ. ಭಾಷಿಕ ನೆಲೆಯಿಂದ ಅರ್ಥಗಾರಿಕೆಯಲ್ಲಿ ವ್ಯಾಖ್ಯಾನ, ಹಾಸ್ಯ, ಅನುಕರಣೆ, ಭಾಷಾಂತರ, ಉದ್ಧರಣೆ ಎಂಬ ಕೆಲವು ಸಾಧ್ಯತೆಗಳನ್ನು ತಿಳಿಸಿದ್ದಾರೆ. ಯಕ್ಷಗಾನದ ಕಲಾವಿದನೊಬ್ಬ ಭಾಷಿಕ ಕಟ್ಟುನಿಟ್ಟಿನ ಶಿಸ್ತನ್ನು ಪ್ರಜ್ಞಾಪೂರ್ವಕ ವಾಗಿ ಅಳವಡಿಸಿಕೊಳ್ಳುತ್ತಾನೆ ಎಂಬುದನ್ನು ಕೆಲವು ಉದಾಹರಣೆ ಮೂಲಕ ತಿಳಿಯಪಡಿಸಿದ್ದಾರೆ.

'ಯಕ್ಷಗಾನದಲ್ಲಿ ಹಾಸ್ಯ ಸನ್ನಿವೇಶಗಳು' ಎಂಬ ಲೇಖನದಲ್ಲಿ ಹಾಸ್ಯ ಎಂದರೇನು? ಯಾವ ಪಾತ್ರಗಳು ಹಾಸ್ಯ ಪಾತ್ರಗಳಾಗುತ್ತವೆ; ಅವುಗಳ ಭಾಷೆಯ ಸ್ವರೂಪವೇನು? ವೇಷಭೂಷಣದ ಕ್ರಮಗಳೇನು? ಎಂಬ ವಿಷಯಗಳ ಬಗ್ಗೆ ಚರ್ಚಿಸುತ್ತಾ ಹಾಸ್ಯ ಸನ್ನಿವೇಶ ಭಾಷಿಕವಾಗಿ, ಸಾಂಸ್ಕೃತಿಕವಾಗಿ ಅರ್ಥಗಾರಿಕೆಯ ವಿಭಿನ್ನ ಸ್ವರೂಪವಾಗಿ ಮೈಪಡೆಯುತ್ತದೆ ಎಂದಿದ್ದಾರೆ. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಭಾಷೆಯು ಪ್ರಸಂಗ ಕೃತಿಯ ಭಾಷೆ ಮತ್ತು ಪ್ರದರ್ಶನದಲ್ಲಿ ಕಲಾವಿದರ ಮಾತುಗಾರಿಕೆಯ ಭಾಷೆ ಎಂಬ ಎರಡು ಹಂತಗಳಲ್ಲಿ ದಾಖಲಾಗುತ್ತದೆ. ಯಕ್ಷಗಾನದ ಪಾತ್ರಗಳು ಒಂದು ಕಾಲ್ಪನಿಕ ಲೋಕದ ಸಾಂಸ್ಕೃತಿಕ ವಾಹಕರು, ಒಂದು ಸಂದೇಶದ ಪ್ರತಿನಿಧಿಗಳು ಹಾಗೂ ಮೌಲ್ಯಗಳ ಪ್ರತಿಪಾದಕರು. ಆದ್ದರಿಂದ ಅದರಲ್ಲಿನ ಮಾತಿನ ಭಾಷೆ ಮಾತ್ರ ಒಂದು ಪ್ರದೇಶದ ಭಾಷೆಯನ್ನು ಪ್ರತಿನಿಧಿಸಿದೆ. ಯಕ್ಷಗಾನದ ಭಾಷೆಯಾಗಿ ಪ್ರತ್ಯೇಕತೆಯನ್ನು ಉಳಿಸಿಕೊಂಡಿದೆ ಎಂಬ ವಿಚಾರದ ಬಗ್ಗೆ 'ಭಾಷೆ ಮತ್ತು ಸಾಮಾಜಿಕ ಪ್ರಜ್ಞೆ' ಲೇಖನದಲ್ಲಿ ತಿಳಿಸಿದ್ದಾರೆ.

'ಪ್ರಯೋಗ ಮತ್ತು ಪ್ರದರ್ಶನ" ಎಂಬ ಲೇಖನದಲ್ಲಿ ಕಲೆಯೊಂದು ಮೂರ್ತ ಗೊಳ್ಳುವ ಸ್ಥಿತಿಯನ್ನು ಪ್ರಯೋಗ ಮತ್ತು ಪ್ರದರ್ಶನ ಎಂಬ ಎರಡು ಹಂತಗಳಲ್ಲಿ ಗುರುತಿಸಬಹುದು. ಪ್ರದರ್ಶನಕ್ಕೆ ಅಣಿಯಾದ ಯಾವುದೇ ಕಲೆಯ ಪ್ರಯೋಗವೊಂದರ ದಾಖಲಾತಿಯೂ ಆಗಿರುತ್ತದೆ. ಪ್ರಯೋಗ ಮತ್ತು ಪ್ರದರ್ಶನದ ಬಗೆಗಿನ ನಿರ್ವಚನ ಮಾಡುತ್ತಾ ಅವುಗಳ ನಡುವಿನ ಸಾದೃಶ್ಯ-ವೈದೃಶ್ಯಗಳನ್ನು ಹೇಳುತ್ತಾ ಪ್ರಯೋಗಗಳು ವಸ್ತು, ಕಾಲ, ದೇಶಬದ್ಧವಾದವುಗಳು, ಪ್ರದರ್ಶನಗಳಿಗೆ ಬದ್ಧತೆಗಳೇನೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕಲಾವಿದರು, ವ್ಯವಸ್ಥಾಪಕರು, ಪ್ರೇಕ್ಷಕರು ಮತ್ತು ಸಾಮಾಜಿಕ ಸನ್ನಿವೇಶ ಎಂಬ ನಾಲ್ಕು ನೆಲೆಗಳಲ್ಲಿ ಯಕ್ಷಗಾನ ಏರ್ಪಡಿಸುವಾಗ ಕಲಾವಿದರೂ, ಸಂಘಟಕರೂ ಗಮನಿಸಬೇಕಾದ ಮುನ್ನೆಚ್ಚರಿಕೆಯ ಬಗ್ಗೆ 'ಅಪರಿಚಿತ ವಲಯದಲ್ಲಿ ಸರ್ವಜನ ಮಾನ್ಯ ಕಲೆ ಯಕ್ಷಗಾನ' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ಯಕ್ಷಗಾನದ ಜನಪ್ರಿಯತೆಯ ಹಿಂದಿರುವುದು ಕಲಾವಿದರ ದೃಷ್ಟಿ ಮತ್ತು ಸ್ಪಷ್ಟ ಪರಂಪರೆಯ ನಾಶವೆಂದು ಹಪಹಪಿಸುವುದಕ್ಕಿಂತ ವಸ್ತುಸ್ಥಿತಿಯ ವಿಶ್ಲೇಷಣೆಯೇ

ಯಕ್ಷಗಾನ ಆರೋಗ್ಯಪೂರ್ಣ ಬೆಳವಣಿಗೆಯ ಪ್ರೇರಣೆಯಾಗಬಹುದು ಎಂದು ಎಚ್ಚರಿಕೆಯ ಮಾತನ್ನಾಡಿದ್ದಾರೆ. ಯಕ್ಷಗಾನದ ಪ್ರಸಂಗಗಳನ್ನು ನಿರ್ದಿಷ್ಟ ಘಟನೆಯೊಂದನ್ನು ಆಧರಿಸಿಯೇ ಹೆಸರಿಸಲಾಗುತ್ತದೆ. ಘಟನೆ ಮತ್ತು ರಂಗಭೂಮಿಗೆ ನೇರವಾದ ಸಂಬಂಧವಿದೆ. ಯಕ್ಷಗಾನ ಪ್ರಸಂಗ ಕವಿಗಳು ಪುರಾಣ ಕತೆಗಳನ್ನು ಆಧರಿಸಿ ಪ್ರಸಂಗಗಳನ್ನು ಬರೆದರು. ಅವು ಅವಾಸ್ತವದ ನೆಲೆಯ ಕಥಾನಕಗಳನ್ನು ವೈಭವದಿಂದ ಚಿತ್ರಿಸಿದವು. ಅವಾಸ್ತವಲೋಕದ ಪ್ರತಿಪಾದನೆಗಾಗಿಯೂ ಸೃಷ್ಟಿಯಾದ ಯಕ್ಷಗಾನ ಪ್ರಸಂಗಗಳು ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಲಿಲ್ಲ ಎಂಬ ವಿಷಯವನ್ನು 'ಯಕ್ಷಗಾನ ಪ್ರಸಂಗ ಸಾಹಿತ್ಯ ಆಕರ ವಿಕೇಂದ್ರೀಕರಣ' ಎಂಬ ಲೇಖನದಲ್ಲಿ ಮಂಡಿಸಿದ್ದಾರೆ.

ಒಟ್ಟಿನಲ್ಲಿ ಡಾ. ಮೋಹನ್ ಕುಂಟಾರ್ ಅವರ ಅನುಭವ, ಅಧ್ಯಯನ, ಕ್ಷೇತ್ರಕಾರ್ಯ, ಚಿಕಿತ್ಸಕ ಒಳನೋಟಗಳ ಕುಲುಮೆಯಲ್ಲಿ ಸಿದ್ಧವಾಗಿರುವ ಯಕ್ಷಗಾನ ಸ್ಥಿತ್ಯಂತರ ಕೃತಿಯು ಯಕ್ಷಗಾನ ಕಲೆಯ ಸಂಕೀರ್ಣತೆ ಮತ್ತು ವಿಭಿನ್ನ ಆಯಾಮಗಳನ್ನು ಅರ್ಥ ಮಾಡಿಕೊಳ್ಳಲು ಉತ್ತಮ ಕೈಪಿಡಿಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಶ್ರೀಮತಿ ಸಂಧ್ಯಾಕುಮಾರಿ

೧೫. ಉಡುಪಿ ಯಕ್ಷಗಾನ ಪರಂಪರೆ

ದುಗ್ಗಪ್ಪ ಯು. ಮಲ್ಪೆ
ಪುಟ ೧೬೦, ಬೆಲೆ ರೂ. ೧೨೦/-
ಪ್ರಥಮ ಮುದ್ರಣ ೨೦೧೩
ಯಕ್ಷಜ್ಯೋತಿ ಪ್ರಕಾಶನ (ರಿ)
ಮಲ್ಪೆ, ಉಡುಪಿ

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯರಾದ ಶ್ರೀ ಯು. ದುಗ್ಗಪ್ಪ ಅವರು ಉಡುಪಿ ಜಿಲ್ಲೆಯಲ್ಲಿ ಯಕ್ಷಗಾನ ಕಲಾರಾಧನೆಯಲ್ಲಿ ತೊಡಗಿಸಿಕೊಂಡಿರುವ ಹಲವಾರು ಸಂಘಟನೆಗಳ ಮಾಹಿತಿಗಳನ್ನು 'ಉಡುಪಿ ಯಕ್ಷ ಪರಂಪರೆ' ಎಂಬ ಕೃತಿಯಲ್ಲಿ ನೀಡಿದ್ದಾರೆ. ಉಡುಪಿ ಜಿಲ್ಲೆಯನ್ನು ಕೇಂದ್ರವಾಗಿರಿಸಿಕೊಂಡು ಸಿದ್ಧಗೊಂಡ ಈ ಕೃತಿಯಲ್ಲಿ ಯಕ್ಷಗಾನ ಕಲಾ ಪ್ರಕಾರದ ಪ್ರಸ್ತುತ ಸಂದರ್ಭದ ಸ್ಥಿತಿಗತಿಗಳನ್ನು ದಾಖಲಿಸಲಾಗಿದೆ. ಯಕ್ಷಗಾನ ಕಲಾಪೋಷಣೆಯಲ್ಲಿ ತೊಡಗಿಸಿಕೊಂಡಿರುವ ಕಲಾವಿದರು, ವಿವಿಧ ಸಂಘಟನೆಗಳ ಉಗಮ, ಕಾರ್ಯಕ್ಷೇತ್ರ, ಸಾಧನೆ ಇತ್ಯಾದಿಗಳ ವಿವರ ನೀಡಲಾಗಿದೆ. ಶ್ರೀ ಯು. ದುಗ್ಗಪ್ಪ ಅವರು ವೃತ್ತಿಯಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದು ಪ್ರವೃತ್ತಿಯಲ್ಲಿ ಹವ್ಯಾಸಿ ಯಕ್ಷಗಾನ ಕಲಾವಿದರು. ಆಸಕ್ತರಿಗೆ

ಯಕ್ಷಗಾನ ನೃತ್ಯ ತರಬೇತಿ ನೀಡುವುದರ ಮೂಲಕ ಹಲವಾರು ಯುವ ಕಲಾವಿದರನ್ನು ರಂಗಕ್ಕೆ ಪರಿಚಯಿಸಿದವರು. ಸುದೀರ್ಘ ಕಾಲ ಯಕ್ಷಗಾನ ಸಂಘವನ್ನು ಕಟ್ಟಿ ಬೆಳೆಸಿದವರು. ಸಾಕಷ್ಟು ಕ್ಷೇತ್ರಕಾರ್ಯ ನಡೆಸಿ ಈ ಕೃತಿಯನ್ನು ಸಿದ್ಧಗೊಳಿಸಿರುವುದು ಕಂಡುಬರುತ್ತದೆ.

ಯಕ್ಷಗಾನ ಕರಾವಳಿಯ ಜನಪ್ರಿಯ ರಂಗಕಲೆ. ಈ ಕಲೆಯ ಜನಪ್ರಿಯತೆಗೆ ವೃತ್ತಿ ಕಲಾವಿದರು ಹಾಗೂ ಹವ್ಯಾಸಿ ಕಲಾವಿದರ ಪ್ರತಿಭೆ ಮತ್ತು ಕಲೆಯ ಜೊತೆಗಿನ ಕಲಾವಿದರ ಬದ್ಧತೆಯೇ ಕಾರಣ. ವೃತ್ತಿ ಕಲಾವಿದರು ನಿರ್ದಿಷ್ಟವಾದ ಮೇಳದೊಂದಿಗೆ ಗುರುತಿಸಿಕೊಂಡು ತಿರುಗಾಟದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹವ್ಯಾಸಿ ಕಲಾವಿದರು ತಾವು ಇರುವಲ್ಲಿಯೇ ಸಂಘಟನೆಯನ್ನು ಮಾಡಿಕೊಂಡು ಕಲೆಯ ವಿಕಾಸಕ್ಕೆ ಕಾರಣೀಭೂತರಾಗುತ್ತಾರೆ. ವೃತ್ತಿ ಕಲಾವಿದರಂತೆ ಹವ್ಯಾಸಿ ಕಲಾವಿದರ ಕೊಡುಗೆಯೂ ಯಕ್ಷಗಾನ ರಂಗಕ್ಕೆ ಅಪಾರವಾದುದು. ಉಡುಪಿ ಜಿಲ್ಲೆಯಾದ್ಯಂತ ಕ್ರಿಯಾಶೀಲವಾಗಿರುವ ಹವ್ಯಾಸಿ ಯಕ್ಷಗಾನ ಸಂಘಟನೆಗಳು ಕಲಾಸಕ್ತಿಯಿಂದ ಹುಟ್ಟಿಕೊಂಡವುಗಳು ಹಾಗೂ ಇಂದಿಗೂ ಈ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿವೆ. ಇಂತಹ ಯಕ್ಷಗಾನ ಕಲಾ ಸಂಘಟನೆಗಳು ನಿರ್ದಿಷ್ಟವಾದ ಸ್ವರೂಪವನ್ನು ಒಳಗೊಂಡಿದ್ದು ತಮ್ಮ ಇತಿಮಿತಿಯಲ್ಲಿ ಕಲಾ ಪ್ರಸರಣ ಹಾಗೂ ಕಲಾ ಪೋಷಣೆಯಲ್ಲಿ ತೊಡಗಿಸಿ ಕೊಂಡಿವೆ. ಕೆಲವು ಸಂಘಟನೆಗಳು ಬಾಲ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಎಳವೆಯಲ್ಲಿಯೇ ತರಬೇತಿ ನೀಡುತ್ತ ಬಂದಿವೆ. ಜಿಲ್ಲೆಯ ಹವ್ಯಾಸಿ ಮೇಳಗಳು ವ್ಯವಸಾಯ ಮೇಳಗಳಂತೆಯೇ ಕಲಾ ಜಗತ್ತಿಗೆ ಅದ್ಭುತ ಪ್ರದರ್ಶನಗಳನ್ನು ನೀಡುತ್ತ ಬಂದಿವೆ. ರಂಗಸ್ಥಳ, ಧ್ವನಿವರ್ಧಕ, ಬೆಳಕು, ಹಿಮ್ಮೇಳ, ವೇಷಭೂಷಣ ಇತ್ಯಾದಿ ಎಲ್ಲಾ ವ್ಯವಸ್ಥೆಯನ್ನು ಹೊಂದಿದ ಪ್ರಗತಿಪೂರ್ಣ ಪ್ರಬುದ್ಧ ಕಲಾ ಸಂಘಗಳು ಉಡುಪಿ ಜಿಲ್ಲೆಯಲ್ಲಿ ಕಾರ್ಯ ಚರಿಸುತ್ತಿವೆ. ಈ ಸಂಘಟನೆಗಳ ಹಿನ್ನೆಲೆಯಲ್ಲಿರುವ ಕಲಾವಿದರು ಹಾಗೂ ಸಂಘಟನೆಗಳ ಸಮಗ್ರ ಮಾಹಿತಿಯನ್ನು ಈ ಕೃತಿಯು ಒಳಗೊಂಡಿದೆ.

ಉಡುಪಿ ಯಕ್ಷ ಪರಂಪರೆ ಈ ಕೃತಿಯನ್ನು ಅವಲೋಕಿಸಿದಾಗ ಕೃತಿಯ ಪೂರ್ವ ಭಾಗದಲ್ಲಿ ಯಕ್ಷಗಾನ ರಂಗಕಲೆಯ ಸಮಗ್ರ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ಚಿತ್ರಿಸಲಾಗಿದೆ. ಯಕ್ಷಗಾನದ ಹಿಮ್ಮೇಳ ಹಾಗೂ ಮುಮ್ಮೇಳಗಳನ್ನು ಪರಿಚಯಾತ್ಮಕವಾಗಿ ವಿವರಿಸಲಾಗಿದೆ. ಹಾಡು, ನೃತ್ಯ, ಅಭಿನಯ, ವೇಷಭೂಷಣ ಹಾಗೂ ಯಕ್ಷಗಾನದ ವಿವಿಧ ಪ್ರಕಾರಗಳ ರಂಗ ಪರಿಕಲ್ಪನೆಯ ಕುರಿತು ವಿವರಿಸಲಾಗಿದೆ. ಈ ಮಾಹಿತಿ ಯಕ್ಷಗಾನ ಕಲಾಸಕ್ತರಿಗೆ ಹಾಗೂ ಅಧ್ಯಯನಕಾರರಿಗೆ ಉತ್ತಮ ಆಕರವಾಗಬಲ್ಲದು.

ಈ ಕೃತಿಯ ಉತ್ತರ ಭಾಗದಲ್ಲಿ ಉಡುಪಿ ಯಕ್ಷ ಪರಂಪರೆಯ ಸಮಗ್ರ ಮಾಹಿತಿ ಒಳಗೊಂಡಿದೆ. ಇಲ್ಲಿರುವ ವಿವಿಧ ಯಕ್ಷಗಾನ ಕಲಾ ಸಂಘಗಳು, ಯಕ್ಷ ಗುರುಗಳು, ಕಲಾವಿದರು, ವಿವಿಧ ಮೇಳಗಳು ಹಾಗೂ ಮೇಳಗಳ ಸಂಚಾಲಕರು, ಯಕ್ಷಗಾನದ ಕುರಿತು ಸಂಶೋಧನೆ ನಡೆಸಿದವರು ಹೀಗೆ ಇನ್ನಿತರ ಹಲವಾರು ಉಪಯುಕ್ತ

ದಾಖಲೆಗಳನ್ನು ನೀಡಲಾಗಿದೆ. ಒಂದು ಪುಟ್ಟ ಕೃತಿಯಲ್ಲಿ ಇಷ್ಟೆಲ್ಲ ಮಾಹಿತಿ ಸಂಗ್ರಹಿಸಿರುವುದನ್ನು ಗಮನಿಸಿದಾಗ, ಲೇಖಕರ ನಿಜವಾದ ಪರಿಶ್ರಮ ವ್ಯಕ್ತವಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಾಂಪ್ರದಾಯಿಕ ಯಕ್ಷ ಶಿಕ್ಷಣ ನೀಡುವ ಕೇಂದ್ರಗಳು ಯಕ್ಷಗಾನದ ಪ್ರಗತಿಗೆ ಬಲು ದೊಡ್ಡ ಕೊಡುಗೆ ನೀಡುತ್ತಿವೆ. ಪಾರಂಪರಿಕ ನೃತ್ಯ ಶಿಕ್ಷಣದೊಂದಿಗೆ ಹಿಮ್ಮೇಳದ ಚಂಡೆ, ಮದ್ದಳೆ, ಭಾಗವಂತಿಕೆ ಇತ್ಯಾದಿ ಪ್ರಕಾರಗಳ ಕುರಿತು ಶಿಕ್ಷಣ ನೀಡುವುದರೊಂದಿಗೆ ಕಲೆಯ ಬೆಳವಣಿಗೆಗೆ ಸಹಾಯಕವಾಗಿವೆ. ಇಂತಹ ಕಲಾ ಸಂಘಟನೆಗಳು ಯಕ್ಷಗಾನ ಕಲೆ ಹಾಗೂ ಕಲಾವಿದರ ಹಿತರಕ್ಷಣೆಯನ್ನೇ ಧ್ಯೇಯವಾಗಿರಿಸಿಕೊಂಡಿವೆ. ಹಲವಾರು ಸಂಘಟನೆಗಳು ಈ ಹಿನ್ನೆಲೆಯಲ್ಲಿ ಯಾವ ರೀತಿಯ ಕ್ರಿಯಾ ಯೋಜನೆಗಳನ್ನು ರೂಪಿಸಿಕೊಂಡು ಬಂದಿವೆ ಎಂಬುದರ ಸ್ಥೂಲ ಚಿತ್ರಣವನ್ನು ದುಗ್ಗಪ್ಪ ಅವರು ನೀಡಿದ್ದಾರೆ.

ಯಕ್ಷಗಾನ ಒಂದು ಜೀವಂತ ಕಲೆ. ಅದಕ್ಕೆ ಸದಾ ಅದರದ್ದೇ ಆದ ಪ್ರೇಕ್ಷಕರು ಇದ್ದಾರೆ. ಇಂದಿನ ಬಹುಮಾಧ್ಯಮ ಸಂವಹನಗಳ ಸಂದರ್ಭದಲ್ಲಿ ಯಕ್ಷಗಾನ ತನ್ನ ಪ್ರೇಕ್ಷಕನನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತಲೇ ಇವೆ. ಇದಕ್ಕೆ ಇಂತಹ ಹಲವಾರು ಕಲಾವಿದರು, ಕಲಾಸಂಘಟನೆಗಳ ಪ್ರೋತ್ಸಾಹವೇ ಕಾರಣ.

ಡಾ. ಪುತ್ತಿ ವಸಂತಕುಮಾರ್

೧೬. ಯಕ್ಷತರು

ಪ್ರೊ. ಅಮೃತ ಸೋಮೇಶ್ವರ
ಪುಟ ೧೫೦, ಬೆಲೆ ರೂ. ೯೦/-
ಪ್ರಥಮ ಮುದ್ರಣ ೨೦೧೩,
ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ
ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ - ೫೭೪ ೧೯೯

ಪ್ರೊ. ಅಮೃತ ಸೋಮೇಶ್ವರರ ಲೇಖನ ಸಂಚಯ 'ಯಕ್ಷತರು' ಡಾ. ಪಿ. ದಯಾನಂದ ಪೈ ಮತ್ತು ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ ಇದರ ಪ್ರಕಾಶನದಡಿಯಲ್ಲಿ ಬೆಳಕು ಕಂಡ, ಡಾ. ಕೆ. ಚಿನ್ನಪ್ಪ ಗೌಡ ಅವರ ಪ್ರಧಾನ ಸಂಪಾದಕತ್ವದ ಹಾಗೂ ಯಕ್ಷಕವಿ ಹೊಸ್ತೋಟ ಮಂಜುನಾಥ ಭಾಗವತರಿಗೆ ಅರ್ಪಣೆಗೊಂಡ ಕೃತಿ.

ಪ್ರೊ. ಅಮೃತರು ಕನ್ನಡ-ತುಳುವಿನ ಮಹತ್ವದ ಲೇಖಕರಲ್ಲಿ ಒಬ್ಬರು. ಅಂತೆಯೇ ಯಕ್ಷಗಾನ ಕ್ಷೇತ್ರಕ್ಕೆ ಅವರ ಕೊಡುಗೆ ಅನನ್ಯವಾದುದು. ಸುಮಾರು ಹದಿನೈದಕ್ಕಿಂತ ಹೆಚ್ಚು ಯಕ್ಷಗಾನ ಪ್ರಸಂಗ ಕೃತಿಗಳನ್ನು ರಚಿಸಿದ ಶ್ರೀಯುತರು ಯಕ್ಷಗಾನದ ಪ್ರಸಂಗ ಸಾಹಿತ್ಯ, ರಂಗನಿರ್ಮಿತಿ ಮತ್ತು ಮೌಲ್ಯ ವಿನ್ಯಾಸಕ್ಕೆ ಸಂಬಂಧಿಸಿದಂತೆ ಹಲವು

ಕೃತಿಗಳನ್ನು ಪ್ರಕಟಿಸಿದ್ದಾರೆ. ಕಲೆಯ ಕುರಿತು ಮುಕ್ತ ಸಂವಾದಕ್ಕಿಳಿಯುವ ಲೇಖಕರು ಪ್ರಸ್ತುತ ಕೃತಿಯಲ್ಲಿ ಯಕ್ಷಗಾನದ ಸಮ-ವಿಷಮ ಸನ್ನಿವೇಶಗಳನ್ನು ವಿಶ್ಲೇಷಿಸಿದ್ದಾರೆ. ಮೂಲ ಕಾಂಡವು ಶಿಥಿಲವಾಗಿ ಹೋದರೂ ಹೊಸ ಹೊಸ ಬಿಳಲುಗಳು ಇಳಿಬಿದ್ದು ಮರಕ್ಕೆ ಆಧಾರ ಸ್ತಂಭಗಳಾಗಿ ಚಿಗುರೊಡೆಯುವ 'ಆಲ' ಹೆಸರಿನ 'ಅಕ್ಷಯವಟ'ವನ್ನು ಧ್ವನಿಸುವ ಕೃತಿಗೆ 'ಯಕ್ಷತರು' ಅರ್ಥಪೂರ್ಣ ಹೆಸರು. ಹೊಸ ಸನ್ನಿವೇಶಗಳಿಗೆ ಹೊಂದಿಕೊಳ್ಳುತ್ತಿರುವ ಯಕ್ಷಗಾನದ ಸಾಧ್ಯತೆಗಳನ್ನು ಕೃತಿ ಸಂಕೇತಿಸುತ್ತದೆ.

ಯಕ್ಷಗಾನದ ಇತಿಹಾಸ, ಸ್ವರೂಪ, ಪ್ರಸಂಗ ಸಾಹಿತ್ಯ, ಪ್ರದರ್ಶನ, ಯಕ್ಷಗಾನ ಮತ್ತು ಸಂವಾದಿ ರಂಗಕಲೆಗಳಿಗೆ ಸಂಬಂಧಿಸಿದ ಇಪ್ಪತ್ತೂರು ಲೇಖನಗಳಿರುವ 'ಯಕ್ಷತರು' ಮಿತ್ರಾ ಸಂಹಿತೆಯಾಗಿ ಆಪ್ತತೆಯಿಂದ ಓದುಗರನ್ನು ತಟ್ಟುತ್ತದೆ. "ಈ ಪುಸ್ತಕದಲ್ಲಿನ ಲೇಖನಗಳಲ್ಲಿ ಕೆಲವು ವಿಚಾರಗಳನ್ನು 'ಹೀಗಿರಬಹುದೇ' ಎಂಬ ಪ್ರಶ್ನೆಯೊಂದಿಗೆ ಪ್ರಾಜ್ಞರ ಅವಗಾಹನೆಗೆ ಒಪ್ಪಿಸಿರುವೆನೇ ಹೊರತು 'ಇದಮಿತ್ಥಂ' ಎಂಬ ಖಡಾಖಂಡಿತವಾದ ಅಧಿಕಾರವಾಣಿಯ ವರಸೆಯಿಂದ ಸಾರುವ ದಾರ್ಷ್ಟ್ಯ ನನ್ನದಲ್ಲ" ಎಂಬ ಲೇಖಕರ ಮಾತು ಕೃತಿಯಲ್ಲಿ ಅನುರಣಿಸಿದೆ.

"ಯಾವ ಒಂದು ಕಲೆಯೂ ಸರ್ವಾಂಗ ಪರಿಪೂರ್ಣವಾಗಿ, ಶಿಷ್ಟ ಸಿದ್ಧರೂಪದಲ್ಲಿ ಹುಟ್ಟಿಕೊಳ್ಳುವುದಿಲ್ಲ. ಅನೇಕ ರೀತಿಯ ಪ್ರಯೋಗಶೀಲತೆಗಳಿಗೆ ಒಳಗಾಗಿ ಒಂದು ಪರಿಷ್ಕೃತ ಮಟ್ಟಕ್ಕೆ ಮುಟ್ಟುತ್ತದೆ. ಜನಪದ ಹಂತದಲ್ಲಿ ಇದ್ದಿರಬಹುದಾದ ಒಂದು ಕಲೆ ಶಿಷ್ಟ ಅಥವಾ ಶಾಸ್ತ್ರೀಯ ಮಟ್ಟಕ್ಕೆ ಮುಟ್ಟಲು ಸಾಕಷ್ಟು ಅವಧಿಯ ಸಂಸ್ಕಾರ ಪ್ರಕ್ರಿಯೆಗಳು ಜರುಗುವುದು ಅನಿವಾರ್ಯ" ಎಂಬ ಮಾತಿನಿಂದ ಆರಂಭವಾಗುವ 'ಯಕ್ಷಗಾನದ ನಡೆ' ಲೇಖನದಲ್ಲಿ ಹಿರಿಯರ, ಕಿರಿಯರ, ಮಹಿಳೆಯರ ಯಕ್ಷಗಾನಗಳಲ್ಲದೇ ದೃಶ್ಯ-ಶ್ರವ್ಯ ಮುದ್ರಿಕೆಯ ಪ್ರದರ್ಶನಗಳು ನಿರ್ವಹಿಸುವ ಮನಃಶಾಸ್ತ್ರೀಯ ವಿವೇಚನೆಯಿದೆ. ಹಿಂದಿನ ಶತಮಾನದ ಯಕ್ಷಗಾನ ಪ್ರದರ್ಶನ-ಕಲಾವಿದ-ಕಲಾಸಂಸ್ಥೆಗಳ ಕುರಿತಾದ ಪ್ರಯೋಗಶೀಲತೆಯನ್ನು ತಿಳಿಸುತ್ತಾ ಇದು ಜನತೆಯ ಪ್ರೀತಿಯ ಕಲೆ ಎಂಬುದನ್ನು 'ಕಳೆದ ಶತಮಾನದ ಯಕ್ಷಗಾನ : ಒಂದು ಬೀಸುನೋಟ' ಲೇಖನದಲ್ಲಿ ತಿಳಿಸಿದ್ದಾರೆ. 'ಬಹುಗುಣ ಗರ್ಭಿತ ಯಕ್ಷಗಾನ ಸಾಹಿತ್ಯ'ದಲ್ಲಿ ಯಕ್ಷಗಾನ ಪ್ರಸಂಗವನ್ನು ಕೇವಲ ರಂಗಸ್ಥಳದ ಪೋಷಕ ಪಠ್ಯ ಎಂಬ ಗೌಣದೃಷ್ಟಿಯಿಂದ ನೋಡದೆ ಇಡೀ ಪ್ರದರ್ಶನವನ್ನು ನಿಯಂತ್ರಿಸುವ ಜೀವದ್ರವ್ಯವಾಗಿ ಪರಿಗಣಿಸಬೇಕಾಗಿದೆ' ಎಂಬ ಆಶಯವಿದೆ. ವಿವಿಧ ಪ್ರಾದೇಶಿಕ ರಂಗಕಲೆಗಳನ್ನು ಸಂಸ್ಕೃತ ನಾಟ್ಯಶಾಸ್ತ್ರಕ್ಕೂ ಜನ್ಯ-ಜನಕ ಸಂಬಂಧ ಕಲ್ಪಿಸುವಾಗ ಅವಸರದ ನಡೆ ತರವಲ್ಲ. ಪ್ರಾದೇಶಿಕ ರಂಗಕಲೆಗಳ ಸಾಮಾನ್ಯ ಲಕ್ಷಣಗಳನ್ನೇ ಕ್ರೋಢೀಕರಿಸಿ ಲಕ್ಷಣ ಗ್ರಂಥ ರಚನೆಯಾಗಿರುವ ಸಾಧ್ಯತೆಯನ್ನು 'ನಾಟ್ಯಶಾಸ್ತ್ರದ ನೆರಳಲ್ಲಿ ಬಯಲಾಟ ಹುಟ್ಟಿತೇ?' ಲೇಖನದಲ್ಲಿ ತಿಳಿಸಿದ್ದಾರೆ. 'ಯಕ್ಷಗಾನದ ಗತವೈಭವ'ವನ್ನು ಹೇಳುತ್ತಾ ಸುದೀರ್ಘವಾದ ಕಲಾಯಾತ್ರೆಯಲ್ಲಿ ಆರೋಹಣ, ಅವರೋಹಣ ಗುಣ ಸರ್ವೇಸಾಮಾನ್ಯ; ಒಂದೇ ಸ್ಥಿತಿಸ್ಥಾಯಿಯಾಗಿ ಇರುವುದು

ಕಷ್ಟ ಎಂದಿದ್ದಾರೆ. ಅತಿ ರಂಜಕ ಗುಣ ಯಕ್ಷಗಾನದ ಮೂಲ ಜಾಯಮಾನ; ಅದಕ್ಕನುಗುಣವಾಗಿಯೇ ಯಕ್ಷಗಾನದ ಅಂಗಗಳು ರೂಪ ಪಡೆದಿವೆ ಎಂಬ ಅಭಿಪ್ರಾಯವನ್ನು 'ಯಕ್ಷಗಾನದ ಆಹಾರ್ಯ ಭಾಗ' ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ. 'ದೇವಿ ಮಹಾತ್ಮೆ'ಯ ಕುರಿತಾದ ತಮ್ಮ ಜಿಜ್ಞಾಸೆಯನ್ನು 'ದೇವಿದಾಸನ ದೇವೀ ಮಹಾತ್ಮೆ'ಯಲ್ಲಿ, ಶಾಸ್ತ್ರೀಯತೆ, ಜಾನಪದ, ದೇಸಿಗಳು ಪರಸ್ಪರ ಶತ್ರುಭಾವದಿಂದ ನೋಡದೆ ಅನ್ಯೋನ್ಯವಾಗಿ ನಿಲ್ಲುವ ಅನಿವಾರ್ಯತೆಯನ್ನು 'ಯಕ್ಷಗಾನ ಬಯಲಾಟವು ಶುದ್ಧಾಂಗವಾಗಿ ಶಾಸ್ತ್ರೀಯ ಕಲೆಯೇ? ಲೇಖನದಲ್ಲಿ, ಸಭಾ ಲಕ್ಷಣದ ಲಾಕ್ಷಣಿಕ ಹೊಳಹುಗಳನ್ನು 'ಯಕ್ಷಗಾನ ಬಯಲಾಟದ ಸಭಾ ಲಕ್ಷಣ'ದಲ್ಲಿ, ಮೌಲ್ಯ ಪ್ರತಿಪಾದನೆಯ ಹೊಣೆ ನಿಭಾಯಿಸಿದ ಯಕ್ಷಗಾನ ಪ್ರದರ್ಶನಕ್ಕೆ ಸಮಕಾಲೀನ ವಸ್ತು ನಿರೂಪಣೆಯ ನೂತನ ಪ್ರಸಂಗ ರಚನೆಯ ಅನಿವಾರ್ಯತೆಯನ್ನು 'ಕಲೆಗಾಗಿ ಕಲೆಯೋ ಮನುಷ್ಯನಿಗಾಗಿ ಕಲೆಯೋ' ಎನ್ನುವ ಲೇಖನದಲ್ಲಿ ನಿರೂಪಿಸಿದ್ದಾರೆ. ಸ್ತ್ರೀ ಸಂವೇದನೆಗಳನ್ನು ಆಟಕ್ಕಿಂತ ಕೂಟಗಳಲ್ಲಿ ಸಮರ್ಥವಾಗಿ ಮಂಡಿಸಬಹುದೆನ್ನುವ 'ಮಹಿಳಾ ಯಕ್ಷಗಾನ' ಲೇಖನ, ಮಕ್ಕಳ ಮನೋವಿಲಾಸಕ್ಕನುವಾಗುವ 'ಮಕ್ಕಳ ಯಕ್ಷಗಾನ' ಲೇಖನ, ಶ್ರಾವ್ಯ ಮಟ್ಟದಲ್ಲಿ ಯಕ್ಷಗಾನ ವಿಕಾಸಶೀಲವಾಗಿ ಬೆಳೆಯಲು ಸಾಧ್ಯವೆನ್ನುವ 'ಆಕಾಶವಾಣಿ ಯಕ್ಷಗಾನ' ಲೇಖನ ಅರ್ಥಪೂರ್ಣವಾಗಿದೆ. ತೆಂಕುತಿಟ್ಟಿನ ಯಕ್ಷಗಾನದಲ್ಲಿನ ಭೀಮನ ವೇಷ, ಯಕ್ಷಗಾನ ಬಯಲಾಟಕ್ಕೂ ಇಸ್ಪಿಟ್ಟಾಟಕ್ಕೂ ಇರುವ ಸಂಬಂಧ, ಭೂತಾರಾಧನೆ ಮತ್ತು ಯಕ್ಷಗಾನ, ಹರಕೆಯಾಟಕ್ಕೆ ತುಳುವೇಕೆ ನಿಷಿದ್ಧ? ಎಂಬ ಹತ್ತು ಹಲವು ವಿಷಯಗಳ ಕುರಿತು ಚಿಂತನಾ ಸರಣಿಯಿದೆ. 'ಶ್ರೀಕರ ಶತಮುಖ ನುತತ್ರಿದಶಾ'ದಲ್ಲಿ ಛಂದೋಬಂಧಗಳ ಸರಳ ಸಾಧ್ಯತೆಗೆ ಸೂಚನೆಯಿದೆ. 'ಚಿರಸ್ಮರಣೀಯ ಯಕ್ಷಗಾನ ಕಲಾವಿದರು ಜನಮಾನಸದಲ್ಲಿ' ಶ್ರೀಕೃಷ್ಣನ ಬಾಲಲೀಲೆ ದಾಸರ ಪದಗಳಲ್ಲಿ ಹಾಗೂ ಯಕ್ಷಗಾನ ಪ್ರಸಂಗದಲ್ಲಿ 'ಪಾರ್ತಿಸುಬ್ಬ ಹಾಗೂ ಹಿರಿಯ ಸಂಶೋಧಕರು' ಲೇಖನಗಳು ಓದುಗರಿಗೆ ಉತ್ತಮ ಗ್ರಾಸವನ್ನು ಒದಗಿಸಿವೆ. ಯಕ್ಷಗಾನದ ಸೌರಸತ್ವ 'ಯಕ್ಷಗಾನ ಬಯಲಾಟವು ಸಾರ್ವವರ್ಣಿಕ ಕ್ರೀಡನೀಯಕ'ದಲ್ಲಿ ವ್ಯಕ್ತವಾಗಿದೆ. ಯಕ್ಷಗಾನಕ್ಕಾಗಿಯೇ ಸಮಯವನ್ನು ಮೀಸಲಿರಿಸಿ ಸಮರ್ಪಣಾ ಭಾವದಿಂದ ಯಕ್ಷಗಾನವನ್ನು ಕಲಿತು, ಕಲೆಯ ಹಿರಿಮೆಯನ್ನು ಹೆಚ್ಚಿಸಿದ ಡಾ. ಮಾರ್ಥಾ ಆ್ಯಷ್ಟನ್, ಕತ್ರಿನ್ ಬಿಂದರ್ ಅವರ ಸಾಹಸಗಾಥೆಯನ್ನು 'ಯಕ್ಷಗಾನವನ್ನು ಏರಿಸಿದ ವಿದೇಶೀ ಮಹಿಳೆಯರು' ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಹೀಗೆ ಹಲವು ವಿಷಯಗಳನ್ನೊಳಗೊಂಡ, ಯಕ್ಷಗಾನವನ್ನು ಕುರಿತ ಹೊಸ ಚಿಂತನೆಗಳ, ಅರಿವಿನ ಪರಿಧಿಯನ್ನು ವಿಸ್ತರಿಸುವ ಪ್ರಮೇಯಗಳಂತಿರುವ ಲೇಖನ ಸಂಚಯ 'ಯಕ್ಷತರು' ಯಕ್ಷಗಾನಾಸಕ್ತರಿಗೆ, ಕಲಾಸಕ್ತರಿಗೆ ಅರಿವಿನ ನೆರಳಾಗಿ ಆಶ್ರಯವನ್ನೀಯುತ್ತದೆ.

ರಾಘವೇಂದ್ರ ತುಂಗ ಕೆ.

೧೭. ಮಧ್ಯಕಾಲೀನ ಕರ್ನಾಟಕದಲ್ಲಿ ಆಹಾರ ಮತ್ತು ಪಾನೀಯಗಳು

ಡಾ. ಎನ್. ನಂದೀಶ್ವರ
ಪುಟ ೨೫೦, ಬೆಲೆ ರೂ. ೨೯೫/-
ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿದ್ದಪ್ಪ ಲೇಔಟ್
ಬಾಲಾಜಿನಗರ, ಸಿರಾ, ತುಮಕೂರು ಜಿಲ್ಲೆ ೫೭೨ ೧೩೭

ಸಾಹಿತ್ಯವನ್ನು ಮೂಲ ಆಕರವನ್ನಾಗಿ ಬಳಸಿಕೊಂಡು ಇತಿಹಾಸಕಾರನ ದೃಷ್ಟಿಕೋನದೊಂದಿಗೆ ಸಂಶೋಧನೆಗೆ ಅನ್ಯಜ್ಞಾನ ಶಿಸ್ತುಗಳಿಗೆ ಸಂಬಂಧಿಸಿದ ಹಲವು ಆಕರಗಳನ್ನು ಪೂರಕವಾಗಿ ಸ್ವೀಕರಿಸಿರುವ ಡಾ. ನಂದೀಶ್ವರ ಅವರು 'ಮಧ್ಯಕಾಲೀನ ಕರ್ನಾಟಕದಲ್ಲಿ ಆಹಾರ ಮತ್ತು ಪಾನೀಯಗಳು' ಎಂಬ ಸಂಶೋಧನ ಗ್ರಂಥವನ್ನು ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಇವರು ಕಲೆಹಾಕಿದ ಮಾಹಿತಿಯ ರಾಶಿ ಅಚ್ಚರಿ ಮೂಡಿಸುವಷ್ಟು ಕುತೂಹಲಕಾರಿಯಾಗಿದೆ.

ಈ ಕೃತಿ ಅವರ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ನಿಬಂಧದ ಪರಿಷ್ಕೃತ ಆವೃತ್ತಿ(ಯಾವ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೆಂದು ಪುಸ್ತಕದ ಯಾವ ಭಾಗದಲ್ಲೂ ನಮೂದಿತವಾಗಿಲ್ಲ.). ಇನ್ನೂರು ಮೂವತ್ತೆಂಟು ಪುಟಗಳ ಈ ಗ್ರಂಥದಲ್ಲಿ ಒಂಬತ್ತು ಅಧ್ಯಾಯಗಳಿದ್ದು ಇಂಥ ಮಹಾಪ್ರಬಂಧಗಳಿಗಿರಬೇಕಾದಂತೆ -೧. ಸೂಪಶಾಸ್ತ್ರದ ಆಕರಗಳ ಸಮೀಕ್ಷೆ, ೨. ಭಾರತದಲ್ಲಿ ಸೂಪಶಾಸ್ತ್ರದ ಬೆಳವಣಿಗೆ, ೩. ಆಹಾರ ಪದಾರ್ಥಗಳು ಮತ್ತು ಅವುಗಳ ಬಳಕೆ, ೪. ಭಕ್ಷ್ಯಗಳು, ೫. ಮಾಂಸಾಹಾರ, ೬. ಪಾನೀಯಗಳು, ೭, ತಾಂಬೂಲ, ೮. ಊಟದ ಸಂಪ್ರದಾಯಗಳು, ಉಪಚಾರಗಳು, ಉಪಕರಣಗಳು ಮತ್ತು ನಿಷೇಧಗಳು, ೯. ಉಪಸಂಹಾರವಿದೆ. ಜೊತೆಗೆ ನಾಲ್ಕು ಅನುಬಂಧಗಳು ಸೇರಿವೆ. ಪುಸ್ತಕದ ಕಡೆಯ ಭಾಗದಲ್ಲಿ ೧೬ ಪುಟ ಆಕರ ಗ್ರಂಥಗಳ ಪಟ್ಟಿಯಿದೆ. ಸಂಶೋಧನಾ ವಿಷಯವನ್ನು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ವಿಂಗಡಿಸುವ ಕ್ರಮ ಸಮರ್ಪಕವಾಗಿದೆ.

ಪ್ರತಿಯೊಂದು ಅಧ್ಯಾಯದಲ್ಲೂ ಪ್ರಸ್ತಾಪವಾಗಿರುವ ವಿಚಾರಗಳು ಹೀಗಿವೆ :-

೧. ಸಾಹಿತ್ಯ ಕೃತಿಗಳು, ವಿದೇಶಿ ಸಾಹಿತ್ಯಾಧಾರಗಳು, ಶಾಸನಗಳು, ಸ್ಮಾರಕಗಳು ಮತ್ತು ಅಧ್ಯಯನದ ಮಹತ್ವದ ಬಗ್ಗೆ ಸ್ಥೂಲವಾಗಿ ಗಮನಹರಿಸಿದ್ದಾರೆ. ೨. ಮೊದಲು ಆಹಾರವನ್ನು ಬೇಯಿಸದೆ ತಿನ್ನುತ್ತಿದ್ದ ಮಾನವ ಬೇಯಿಸಿದ ಆಹಾರದಲ್ಲಿ ರುಚಿ ಸಿಕ್ಕ ನಂತರ, ತನ್ನ ಅಗತ್ಯ ಹಾಗೂ ರುಚಿಗೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಾ ಬಂದಿರುವುದನ್ನು ಗುರುತಿಸಿ ಸೂಪಶಾಸ್ತ್ರದಲ್ಲಿ ಸಾಮಾಜಿಕ ಜೀವನ, ಸಾಮಾಜಿಕ ಇತಿಹಾಸ, ಸಾಂಸ್ಕೃತಿಕ ವಿಕಾಸ ಹಾಸುಹೊಕ್ಕಾಗಿ ಸೇರಿಕೊಂಡಿರುವುದನ್ನು ತಿಳಿಸಿದ್ದಾರೆ. ೩. ಹೊಸ ವಸ್ತುಗಳು ದೊರಕಿದಂತೆ ಆಹಾರ ತಯಾರಿಸುವ ವಿಧಾನ ಬದಲಾಗುತ್ತ ಬಂದುದು, ಆರ್ಥಿಕ

ಸ್ಥಿತಿ, ಸಾಮಾಜಿಕ ಪದ್ಧತಿ, ಧಾರ್ಮಿಕ ಕಟ್ಟುಪಾಡುಗಳು, ಆಹಾರ ಪದ್ಧತಿಗಳ ಪಾಕ ವಿಧಾನದ ವಿಕಾಸ ಮತ್ತು ಬೆಳವಣಿಗೆಗೆ ಕಾರಣವಾಗಿವೆ ಎಂಬ ವಿಚಾರ ಬಂದಿದೆ. ೪. ವಿವಿಧ ಭಕ್ಷ್ಯಗಳನ್ನು ತಯಾರಿಸುವ ವಿಧಾನವನ್ನು ೪೨ ಪುಟಗಳಲ್ಲಿ ವಿವರಿಸಿದ್ದಾರೆ. ಇದಕ್ಕೆ ೨೪೧ ಅಡಿಟಿಪ್ಪಣಿಗಳಿರುವುದು ಅಚ್ಚರಿ ಮೂಡಿಸುತ್ತದೆ. ೫. ಮಾಂಸಾಹಾರದ ತಯಾರಿಕೆಯ ವಿಧಾನ, ವಿವಿಧ ಬಗೆಯ ಮಾಂಸಗಳ ಬಳಕೆಯನ್ನು ತಿಳಿಸಿ, ಮಾಂಸಾಹಾರ ಸ್ಥಾನಮಾನ, ಕೀಳರಿಮೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಮಾಂಸಾಹಾರ ಸಂಸ್ಕೃತಿ, ಸಸ್ಯಾಹಾರ ಸಂಸ್ಕೃತಿ ಪರಸ್ಪರ ಶ್ರೇಷ್ಠತೆಯನ್ನು ಮುಂದು ಮಾಡಿಕೊಂಡು ಮುಖಾಮುಖಿಯಾಗಿರುವ ವಿಚಾರವನ್ನು ತಿಳಿಸಿದ್ದಾರೆ. ೬. ಕುಡಿಯಲು ಯೋಗ್ಯವಾದ ಪಾನಕ, ಸೋಮರಸ, ಹಣ್ಣಿನ ರಸ, ಮದ್ಯ ಮುಂತಾದ ದ್ರವ ಪದಾರ್ಥಗಳ ತಯಾರಿಕಾ ವಿಧಾನ ಮತ್ತು ಬಳಕೆಯನ್ನು ತಿಳಿಸಿ, ಕೆಲವು ಪಾನೀಯಗಳನ್ನು ಸಮಾಜದ ಎಲ್ಲಾ ವರ್ಗದವರು ಕುಡಿಯದೇ ಕೆಲವರು ವರ್ಗದವರು ಮಾತ್ರ ಕುಡಿಯುತ್ತಿರುವುದರ ಬಗ್ಗೆ ತಿಳಿಸಿದ್ದಾರೆ. ೨೭ ಪುಟಗಳ ವಿವರಗಳಿಗೆ ೧೪೯ ಅಡಿಟಿಪ್ಪಣಿ ನೀಡಿದ್ದಾರೆ. ೭. ತಾಂಬೂಲದ ಬಳಕೆ, ಅದನ್ನು ಯಾವ ಸಂದರ್ಭದಲ್ಲಿ, ಯಾರ‍್ಯಾರು ಬಳಸುತ್ತಾರೆಂಬ ವಿವರಗಳು ಕುತೂಹಲಕಾರಿಯಾಗಿವೆ. ೮. ಇದರಲ್ಲಿ ಊಟದ ವಿಧಾನ, ಉಪಚಾರ ಮಾಡುವ ಬಗೆ, ಬಳಸುವ ಉಪಕರಣಗಳು ಹಾಗೂ ಧಾರ್ಮಿಕ, ಸಾಂಸ್ಕೃತಿಕ, ವೈಯಕ್ತಿಕ ನಂಬಿಕೆಗಳ ನೆಲೆಯಿಂದ ರೂಪಿತವಾದ ನಿಷೇಧಗಳ ಬಗ್ಗೆ ವಿವರವಾದ ಪ್ರಸ್ತಾಪವಿದೆ. ೩೦ ಸಂಪುಟಗಳ ವಿವರಣೆಗೆ ೧೨೧ ಅಡಿಟಿಪ್ಪಣಿಗಳಿವೆ. ೯. ಪುಸ್ತಕದ ಒಟ್ಟು ಸಾರಾಂಶದ ಪಕ್ಷಿನೋಟವಿದೆ.

ಆಸಕ್ತಿ, ಅಧ್ಯಯನ, ಪರಿಶ್ರಮ ಸಾಧನೆಯಿಂದ ಹೊಮ್ಮಿ ಬಂದಿರುವ ಈ ಕೃತಿ ಸಂಗ್ರಹಯೋಗ್ಯವಾಗಿದೆ. ಈ ವಿಷಯದ ಬಗ್ಗೆ ಮುಂದೆ ಸಂಶೋಧಕರು ಮಾಡುವ ಹಲವು ಅಧ್ಯಯನಗಳಿಗೆ ಆಕರವಾಗಬಲ್ಲ ಸತ್ತ್ವವನ್ನು ಪಡೆದಿದೆ.

ಪ್ರೊ. ಎಂ.ಎಲ್. ನರಸಿಂಹಮೂರ್ತಿ

೧೮. ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ

ಡಾ. ಲಕ್ಷ್ಮೀ ಜಿ. ಪ್ರಸಾದ್
ಪುಟ ೩೩೬, ಬೆಲೆ ರೂ. ೩೦೦/-
ಪ್ರಥಮ ಮುದ್ರಣ ೨೦೧೩
ಪ್ರಚೇತ ಬುಕ್ ಹೌಸ್ ಪ್ರಕಾಶನ
ನಂ. ३, ಹೊಟೇಲ್ ಶಾಂತಿಸಾಗರ, ನೆಲಮಾಳಿಗೆ, ಬಸವನಗುಡಿ ರಸ್ತೆ
ಬೆಂಗಳೂರು ೫೬೦ ೦೧೯

ಡಾ. ಲಕ್ಷ್ಮೀ ಜಿ. ಪ್ರಸಾದ್ ಅವರ 'ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ ಒಂದು ವಿಶ್ಲೇಷಣಾತ್ಮಕ ಅಧ್ಯಯನ'ವು ಡಾ. ಎಸ್. ನಾಗರಾಜು ಅವರ ಮಾರ್ಗದರ್ಶನದಲ್ಲಿ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರ ಸಾಲಿನ ಪಿಎಚ್.ಡಿ. ಪದವಿಗಾಗಿ, ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರದ ಮೂಲಕ ಸಲ್ಲಿಸಿದ ಮಹಾಪ್ರಬಂಧವಾಗಿದೆ. ಕರಾವಳಿ ನಾಗಾರಾಧನೆಯ ಕುರಿತಾಗಿ ನಡೆಸಿದ ಸಂಶೋಧನೆಯಲ್ಲಿ ಇದೊಂದು ಮಹತ್ವದ ಕೃಷಿಯಾಗಿ ಮೂಡಿಬಂದಿದೆ.

ಪ್ರಸ್ತುತ ಕೃತಿಯು ಹತ್ತು ಅಧ್ಯಾಯಗಳನ್ನು ಒಳಗೊಂಡಿದ್ದು, ಕೊನೆಯ ಭಾಗದಲ್ಲಿ ಪೂರಕ ಮಾಹಿತಿಯಾಗಿ ಅನುಬಂಧ ನೀಡಲಾಗಿದೆ. ಮೊದಲ ಅಧ್ಯಾಯದಲ್ಲಿ ಪ್ರಸ್ತಾವನೆಯೊಂದಿಗೆ ಸಾಂಸ್ಕೃತಿಕ ತುಳುನಾಡಿನ ಭೌಗೋಳಿಕ ಚಿತ್ರಣವನ್ನು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ನಾಗಬ್ರಹ್ಮ ಪರಿಕಲ್ಪನೆಯ ಕುರಿತಾಗಿ ಚರ್ಚಿಸಲಾಗಿದೆ. ಇದರಲ್ಲಿ ಬೆರ್ಮೆರ್ ಆರಾಧನೆಯ ಪ್ರಾಚೀನತೆ. ಬೆರ್ಮೆರ್ ಸ್ವರೂಪ ಆಲಡೆಯ ಬೆರ್ಮೆರ್, ಗರಡಿಯ ಬೆರ್ಮೆರ್, ಕಳೆಂದ ಬೆರ್ಮೆರ್, ಭೂತ ಬ್ರಹ್ಮ, ಯಕ್ಷಬ್ರಹ್ಮ, ನಾಗ ಹಾಗೂ ಬೆರ್ಮೆರ್ ಸಮನ್ವಯಗೊಂಡು ನಾಗಬ್ರಹ್ಮ ಆದ ಬಗ್ಗೆ ಚರ್ಚಿಸಲಾಗಿದೆ.

ನಾಗಬ್ರಹ್ಮ ಸೇರಿ ಎಂಬ ಮೂರನೆಯ ಅಧ್ಯಾಯದಲ್ಲಿ ಆಲಡೆ ಸಂಕೀರ್ಣದ ದೈವಗಳ, ಬ್ರಹ್ಮಸ್ಥಾನ ಸಂಕೀರ್ಣದ ದೈವಗಳ, ಗರಡಿ ಸಂಕೀರ್ಣದ ದೈವಗಳ ಹಾಗೂ ಮುಗ್ಗೆರ್ಲು ಸಂಕೀರ್ಣದ ದೈವಗಳೆಂದು ಪ್ರಾದೇಶಿಕ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಮುಂದಿನ ವಿಸ್ತಾರವಾದ ನಾಲ್ಕನೆಯ ಅಧ್ಯಾಯದಲ್ಲಿ ನಾಗಬ್ರಹ್ಮ ಆರಾಧನಾ ಪ್ರಕಾರಗಳ ಕುರಿತು ಚರ್ಚಿಸಲಾಗಿದೆ. ನಾಗಾರಾಧನೆಯನ್ನು ವೈದಿಕ ಮೂಲ ಪ್ರಕಾರ, ತಾಂತ್ರಿಕ ಮೂಲ ಪ್ರಕಾರ ಹಾಗೂ ಜನಪದ ಮೂಲ ಪ್ರಕಾರಗಳೆಂದು ವರ್ಗೀಕರಿಸಲಾಗಿದೆ. ಆಚರಣೆಯ ಸ್ವರೂಪವನ್ನು ಹಿನ್ನೆಲೆಯಾಗಿಟ್ಟುಕೊಂಡು ೩೧ ವಿಧದ ನಾಗಾರಾಧನಾ ಪ್ರಕಾರಗಳ ಬಗ್ಗೆ, ಅವುಗಳ ವಿಧಿವಿಧಾನಗಳ ಬಗ್ಗೆ ಚರ್ಚಿಸಿದ್ದಾರೆ. ವೇದೇತಿಹಾಸ ಪುರಾಣಗಳ. ನಾಗಬ್ರಹ್ಮ ಎಂಬ ಮುಂದಿನ ಅಧ್ಯಾಯದಲ್ಲಿ ನಾಗಗರುಡಾವತಾರ, ಜರತ್ಕಾರು ವಿವಾಹ ಮೊದಲಾದವುಗಳನ್ನು ಚರ್ಚಿಸಲಾಗಿದೆ. ಇಲ್ಲಿ ವೇದ, ಪುರಾಣ, ಇತಿಹಾಸ ಹಾಗೂ ಪಾಡ್ದನಗಳಲ್ಲಿ ವರ್ಣಿಸಲ್ಪಟ್ಟ ನಾಗಬ್ರಹ್ಮ ಕಥಾನಕಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿದೆ. ನಾಗಾರಾಧನೆ ಹಾಗೂ ಕಂಬಳದ ಕುರಿತು ಮುಂದಿನ ಅಧ್ಯಾಯದಲ್ಲಿ ಚರ್ಚಿಸಿದೆ. ಕಂಬಳಕೋರಿ ನೇಮ ಮತ್ತು ಆ ಹೊತ್ತು ಅಲ್ಲಿ ನಡೆಯುವ 'ಒಂದಂ ಕುಂದು ನಲುವತ್ತು ದೈವಗಳು', ಕಿನ್ನಿಮಾಣಿ, ಪೂಮಾಣಿ ಕೋಮರಾಯ, ಬಬ್ಬರ್ಯ, ಪಂಜುರ್ಲಿ, ರಕ್ತೇಶ್ವರಿ ಮೊದಲಾದ ದೈವಗಳ ವೈಶಿಷ್ಟ್ಯಗಳನ್ನು ಚರ್ಚಿಸಲಾಗಿದೆ. ಬೆರ್ಮೆರ್ ಆರಾಧನೆಯ ಮೇಲೆ ಇತರ ಸಂಪ್ರದಾಯಗಳ ಪ್ರಭಾವವನ್ನು ವಿವರಿಸುತ್ತ ಯಕ್ಷಾರಾಧನೆ. ಅರಸು ಆರಾಧನೆ, ವರರ ಆರಾಧನೆ ನಾಥ ಸಂಪ್ರದಾಯ ಹಾಗೂ ನಾಗಬ್ರಹ್ಮ ಹೀಗೆ ಬೇರೆ ಬೇರೆ ಸಂಪ್ರದಾಯಗಳ ಪ್ರಭಾವವನ್ನು ವಿಶ್ಲೇಷಿಸಲಾಗಿದೆ. ಡಾ. ಲಕ್ಷ್ಮೀ ಜಿ. ಪ್ರಸಾದ್ ಅವರು ಈ ಕೃತಿಯು ಕರಾವಳಿ ನಾಗಾರಾಧನೆಯ

ಅಧ್ಯಯನದಲ್ಲಿ ಹೊಸ ಚಿಂತನೆಗಳಿಗೆ ದಾರಿ ಮಾಡಿದೆ. ಸಂಶೋಧಕರು ವ್ಯಾಪಕವಾದ ಕ್ಷೇತ್ರಕಾರ್ಯ, ಗ್ರಂಥಾಧ್ಯಯನ ಹಾಗೂ ಹತ್ತು ಹಲವು ಮಂದಿ ವಕ್ತೃಗಳೊಂದಿಗೆ ಸಂದರ್ಶನ ನಡೆಸಿ ಅಧ್ಯಯನದ ಒಳನೋಟಗಳನ್ನು ನೀಡುವ ಪ್ರಯತ್ನ ನಡೆಸಿದ್ದಾರೆ. ಹತ್ತು ಅಧ್ಯಾಯಗಳನ್ನು ಒಳಗೊಂಡ ಈ ಸಂಶೋಧನಾತ್ಮಕ ಕೃತಿ ಹತ್ತುಹಲವು ವಿಷಯಗಳನ್ನು ಒಳಗೊಂಡು ಯಾವುದೇ ವಿಷಯವನ್ನು ಆಮೂಲಾಗ್ರವಾಗಿ ವಿಶ್ಲೇಷಿಸಲು ಪ್ರಯತ್ನಪಟ್ಟಿದೆ. ಆದರೆ ಅದರಲ್ಲಿ ಯಶಸ್ವಿಯಾಗಿಲ್ಲ. ಸಂಶೋಧನೆಗೆ ಆಯ್ಕೆ ಮಾಡಿರುವ ವಿಷಯದ ವ್ಯಾಪ್ತಿ ಮತ್ತು ವಿಷಯಗಳ ಸಂಕೀರ್ಣತೆಯನ್ನು ಸಂಶೋಧಕರು ಮನಗಾಣಬೇಕಿತ್ತಗ. ವಿಷಯಗಳ ರಾಶಿ ಹಾಕಿ ಯಾವುದಕ್ಕೂ ನ್ಯಾಯ ದೊರಕಿಸಲಾಗದಿರುವುದು ಈ ಕೃತಿಯ ದೊಡ್ಡ ಕೊರತೆಯಾಗಿದೆ. ಕೃತಿಯಲ್ಲಿ ಲೇಖಕರ ಮಾತಿನಿಂದ-ಬೆನ್ನುಡಿಯವರೆಗೆ ಅಕ್ಷರ ದೋಷಗಳು ಹಾಗೆಯೇ ಉಳಿದಿವೆ.

ಡಾ. ಪುತ್ತಿ ವಸಂತಕುಮಾರ್

೧೯. ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ

ಡಾ. ಚಂದ್ರಪ್ಪ ಸೊಬಟಿ
ಪುಟ ೩೦೨, ಬೆಲೆ ರೂ. ೨೫೦/-
ಪ್ರಥಮ ಮುದ್ರಣ ೨೦೧೩
ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರೋಡ್
ಗದಗ-೫೮೩೧೦೧

ಶಿಸ್ತುಬದ್ಧ ಸಂಶೋಧನೆಗೆ ಬಹುಸಂಸ್ಕೃತಿಗಳು ಬೇರೆ ಬೇರೆ ಮಗ್ಗಲುಗಳನ್ನು ಒಡ್ಡಿಕೊಳ್ಳುತ್ತಿರುವುದರಿಂದ ಜಾನಪದ ಅಧ್ಯಯನ ಇತ್ತೀಚೆಗೆ ವಿವಿಧ ಆಯಾಮಗಳನ್ನು ಪಡೆಯುತ್ತಿದೆ. ಗಂಭೀರವಾದ ಓದಿನ ಗ್ರಹಿಕೆ, ಶ್ರದ್ಧೆ ಮತ್ತು ಪರಿಶ್ರಮಗಳಿಂದ ಕೂಡಿದ ಕ್ಷೇತ್ರಕಾರ್ಯದ ಮೂಲಕ ಒಬ್ಬ ಸಂಶೋಧಕ ಎಂಥ ಆಕರ ಗ್ರಂಥವನ್ನು ರೂಪಿಸ ಬಹುದೆಂಬುದಕ್ಕೆ ಉದಾಹರಿಸಬಹುದಾದ ಅರ್ಹತೆಯುಳ್ಳ ಕೃತಿಗಳಲ್ಲಿ ಒಂದು- ಡಾ. ಚಂದ್ರಪ್ಪ ಸೊಬಟಿ ಅವರು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ 'ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ'. ಇಂಥ ಅಧ್ಯಯನಗಳಿಂದ ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿ, ಧರ್ಮ ಮುಂತಾದವುಗಳಿಗೆ ಸಂಬಂಧಿಸಿದ ಹಲವು ವಿಷಯಗಳು ಬೆಳಕಿಗೆ ಬರುತ್ತವೆ.

ಮುನ್ನೂರ ಅರವತ್ತು ಪುಟಗಳ ಈ ಬೃಹತ್ ಗ್ರಂಥದಲ್ಲಿ ಎಂಟು ಅಧ್ಯಾಯಗಳಿದ್ದು ಮಹಾಪ್ರಬಂಧಗಳಿಗಿರಬೇಕಾದಂತೆ -೧. ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಮಹತ್ವ, ೨. ಹಾಲುಮತ ಸಂಸ್ಕೃತಿ ಮತ್ತು ಡೊಳ್ಳು ಕಲಾಪರಂಪರೆ, ೩. ಡೊಳ್ಳಿನ ಹಾಡುಗಳ ಸ್ವರೂಪ, ಲಕ್ಷಣಗಳು ಮತ್ತು ವರ್ಗೀಕರಣ, ೪. ಡೊಳ್ಳಿನ

ಹಾಡುಗಳಲ್ಲಿ ಸಾಂಸ್ಕೃತಿಕ ವೀರರು, ೫. ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅನನ್ಯತೆ, ೬. ಡೊಳ್ಳಿನ ಹಾಡುಗಳ ಲೋಕದೃಷ್ಟಿ, ೭. ಡೊಳ್ಳಿನ ಹಾಡುಗಳು ಮತ್ತು ಆಧುನಿಕತೆ ಹಾಗೂ ೮. ಸಮಾರೋಪ ಇವೆ. ಸಂಶೋಧನಾ ವಿಷಯವನ್ನು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಪ್ರಧಾನವಾಗಿ ವಿಂಗಡಿಸುವ ಮತ್ತು ವಿಷಯವನ್ನು ವಿವರವಾಗಿ, ಶಾಸ್ತ್ರೀಯವಾಗಿ ತಿಳಿಸಲು ಪ್ರತಿಯೊಂದು ಅಧ್ಯಾಯದಲ್ಲಿಯೂ ಉಪಶೀರ್ಷಿಕೆಗಳನ್ನು ನೀಡಿ ನಿರೂಪಿಸುವ ಕ್ರಮ ಸಮರ್ಪಕವಾಗಿದೆ.

ಅಧ್ಯಾಯಗಳಲ್ಲಿ ಕಂಡುಬರುವ ವಿಚಾರಗಳು

ಮೊದಲನೇ ಅಧ್ಯಾಯದಲ್ಲಿ ಡೊಳ್ಳಿನ ಹಾಡುಗಳು ಹೇರಳವಾಗಿರುವ ಕರ್ನಾಟಕ, ಮಹಾರಾಷ್ಟ್ರ ಗಡಿನಾಡು ಪ್ರದೇಶದಲ್ಲಿ ಅವುಗಳ ನೆಲೆಯನ್ನು ಗುರುತಿಸುವ, ಹಾಡುವ ಕಲಾವಿದರಲ್ಲಿರುವ ಪಂಥ ವೈವಿಧ್ಯ ಮತ್ತು ಈ ಹಾಡುಗಳಿಗೆ ಸಂಬಂಧಿಸಿದಂತೆ ಈವರೆಗೆ ಪ್ರಕಟವಾಗಿರುವ ಕೃತಿಗಳ ಸಮೀಕ್ಷಾ ಕಾರ್ಯ ಅಚ್ಚುಕಟ್ಟಾಗಿ ನಡೆದಿದೆ.

ಎರಡನೇ ಅಧ್ಯಾಯದಲ್ಲಿ ಹಾಲುಮತದ ಪರಿಕಲ್ಪನೆ, 'ಕುರುಬ' ಪದದ ಸಾಂಸ್ಕೃತಿಕ ಚಹರೆಗಳು, ಡೊಳ್ಳು ವಾದ್ಯದ ಹುಟ್ಟಿನ ಹಿಂದಿರುವ ತಾತ್ವಿಕ ಆಯಾಮಗಳು, ಈ ವಾದ್ಯದ ಕಥನಗಳ ಮೇಲೆ ಅನ್ಯಧರ್ಮದ ಪ್ರಭಾವವನ್ನು ಗುರುತಿಸುವಲ್ಲಿ ಹೊಸದೃಷ್ಟಿಯ ಆಲೋಚನೆಗಳಿವೆ. ಅಲ್ಲದೇ ಡೊಳ್ಳಿನ ವಾದ್ಯದೊಂದಿಗೆ ಬೆಸೆದುಕೊಂಡಿರುವ ಬಡಿತ, ಕುಣಿತ ಹಾಡುಗಾರಿಕೆಗಿರುವ ಸಂಬಂಧಗಳ ಪರಿಶೀಲನೆಯಲ್ಲಿ ಒಳನೋಟಗಳಿರುವುದು ನಿಬಂಧದ ಮೌಲ್ಯವನ್ನು ಹೆಚ್ಚಿಸಿದೆ.

ಮೂರನೇ ಅಧ್ಯಾಯದಲ್ಲಿ ಡೊಳ್ಳಿನ ಹಾಡುಗಳ ವಿವಿಧ ಪ್ರಕಾರಗಳಾದ ಸ್ತುತಿಪದಗಳು, ಸಭಾ ಮರ್ಯಾದೆ, ಹರಕೆ, ಆರಾಧ್ಯ ದೈವದ ಹಾಡುಗಳು, ಪೌರಾಣಿಕ ಹಾಗೂ ಚಾರಿತ್ರಿಕ ಹಾಡುಗಳಿಗೆ ಉದಾಹರಣೆ ನೀಡುವುದರೊಂದಿಗೆ ಆ ಹಾಡುಗಳ ತಾತ್ವಿಕತೆಯನ್ನು ಗುರುತಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಡೊಳ್ಳಿನ ಕಲಾವಿದರು ಬೀರಪ್ಪನ ಭಕ್ತರಾಗಿದ್ದು, ಆತನ ಸಾಂಸ್ಕೃತಿಕ ಚರಿತ್ರೆ, ಸಂಘರ್ಷ, ನಡೆದ ರಾಜಕಾರಣ, ತಾತ್ವಿಕತೆಯನ್ನು ತಿಳಿಸಿ, ಮಾಳಿಂಗರಾಯ, ರೇವಣಸಿದ್ಧ, ಅಮೋಘಸಿದ್ಧ, ಇಟ್ಟಪ್ಪ, ಬಳ್ಳಪ್ಪ ಮತ್ತು ಮಾಯವ್ವ-ಎಂಬ ಸಾಂಸ್ಕೃತಿಕ ವೀರರ ಚರಿತ್ರೆಯನ್ನು ಮೌಖಿಕ ಪರಂಪರೆಯನ್ನು ಆಶ್ರಯಿಸಿ ಕಟ್ಟಿಕೊಡುವುದರ ಮೂಲಕ ಆ ಸಮುದಾಯದ ಚರಿತ್ರೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದರ ಜೊತೆಗೆ ಆ ಕುಲದ ಆಚರಣೆ, ನಂಬಿಕೆ, ಆಚಾರ-ವಿಚಾರಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವ ಕೆಲಸ ನಡೆದಿದೆ. ಈ ಅಧ್ಯಾಯ ನೂರ ಐವತ್ಮೂರು ಪುಟಗಳಿದ್ದು ಸಂಶೋಧನೆಯ ಹೃದಯ ಭಾಗವಾಗಿದೆ.

ಅಧ್ಯಾಯ ಐದರಲ್ಲಿ ಕುಲ ಮೂಲದ ಡೊಳ್ಳಿನ ಹಾಡುಗಳು, ಹಾಡುಗಾರರ ಹಾಗೂ ಡೊಳ್ಳಿನ ಹಾಡುಗಳು ಪ್ರತಿನಿಧಿಸುವ ಸಾಂಸ್ಕೃತಿಕ ಅನನ್ಯತೆಯ ಬಗ್ಗೆ ವಿಶ್ಲೇಷಣೆ ಇದೆ.

ಅಧ್ಯಾಯ ಆರರಲ್ಲಿ ಜನಪದ ಕಲೆ ಕೇವಲ ಮನೋರಂಜನೆಗಾಗಿ ಸೃಷ್ಟಿಗೊಂಡದ್ದಲ್ಲ, ಅವಕ್ಕೆ ಅದರದ್ದೇ ಆದ ಉದ್ದೇಶಗಳಿರುತ್ತದೆ. ಡೊಳ್ಳಿನ ಹಾಡುಗಳ ಲೋಕದೃಷ್ಟಿಯ ಭಿನ್ನ ಆಯಾಮಗಳಾದ ಕುಲ, ದೈವ, ಸ್ಥಳ, ವೃತ್ತಿ, ಲಿಂಗ ಮೂಲದ ಮತ್ತು ವರ್ತಮಾನದ ಬಗೆಗಿನ ದೃಷ್ಟಿಗಳನ್ನು ಕುರಿತು ವಿಶ್ಲೇಷಿಸಿರುವುದು ಕಂಡುಬರುತ್ತದೆ.

ಅಧ್ಯಾಯ ಏಳರಲ್ಲಿ ಮೌಖಿಕ ಪರಂಪರೆಯಲ್ಲಿ ಪ್ರವಹಿಸುತ್ತ ಬಂದಿರುವ ಡೊಳ್ಳಿನ ಹಾಡುಗಳ ಮೇಲೆ ಆಧುನಿಕತೆಯ ಪ್ರಭಾವವಾಗಿರುವುದನ್ನು ಗುರುತಿಸುವ ಸಂಶೋಧಕರು ಕಲಿಕೆ ಮತ್ತು ಅಭಿವ್ಯಕ್ತಿ ಉದ್ದೇಶದಲ್ಲಾದ ಬದಲಾವಣೆಗಳು, ಜನಪ್ರಿಯ ಶೈಲಿಯನ್ನು ಬೆನ್ನುಹತ್ತಿದ ಕಲಾವಿದರ ಬಗ್ಗೆ ಆಧುನಿಕತೆಯ ದೃಷ್ಟಿಯಿಂದ ವಿವೇಚಿಸಿರುವುದು ಕಂಡು ಬರುತ್ತದೆ.

ಅಧ್ಯಾಯ ಎಂಟರಲ್ಲಿ ಅಧ್ಯಯನದ ಫಲಿತಗಳನ್ನು ನೀಡುವ ಮೂಲಕ ಮುಂದೆ ಈ ವಿಷಯದ ಬಗ್ಗೆ ಸಂಶೋಧನೆ ಮಾಡಬಯಸುವವರಿಗೆ ಹೊಸ ಸಾಧ್ಯತೆಗಳನ್ನು ಸೂಚಿಸಲಾಗಿದೆ.

ಪುಸ್ತಕದ ಕೊನೆಯಲ್ಲಿ ಸಂಶೋಧನೆಗೆ ಪೂರಕವಾಗಿ ಬಳಸಿಕೊಂಡ ವಕ್ತೃಗಳ ವಿವರಗಳು, ಆಧಾರ ಗ್ರಂಥಗಳು, ಛಾಯಾಚಿತ್ರಗಳಿದ್ದು ಸಂಶೋಧನೆಯ ಮಹತ್ವ ಹೆಚ್ಚಿಸಿದೆ. ಆದರೆ ಸಾಂಸ್ಕೃತಿಕ ಪದಕೋಶವನ್ನು ನೀಡದಿರುವುದು ಅಧ್ಯಯನದ ಕೊರತೆಯಾಗಿದೆ. ಹಾಗೆಯೇ ಅನುಬಂಧದಲ್ಲಿ ಉಪಯುಕ್ತವಾದ ಕೆಲವು ಡೊಳ್ಳಿನ ಹಾಡುಗಳನ್ನು ಕೊಡಬಹುದಿತ್ತು. ಪರಾಮರ್ಶನ ಗ್ರಂಥಗಳ ಪಟ್ಟಿ ಲೇಖಕರ ಪರಿಶ್ರಮ, ತಾಳ್ಮೆಯನ್ನು ತಿಳಿಸುತ್ತದೆ.

ಅಪಾರವಾದ ಸಾಮಗ್ರಿಯನ್ನು ಸಂಗ್ರಹಿಸಿ, ಕ್ರಮಬದ್ಧವಾಗಿ ವರ್ಗೀಕರಿಸಿ, ಸಮತೋಲನದಿಂದ ವಿಶ್ಲೇಷಿಸುವಾಗ ಸರಳ, ಸ್ಪಷ್ಟ, ಖಚಿತವಾದ ಭಾಷೆಯನ್ನು ಬಳಸಿರುವುದು ಈ ಮಹಾಪ್ರಬಂಧದ ವೈಶಿಷ್ಟ್ಯವಾಗಿದೆ.

ಪ್ರೊ. ಎಂ.ಎಲ್. ನರಸಿಂಹಮೂರ್ತಿ

೨೦. ಬುಡಕಟ್ಟು ಅಧ್ಯಯನ

ಸಂಪುಟ ೫, ಸಂಚಿಕೆ ೨, ಜುಲೈ-ಡಿಸೆಂಬರ್ ೨೦೦೮

ಸಂಪಾದಕರು: ಡಾ. ಕೇಶವನ್ ಪ್ರಸಾದ್ ಕೆ. ಮರಟ್ಟಿ
ಡಾ. ಗಂಗಾಧರ ದೈವಜ್ಞ

ಪುಟ ೧೭೦, ಬೆಲೆ ರೂ. ೫೦/-
ಪ್ರಥಮ ಮುದ್ರಣ ೨೦೧೩
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಬುಡಕಟ್ಟು ಅಧ್ಯಯನಕ್ಕೂ -ಜಾನಪದ ಅಧ್ಯಯನಕ್ಕೂ ಹತ್ತಿರದ ನೆಂಟಸ್ಥನವಿದೆ. ಬುಡಕಟ್ಟನ್ನು ಬಿಟ್ಟು ಜಾನಪದವಿಲ್ಲ. ಜಾನಪದವನ್ನು ಮೀರಿದ ಬುಡಕಟ್ಟಿಲ್ಲ. ಹಾಗಾಗ ಬುಡಕಟ್ಟು ಅಧ್ಯಯನಕಾರರು ಜಾನಪದದ ಬಗ್ಗೆ ತಿಳಿದುಕೊಂಡಿರಬೇಕಾಗುವುದು ಅತ್ಯಾವಶ್ಯಕ.

ಪ್ರಸ್ತುತ ಸಂಚಿಕೆಯಲ್ಲಿ ಸೋಲಿಗ, ಕಮ್ಮಾರ, ಹಕ್ಕಿಪಿಕ್ಕಿ, ಗೌಡಾಲು, ಮಾಂಗ-ಗಾರುಡಿಗ, ಬೇಡಗಂಪಣ, ಜೇನುಕುರುಬ ಇತ್ಯಾದಿ ಬುಡಕಟ್ಟುಗಳ ಸ್ಥಿತಿಗತಿ, ಮಾತೃದೈವ, ಯಾತ್ರೆ, ಮಾತೃಪ್ರಧಾನ್ಯತೆ, ಆಧುನಿಕ ಮುಖಾಮುಖಿ, ಅಭಿವೃದ್ಧಿಗಳಿಗೆ ಸಂಬಂಧಪಟ್ಟ ಲೇಖನಗಳಿವೆ. ಹಾಗೆಯೇ ಅರಣ್ಯದ ನಡುವೆ ಆಧ್ಯಾತ್ಮ ಮತ್ತು ಅಟ್ಟಹಾಸ ಸಾಧ್ಯತೆಗಳ ಬಗೆಗೆ ಗಂಭೀರವಾದ ಲೇಖನ(ಪ್ರೊ. ಹಿ.ಚಿ. ಬೋರಲಿಂಗಯ್ಯ) ಇಲ್ಲಿನ ವಿಶೇಷತೆ. ಸೋಲಿಗರ ಪುರಾತನ ಬೇಟೆ ಬಗ್ಗೆ ಮತ್ತು ಅಲೆಮಾರಿ ಬುಡಕಟ್ಟುಗಳ ಹಕ್ಕು ಮತ್ತು ಸಂಪ್ರದಾಯಗಳ ಬಗ್ಗೆಗಿನ ಎರಡು ಆಂಗ್ಲ ಭಾಷೆಯಲ್ಲಿನ ಲೇಖನವಿದೆ. ಕೇರಳದಲ್ಲಿ ಬುಡಕಟ್ಟುಗಳ ಜೀವನ ಸುಧಾರಣೆಗಾಗಿ ಹೋರಾಡಿದ ಸಿ.ಕೆ. ಜಾನು ಅವರ ಬಗೆಗಿನ (ಸಿ.ಸಿ. ಪೂವಯ್ಯ) ಲೇಖನ ಗಮನ ಸೆಳೆಯುತ್ತದೆ.

ಪಶ್ಚಿಮ ಘಟ್ಟದ ಇಂಚಿ ಇಂಚನ್ನು ಬಲ್ಲ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ನಿಜವಾದ ಸಂಪತ್ತನ್ನು ಎಲ್ಲೆಲ್ಲಿ ಯಾರ್ಯಾರು ಕೊಳ್ಳೆ ಹೊಡೆಯುತ್ತಿದ್ದಾರೆ ಮತ್ತು ಅಮಾಯಕ ಗಿರಿಜನ ಮೇಲೆ ಯಾವ ರೀತಿಯ ದಬ್ಬಾಳಿಕೆಗಳಾಗುತ್ತವೆ ಎಂಬುದರ ಬಗ್ಗೆ ಗಂಭೀರವಾದ ಚಿಂತನೆ, ಆಲೋಚನೆಯ್ನು ಈ ಲೇಖನದಲ್ಲಿ ಮಾಡಿದ್ದಾರೆ. “ಅರಣ್ಯ ಕೇವಲ ಭೌತಿಕ ಸಂಪತ್ತಲ್ಲ. ಅದೊಂದು ಅನಾದಿಕಾಲದಿಂದ ರೂಪುಗೊಂಡ ಅಖಂಡ ಜೀವತಾಣ, ಅರಣ್ಯಕ್ಕೊಂದು ಜೀವವಿದೆ, ಆತ್ಮವಿದೆ. ಅದಕ್ಕೆ ಅದರದ್ದೇ ಆದ ನೀತಿ, ನಿಯಮ, ಪರಿಚಲನೆ ಇದೆ. ಕಾಡು ಬಾಹ್ಯದಲ್ಲಿ ಸ್ಥಾವರದಂತೆ ಕಂಡರೂ ಅಂತರ್ಯದಲ್ಲಿ ನಿರಂತರ ಚಲನಶೀಲ ಹಾಗೂ ಸೃಜನಶೀಲವಾದದ್ದು. ಹಾಗಾಗಿ ಅದಕ್ಕೆ ತನ್ನದೇ ಆದ ನಿವೇದನೆಯೂ ಇದೆ. ಅದು ಕೇವಲ ಮನುಷ್ಯನಿಗಾಗಿ ಅಲ್ಲ. ಚರಾಚರ ಜೀವರಾಶಿಗಳನ್ನು ಪೊರೆಯುವ ಮಹಾಮಾತೆಯ ಸ್ಥಾನ ಅದಕ್ಕೆ” (ಪು. ೨). ಆದರೆ ಆ ಮಹಾಮಾತೆಯ ಎದೆಗೇ ಕಲ್ಲು ಹಾಕುವ ಕುಕೃತ್ಯದಲ್ಲಿ ನಮ್ಮ ಆಡಳಿತ, ನಮ್ಮ ಅಭಿವೃದ್ಧಿ, ನಮ್ಮ ನಡುವೆ ಇರುವ ಗೂಂಡಾವೃತ್ತಿಯ ಭೂಮಾಲೀಕರು ಭಾಗಿಯಾಗುತ್ತಲೇ ಇದ್ದಾರೆ ಎಂದರೆ ತಪ್ಪಾಗಲಾರದು. ಅರಣ್ಯದಲ್ಲಿದ್ದುಕೊಂಡು, ಅರಣ್ಯವನ್ನು ಕಾಪಾಡಿಕೊಂಡು ಅದನ್ನೇ ದೇವರಂತೆ ಕಾಣುವ ಗಿರಿಜನರನ್ನು ಏಕಾಏಕಿ ಒಕ್ಕಲೆಬ್ಬಿಸಿ ಕಾಡುಗಳ್ಳರಿಗೆ, ಗಣಿಗಾರಿಕೆಯ ಮೂಲಕ ಲೂಟಿ ಮಾಡುವ ಮಾಲೀಕರಿಗೆ ಹಾಗೂ ಭೂಮಾಲೀಕರಿಗೆ ಅರಣ್ಯವನ್ನು ಅನುಭವಿಸುವ ದಾರಿ ಮಾಡಿಕೊಟ್ಟಿದ್ದು ನಮ್ಮ ಘನ ಸರ್ಕಾರಗಳು. ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿಯೇ ಕರ್ನಾಟಕ ಹೃದಯ ಭಾಗದಲ್ಲಿದೆ. ಆದರೆ ಅದನ್ನು ಬರಿದು ಮಾಡಲು ಹೊರಟಿರುವ ದುಷ್ಟಶಕ್ತಿಗಳನ್ನು ಹಿಮ್ಮೆಟ್ಟಿಸಲು ಜನಸಾಮಾನ್ಯರು ಮುಂದೆ ಬರಬೇಕಾಗಿದೆ. ಯುನೆಸ್ಕೊ, ಭಾರತ

ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನೀತಿ-ನಿಯಮಗಳು ಯಾವುದೇ ರೀತಿಯ ಉಳಿವಿಗಾಗಿರುವ ಕಾನೂನುಗಳಾಗಿಲ್ಲವೆಂಬುದನ್ನು ಲೇಖಕರು ಮನಗಾಣಿಸಿದ್ದಾರೆ.

ಅರಣ್ಯವಾಸಿಗಳಾದ ಸೋಲಿಗರ ಪರಂಪರೆ, ನಂಬಿಕೆ, ಆಹಾರ ಪದ್ಧತಿ ಮತ್ತು ಸ್ಥಿತ್ಯಂತರದ ಬಗ್ಗೆ ಗೀತಾ ಎಂ. ಯಂಕಂಚಿ ಅವರು 'ಬೆಟ್ಟದಿಂದ ಬಯಲಿಗೆ ಸೋಲಿಗರ ಸಾಂಸ್ಕೃತಿಕ ಯಾತ್ರೆ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಮುಖ್ಯವಾಗಿ ಸೋಲಿಗರಲ್ಲಿನ ಅಭಿವೃದ್ಧಿ, ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಬದಲಾವಣೆಯ ಕುರಿತು ವಿಶ್ಲೇಷಿಸಿದ್ದಾರೆ ಈ ಲೇಖನ.

ಗಂಗಾಧರ ದೈವಜ್ಞ ಅವರ ಹಕ್ಕಿಪಿಕ್ಕಿಯರ ಮಾತೃದೈವಗಳು ಲೇಖನ ಅಲೆಮಾರಿ ಬುಡಕಟ್ಟೊಂದರ ದೈವಗಳನ್ನು, ಆರಾಧನೆಯನ್ನು ಸೋದಾಹರಣವಾಗಿ ವಿವರಿಸುತ್ತದೆ. ಖುದ್ಧ, ಶಿವ ದೇವನ ಪೂಜೆ, ಪಾರದಾನ್ ಅಥವಾ ಪಾರ್ದನ್ ದೇವಿಪೂಜೆ, ಅಜಮೀರ್ ಖಡವೀ, ಜೋಡಲಿದೇವಿ ಪೂಜೆ, ಸೀಳ್‌ದೇವಿ ಪೂಜೆ, ಪಿಂಚಳಾದೇವಿ ಪೂಜೆ, ಬಲಿ ವಿಧಾನ, ಸೀಳದೇವಿ ಪೂಜೆ, ಮುಡಿಯ ದೇವಿ ಪೂಜೆ, ಕಂಕಾಳಿ ಆರಾಧನೆ, ಮೊಮ್ಮಾಯಿ ಪೂಜೆ ಮತ್ತು ಇತರೆ ಆಚರಣೆಗಳ ವಿಧಿ-ವಿಧಾನಗಳನ್ನು ಲೇಖಕರು ದೀರ್ಘವಾಗಿ ವಿವರಿಸಿದ್ದಾರೆ.

ಹಾಲಕ್ಕಿ ಒಕ್ಕಲಿಗ ಸಮುದಾಯವನ್ನು ಪರಿಗಣಿಸಿ ಬುಡಕಟ್ಟು ಸಮುದಾಯಗಳಲ್ಲಿ ಮಾತೃಪ್ರಧಾನತೆ : ಚರ್ಚೆಯ ವಿವಿಧ ನೆಲೆಗಳು ಲೇಖನ ಈ ಸಂಚಿಕೆಯ ಸುದೀರ್ಘ ಲೇಖನವಾಗಿದೆ. ಸುಮಾರು ೩೬ ಪುಟಗಳ ಲೇಖನ ಮಾತೃಪ್ರಧಾನತೆಯನ್ನು ಆಮೂಲಾಗ್ರವಾಗಿ ಚರ್ಚಿಸುವಲ್ಲಿ ಯಶಸ್ವಿಯಾಗಿದೆ. ನನ್ನ ಅಭಿಪ್ರಾಯದಂತೆ ಲೇಖಕರು ತಮ್ಮ ಸಂಶೋಧನಾ ಮಹಾಪ್ರಬಂಧವನ್ನು ಯಥಾವತ್ತಾಗಿ ಇಲ್ಲಿ ನೀಡಿರುವುದು ಕಂಡು ಬರುತ್ತದೆ. ಮಹಾಪ್ರಬಂಧದಲ್ಲಿನ ಅಧ್ಯಯನ ಬರಹವನ್ನು ಲೇಖನ ರೂಪಕ್ಕೆ ತಂದಿಲ್ಲವೆಂಬುದಕ್ಕೆ ಬರವಣಿಗೆಯಲ್ಲಿ ಅನೇಕ ಉದಾಹರಣೆಗಳು ಸಿಗುತ್ತಿವೆ. ಹಾಗಾಗಿ ಯುವ ಸಂಶೋಧಕರು ತಮ್ಮದೇ ಅಧ್ಯಯನವನ್ನು ನಿಯತಕಾಲಿಕೆ ಅಥವಾ ಇನ್ನ್ಯಾವುದೋ ಕೃತಿರೂಪದಲ್ಲಿ ಪ್ರಕಟಿಸುವಾಗ ಗಮನಿಸಬೇಕಾದ ಅಂಶವಿದು.

ಡಾ. ಎ.ಡಿ. ಬಸವರಾಜ ಅವರ ಗೌಡಲು ಸಮುದಾಯ : ಆಧುನಿಕ ಮುಖಾಮುಖಿ ಲೇಖನ ಅಪೂರ್ಣ ಮತ್ತು ಅವಸರದ ಲೇಖನವಾಗಿದೆ. ಕಾರಣ ಗೌಡಲು ಸಮುದಾಯದ ಭೌಗೋಳಿಕ ನೆಲೆಯನ್ನು ತಿಳಿಸದೆ ಮೇಲಿಂದ್ದ ಮೇಲೆ ಹಾರಿಕೆಯ ಮಾತುಗಳು ತುಂಬಿದ ಲೇಖನವಾಗಿದೆ. ಲೇಖನದ ಕೊನೆಗೆ ಟಿಪ್ಪಣಿಗಳನ್ನು ನೀಡಿದ್ದಾರೆ. ಲೇಖನದಲ್ಲಿ ಟಿಪ್ಪಣಿಗಳ ಸಂಖ್ಯೆಗಳೇ ನಮೂದಾಗಿಲ್ಲವೆನ್ನುವುದು ಬೇಸರದ ಸಂಗತಿ. ಈ ಮೊದಲನೇ ಲೇಖನದಂತೆಯೇ ತಮ್ಮ ಮಹಾಪ್ರಬಂಧದಿಂದ ಒಂದಷ್ಟನ್ನು ನೀಡಿದರಾಯಿತು ಎಂಬ ಬಾಲಿಶ ಚಿಂತನೆಯೊಂದಿಗೆ ನೀಡಿದ್ದಾರೆ ಎಂದರೆ ತಪ್ಪಾಗಲಾರರು.

ಬೇಡಗಂಪಣ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳನ್ನು ತಮ್ಮ ಲೇಖನದಲ್ಲಿ ಡಾ. ಕೊಂತಮ್ ಸತೀಶ್ ಸವಿವರವಾಗಿ ವಿಶ್ಲೇಷಿಸಿದ್ದಾರೆ. ಕ್ಷೇತ್ರಕಾರ್ಯಧಾರಿತ ತಮ್ಮ ಪಿಎಚ್.ಡಿ. ಮಹಾಪ್ರಬಂಧದ ಒಂದಷ್ಟು ಭಾಗವನ್ನು ಯಾವುದೇ ರೀತಿಯಲ್ಲಿ ಪರಿಷ್ಕರಿಸದೇ ನೀಡಿದ್ದಾರೆಂಬುದು ಟಿಪ್ಪಣಿಗಳನ್ನು, ಕೋಷ್ಟಕಗಳನ್ನು ಗಮನಿಸಿದರೆ ತಿಳಿಯುತ್ತದೆ. ಮಾಹಿತಿಪೂರ್ಣಗಳಿಂದ ಕೂಡಿದ ಈ ಭಾಗವನ್ನು ಪರಿಷ್ಕರಿಸಿ ನೀಡಿದ್ದರೆ ಚೆನ್ನಾಗಿತ್ತು.

ಮೈಸೂರು ಜಿಲ್ಲೆಯ ಜೇನುಕುರುಬರ ಆರ್ಥಿಕ ಜೀವನ ಮತ್ತು ರಾಜ್ಯ ಅಭಿವೃದ್ಧಿ ಯೋಜನಾ ಕ್ರಮಗಳು ಲೇಖನ ಜೇನುಕುರುಬ ಆರ್ಥಿಕ ಸ್ಥಿತಿಗತಿಯನ್ನು ಅನಾವರಣ ಗೊಳಿಸಿದೆ. ಸರ್ಕಾರಗಳ ಯೋಜನೆಗಳು ಯಾವ ರೀತಿಯಲ್ಲಿವೆ ಎಂಬುದನ್ನು ಲೇಖಕರು ನೀಡಿದ್ದಾರೆ. ಕೇರಳದ ಬುಡಕಟ್ಟು ಜನರ ಜೀವನ ಸುಧಾರಣೆಗಾಗಿ ಹೋರಾಟ ಮಾಡಿದ ಬುಡಕಟ್ಟು ನಾಯಕಿ ಚೆಕಾಟ್ ಕರಿಯನ್ ಜಾನು ಅವರನ್ನು ಶ್ರೀ ಸಿ.ಸಿ. ಪೂವಯ್ಯ ಪರಿಚಯಿಸಿದ್ದಾರೆ.

ಆಂಧ್ರಪ್ರದೇಶದ ಅಲೆಮಾರಿ ಬುಡಕಟ್ಟು ವಡ್ಡರ ಸಂಪ್ರದಾಯಗಳ ಬಗ್ಗೆ ಡಾ. ಮಲ್ಲಿಗಾಂಧಿ ಅವರು ಲೇಖನ ಗಮನ ಸೆಳೆಯುತ್ತವೆ. ಹಾಗೆಯೇ ಕರ್ನಾಟಕದ ಸೋಲಿಗರಲ್ಲಿರುವ ಜೇನು ಬೇಟೆಯ ತಂತ್ರಗಾರಿಕೆಯ ಬಗೆಗಿನ ಡಾ. ಕೇಶವನ್ ಪ್ರಸಾದ್ ಕೆ. ಮರಟ್ಟಿ ಅವರ ಲೇಖನ ಸೋಲಿಗರ ಪುರಾತನ ಜೀವನವನ್ನೇ ತೆರೆದಿಡುತ್ತದೆ.

ಬುಡಕಟ್ಟು ಅಧ್ಯಯನ ಸಂಪುಟ-೫, ಸಂಚಿಕೆ-೨, ಜುಲೈ-ಡಿಸೆಂಬರ್-೨೦೦೮, ಸಂಚಿಕೆ ಅನೇಕ ಬುಡಕಟ್ಟುಗಳ ಜಾನಪದ, ಆರ್ಥಿಕ, ಸಾಮಾಜಿಕ ಸ್ಥಿತಿಗತಿ, ವೈಶಿಷ್ಟ್ಯಗಳನ್ನು ನೀಡುವಲ್ಲಿ ಯಶಸ್ವಿಯಾಗಿದೆ. ನಿಯತಕಾಲಿಕೆಗಳಲ್ಲಿ ಯುವ ಸಂಶೋಧಕರನ್ನು ಬಳಸಿಕೊಳ್ಳುವ ಸಂದರ್ಭದಲ್ಲಿ ಸರಿಯಾದ ಮಾರ್ಗದರ್ಶನ ಅಗತ್ಯವೆಂಬುದನ್ನು ಈ ಸಂಚಿಕೆ ಒತ್ತಿ ಹೇಳುತ್ತದೆ. ತಮ್ಮ ಮಹಾಪ್ರಬಂಧದ ಅಲ್ಪಸ್ವಲ್ಪ ಭಾಗಗಳನ್ನು ಯಥಾವತ್ತಾಗಿ ನೀಡುವುದು ಸರಿಯಲ್ಲ. ಸಂಪಾದಕರು ಈ ನಿಟ್ಟಿನಲ್ಲಿ ಗಮನಿಸಬೇಕಾಗಿತ್ತು. ತಮ್ಮ ತಮ್ಮ ಅಧ್ಯಯನಗಳನ್ನು, ಲೇಖನಗಳನ್ನು ಮತ್ತು ಪ್ರಬಂಧಗಳನ್ನು ಪರಿಷ್ಕಾರ ಗೊಳಿಸುವ, ವರ್ತಮಾನಕ್ಕೆ ತಕ್ಕಂತೆ ಗಮನಿಸುವ ವಿಧಾನವೂ ಸಂಶೋಧನೆಯ ಒಂದು ಪ್ರಮುಖ ಭಾಗವೆನ್ನುವುದನ್ನು ಯುವ ಲೇಖಕರು ಗಮನಿಸಬೇಕಾಗಿದೆ. ಇಲ್ಲದೇ ಹೋದರೆ ಸಂಶೋಧನಾತ್ಮಕ ಲೇಖನಗಳಿಗೆ ಮೀಸಲಾಗಿರುವ ಈ ರೀತಿಯ ನಿಯತಕಾಲಿಕೆಗಳು ಅಪ್ರಯೋಜಕಗಳಾಗುತ್ತವೆ ಮತ್ತು ಮುಂದಿನ ಯುವ ಲೇಖಕರು ಇದೇ ಪದ್ಧತಿಯನ್ನು ಅನುಸರಿಸುವ ಸುಲಭ ದಾರಿಯನ್ನು ಹುಡುಕುತ್ತಾರೆ ಎಂದರೆ ತಪ್ಪಾಗಲಾರದು.

ಡಾ. ಎಸ್. ಮೋಹನ್

೨೧. ಬುಡಕಟ್ಟು ಅಧ್ಯಯನ

ಸಂಪುಟ ೬, ಸಂಚಿಕೆ ೧, ಜನವರಿ-ಜೂನ್ ೨೦೦೯
ಸಂಪಾದಕರು: ಡಾ. ಕೇಶವನ್ ಪ್ರಸಾದ್ ಕೆ. ಮರಟ್ಟಿ
ಡಾ. ಗಂಗಾಧರ ದೈವಜ್ಞ
ಪುಟ ೧೬೦, ಬೆಲೆ ರೂ. ೫೦/-
ಪ್ರಥಮ ಮುದ್ರಣ ೨೦೧೩
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸುಮಾರು ಹದಿಮೂರು ಮಾಹಿತಿಪೂರ್ಣ, ವಿಶ್ಲೇಷಣಾತ್ಮಕ, ಪರಿಚಯಾತ್ಮಕ ತೌಲನಿಕ ವಿಷಯಗಳಲ್ಲಿ ನಿರೂಪಿಸುವ ಲೇಖನಗಳನ್ನು ಒಳಗೊಂಡ ಬುಡಕಟ್ಟು ಅಧ್ಯಯನದ ಈ ಸಂಚಿಕೆಯನ್ನು ಪ್ರೊ. ಕೇಶವನ್ ಪ್ರಸಾದ್ ಕೆ. ಮರಟ್ಟಿ ಹಾಗೂ ಡಾ. ಗಂಗಾಧರ ದೈವಜ್ಞ ಜಂಟಿಯಾಗಿ ಸಂಪಾದಿಸಿದ್ದಾರೆ. ನೂರ ನಲವತ್ತೇಳು ಪುಟಗಳನ್ನು ಹೊಂದಿರುವ ಈ ಸಂಚಿಕೆಯಲ್ಲಿ ವಿವಿಧ ಬುಡಕಟ್ಟು ಮತ್ತು ಬುಡಕಟ್ಟು ಲಕ್ಷಣಗಳನ್ನು ಹೊಂದಿರುವ ಸಮುದಾಯಗಳ ಸಂಪ್ರದಾಯಾಚರಣೆ, ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಬದಲಾವಣೆ, ಭಾಷೆ, ವ್ಯತ್ಯಾಸ ಮತ್ತು ಬುಡಕಟ್ಟು ಪಟ್ಟಿಗೆ ಸೇರದಿರುವ ಬುಡಕಟ್ಟುಗಳ ಬಗೆಗಿನ ವಿಸ್ತೃತವಾದ ಸಂಶೋಧನಾತ್ಮಕ ವಿಚಾರಗಳಿವೆ.

ಇಂದಿನ ದಿನಮಾನಗಳಲ್ಲಿ ಪ್ರೊ. ಕೇಶವನ್ ಪ್ರಸಾದ್ ಕೆ. ಮರಟ್ಟಿ ಅವರು ವಿಶ್ಲೇಷಣೆ ಮಾಡಿದ್ದಾರೆ. "ಬ್ರಿಟಿಷರು ಭಾರತೀಯರನ್ನು ಸುಮಾರು ೨೫೦ ವರ್ಷಗಳು ಆಳಿದರು ಎನ್ನುವುದಕ್ಕಿಂತ ದಬ್ಬಾಳಿಕೆಯಿಂದ ಶೋಷಣೆ ಮಾಡಿದರು. ಸಂಪತ್ತನ್ನು ಲೂಟಿ ಮಾಡಿದರು ಎಂದರೂ ತಪ್ಪಿಲ್ಲ. ಇದು ಅವರ ಕ್ರೌರ್ಯದ ಒಂದು ಮುಖವಾದರೆ, ಮಾನವರೇ ಆಗಿದ್ದರೂ ಪ್ರಾಣಿಗಿಂತಲೂ ಕೀಳಾಗಿ ಮೇಡುಗಳಲ್ಲಿ ಪ್ರಾಣಿಗಳೊಂದಿಗೆ ಪ್ರಾಣಿಯಂತೆ ಬದುಕನ್ನು ಸಾಗಿಸುತ್ತಿದ್ದ ನೂರಾರು ಬುಡಕಟ್ಟು ಸಮುದಾಯಗಳು ತಮ್ಮನ್ನು ಗುರುತಿಸಿಕೊಳ್ಳುವಂತೆ ಪ್ರಮುಖವಾಹಿನಿಗೆ ತರುವಲ್ಲಿ ಬ್ರಿಟಿಷರು ನೀಡಿದ ಶಿಕ್ಷಣ ಬಹಳ ಮಹತ್ವದ್ದು"(ಪು. ೫) ಎಂಬ ಲೇಖಕರ ಅಭಿಪ್ರಾಯ ದಂತೆ ಅಸ್ಪೃಶ್ಯರಿಗೆ ಇದರಿಂದ ವರದಾನವಾಯಿತು. ಬುಡಕಟ್ಟು ಸಮುದಾಯಗಳು ಕಾಡಲ್ಲೇ ಸ್ವತಂತ್ರವಾಗಿರಲು ಬಯಸಿದವು. ಹಾಗಾಗಿ ಬ್ರಿಟಿಷರಿಂದ ಬುಡಕಟ್ಟುಗಳಿಗೇನು ಲಾಭವಾಗಿಲ್ಲ. ಆದರೆ ಅವರು ಜಾರಿಗೆ ತಂದ ಶಿಕ್ಷಣ ನೀತಿಗಳಿಂದ, ಯುರೋಪಿಯನ್ನರನೇಕರು ಬುಡಕಟ್ಟುಗಳ ಬಗೆಗಿನ ಅಧ್ಯಯನಗಳಲ್ಲಿ ನಿರತರಾದುದರಿಂದ ನೂರಾರು ಬುಡಕಟ್ಟುಗಳು ಇರುವನ್ನು ಎಲ್ಲರೂ ಕಾಣುವಂತಾಯಿತು. ಮುಂದೆ ಜಾನಪದ, ಮಾನವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನಗಳಿಗೆ ಕಾರಣವಾದುದನ್ನು ಲೇಖಕರು ಅವಲೋಕಿಸಿದ್ದಾರೆ.

'ಕರಾವಳಿ ಕರ್ನಾಟಕದ ಪಂಬದ ಸಮುದಾಯದ ನರ್ತನ ಮತ್ತು ಸಾಮಾಜಿಕ ಬದಲಾವಣೆ' ಎಂಬ ಲೇಖನದಲ್ಲಿ ಡಾ. ಎ. ಶ್ರೀಧರ ಅವರು ಬದಲಾವಣೆಗಳ ಗುರುತನ್ನು ಶೋಧಿಸುವ ಕಾರ್ಯ ಮಾಡಿದ್ದಾರೆ. "ಇವರ ಪ್ರಮುಖ ಕುಲಕಸುಬಾದ ದೈವಾರಾಧನೆ ಸಮುದಾಯದ ಮನೋರಂಜನೆ ಕಲೆಯಲ್ಲ ಎಂಬುದನ್ನು ಯಾರಾದರೂ ಗಮನಿಸತಕ್ಕದ್ದು" (ಪುಟ ೧೫೫). ಬಹುತೇಕ ಅಧ್ಯಯನಕಾರರು ದೈವರಾಧನೆಯನ್ನು ಮನರಂಜನೆಯಂತೆ ವ್ಯಾಖ್ಯಾನಿಸಿರುವುದನ್ನು ನಾವು ಗಮನಿಸಬಹುದು. ಅಂದರೆ ತೀರ ಆಳ ಅಧ್ಯಯನಕ್ಕೆ ಹೋದರೆ ಮಾತ್ರ ದೈವಾರಾಧನೆಯಲ್ಲಿರುವ ಚಿಕಿತ್ಸಕ ಲಕ್ಷಣಗಳನ್ನು, ಪ್ರಾಕೃತಿಕ ವೈಶಿಷ್ಟ್ಯವನ್ನು ಮತ್ತು ತುಳು ಮಣ್ಣಿನ ಸೊಗಡನ್ನು ಗುರುತಿಸಲು ಸಾಧ್ಯ. ಈ ನೆಲೆಯಲ್ಲಿಯೇ ಪ್ರಸ್ತುತ ಲೇಖನವನ್ನು ಲೇಖಕರು ಕೊಂಡೊಯ್ದಿದ್ದಾರೆ. ಸಾಮಾಜಿಕವಾಗಿ ಈ ಕುಲಕಸುಬುದಾರರು ಸ್ಥಿತ್ಯಂತರಕ್ಕೆ ಒಳಗಾಗಿರುವುದನ್ನು ಪಟ್ಟಿ ಮಾಡಿ ವಿಶ್ಲೇಷಿಸಿದ್ದಾರೆ. ನರ್ತನ, ಬಣ್ಣಗಾರಿಕೆ, ಸಾಹಿತ್ಯಗಳನ್ನಷ್ಟೇ ಪ್ರಧಾನ ವಸ್ತುವಾಗಿಸಿಕೊಂಡ ಅಧ್ಯಯನಕಾರರು, ವಿದೇಶಿ ಅಧ್ಯಯನಕಾರರು ದೈವಾರಾಧನೆಯನ್ನು 'ಭೂತ(Devil)ದಾಗಿಯೇ ಚಿತ್ರಿಸಿದರು. ಆದರೆ ತುಳುನಾಡಿನ ಹೊರಗಿನ ಜನಸಾಮಾನ್ಯರ ಮನದಲ್ಲಿರುವ 'ಭೂತ'ವಲ್ಲ ಎಂಬುದರ ಬಗೆಗಿನ ನಿಖರವಾದ ಅಧ್ಯಯನಗಳಾಗಬೇಕೆಂಬುದು ಲೇಖಕರ ಆಶಯ; ನಮ್ಮದೂ ಕೂಡ.

ಬಿಳಿಗಿರಿರಂಗನ ಬೆಟ್ಟದಲ್ಲಿರುವ ಸೋಲಿಗರ ವಿಶೇಷವಾದ ರೊಟ್ಟಿ ಹಬ್ಬ-ಆಚರಣೆಯನ್ನು ಡಾ. ಗಂಗಾಧರ ದೈವಜ್ಞ ಮತ್ತು ಉಮೇಶ ಮಾಳಿಗೆ ಅವರು ಪರಿಚಯಿಸಿದ್ದಾರೆ. ಪಾರಂಪರಿಕವಾಗಿ ಆಚರಿಸಿಕೊಂಡು ಬರುತ್ತಿರುವ ರೊಟ್ಟಿ ಹಬ್ಬದಲ್ಲೂ ಬದಲಾವಣೆಗಳಾಗಿರುವುದನ್ನು ಲೇಖಕರು ಗಮನಿಸಿದ್ದಾರೆ. ಕರಾವಳಿ, ಮಲೆನಾಡು ಮತ್ತು ಇತರೆ ಪ್ರದೇಶಗಳಲ್ಲಿ ರೈತರು ಬೆಳೆದ ಮೊದಲ ಬೆಳೆಯನ್ನು ತಮ್ಮ ಇಷ್ಟದೇವರಿಗೆ, ಮನೆದೇವರಿಗೆ ಅಥವಾ ಗ್ರಾಮದೇವರಿಗೆ ಅರ್ಪಿಸಿ ತಮ್ಮ ಬೆಳೆಗಳಿಗೆ ಯಾವುದೇ ಕಂಟಕ ಬಾರದಂತೆ, ಫಸಲು ಚೆನ್ನಾಗಿರುವಂತೆ ಪ್ರಾರ್ಥಿಸುವ ಹೊನ್ನಾರು, ಹೊಸ ಅಕ್ಕಿಯೂಟ ಆಚರಣೆಯಂತೆ ಸೋಲಿಗರ ರೊಟ್ಟಿ ಹಬ್ಬ ಕಂಡುಬರುತ್ತದೆ.

'ಸಿದ್ಧಿಯರ ಆರ್ಥಿಕ ಸ್ಥಿತಿಗತಿ' ಎಂಬ ಲೇಖನದಲ್ಲಿ ಡಾ. ಸೋಮಶೇಖರ ಅವರು ಅಂಕಿಸಂಖ್ಯೆ ಸಮೇತ ಸ್ಥಿತಿಗತಿಯನ್ನು ಅವಲೋಕಿಸಿದ್ದಾರೆ. ಸಿದ್ಧಿಯರ ಬೇಟೆ, ಆಹಾರ ಸಂಗ್ರಹಣೆ, ಅರಣ್ಯದ ಕಿರುಉತ್ಪನ್ನಗಳ ಸಂಗ್ರಹ ಮತ್ತು ಇತರೆ ಕಸುಬುಗಳ ಬಗ್ಗೆ ವಿಶ್ಲೇಷಿಸಿದ್ದಾರೆ. "ಅರಣ್ಯದಲ್ಲಿ ದೊರೆಯುವ ಕಿರುಉತ್ಪನ್ನಗಳನ್ನು ಸಂಗ್ರಹಿಸಿ ಒಟ್ಟಾಗಿ ಲ್ಯಾಂಪ್ಸ್ ಸೊಸೈಟಿಯ ಮುಖಾಂತರ ಮಾರಾಟ ಮಾಡಲಾಗುತ್ತಿದೆ. ಇದರಿಂದಾಗಿ ಮಧ್ಯವರ್ತಿಗಳ ಶೋಷಣೆ ತಪ್ಪಿದಂತಾಗಿದೆ" (ಪು ೩೯) ಎಂದು ತಿಳಿಸಿದ್ದಾರೆ. ಆದರೆ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಲ್ಯಾಂಪ್ ಸೊಸೈಟಿಯಲ್ಲಿ ಬುಡಕಟ್ಟು ಜನರ ಹೆಸರಲ್ಲಿ ಉಳ್ಳವರು, ಮೇಲ್ವರ್ಗದವರು ಲಾಭ ಪಡೆಯುತ್ತಿದ್ದಾರೆ ಎಂಬುದು ಹೊರನೋಟಕ್ಕೆ ತಿಳಿಯುವುದಿಲ್ಲ.

ದೇಶೀಯ ಜ್ಞಾನದ ಅರ್ಥ, ಲಕ್ಷಣ, ಪ್ರಾಮುಖ್ಯತೆ ಮತ್ತು ಸಂರಕ್ಷಣೆ ಬಗೆಗಿನ ಲೇಖನ ಪಾರಂಪರಿಕ ಜ್ಞಾನದ ಪ್ರಾಮುಖ್ಯತೆಯನ್ನು ಪರಿಚಯಿಸುತ್ತದೆ. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳ ಪರಂಪರೆ -ಆಧುನಿಕತೆಯನ್ನು ಕುರಿತ ಲೇಖನ ಗಂಭೀರವಾಗಿದೆ. ಬದಲಾದ ಕಾಲಮಾನಕ್ಕೆ ತಕ್ಕಂತೆ ಬುಡಕಟ್ಟುಗಳಲ್ಲಾದ ಬದಲಾವಣೆಗಳನ್ನು ಸರಿಯಾಗಿಯೇ ಲೇಖಕರು ವಿಶ್ಲೇಷಿಸಿದ್ದಾರೆ. ಪಾವಿತ್ರ್ಯದ ಕಲ್ಪನೆ ಹಿಂದೆ ಸರಿಯುತ್ತಿರುವುದರ ಬಗ್ಗೆ, ಸಮೂಹಕ್ಕಿರುವ ಪ್ರಾಧಾನ್ಯತೆ ಕ್ಷೀಣಿಸುತ್ತಿರುವ ಬಗ್ಗೆ, ಯುವ ಪೀಳಿಗೆಯೇ ಮುಂಚೂಣಿಯಲ್ಲಿರುವ ಬಗ್ಗೆ ಮತ್ತು ಪರಂಪರಾಗತವಾಗಿ ಬಂದಿರುವ ಕುಲಕಸುಬುಗಳೊಂದಿಗೆ ಬದಲಾದ ಅರ್ಥವ್ಯವಸ್ಥೆಯ ಕುರಿತ ಬದಲಾವಣೆಗಳು ಪಾರಂಪರಿಕ ಜ್ಞಾನವನ್ನೇ ಅಣಕಿಸುವಂತಿದೆ. ಆದರೆ ಇದು ವಾಸ್ತವ.

'ಬೇಡಗಂಪಣ ಸಮುದಾಯದ ಆರ್ಥಿಕ ಸ್ಥಿತಿಗಳು' ಎಂಬ ಶೀರ್ಷಿಕೆಯ ಲೇಖನ ಬೇಡಗಂಪಣರ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಲೇಖನದಲ್ಲಿ ಕೋಷ್ಟಕಗಳ ಸಂಖ್ಯೆ ೫ ರಿಂದ ಆರಂಭಿಸಲಾಗಿದೆ. ಶೈಕ್ಷಣಿಕ ಸ್ಥಿತಿಗತಿಗಳೂ ಸೇರಿಕೊಂಡಿದ್ದು ಸಂಶೋಧನೆಯ ಮೂಲಕ ಪದವಿಗಾಗಿ ರಚಿಸಿರುವಂತೆ ತೋರುತ್ತದೆ. ಯಥಾವತ್ತು ನೀಡಿರುವುದರಿಂದ ೫ನೇ ಕೋಷ್ಟಕದಿಂದ ಪ್ರಾರಂಭಿಸಿ, ಅಡಿಟಿಪ್ಪಣಿ ಸಂಖ್ಯೆಯನ್ನು ನೀಡಿ ಕೊನೆಗೆ ಟಿಪ್ಪಣಿ ವಿವರಗಳೇ ಇಲ್ಲದಿರುವುದರಿಂದ Update ಆಗಿಲ್ಲವೆಂಬುದನ್ನು ಶ್ರುತಪಡಿಸುತ್ತದೆ.

ಡಾ. ಪಿ. ಮಹಾದೇವಯ್ಯ ಅವರ 'ಜೇನುಕುರುಬರ ಅವ್ಯಕ್ತ ಸಾಂಸ್ಕೃತಿಕ ನುಡಿ ಚಹರೆ' ಲೇಖನ ಜೇನುಕುರುಬರಲ್ಲಿನ ಭಾಷೆಯ ಜೊತೆಗೆ ಶಿಷ್ಟ ಕನ್ನಡವನ್ನು ತೌಲನಿಕವಾಗಿ ನೋಡಿದೆ. ಆ ಮೂಲಕ ಭಾಷಿಕ ಅಧ್ಯಯನಕ್ಕೆ ಪ್ರೋತ್ಸಾಹಿಸಿದೆ. ಮ್ಯಾಸಬೇಡ ಮತ್ತು ಊರುಬೇಡರ ಬಗೆಗಿನ ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ನೀಡಿದ್ದಾರೆ ಡಿ. ಧರಣೇಂದ್ರಯ್ಯ ಅವರು. ಜಾಗತೀಕರಣ ಇಡೀ ಜಗತ್ತನ್ನೇ ಆಪೋಶನಕ್ಕೊಳಪಡಿಸಿದಾಗ ಯಾವುದೇ ಬುಡಕಟ್ಟುಗಳ ಅದರಿಂದ ಹೊರಗುಳಿಯಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಬಿ.ಕೆ. ರಾಮಾಂಜನಯ್ಯ ಅವರ ಲೇಖನ ಬುಡಕಟ್ಟು ಸಮುದಾಯಗಳಲ್ಲಿ ಜಾಗತೀಕರಣ ಯಾವ ರೀತಿಯ ಬದಲಾವಣೆಗಳಿಗೆ ಕಾರಣವಾಗಿದೆ ಎಂಬುದರ ಬಗ್ಗೆ ಸೋದಾಹರಣವಾಗಿ ವಿವರಿಸಿದ್ದಾರೆ. ಒಟ್ಟಾರೆಯಾಗಿ ಬುಡಕಟ್ಟು ಅಧ್ಯಯನ, ಭಾಷೆ, ಅರ್ಥ, ಜಾನಪದ, ನೆಲೆಗಳಿಗೆ ಸಂಬಂಧಿಸಿದಂತೆ ಎಲ್ಲ ವಿಚಾರಗಳನ್ನು ಒಳಗೊಂಡು ಸಮೃದ್ಧವಾಗಿದೆ. ವರ್ತಮಾನಕ್ಕೆ ಅಥವಾ ಪರಿಷ್ಕರಣೆಗೆ ಒಳಗಾಗಬೇಕಾದ ಲೇಖನಗಳ ಬಗ್ಗೆ ಸಂಪಾದಕರು ಭವಿಷ್ಯದ ಸಂಚಿಕೆಗಳಲ್ಲಿ ಸ್ಥಾನ ಪಡೆಯದಂತೆ ಮಾಡಿದರೆ ಒಳಿತು.

ಡಾ. ಜೆ. ಕೃಷ್ಣ

೨೨. ಜಾನಪದ ಜಗಲಿ

ಸಂಪುಟ ೨, ಸಂಚಿಕೆ ೧, ಮಾರ್ಚ್ ೨೦೧೩

ಪ್ರಧಾನ ಸಂಪಾದಕರು: ಪ್ರೊ. ಅಂಬಳಿಕೆ ಹಿರಿಯಣ್ಣ
ಸಂಪಾದಕರು: ಡಾ. ಎಂ.ಎನ್. ವೆಂಕಟೇಶ
ಪುಟ ೧೮೪, ಬೆಲೆ ರೂ. ೫೦/-
ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

'ಜಾನಪದ ಜಗಲಿ' ಸಂಪುಟ ೨, ಸಂಚಿಕೆ ೧ ನಿಯತಕಾಲಿಕೆ ಡಾ. ಎಂ.ಎನ್. ವೆಂಕಟೇಶ ಅವರ ಸಂಪಾದಕತ್ವದಲ್ಲಿ ಹೊರಬಂದ ಹದಿನಾರು ಜನಪದ ಲೇಖನಗಳ ಸಂಗ್ರಹವಾಗಿದೆ. 'ನಾವೀಗ ಜಾನಪದದೊಳಗಿನ ಪರಂಪರಾಗತ ಸಂಸ್ಕೃತಿಯ ನೆಲೆ ಯಿಂದಲೇ ಆಧುನಿಕ ವಿಜ್ಞಾನದ ಆವಿಷ್ಕಾರದ ಫಲಗಳನ್ನು ಬಳಸಿಕೊಳ್ಳುವ ಮೂಲಕ ಮಾನಸಿಕ ಗಟ್ಟಿತನ ಹಾಗೂ ಸಾಮಾಜಿಕ ಔನ್ನತ್ಯ ಎರಡನ್ನೂ ಗಳಿಸಬಹುದಾಗಿದೆ' - ಎಂಬುದು ಅಂಬಳಿಕೆ ಹಿರಿಯಣ್ಣನವರ ಸದಾಶಯವಾಗಿದೆ. ಅದಕ್ಕೆ ತಕ್ಕಂತೆ ಈ ಕೃತಿಯಲ್ಲಿ ಸಂಗ್ರಹಗೊಂಡ ಹದಿನಾರು ಲೇಖನಗಳು ಜನಪದರ ಆಲೋಚನೆಗಳನ್ನು, ಶಕ್ತಿ-ಸಾಮರ್ಥ್ಯಗಳನ್ನು, ಮಾನವ ಸಂಬಂಧಗಳನ್ನು ಹಾಗೂ ಕಲೆ, ಸಂಸ್ಕೃತಿಗೆ ಸಂಬಂಧಿಸಿದ ವಿಚಾರಗಳನ್ನು ಗಟ್ಟಿಗೊಳಿಸುತ್ತವೆ.

'ನಿಸರ್ಗ ಮತ್ತು ಮಾನವ ಸಂಬಂಧ, ಕುಟುಂಬ ಮತ್ತು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಮೂಲಭೂತಗಳು, ಭೂಮ್ಯಾಕಾಶದ ನಡುವೆ ನಡೆಯುವ ಪ್ರಾಕೃತಿಕ ಸಂಘರ್ಷ, ಕಾಲದಂಥ ಅಮೂರ್ತ ಪರಿಕಲ್ಪನೆಯ ಬಗೆಗೆ ಹುಟ್ಟಿರುವ ಅನೇಕ ರಚನೆ'ಗಳು ಎಲ್ಲ ಕವಿಗಳು (ಶಿಷ್ಟ-ಜಾನಪದ) ಚಿಂತನೆಯ ವಿಷಯಗಳಾಗಿವೆ. ಇಂದು ಜಾನಪದವನ್ನು ವೈಜ್ಞಾನಿಕ ಶಿಸ್ತಿನ ಹಿನ್ನೆಲೆಯಲ್ಲಿ ಅಭ್ಯಸಿಸುವ ಕ್ರಮ ರೂಢಿಗೆ ಬಂದಿದೆ. ಜಾನಪದದ ಯಾವುದೇ ಪ್ರಕಾರವನ್ನು ಕೈಗೆತ್ತಿಕೊಂಡರೂ ಅಲ್ಲಿ ಬೆಳೆದು ನಿಂತಿರುವ ಆಧುನಿಕತೆ, ವೈಜ್ಞಾನಿಕತೆಯ ವಿವರಗಳೇ ಢಾಳವಾಗಿ ಎದ್ದು ಕಾಣುತ್ತವೆ.

'ಇಂದು ಸಮಾಜವಿಜ್ಞಾನ ನಿಕಾಯದ ಹಾಗೂ ಸಾಹಿತ್ಯ ವಿಶ್ಲೇಷಣೆಗೆ ಸಂಬಂಧಿಸಿದ ಸಂಶೋಧನೆಗಳು ಸಮಾಜಮುಖಿಯಾಗಿ ಅನ್ವಯಗಳ ಮೂಲಕ ಜನರನ್ನು ತಲುಪಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. 'ಜಾನಪದ ಜಗಲಿ' ಈ ತರಹದ ಸಂಶೋಧನೆಯ ಫಲಿತಗಳ ಕುರಿತು ಲೇಖನಗಳನ್ನು ಎದುರು ನೋಡುತ್ತಿದೆ' ಎನ್ನುತ್ತಾರೆ

ಈ ಸಂಚಿಕೆಯ ಸಂಪಾದಕರು. ಯಾವ ಬಗೆಯ ಸಾಹಿತ್ಯವಾದರೂ ಜನರನ್ನು ತಲುಪಬೇಕಾದ ಅಗತ್ಯತೆ ಬ್ಹಹಳಷ್ಟಿದೆ. ಕಾಡಿನ ಮಾನವ ನಾಡಿನ ಮಾನವನಾಗಿ, ಸಂಪನ್ಮೂಲ ವ್ಯಕ್ತಿಯಾಗಬೇಕಾದರೆ ನಿಖರವಾದ ತಿಳುವಳಿಕೆ, ಪ್ರಪಂಚ ಜ್ಞಾನವಿರ ಬೇಕಾದುದು ಇಂದಿನ ಅಗತ್ಯವಾಗಿದೆ. ಇಲ್ಲಿ ಸಂಕಲನಗೊಂಡ ಜಾನಪದದ ಕುರಿತ ಹದಿನಾರು ಲೇಖನಗಳು ಸಹೃದಯರ ಮನಸ್ಸನ್ನು ತಟ್ಟಿ ವೈಚಾರಿಕ, ವೈಜ್ಞಾನಿಕ ಆಲೋಚನೆಗಳನ್ನು ಗಟ್ಟಿಗೊಳಿಸುತ್ತವೆ. ಪರಂಪರಾಗತ ಶಿಷ್ಟಾಚಾರಗಳಿಗೆ ಗಂಟುಬೀಳದೆ ಬದಲಾಗುತ್ತಿರುವ ಸನ್ನಿವೇಶ, ಸಂದರ್ಭಗಳಿಗೆ ತಕ್ಕಂತೆ ಬದಲಾಗಬೇಕಾದ ಅಗತ್ಯತೆಯ ಕುರಿತು ಇಲ್ಲಿಯ ಲೇಖನಗಳಲ್ಲಿ ಹೊಳಹುಗಳಿವೆ. ಕನ್ನಡದ ಪ್ರೌಢ ವಿಮರ್ಶಕರಲ್ಲಿ ಒಬ್ಬರಾದ ಬಸವರಾಜ ಸಬರದರವರು 'ಜನಪದ ಸಾಹಿತ್ಯ ವಿಮರ್ಶೆಗೆ ಮಹಿಳೆಯರ ಕೊಡುಗೆ' ಎಂಬ ಸುದೀರ್ಘ ಲೇಖನದಲ್ಲಿ ಜಾನಪದ ಗರತಿಯ ನಡೆ-ನುಡಿಗಳ ವಿಚಾರವಾಗಿ ಖ್ಯಾತ ಸ್ತ್ರೀವಾದಿ ಚಿಂತಕಿಯರ ದೃಷ್ಟಿಕೋನವನ್ನು ಬಿಂಬಿಸುತ್ತಲೇ, ಪ್ರದೇಶದಿಂದ ಪ್ರದೇಶಕ್ಕೆ ಆಲೋಚನೆ, ಪ್ರತಿಭಟನೆ ಹಾಗೂ ಪ್ರತಿಕ್ರಿಯೆಗಳು ಹೇಗೆ ಭಿನ್ನವಾಗುತ್ತವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಜಾನಪದ ಹೆಂಗಳೆಯರ ಒಳಜಗತ್ತು ಪುರುಷ ಪ್ರಧಾನ ವ್ಯವಸ್ಥೆಯನ್ನು ಹೇಗೆ ಪ್ರಶ್ನಿಸುತ್ತಿದೆ ಎಂಬುದರ ಕುರಿತು ಅವರು ಕಟ್ಟಿಕೊಟ್ಟಿರುವ ಸಂಗತಿಗಳು ಪ್ರಧಾನವಾಗಿವೆ. ಶಾಂತಿ ನಾಯಕ, ಗಾಯತ್ರಿ ನಾವಡ, ಶೈಲಜಾ ಹಿರೇಮಠ, ಕೆ.ಆರ್. ಸಂಧ್ಯಾರೆಡ್ಡಿ, ಎಂ. ವಸು, ಶಾಲಿನಿ ರಘುನಾಥ ಮೊದಲಾದ ಪ್ರಗತಿಪರರ ಆಲೋಚನೆಗಳನ್ನು ಪ್ರೋತ್ಸಾಹಿಸುತ್ತಲೇ, 'ಪುರುಷ ಕೇಂದ್ರಿತವಾದ ಬಹಳಷ್ಟು ಪದ್ಧತಿಗಳನ್ನು ಸ್ತ್ರೀವಾದಿ ಚಿಂತಕರು ಗಂಭೀರವಾಗಿ ತೆಗೆದುಕೊಂಡು ನೇರ ವಿಮರ್ಶೆಗೆ ತೊಡಗಿದ್ದಾರೆ' ಎಂದಿರುವುದು ಮಹತ್ವದ್ದಾಗಿದೆ.

ಈ ಸಂಚಿಕೆಯಲ್ಲಿ ಪ್ರಕಟಗೊಂಡ 'ಪಾರಂಪರಿಕ ಜ್ಞಾನ ಮತ್ತು ತಂತ್ರಜ್ಞಾನದ ಅರ್ಥ ಮತ್ತು ಪರಿಕಲ್ಪನೆಯ ಕುರಿತ ಸೂಚ್ಯ ಲೇಖನಗಳು ಹಿಂಡ್ಲೆಕಾಯಿ ಕುರಿತ ಲೇಖನ ವಿಜ್ಞಾನಕ್ಕೆ ಹತ್ತಿರವಾಗಿ ನಡೆಸಿದ ಚಿಂತನೆ ಎಂಬುದು ಗಮನಾರ್ಹವಾಗಿದೆ. ಜಾನಪದ ವಿನೋದ, ಮನರಂಜನೆಯಾಗದೇ ಬದುಕಿನ ವಿಕಾಸಕ್ಕೆ ದಾರಿ ಮಾಡಿ ಕೊಡುವ ಸಾಧನವೂ ಆಗಿದೆ. ನಮ್ಮ ಹಳ್ಳಿಗರಿಗೆ ಸಸ್ಯಜಾತಿಗಳ, ಔಷಧಿಯ ಸಸ್ಯಗಳ ಹಾಗೂ ತರಕಾರಿಯ ಸಂಪೂರ್ಣ ಜ್ಞಾನವಿದೆ. 'ಹಿಂಡ್ಲೆಕಾಯಿ ಮತ್ತು ದೀಪಾವಳಿ' ಕುರಿತು ಶಾಂತಿ ನಾಯಕ ಶೋಧಿಸುತ್ತ ದೀಪಾವಳಿಯಲ್ಲಿ ಕಾಣಿಸಿಕೊಳ್ಳುವ ಹಿಂಡ್ಲೆಕಾಯಿ ಕಹಿಯಾದರೂ ಹೇಗೆ ಪ್ರಯೋಜನಕಾರಿ ಎಂಬುದನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ಹೆಸರಿನ ಮೂಲ, ಆಚರಣೆಯ ಕಾಲ, ಕಥೆ ವಿವರಿಸುತ್ತ, ಇದು ಜಗತ್ತಿನ ವೈದ್ಯಕೀಯ ಕ್ಷೇತ್ರದಲ್ಲಿ ಬಹಳ ಹೆಸರು ಮಾಡಿದೆ. ಇದು ಅಶುಚಿಯನ್ನು ದೂರ ಮಾಡಿ ಸ್ಮರಣಶಕ್ತಿಯನ್ನು ಹೆಚ್ಚಿಸುವುದಾಗಿಯೂ, ತಲೆತಿರುಗುವುದನ್ನು ದೂರ ಮಾಡುತ್ತದೆ ಎಂಬ ವಿಚಾರ ಮಹತ್ವದ್ದಾಗಿದೆ.

'ಜಾನಪದ ಜಗಲಿ' ಪವಿತ್ರ ಅರ್ಥದಲ್ಲಿ ನಾಡವರ ಚರಿತ್ರೆ, ಸ್ಥಳನಾಮ, ಕಲೆ, ಜನಾಂಗೀಯ ಕಾಳಜಿ, ಆತ್ಮಕಥನ, ವ್ಯಕ್ತಿಚಿತ್ರಣ ಹಾಗೂ ಬುಡಕಟ್ಟು ಜನರ ಸಂಸ್ಕೃತಿಯನ್ನು ಪರಿಚಯಿಸಿದೆ. ಇಲ್ಲಿಯ ಲೇಖನಗಳು ಅಕಡೆಮಿಕ್ ಶಿಸ್ತಿನ ಬರಹಗಳಾಗಿವೆ. ಪ್ರತಿಯೊಂದಕ್ಕೂ ಆಕರ-ಆಧಾರಗಳಿವೆ. 'ಜಗಲಿ' ನಮ್ಮ ಭಾವನೆಗಳಿಗೆ ಹೇಗೆ ಭಕ್ತಿಯ ನೆಲೆ ಒದಗಿಸುತ್ತದೆಯೋ ಹಾಗೆಯೇ ಈ ಸಂಕಲನದ ಲೇಖನಗಳಿಗೂ ಪವಿತ್ರ ಸಂಕಲ್ಪದ ದಾರಿ ತೋರುತ್ತದೆ. ಆ ಮೂಲಕ 'ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ಬೆಳೆದು ಬಂದಿರುವ ಮಾನವಶಾಸ್ತ್ರ, ಮನೋವಿಜ್ಞಾನ, ಕಾವ್ಯಮೀಮಾಂಸೆ ಮತ್ತು ಇತರ ಜ್ಞಾನಶಾಖೆಗಳ ಆಲೋಚನೆಯನ್ನು ಕನ್ನಡ ಜಾನಪದ ಅಧ್ಯಯನ ಇನ್ನೂ ತನ್ನ ಅಧ್ಯಯನದ ಕಕ್ಷೆಗೆ ಸೇರಿಸಿಕೊಂಡಿಲ್ಲ'[3] ಎಂದು ವಿಮರ್ಶಕರು ತೋರಿದ ಕೊರತೆಯನ್ನು ನೀಗಿಸಿಕೊಂಡಿದೆ.

ಕರ್ನಾಟಕ ಮತ್ತು ಆಂಧ್ರದಲ್ಲಿ ಕಾಣಿಸಿಕೊಳ್ಳುವ ಹಚ್ಚೆ ಹೊಯ್ಯುವ ಚಿತ್ರಕಲೆ ಪ್ರದರ್ಶನ ಕಲೆಯಾಗಿ ಗಮನ ಸೆಳೆದ ರೀತಿಯನ್ನು ಜಿ.ಎಸ್. ಮೋಹನ್‌ರವರು ತಮ್ಮ 'ಕರ್ನಾಟಕ ಮತ್ತು ಆಂಧ್ರ ಜನಪದ ಚಿತ್ರಕಲೆ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಜನಾಂಗೀಯ ಸಂಸ್ಕೃತಿಗೆ ಕುರುಹಾಗಿ ಎದ್ದು ಕಾಣುವ ಈ ಹಚ್ಚೆ ಆಂಧ್ರಪ್ರದೇಶ, ಕರ್ನಾಟಕ ಪ್ರಾಂತಗಳಲ್ಲಿ ಇನ್ನೂ ಉಳಿದಿದೆ. ಕರ್ನಾಟದಲ್ಲಿ ಬುಂಡೆಬೆಸ್ತರು, ಕೊರಮಶೆಟ್ಟರ ಸ್ತ್ರೀಯರು ಈ ಕಲೆಯಲ್ಲಿ ಹೆಸರು ಗಳಿಸಿದ್ದಾರೆ ಎಂಬ ಲೇಖಕರ ಮಾತು ಜನಾಂಗೀಯ ಅಸ್ಮಿತೆಯನ್ನು ಗುರುತಿಸಲು ಸಹಕಾರಿಯಾಗಿದೆ. ಹಚ್ಚೆಯ ಪರಿಕರಗಳಿಂದ ಹಿಡಿದು ಅದನ್ನು ಉಪಯೋಗಿಸುವ ಹಲವಾರು ಸಂದರ್ಭಗಳ ಕುರಿತು ಇಲ್ಲಿ ವಿವರಣೆಗಳಿವೆ.

ಜಾನಪದ ಜಗಲಿಯಲ್ಲಿ ಕಾಣಿಸಿಕೊಂಡ ಮತ್ತೊಂದು ಮಹತ್ವದ ಸಂಗತಿಯೆಂದರೆ ಸ್ಥಳನಾಮಗಳ ಕುರಿತು ನಡೆದ ಚರ್ಚೆ-ಚಿಂತನೆಗಳು. ಹಿರಿಯ ಸಂಶೋಧಕರಾದ ಎಂ.ಎಂ. ಕಲಬುರ್ಗಿಯವರಿಂದ ಹಿಡಿದು ಅನೇಕ ಹಿರಿ-ಕಿರಿಯ ಸಂಶೋಧಕರು ಸ್ಥಳನಾಮಗಳ ಕುರಿತು ಅಧ್ಯಯನ ನಡೆಸಿದ್ದಿದೆ. ಈ ಸಂಕಲನದಲ್ಲಿ ಪ್ರಕಟವಾದ ಮೂರು ಲೇಖನಗಳು ಧಾರವಾಡ, ಚಿತ್ರದುರ್ಗ ಹಾಗೂ ಕಾಸರಗೋಡಿನ ಕುರಿತು ವಿವರಣೆಗಳನ್ನು ಒದಗಿಸುತ್ತವೆ. ಸ್ಥಳನಾಮಗಳಲ್ಲಿ ಪಾಮರ ನಿಷ್ಪತ್ತಿ, ಪಂಡಿತ ನಿಷ್ಪತ್ತಿ ಹಾಗೂ ನಿಜ ನಿಷ್ಪತ್ತಿಗಳ ಕುರಿತು ವಿ.ಎಲ್. ಪಾಟೀಲ್‌ರವರು ವಿವರಿಸುತ್ತ 'ಕಾಲಗರ್ಭದಲ್ಲಿ ಅನೇಕ ರೀತಿಯ ಬದಲಾವಣೆಗಳನ್ನು ಹೊಂದುತ್ತಾ ಸವಕಳಿ ರೂಪದಲ್ಲಿ ನಮ್ಮ ಮುಂದೆ ಚಲಾವಣೆಯ ರೂಪದಲ್ಲಿರುವ ಸ್ಥಳನಾಮಗಳನ್ನು ಶಾಸನದ ಹಿನ್ನೆಲೆಯಲ್ಲಿ ಗಮನಿಸಿ ಅಲ್ಲಿಯ ಮೂಲರೂಪಗಳನ್ನು ಗುರುತಿಸಿ ಅದರಿಂದ ಅಲ್ಲಿಯ ಸಾಂಸ್ಕೃತಿಕ ಮತ್ತು ಭೌಗೋಳಿಕ ಸಂಗತಿಗಳನ್ನು ಅರಿಯಬಹುದು' ಎಂದಿದ್ದಾರೆ. ಇದು ಸ್ಥಳನಾಮಗಳ ಕುರಿತ ಶಾಸ್ತ್ರೀಯ ಅಧ್ಯಯನಕ್ಕೆ ಮಹತ್ವದ ವಿಚಾರವಾಗಿದೆ.

ಧಾರವಾಡ ತಾಲೂಕಿನ 'ಅಮ್ಮಿನಬಾವಿ', ಕುಂದೂರು, ಗರಗ, ನವಲೂರು ಮೊದಲಾದವುಗಳ ನಿಷ್ಪತ್ತಿಯು ಕುರಿತ ವಿಚಾರಗಳು ಅಧ್ಯಯನಯೋಗ್ಯವಾಗಿವೆ. ಬಿ.ಬಿ. ಪಾಟೀಲರು ಚಿತ್ರದುರ್ಗದ ಕುರಿತು ಬರೆದ ಲೇಖನದಲ್ಲಿ-ಬುಡಕಟ್ಟು ಜನಾಂಗದಲ್ಲಿ, ಶಾಸನಗಳಲ್ಲಿ, ಹಿರಿಯ ಸಂಶೋಧಕರಾದ ಆರ್. ನರಸಿಂಹಾಚಾರ್, ಎಂ.ಎಂ. ಕಲಬುರ್ಗಿಯವರಂತಹ ಸಂಶೋಧಕರಲ್ಲಿ ಚಿಮ್ಮತ್ತನಕಲ್ಲು ಚಿತ್ರದುರ್ಗವಾದ ರೂಪಾಂತರದ ಅವಸ್ಥಾಭೇದಗಳು ಕಾಣಸಿಗುತ್ತವೆ. ಯು. ಮಹೇಶ್ವರಿ ಅವರು ಕಾಸರಗೋಡಿನ ಬಗೆಗಿನ ಭೂದಾಖಲೆ, ಸ್ಥಳ ಪುರಾಣ, ಜಾನಪದ ಹಾಡುಗಳನ್ನು ವಿಶ್ಲೇಷಿಸಿ, ಅಲ್ಲಿಯ ಮಹತ್ವದ ಮಠಗಳು, ದೇಗುಲಗಳು ಮತ್ತು ಬಳಕೆಯಲ್ಲಿರುವ ಭಾಷೆಯ ಕುರಿತು ಅರ್ಥಪೂರ್ಣ ವಿವರಣೆ ನೀಡಿದ್ದಾರೆ. ಸ್ಥಳನಾಮ, ಸ್ಥಳೀಯ ಇತಿಹಾಸದ ಕುರಿತು ಈ ಸಂಕಲನದಲ್ಲಿ ಸಂಚಯಗೊಂಡ ಲೇಖನಗಳು ಸಂಶೋಧಕರಿಗೆ ಮಾರ್ಗದರ್ಶನವನ್ನು ಒದಗಿಸುತ್ತವೆ. ವಿಶ್ವಾಸಾರ್ಹ ಆಕರಗಳಿಂದ ಅವರು ವಿಷಯವನ್ನು ವಿಶ್ಲೇಷಿಸಿರುವುದು ಎದ್ದು ಕಾಣುತ್ತದೆ.

ಸಾಮಾನ್ಯವಾಗಿ ಜನಪದರ ಜೀವನ ವಿಧಾನ, ಆಲೋಚನೆಗಳ ಕುರಿತು ಬುದ್ಧಿಜೀವಿಗಳಲ್ಲಿ ದಿವ್ಯ ನಿರ್ಲಕ್ಷ್ಯವಿದೆ. ಆದರೆ ಇಲ್ಲಿನ ಎಸ್. ನಾಗರಾಜರವರ 'ಹಟ್ಟಿಗೊಲ್ಲರಿಗೆ ಇಂಟೆನ್ಸಿವ್ ಕೇರ್ ಯುನಿಟ್‌ನ ಪರಿಕಲ್ಪನೆಯಿತ್ತೆ?' ಎಂಬ ಲೇಖನ ನಮ್ಮ ಗಮನ ಸೆಳೆಯುತ್ತದೆ. ಹಟ್ಟಿ ಗೊಲ್ಲರ ಜನಾಂಗೀಯ ಕಾಳಜಿ, ಸಂಪ್ರದಾಯ, ಆಚರಣೆ, ನಂಬಿಕೆಗಳ ಹಿಂದಿನ ವೈಜ್ಞಾನಿಕ ಮನೋಭಾವ, ಮಹಿಳೆಯರ ಬಗೆಗೆ ಅವರು ತೋರುವ ಕಾಳಜಿ ಪ್ರಶಂಸನೀಯವಾಗಿವೆ. ಹಟ್ಟಿಗೊಲ್ಲರ ಸಂಪ್ರದಾಯ ಆಚರಣೆಗಳ ಕುರಿತು ವಿವರಣೆ ನೀಡುತ್ತಲೇ ಅವರ ಆರ್ಥಿಕ, ಸಾಮಾಜಿಕ, ಆರೋಗ್ಯ ಜೀವನಕ್ಕೆ ಅವರ ಸಂಪ್ರದಾಯಗಳು ಹೇಗೆ ಪೂರಕವಾಗಿವೆ ಎಂಬುದನ್ನು ಇಲ್ಲಿ ವಿವರಿಸಿದ್ದಾರೆ. ಹೆರಿಗೆ ಕಾಲದಲ್ಲಿ ಆ ಜನಾಂಗ ತೆಗೆದುಕೊಳ್ಳುವ ಎಚ್ಚರ ಆಧುನಿಕ ಆಸ್ಪತ್ರೆಗಳ ಐ.ಸಿ.ಯು. (Intensive Care Unit)ಗೆ ಸಮ ಎಂದದ್ದು ವಿನೂತನ ವಿಚಾರವಾಗಿದೆ.

ಜನಪದ ಸಾಹಿತ್ಯದಲ್ಲಿ ಮಹಿಳೆಯರಿಗೆ ವಿಶಿಷ್ಟ ಸ್ಥಾನಮಾನಗಳಿವೆ. ಆದರೆ ಜಾನಪದದ ಮಹಿಳೆ ತನ್ನ ತವರು, ಗಂಡನ ಮನೆಯಲ್ಲಿ ಮಾಡಿದ ಕೆಲಸಗಳಿಗೆ ಬೆಲೆಯಿಲ್ಲ. ಕಣ್ಣಿಗೆ ಕಾಣದ, ಆದರೆ ಹಗಲಿರುಳು ದುಡಿದರೂ ಶ್ರಮಕ್ಕೆ ತಕ್ಕ ಬೆಲೆ ಸಿಗದ ಸನ್ನಿವೇಶಗಳ ಬಗ್ಗೆ ಸುಮಂಗಲಾ ಅತ್ತಿಗೇರಿ 'ಕೃಷಿಕೂಲಿ ಮಹಿಳೆಯ ದುಡಿಮೆ ಮತ್ತು ಶ್ರಮದ ಬದುಕಿಗಿಲ್ಲದ ಬೆಲೆ' ಎಂಬ ಲೇಖನದಲ್ಲಿ ಗಮನ ಸೆಳೆದಿದ್ದಾರೆ. ಕೃಷಿ ಕೂಲಿ ಕಾರ್ಮಿಕರ ಕೌಟುಂಬಿಕ ಕೆಲಸ ಕಾರ್ಯಗಳು, ಕೃಷಿಕೂಲಿಯ ಕೆಲಸಕಾರ್ಯಗಳು ಎಂಬ ವರ್ಗೀಕರಣದಲ್ಲಿ ಅವರ ಕಾರ್ಯಬಾಹುಳ್ಯ ಹಾಗೂ ಪ್ರತಿಫಲ ದೊರೆಯದ ವ್ಯರ್ಥ ಶ್ರಮದ ಕುರಿತು ಅತ್ತಿಗೇರಿಯವರು ವಿಶ್ಲೇಷಿಸಿದ್ದಾರೆ. Unpaid, Unrecognised ಹಾಗೂ Under Valued ಎಂಬ ಪದಗಳನ್ನು ಬಳಸಿ ಲೇಖಕರು ಅವಳಿಗಾಗುತ್ತಿರುವ ಶೋಷಣೆಯನ್ನು ಗಮನಕ್ಕೆ ತಂದಿದ್ದಾರೆ.

ಜನಪದರ ಪಾರಂಪರಿಕ ಜ್ಞಾನ ಅಗಾಧವಾಗಿದೆ. ಅದು ಸಮಷ್ಟಿಯ ಹಿತಕ್ಕಾಗಿ ತುಡಿದಿದೆ. ಜೇನು ಹುಡ್ಕುಕುವ, ತುಪ್ಪ ತೆಗೆಯುವ, ಮೇಣ ಮಾಡುವ, ಜೇನು ಕಚ್ಚದಂತೆ ರಕ್ಷಿಸಿಕೊಳ್ಳುವ, ಮುರಿದ ಕೈ ಕೂಡಿಸುವ, ಅಸ್ತಮಾಕ್ಕೆ ಮೃಗಶಿರ ನಕ್ಷತ್ರದಲ್ಲಿ ಔಷಧ ಕೊಡುವ, ಕುರುಕಲು ಸಂಡಿಗೆ, ಹಲಸಿನ ಹಪ್ಪಳ, ಬಾಳಕದ ಮೆಣಸಿನಕಾಯಿ ಸಂರಕ್ಷಿಸುವ ಹಲವಾರು ಮಾದರಿಗಳ ಜ್ಞಾನವನ್ನು ಅವರು ಪರಂಪರೆಯ ಭಾಗವಾಗಿ ಕಲಿತಿದ್ದಾರೆ ಎನ್ನುವ ಎಂ.ಎನ್. ವೆಂಕಟೇಶ್‌ರವರು ತಮ್ಮ ಲೇಖನ - 'ಪಾರಂಪರಿಕ ಜ್ಞಾನ ಮತ್ತು ತಂತ್ರಜ್ಞಾನ ಅರ್ಥ ಮತ್ತು ಪರಿಕಲ್ಪನೆ'ಯಲ್ಲಿ ಪಾರಂಪರಿಕ ಮತ್ತು ತಂತ್ರಜ್ಞಾನದ ನಡುವಿನ ವ್ಯತ್ಯಾಸವನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಆಧುನಿಕ ತಂತ್ರಜ್ಞಾನ ಪಟ್ಟಣ ವಾಸಿಗರ ಗಳಿಕೆಗೆ ದಾರಿಯಾದರೆ, ಪಾರಂಪರಿಕ ಜ್ಞಾನ ಹಳ್ಳಿಗರ, ಹೃದಯ ಬೆಸುಗೆಗೆ ಸೇತುವೆಯಾಗಿದೆ. 'ಪರಂಪರಾಗತ ಜ್ಞಾನ'ವು ನಮ್ಮ ತಲೆಮಾರಿನ ಹಿರಿಯರ ಸ್ವತ್ತು. ಅದನ್ನು ಅವರು ಅವರ ಹಿರಿಯರಿಂದ ಪಡೆದಿದ್ದಾರೆ' ಎಂದಿರುವ ಲೇಖಕರು ಹುತ್ತ, ಕಲ್ಲು, ಮರ, ಗಿಡಗಳು ಅವರ ಪಾಲಿಗೆ ದೇವರೇ ಆಗಿರುತ್ತವೆ. ಕೇವಲ ಮನೆಯಲ್ಲಿರುವ ಬಂಧು-ಬಾಂಧವರು ಮಾತ್ರವಲ್ಲ, ಅಲ್ಲಿನ ದನ-ಕರು, ಗಿಡ-ಬಳ್ಳಿ, ಪರಿಸರ ಎಲ್ಲದರಲ್ಲೂ ಮಮತೆಯ ಸೆಳೆತವಿರುತ್ತದೆ ಎಂಬ ಅಂಶ ಸತ್ಯವಾಗಿದೆ. ಪಾರಂಪರಿಕ ಜ್ಞಾನದ ಎಲ್ಲ ಸಾಧ್ಯತೆಗಳ ಬಗೆಗೆ ಗಮನ ಸೆಳೆದಿರುವ ಲೇಖಕರು ವ್ಯವಹಾರಿಕ ಸಂಬಂಧಗಳಿಗಿಂತ ಮಾನವೀಯ ಸಂಬಂಧಗಳಿಗೆ ಹೆಚ್ಚು ಒತ್ತುಕೊಟ್ಟಿದ್ದಾರೆ.

ಜನಪದ ಸಾಹಿತ್ಯ ತನ್ನ ದೇಸಿ ಸತ್ವಗಳಿಂದ ಗಮನ ಸೆಳೆದಂತೆ, ಕುಶಲಕರ್ಮಿ ಹಾಗೂ ಕಲೆಗಾರಿಕೆಯಿಂದಲೂ ಗಮನ ಸೆಳೆಯುತಲಿದ್ದು, ಎಸ್.ಎಫ್. ಜಕಬಾಳ ಅವರ 'ಸದರ ಕಲೆ' ಹಾಗೂ ಎನ್. ಮೋಹನಕುಮಾರ್, ಕೆ. ಕಮಲಾಕ್ಷ ಅವರ 'ರತುನದ ಜಾಡಿಯ ಮ್ಯಾಲೆ ಬರೆದರೂ ನೆಲ್ಲಕ್ಕಿ ಹಸೆಗಾಳ' ಎನ್ನುವ ಲೇಖನಗಳು ಜನಪದರ ನಂಬಿಕೆ-ಆಚಾರಗಳನ್ನು ಗಮನಕ್ಕೆ ತರುತ್ತವೆ. ಜಾತ್ರೆ-ಉತ್ಸವಗಳ ಸಂದರ್ಭದಲ್ಲಿ ದೇವ-ದೇವತೆಗಳ ಗುಡಿಗಳ ಪೌಳಿಗಳ ಹಂದರಗಳಲ್ಲಿ, ದೀಡ್ ನಮಸ್ಕಾರ ಉರುಳುಸೇವೆ ನಡೆಸುವ ಭಕ್ತರು ಗರ್ಭಗುಡಿಯ ಗದ್ದುಗೆಯ ಮೇಲೆ ಸುಂದರವಾಗಿ ಗದ್ದಿಗೆಗೊಂಡ ದೇವರ 'ಸದರ'ನ್ನು ಕಂಡು ಧನ್ಯತೆಯ ಭಾವದಿಂದ ಕೈಮುಗಿದು ನಿಲ್ಲುತ್ತಾರೆ' ಎನ್ನುವ ಲೇಖಕರು ಇದು ಚಿತ್ರದುರ್ಗ, ತುಮಕೂರು, ಬೆಂಗಳೂರು, ರಾಮನಗರ, ಮೈಸೂರು, ಬಳ್ಳಾರಿ, ದಾವಣಗೆರೆ ಮುಂತಾದ ಜಿಲ್ಲೆಗಳಲ್ಲಿ ನೆಲೆಸಿರುವ ಕಾಡುಗೊಲ್ಲ ಬುಡಕಟ್ಟು ಜನರ ಬದುಕು-ಪಶುಪಾಲನೆ ಸಂಸ್ಕೃತಿಯ ಹಿನ್ನೆಲೆಯಿಂದ ಕೂಡಿದೆ (ಪು. ೧೯) ಎಂದಿದ್ದಾರೆ.

ದೈವೀ ಶ್ರದ್ಧೆ ಹೊಂದಿರುವ ಬುಡಕಟ್ಟು ಜನಾಂಗ ವಿವಾಹ ಸಂದರ್ಭದಲ್ಲಿ 'ಹಸೆ' ಬರೆದು ತಮ್ಮ ಪ್ರದರ್ಶನ ಕಲೆ ತೋರುತ್ತಾರೆ. ಜೊತೆಗೆ ದೇವಾನುದೇವತೆಗಳನ್ನು

4

ಕುರಿತು 'ಪದ' ಕಟ್ಟಿ ಹಾಡುತ್ತಾರೆ. ಈ ಸಂದರ್ಭದಲ್ಲಿ ಅವರು ತೋರುವ ಕೌಶಲದ ಕುರಿತು ಲೇಖಕರು ವಿವರಿಸಿದ್ದಾರೆ. ಇದು ಜಾನಪದ ಕಲಾಭ್ಯಾಸಿಗಳಿಗೆ ಮಹತ್ವದ ಆಕರವಾಗಿದೆ. ಕಲಾವಿದರ-ಸಹೃದಯರ ಪರಸ್ಪರ ಸಂವಾದದಿಂದ ಹಸೆ ಬರೆಯುವ ಕಲೆ ದೈವಿಕವಾಗಿ ಅರಳಿಕೊಳ್ಳುತ್ತದೆ(ಪು. ೧೩೦) ಎಂಬುದು ಜನಪದರ ಹೃದಯ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಲೇಖನಕ್ಕೆ ಪೂರಕವಾಗಿ ಹಸೆ ಬಿಡಿಸುವ ಚಿತ್ರಗಳನ್ನು ಕಲೆ ಹಾಕಿ ಚೈತನ್ಯವನ್ನು ತುಂಬಿದ್ದಾರೆ.

'ಜಾನಪದ ಜಗಲಿ'ಯಲ್ಲಿ ಸಂಗ್ರಹಗೊಂಡ ವ್ಯಕ್ತಿಚಿತ್ರಣಗಳು ಜಾನಪದ ಕ್ಷೇತ್ರದಲ್ಲಿ ದುಡಿದ ಮಹನೀಯರ ಸಾಧನೆ-ಸೇವೆಯನ್ನು ಒಳಗೊಂಡಿವೆ. ಈ ಸಂಚಿಕೆಯಲ್ಲಿ ಜೀ.ಶಂ. ಪರಮಶಿವಯ್ಯ ಹಾಗೂ ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರ ಕುರಿತು ಅಂಬಳಿಕೆ ಹಿರಿಯಣ್ಣನವರು ಮೌಲಿಕವಾದುದನ್ನು ಕಟ್ಟಿಕೊಟ್ಟಿದ್ದಾರೆ. ಜೀ.ಶಂ.ಪ. ಅವರ ಕ್ಷೇತ್ರಕಾರ್ಯ, ಸಂಗ್ರಹ, ಅಧ್ಯಯನದ ಜೊತೆಗೆ ಜಾನಪದ ವಿವಿಧ ಪ್ರಕಾರಗಳ ವಿಶ್ಲೇಷಣಾ ಕಾರ್ಯವೈಖರಿಯ ಕುರಿತು ಹಿರಿಯಣ್ಣನವರು ವ್ಯಕ್ತಪಡಿಸಿರುವ ವಿಚಾರಗಳು ಅಧ್ಯಯನಯೋಗ್ಯವಾಗಿವೆ. ಅರುವತ್ತರ ದಶಕದಿಂದ ತೊಂಬತ್ತರ ದಶಕದವರೆಗೆ ಜೀ.ಶಂ.ಪ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೈಗೊಂಡ ಕೆಲಸಕಾರ್ಯಗಳು, ಜಾನಪದ ಅಧ್ಯಯನಕ್ಕೆ ಉತ್ತಮ ವಾತಾವರಣ ನಿರ್ಮಿಸಿರುವುದು ಹಿರಿಯಣ್ಣನವರ ಮೆಚ್ಚುಗೆಗೆ ಕಾರಣವಾಗಿವೆ.

ಅಂಬಳಿಕೆ ಹಿರಿಯಣ್ಣನವರ ಮೆಚ್ಚುಗೆಗೆ ಭಾಜನರಾದ ಇನ್ನೋರ್ವ ಜಾನಪದ ವಿದ್ವಾಂಸ ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು. ವೃತ್ತಿಯಿಂದ ಅಧ್ಯಾಪಕರಾದರೂ ಪ್ರವೃತ್ತಿಯಿಂದ ಸಾಹಿತಿ-ಸಂಶೋಧಕರಾದವರು. 'ತುಳುನಾಡು-ನುಡಿ' ಕೃತಿ ಅವರ ವಿಶೇಷ ಅಧ್ಯಯನದ ಫಲವಾಗಿದೆ. ಶಿಸ್ತುಬದ್ಧ ಅಧ್ಯಯನಕ್ಕೆ ಹೆಸರಾದ ಅವರು ತುಳು ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆಗಿದ್ದ ಸಂದರ್ಭದಲ್ಲಿ ಜನಪದ ಕಲಾ ಪ್ರದರ್ಶನ ಸಂಘಟಿಸಿದ್ದರ ಬಗ್ಗೆ ಹಿರಿಯಣ್ಣನವರು ತಮ್ಮ ಲೇಖನದಲ್ಲಿ ಪ್ರಶಂಸಿಸಿದ್ದಾರೆ. ತುಳು ಸಂಸ್ಕೃತಿಯ ಒಡಲಲ್ಲಿ ಅಡಗಿರುವ ಕಲೆ, ಕ್ರೀಡೆ, ಕಸುಬುಗಳ ಬಗ್ಗೆ ಅಧಿಕೃತವಾಗಿ ಬರೆದ ಪಾಲ್ತಾಡಿಯವರ ಶೋಧ ಸಂಸ್ಕೃತಿ ಮಹತ್ವದ್ದಾಗಿದೆ. ಜಾನಪದ ಕ್ಷೇತ್ರಕಾರ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದ ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರ ಕುರಿತು ಅಂಬಳಿಕೆಯವರ ಲೇಖನದಲ್ಲಿ ಮೌಲಿಕ ವಿಚಾರಗಳಿವೆ.

ಇಂದು ಜಾನಪದ ಸಾಹಿತ್ಯ ಎಲ್ಲರ ಗಮನ ಸೆಳೆಯುತಲಿದ್ದು ಆ ಕುರಿತು ಮಹತ್ವದ ಸಂಶೋಧನೆ ಲೇಖನಗಳು ಹೊರಬಂದಿವೆ. 'ದಶಕದ ಕನ್ನಡ ಸಾಹಿತ್ಯ'ದಲ್ಲಿ ಪ್ರೊ. ಎ.ವಿ. ನಾವಡ ಅವರು ಭಾರತದಂತಹ ಬಹುಸಂಸ್ಕೃತಿಯ ದೇಶದ ಬಹುತ್ವವನ್ನು ನಿರ್ವಚಿಸಲು ಹಾಗೂ ವಸಾಹತು ಸಂಸ್ಕೃತಿ ತಂದ ಏಕಾಕಾರದ ಕಲ್ಪನೆಯನ್ನು

ಮೀರಲು ಜಾನಪದ ಅದರಲ್ಲೂ ವಿಶೇಷವಾಗಿ ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ನೆರವಾದವು. ನಾಡಿನ ನೂರಾರು ಬುಡಕಟ್ಟು ಹಾಗೂ ಹಿಂದುಳಿದ ಸಮುದಾಯಗಳ ನಡುವೆ ಮಾತ್ರ ಆತ್ಮರತಿಗಾಗಿ ಪಿಸುಗುಟ್ಟಲಾಗುತ್ತಿದ್ದ ಅಥವಾ ಆಚರಣಾತ್ಮಕ ಸಂದರ್ಭದಲ್ಲಿ ಏರುಧ್ವನಿಯಲ್ಲಿ ಅಪೂರ್ಣವಾಗಿ ಹಾಡಲಾಗುತ್ತಿದ್ದ ಕಾವ್ಯಗಳು ಇದೀಗ ಕಳೆದ ದಶಕದಲ್ಲಿ ಮೊದಲ ಬಾರಿಗೆ ವೈಜ್ಞಾನಿಕ ದಾಖಲೆಗೆ ಒಳಗಾದವು'[೩] ಎಂದಿರುವುದು ಜಾನಪದ ಕಾವ್ಯ ದಾಖಲೀಕರಣದ ಪ್ರಾಮುಖ್ಯತೆಯನ್ನು ಎತ್ತಿತೋರಿದೆ. ಈ ಸಂಚಿಕೆಯಲ್ಲಿ ಸಂಚಯಗೊಂಡ ಪ್ರಕಾಶ ಖಾಡೆಯವರ 'ಹಲಸಂಗಿ ಗೆಳೆಯರ ಜಾನಪದ ಕೃತಿಗಳ ಸಮೀಕ್ಷೆ'ಯಲ್ಲಿ ಬಿ.ಎಂ.ಶ್ರೀ, ಮಾಸ್ತಿ, ಬೇಂದ್ರೆಯವರು ಜಾನಪದ ಹಾಡುಗಳ ಕುರಿತ ಕಾಳಜಿ ವ್ಯಕ್ತವಾಗಿವೆ. ಜನವಾಣಿ ಬೇರು, ಕವಿವಾಣಿ ಹೂ ಎಂದು ಬಿ.ಎಂ.ಶ್ರೀಯವರು ಸಾರಿದ ಮೇಲೆ ಜಾನಪದ ಸಾಹಿತ್ಯ ಸಂಗ್ರಹಕ್ಕೆ ಎಲ್ಲಿಲ್ಲದ ಬೆಲೆ ಬಂದಿದೆ.

ಜಾನಪದ ಅಧ್ಯಯನಕ್ಕೆ ಮೀಸಲಾದ ವಿಶ್ವವಿದ್ಯಾಲಯದ ಮೌಲಿಕ ನಿಯತಕಾಲಿಕೆ ಜಗಲಿ. ಜಾನಪದದಲ್ಲಿ ತೋಳದ ಕಲ್ಲುಗಳ ಆತ್ಮಕಥನ ಹಾಗೂ ದಿ ಫರೋಸ್ ಫೋಕ್ ಹೈಸ್ಕೂಲ್ ಸೇರಿದಂತೆ ಒಟ್ಟು ಹದಿನಾರು ಜಾನಪದ ಲೇಖನಗಳಿದ್ದು, ಅವು ವಿವಿಧ ಜಾನಪದ ವಿಷಯವನ್ನೊಳಗೊಂಡ ತಜ್ಞರ ಶಿಸ್ತಿನ ಅಧ್ಯಯನದ ಫಲವಾಗಿವೆ. ಇವನ್ನು ಸಂಗ್ರಹಿಸಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಹೊರತಂದ ಸಂಪಾದಕರಾದ ಡಾ. ಎಂ.ಎನ್. ವೆಂಕಟೇಶ ಅಭಿನಂದನೆಗೆ ಅರ್ಹರಾಗಿದ್ದಾರೆ.

ಅಡಿಟಿಪ್ಪಣಿಗಳು

೧. ಎಚ್.ಎಸ್. ರಾಘವೇಂದ್ರರಾವ್, ಶತಮಾನದ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨. ಅದೇ.

೩. ಡಾ. ಎಫ್.ಟಿ. ಹಳ್ಳಿಕೇರಿ ಮತ್ತು ಡಾ. ಕೆ. ರವೀಂದ್ರನಾಥ(ಸಂ), ದಶಕದ ಕನ್ನಡ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ. ಸುರೇಶ ಎಲ್. ಜಾಧವ ಮತ್ತು
ಡಾ. ಸುರೇಂದ್ರ ಕೆರಮಗಿ

೨೩. ಜಾನಪದ ಜಗಲಿ

ಸಂಪುಟ ೨, ಸಂಚಿಕೆ ೨, ಸೆಪ್ಟೆಂಬರ್ ೨೦೧೩

ಪ್ರಧಾನ ಸಂಪಾದಕರು: ಪ್ರೊ. ಅಂಬಳಿಕೆ ಹಿರಿಯಣ್ಣ

ಗೌರವ ಸಂಪಾದಕರು: ಡಾ. ಭೈರಮಂಗಲ ರಾಮೇಗೌಡ

ಪುಟ ೧೧೬, ಬೆಲೆ ರೂ. ೫೦/-

ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಜಾನಪದ ಜಗಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಜಗಲಿ. ಕರ್ನಾಟಕ ಜಾನಪದವನ್ನು ಮೆಲುಕು ಹಾಕುವ, ಜಾನಪದವನ್ನು ಪುನರುಜ್ಜೀವನಗೊಳಿಸುವ, ಜಾನಪದದ ಹೊಸ ಚಿಗುರನ್ನು ಚಿಗುರಿಸುವ ಉದ್ದೇಶಗಳನ್ನಿಟ್ಟುಕೊಂಡು ಈ ಜಗಲಿಯನ್ನು ರೂಪಿಸಲಾಗಿದೆ. ನಮ್ಮ ಗ್ರಾಮೀಣ ಜನಪದರ ಜಗಲಿಗಳಲ್ಲಿ ಚರ್ಚಿಸದ ವಿಷಯಗಳಿರದು. ಜಗಲಿಯ ನೆಲಗಟ್ಟನ್ನು ಒದಗಿಸದೇ ಇರದ ಆಚರಣೆಯಿದು. ಒಟ್ಟು ತಲೆತಲಾಂತರದ ಜೀವನಕ್ಕೆ ಈ ಜಗಲಿ ಸಾಕ್ಷಿಯಾಗಿರುತ್ತದೆ. ಜಗಲಿಯ ಮಹತ್ವ ಅಗಣಿತವಾಗಿರುತ್ತದೆ.

ಪ್ರಸ್ತುತ ನಿಯತಕಾಲಿಕೆಯ ಮೊದಲೆರಡು ಸಂಚಿಕೆಗಳು ಪ್ರಕಟವಾಗಿ ಇದು ಮೂರನೇ ಸಂಚಿಕೆಯಾಗಿ ಪ್ರಕಟವಾಗಿದೆ. ಸುಮಾರು ಹನ್ನೆರಡು ಸಂಶೋಧನಾತ್ಮಕ ಲೇಖನಗಳನ್ನು ಒಳಗೊಂಡಿರುವ ಸಂಚಿಕೆಯಲ್ಲಿ ಡಾ. ಆರ್ವಿಯಸ್ ಸುಂದರಂ, ಎಸ್.ಎ. ಕೃಷ್ಣಯ್ಯ ಅವರಂಥ ಜಾನಪದ ವಿದ್ವಾಂಸರ ಲೇಖನಗಳು ಗಮನ ಸೆಳೆಯುತ್ತವೆ. 'ಜಾನಪದದ ಉಳಿವು' ಭಾರತದಲ್ಲಿ ಜಾನಪದ, ಜಾನಪದ ಅಧ್ಯಯನ, ಜಾನಪದ ಅಧ್ಯಯನ ಸಂಸ್ಥೆಗಳ ಸ್ಥಿತಿಗತಿಗಳನ್ನು ಗಂಭೀರವಾಗಿ ಅವಲೋಕಿಸಿರುವಂಥ ಲೇಖನ ವಾಗಿದೆ. "ಜಾನಪದ ಅಧ್ಯಯನದಲ್ಲಿ ಎಷ್ಟು ಜನ ವಿದ್ಯಾರ್ಥಿಗಳಲ್ಲಿ ಆಸಕ್ತಿ ಉಳಿದಿದೆ? ಸಂಸ್ಕೃತಿಯ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುವ ವಿದ್ವಾಂಸರಿಗೆ, ಅಧ್ಯಾಪಕರಿಗೆ, ಆಡಳಿತಗಾರರಿಗೆ ಜಾನಪದದ ಬಗ್ಗೆ ಆಸಕ್ತಿ ಇದೆಯೇ? ಜಾನಪದ ಮತ್ತು ಅದರ ಅಧ್ಯಯನ ಆಧುನಿಕ ಸಮಾಜದಲ್ಲಿ ಇನ್ನೂ ಉಳಿಯುವುದು ಸಾಧ್ಯವೇ?"(ಪು. ೧) ಎಂಬ ಮೂಲಭೂತವಾದ ಪ್ರಶ್ನೆಗಳನ್ನು ಲೇಖಕರು ಎತ್ತಿದ್ದಾರೆ. ಇದೀಗ ಕರ್ನಾಟಕ ರಾಜ್ಯದಲ್ಲಿ ಜಾನಪದ ವಿಶ್ವವಿದ್ಯಾಲಯವೊಂದು ಸ್ಥಾಪನೆಯಾಗಿದ್ದು, ಅದರ ಮೂಲಕ ಈ ಎಲ್ಲಾ ಪ್ರಶ್ನೆಗಳು ಬಗೆಹರಿಯಲಿವೆಯೆ? ಎಂಬ ಆಶಯನ್ನು ಲೇಖಕರು ಮುಂದಿಟ್ಟಿದ್ದಾರೆ ಎಂದೆನಿಸುತ್ತಿದೆ.

'ಫೋಕ್‌ಲೋರ್' ಪದವನ್ನೇ ನಾವು ಸರಿಯಾಗಿ ಅರ್ಥೈಸಿಕೊಂಡಿಲ್ಲ ಎಂಬುದು ಆರ್ವಿಯಸ್ ಅವರ ಒಂದು ವಾದ. "ಜಾನಪದ ವಿದ್ವಾಂಸರು, ನಗರ ಜಾನಪದ, ಹಳ್ಳಿ ಜಾನಪದ, ಬುಡಕಟ್ಟು ಜಾನಪದ ಎಂಬ ರೀತಿಯಲ್ಲಿ ಎಲ್ಲವನ್ನೂ ಸೇರಿಸಿಕೊಳ್ಳಲು ಎಷ್ಟೇ ಯತ್ನಿಸಿದರೂ ಮಾನವಶಾಸ್ತ್ರಜ್ಞರು ಮಾತ್ರ ಜಾನಪದವನ್ನು ತಮ್ಮಲ್ಲಿ

ಸೇರಿಸಿಕೊಳ್ಳಲು ಇಷ್ಟಪಡುವುದಿಲ್ಲವೆಂದು ತೋರುತ್ತದೆ(ಪು. ೭) ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಸಾಮಾನ್ಯವಾಗಿ ಕರ್ನಾಟಕದ ವಿದ್ವಾಂಸರೆಲ್ಲರೂ ಜಾನಪದವನ್ನು ಗ್ರಾಮೀಣ ಪ್ರದೇಶದಲ್ಲಿರುವುವು ಎಂದೇ ಗುರುತಿಸುತ್ತಾರೆ. ಹಳ್ಳಿಯಿಂದ ವಲಸೆ ಬಂದಂಥ ಲಕ್ಷಾಂತರ ಜನರು ನಗರ, ಪಟ್ಟಣಗಳಲ್ಲಿ ವಾಸಿಸುತ್ತಿದ್ದು ಜಾನಪದ ಅಂಶಗಳನ್ನು, ರೀತಿ-ನೀತಿಗಳನ್ನು ಅಳವಡಿಸಿಕೊಂಡಿದ್ದರೂ ಅದು ನಗಣ್ಯವೆಂದೇ ಪರಿಭಾವಿಸುತ್ತಿದ್ದಾರೆ. ನಮ್ಮ ಒಟ್ಟು ಜೀವನ ಪದ್ಧತಿ ಅಥವಾ ನಮ್ಮ ಸಂಸ್ಕೃತಿಗೆ ಮೂಲ ಅಡಿಪಾಯ ವಾಗಿರುವುದು 'ಜಾನಪದ' ಎಂಬುದನ್ನು ಮರೆಯುವ ಹಾಗಿಲ್ಲ. ಆ ಹಿನ್ನೆಲೆಯಲ್ಲಿ ಕಾಲಕಾಲಕ್ಕೆ ಬದಲಾದಂತೆ ಜಾನಪದದಲ್ಲೂ ಬದಲಾವಣೆಗಳಾಗುವುದು ಸಹಜ. ಆದ್ದರಿಂದ 'ನಗರ ಜಾನಪದ'ವೆಂಬುದಿಲ್ಲ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಒಂದು ಕಾಲದಲ್ಲಿ ಅಮೇರಿಕಾದ ವಿಶ್ವವಿದ್ಯಾಲಯಗಳ ಜಾನಪದ ಅಧ್ಯಯನ ವಿಭಾಗದಲ್ಲಿ ಅಧ್ಯಯನ ಮಾಡುವವರ ಸಂಖ್ಯೆ ದೊಡ್ಡದಿತ್ತು. ಆದರೆ ಕ್ರಮೇಣ ವಿದ್ಯಾರ್ಥಿಗಳೇ ಇಲ್ಲದಂಥ ಪರಿಸ್ಥಿತಿಯಾಗಿರುವುದನ್ನು ಉಲ್ಲೇಖಿಸುತ್ತ ಲೇಖಕರು, ಜಾನಪದವನ್ನು ಆನ್ವಯಿಕ ವಿಭಾಗವಾಗಿಯೇ ನೋಡಲಾಗುತ್ತಿರುವುದರ ಬಗೆಗೆ ವಿಷಾದಿಸುತ್ತಾರೆ.

ಕರ್ನಾಟಕ ಜಾನಪದಕ್ಕೆ ಅರ್ನಾಲ್ಡ್ ಎ. ಬಾಕೆ ಅವರ ಕೊಡುಗೆಗಳು ಎಂಬ ಲೇಖನದಲ್ಲಿ ಎಸ್.ಎ. ಕೃಷ್ಣಯ್ಯ ಇದುವರೆಗೂ ದಾಖಲಾಗದ ಜಾನಪದ ಅಧ್ಯಯನದ ವಿಚಾರಗಳನ್ನು ನೀಡಿದ್ದಾರೆ. ೧೯೩೦ರ ದಶಕದಲ್ಲಿ ಭಾರತದ ಮೂಲೆಮೂಲೆಗೂ ಸಂಚರಿಸಿ ಜಾನಪದ ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಸಂಗ್ರಹಿಸಿದ ಆರ್ನಾಲ್ಡ್ ಬಾಕೆ ಬಗ್ಗೆ ಯುವ ಅಧ್ಯಯನಕಾರರು ತಿಳಿದಿರುವುದು ಕಡಿಮೆಯೇ ಎಂದೆನಿಸುತ್ತಿದೆ. ಆ ಕಾಲದಲ್ಲಿಯೇ ತಾಂತ್ರಿಕ ಪರಿಕರಗಳನ್ನು ಬಳಸಿಕೊಂಡು ಕ್ಷೇತ್ರಕಾರ್ಯ ಮಾಡಿದ ಬಾಕೆ ದಂಪತಿಗಳೆಲ್ಲಿ? ಇಂದಿನ ತಂತ್ರಜ್ಞಾನ ಯುಗದಲ್ಲಿಯೂ ಯೋಜನೆಗಳಿಗಾಗಿ ಲಕ್ಷಾಂತರ(ದುಡ್ಡು ಯುಜಿಸಿಯದ್ದು) ರೂಪಾಯಿಗಳನ್ನು ಪಡೆದು ಅಲ್ಪಸ್ವಲ್ಪ ಕಣ್ಣೊರೆಸುವಂತೆ ಕ್ಷೇತ್ರಕಾರ್ಯ ಮಾಡುವ ನಮ್ಮ ವಿಶ್ವವಿದ್ಯಾಲಯಗಳ ವಿದ್ವಾಂಸರೆಲ್ಲಿ? ಎಂಬ ಪ್ರಶ್ನೆಗಳು ಮೂಡುವುದು ಸಹಜ. ನಮ್ಮ ನಾಡಿನ ವಿದ್ವಾಂಸರಿಗೂ ವಿದೇಶಿ ವಿದ್ವಾಂಸರಿಗೂ ಎಷ್ಟು ಅಜಗಜಾಂತರವಿದೆ ಎಂಬುದನ್ನು ತಿಳಿಯಬಹುದು. "೧೯೩೦ರ ದಶಕದಲ್ಲಿ ಕನ್ನಡ ಜಾನಪದ ಬಗ್ಗೆ ಒಲವು ಮೂಡಿದ್ದು ಮತ್ತು ಇವುಗಳ ಸಂಗ್ರಹ ನಡೆಸಬೇಕೆನ್ನುವ ಹಂಬಲಿಕೆ ಉಂಟಾದದ್ದು ಕೆಲವೇ ಸಾಹಿತಿಗಳಲ್ಲಿ; ಮುಖ್ಯವಾಗಿ ಹಲಸಂಗಿ ಸಹೋದರರು, ಗೊರೂರು ರಾಮಸ್ವಾಮಿ ಐಯ್ಯಂಗಾರ್, ನಡಿಕೇರಿಯಂಡ ಚಿಣ್ಣಪ್ಪ, ಅರ್ಚಕ ರಂಗಸ್ವಾಮಿ ಮುಂತಾದವರಲ್ಲಿ. ದಾಖಲಾತಿ, ಅಧ್ಯಯನ, ಸಂಗ್ರಹ, ಜನಜೀವನದ ಸಾಂಸ್ಕೃತಿಕ ಸ್ವರೂಪ, ಜೀವನ ಶೈಲಿಗಳ ವಿವಿಧ ಆಯಾಮಗಳನ್ನು ಹಾಗೂ ಸಾಂಸ್ಕೃತಿಕ ಮಹತ್ವವನ್ನು ಯಂತ್ರ-ಪರಿಕರಗಳ ಮೂಲಕ(ಬಹುಮಾಧ್ಯಮಗಳಲ್ಲಿ)

ಸಾಕ್ಷೀಕರಣಗೊಳಿಸುವ ಮೊದಲ ಪ್ರಯತ್ನ ೧೯೩೮ರಲ್ಲಿ ನಡೆದದ್ದು ಆರ್ನಾಲ್ಡ್ ಬಾಕೆಯಿಂದ. ಜಾನಪದ ಮೀಮಾಂಸೆ, ಇತಿಹಾಸ, ವ್ಯಾಖ್ಯಾನ ಬರೆಯುವವರು ಈತನ ಸಾಧನೆಗಳ ಬಗ್ಗೆ ಎಲ್ಲಿಯೂ ಹೆಚ್ಚಾಗಿ ಪ್ರಸ್ತಾಪ ಮಾಡದೇ ಇರುವುದು ಒಂದು ಸೋಜಿಗವೇ ಆಗಿದೆ"(ಪು. ೧೧) ಎಂದು ಬಾಕೆಯವರ ಆಸಕ್ತಿ, ಕೆಲಸ ಕಾರ್ಯಗಳ ಬಗ್ಗೆ ಲೇಖಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕರಾವಳಿ ಕರ್ನಾಟಕದಲ್ಲಿ ಕಡಲತೀರದ ಭಾರ್ಗವರೆನಿಸಿಕೊಂಡಿದ್ದ ಶಿವರಾಮ ಕಾರಂತರ ಸಹಾಯದ ಮೂಲಕ ಕ್ಷೇತ್ರಕಾರ್ಯ ಮಾಡಿದ ಬಾಕೆಯವರು ಸಂಗ್ರಹಿಸಿದ ಮೌಖಿಕ ಸಾಹಿತ್ಯಗಳನ್ನು ಲೇಖಕರು ನೀಡಿದ್ದಾರೆ. ಅವುಗಳನ್ನು ಗಮನಿಸಿದರೆ ನಮಗೇ ಆಶ್ಚರ್ಯ ಉಂಟಾಗುವುದರಲ್ಲಿ ಎರಡುಮಾತಿಲ್ಲ. ಸೋಣದ ಜೋಗಿ, ಕುಂದಗನ್ನಡದ ಭತ್ತ ಕುಟ್ಟುವ ಹಾಡು, ಸೋಬಾನೆ ಪದ, ಪುಟ್ಟಣ್ಣ ಗುತ್ತಿಗಾರ್ ಹಾಡಿದ ಒಗಟು ಪದ, ನೇಯ್ಗೆ ಸಂದರ್ಭದ ಕಥನಗೀತೆ ಇನ್ನಿತರ ಅತ್ಯಮೂಲ್ಯ ಮೌಖಿಕ ಸಾಹಿತ್ಯಗಳನ್ನು ಆ ಕಾಲದಲ್ಲಿಯೇ ಬಹುಮಾಧ್ಯಮಗಳಲ್ಲಿ ಸಂಗ್ರಹಿಸಿರುವುದು ಅವಿಸ್ಮರಣೀಯ. ಅವುಗಳೆಲ್ಲ ಇಂದು ನಮ್ಮ ಪಾಲಿಗೆ ಬೆಲೆ ಕಟ್ಟಲಾಗದ ಆಸ್ತಿಗಳಿದ್ದಂತೆ. ಇಂದಿನ ಯುವ ಸಂಶೋಧಕರಿಗೆ ಆರ್ನಾಲ್ಡ್ ಬಾಕೆ ದಂಪತಿಗಳು ಮಾಡಿದ ಕ್ಷೇತ್ರಕಾರ್ಯ ಮತ್ತು ಅವರಿಗೆ ಸಹಕರಿಸಿದ ನಮ್ಮ ಹಿರಿಯ ತಲೆಮಾರಿನ ಜಾನಪದ ವಿದ್ವಾಂಸರ ಕಾರ್ಯ ದಾರಿದೀಪವಾಗುವುದರಲ್ಲಿ ಸಂಶಯವಿಲ್ಲ.

ಮಲೆನಾಡಿನ ಬಯಲಾಟಗಳ ಸಾಂಸ್ಕೃತಿಕ ಒಳನೋಟಗಳನ್ನು ಡಾ. ಮೋಹನ್ ಚಂದ್ರಗುತ್ತಿ ನೀಡಿದ್ದಾರೆ. ಯಕ್ಷಗಾನಕ್ಕಿಂತ ಯಾವ ರೀತಿಯಲ್ಲಿ ಭಿನ್ನವಾಗಿದೆಯೆಂಬುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ವೇಷಭೂಷಣ, ಪರಿಕರ, ವಿಷಯ ವಸ್ತುಗಳಿಂದ ಹಿಡಿದು ಸ್ಥಳೀಯ ಕಾರಣಗಳನ್ನು ಸಾಕ್ಷೀಕರಿಸಿದ್ದಾರೆ. ಸಾವಿರಾರು ವರ್ಷಗಳಿಂದ ಜನರನ್ನು ರಂಜಿಸುತ್ತ, ಮನರಂಜನೆ ನೀಡುತ್ತ ಬಂದಿರುವ ದೊಡ್ಡಾಟಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಜನಪದ ಕಲೆ, ಆಚರಣೆ, ಸಂಪ್ರದಾಯಗಳು ಕಡಿಮೆಯಾಗುತ್ತಿರುವುದನ್ನು ನಾವು ಗಮನಿಸಬಹುದು. ಇದಕ್ಕೆ ಮಲೆನಾಡಿನ ದೊಡ್ಡಾಟವೂ ಹೊರತಲ್ಲ. ದೊಡ್ಡಾಟವನ್ನು ಪುನರುಜ್ಜೀವನಗೊಳಿಸಬೇಕಾದ ಅನಿವಾರ್ಯತೆಯನ್ನು ಲೇಖಕರು ಒತ್ತಿ ಹೇಳಿದ್ದಾರೆ.

ಬೆಂಗಳೂರು ಸಮೀಪದ ಎಲೆಕ್ಯಾತನಹಳ್ಳಿಯಲ್ಲಿ ಆಚರಿಸಲ್ಪಡುವ 'ಬ್ರಹ್ಮದೇವರ ಹಬ್ಬ'ವನ್ನು ಜಿ.ಎಸ್. ವಸಂತಮಾಲಾ ಅವರು ಪರಿಚಯಿಸಿದ್ದಾರೆ. ಮೂಲತಃ ಜೈನ ಧರ್ಮದವರ ಹಬ್ಬವನ್ನು 'ಬ್ರಹ್ಮದೇವರ ಒಕ್ಕಲಿನವರು' ಮಾತ್ರ ಆಚರಿಸುತ್ತಿದ್ದಾರೆ ಎಂಬ ಮಾಹಿತಿ ನೀಡಿದ್ದಾರೆ. ಆಚರಣೆ ಸಂಪ್ರದಾಯಗಳಲ್ಲಿ ಕಾಲಕ್ರಮೇಣ ಬದಲಾವಣೆಗಳಾಗುತ್ತಿರುವುದು ಸಹಜವೆಂಬಂತೆ ಲೇಖಕರು ಪ್ರಸ್ತಾಪಿಸಿದಂತೆ ಜೈನರ ಆಚರಣೆಯನ್ನು

ಇತರ ಧರ್ಮದವರು ಆಚರಿಸಬಹುದು ಎಂಬುದನ್ನು ಊಹಿಸಲು ಸಾಧ್ಯವಿದೆ. ಕರಾವಳಿ ಕರ್ನಾಟಕದಲ್ಲಿ ಬ್ರಹ್ಮ ದೇವರ ಆಚರಣೆಗಳಿದ್ದು ಹಿಂದೂ ಧರ್ಮದ ಬಂಟರು, ಬ್ರಾಹ್ಮಣರು, ಬಿಲ್ಲವರು ಆಚರಿಸುವ ಉದಾಹರಣೆಗಳಿವೆ. ಹಬ್ಬದ ಆಚರಣೆಯನ್ನು ಕುರಿತು ವಿವರಿಸುತ್ತ ಲೇಖಕರು "ಮದುವೆಯಾಗದ ಅಥವಾ ಮದುವೆಯಾದ ಹೆಣ್ಣುಮಕ್ಕಳು ಭಾಗವಹಿಸುವಂತಿಲ್ಲ... ಮದುವೆಯಾದ ಗಂಡುಮಕ್ಕಳು ಪತ್ನಿಯರೊಂದಿಗೆ ಭಾಗವಹಿಸಬಹುದು"(ಪು. ೩೬) ಎಂದು ಹೇಳಿದ್ದಾರೆ. ಈ ಹೇಳಿಕೆ ದ್ವಂದ್ವದಿಂದ ಕೂಡಿದೆ. ಮದುವೆಯಾದ ಹೆಣ್ಣುಮಕ್ಕಳಿಗೂ ಗಂಡುಮಕ್ಕಳ ಪತ್ನಿಯರಿಗೂ ವ್ಯತ್ಯಾಸ ಏನೆಂಬುದು ತಿಳಿಯುತ್ತಿಲ್ಲ. ಇತ್ತೀಚಿನ ದಿನಮಾನಗಳಲ್ಲಿ ನಮ್ಮ ಸಮಾಜದಲ್ಲಿ ಆಚರಿಸಲ್ಪಡುವ ಆಚರಣೆ, ರೀತಿ-ರಿವಾಜು, ಸಂಪ್ರದಾಯಗಳು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡುತ್ತವೆ ಎಂಬುದಕ್ಕೆ ಈ ಲೇಖನ ಉತ್ತಮ ಉದಾಹರಣೆಯಾಗಿದೆ.

ಸಂಗಮೇಶ ಎಸ್. ಗಣಿ ಅವರ 'ಜಾಗತೀಕರಣ ಮತ್ತು ಬುಡಕಟ್ಟು ಸಮುದಾಯ ಗಳು' ಲೇಖನ ಬುಡಕಟ್ಟು ಸಮುದಾಯಗಳ ಇಂದಿನ ಸ್ಥಿತಿಗತಿಗಳನ್ನು, ನೆಲೆಯನ್ನು ಪರಾಮರ್ಶಿಸಿದೆ. ಜಾಗತೀಕರಣ... ಬರುತ್ತದೆ... ಬಂದಿದೆ... ಎಂದು ಚಿಂತಿಸುವುದನ್ನು ಬಿಟ್ಟು ಈಗಾಗಲೇ ಜಾಗತೀಕರಣದ ಎಲ್ಲ ಮಗ್ಗಲುಗಳನ್ನು ಅನುಭವಿಸುತ್ತಿರುವ ಈ ಸಂದರ್ಭದಲ್ಲಿ ಪರ್ಯಾಯವಾಗಿ ಚಿಂತನೆಗಳನ್ನು ಮಾಡಿ ತಮ್ಮತನವನ್ನು ಉಳಿಸು ವುದೊಂದೇ ದಾರಿ ಎಂಬುದನ್ನು ಅಧಿಕಾರಿಶಾಹಿವರ್ಗ, ಆಡಳಿತಶಾಹಿ ವರ್ಗದಿಂದ ಹಿಡಿದು ಬುಡಕಟ್ಟು ಸಮಾಜದವರೆಗೆ ಕಾರ್ಯೋನ್ಮುಖವಾಗುವುದು ಒಳಿತು. "ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಕೆಲ ಪ್ರದೇಶಗಳಲ್ಲಿರುವ ಕುಡುಬಿ, ಹಾಲಕ್ಕಿ, ಕಾಡುಕುರುಬ, ಜೇನುಕುರುಬ, ಹಕ್ಕಿಪಿಕ್ಕಿ ಮುಂತಾದ ಬುಡಕಟ್ಟುಗಳು ಇನ್ನೂ ನಾಗರಿಕತೆಯ ಲವಲೇಶವೂ ಗೊತ್ತಿಲ್ಲದ ಸ್ಥಿತಿಯಲ್ಲಿವೆ"(ಪು. ೪೪-೪೫) ಎಂಬ ಲೇಖಕರ ಅಭಿಪ್ರಾಯ ಸತ್ಯಕ್ಕೆ ದೂರವಾಗಿದೆ. ವಿದೇಶಗಳ ಮಾರುಕಟ್ಟೆಯೊಂದಿಗೆ ವ್ಯವಹರಿಸುವ ಹಕ್ಕಿಪಿಕ್ಕಿ ಸಮುದಾಯದವರಿದ್ದಾರೆ. ಕುಡುಬಿ, ಹಾಲಕ್ಕಿ, ಕಾಡುಕುರುಬ, ಜೇನುಕುರುಬರ ಸ್ಥಿತಿಗತಿಗಳ ಬಗ್ಗೆ ಲೇಖಕರಿಗೆ ಕ್ಷೇತ್ರಕಾರ್ಯದ ಕೊರತೆಯಿದೆ ಎಂದೆನಿಸುತ್ತದೆ.

ಡಾ. ಸಿ.ಕೆ. ನಾವಲಗಿ ಅವರ ಹಸು ಹುಲಿ ಆಟ(ಮುಚ್ಚಾಟ) ಲೇಖನ ಚಿಕ್ಕಮಕ್ಕಳ ಜನಪ್ರಿಯ ಆಟವನ್ನು ವಿಶ್ಲೇಷಿಸುವ ಕಾರ್ಯ ಮಾಡಿದೆ. ಮಲೆಚವುಂಡಿ ದೈವದ ಸಂದಿ ಲೇಖನ ಕರಾವಳಿ ಕರ್ನಾಟಕದ ದೈವಾರಾಧನೆಯ ಅಪರೂಪದ ಆಚರಣೆಯನ್ನು ಪರಿಚಯಿಸಿದೆ. ಕರಾವಳಿ ಕರ್ನಾಟಕದಲ್ಲಿ ಒಂದೊಂದು ಮನೆ, ಕುಟುಂಬ, ಸಮುದಾಯ, ಪಂಥ ಮತ್ತು ಧರ್ಮಗಳಿಗೆ ಅದರದ್ದೇ ಆದಂತಹ ಆರಾಧನೆಗಳಿವೆ. ಈ ರೀತಿಯ ಆರಾಧನೆ, ಆಚರಣೆ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಕಂಡುಬಾರದು. ಇನ್ನೂ ಅಧ್ಯಯನಕ್ಕೆ ಒಳಪಡದ ಮಲೆಚವುಂಡಿ ದೈವಾರಾಧನೆಯನ್ನು 'ಸಂದಿ'ಯ ಮೂಲಕ ಲೇಖಕರು ನಿರೂಪಿಸಿದ್ದಾರೆ.

ಡಾ. ಎಚ್. ಮಂಜು ಅವರ 'ಪಾರಂಪರಿಕ ತಂತ್ರಜ್ಞಾನ ಸ್ಥಿತ್ಯಂತರಗಳು' ಲೇಖನ ಸಾವಿರಾರು ವರ್ಷಗಳಿಂದ ತಮ್ಮದೇ ದೇಸಿ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಬಂದ ರೈತಾಪಿ ವರ್ಗಗಳಲ್ಲಿನ ಇಂದಿನ ಸ್ಥಿತಿಗತಿಯನ್ನು ಮೆಲುಕು ಹಾಕಿದೆ. ನಮ್ಮ ಗ್ರಾಮೀಣ ಜನರ ಜೀವನ ಪದ್ಧತಿಯನ್ನೇ, ಪದ್ಧತಿಯ ಸ್ವರೂಪವನ್ನೇ ಬದಲಾಯಿಸುತ್ತಿದೆ 'ಅಭಿವೃದ್ಧಿ' ಎಂಬ ಜಾಗತೀಕರಣ. ಅಭಿವೃದ್ಧಿಯನ್ನು ನಿರಾಕರಿಸಲಾಗದು. ಆದರೆ ಅದು ಆವರಿಸಿಕೊಂಡಿರುವ ನೆಲೆಗಳ ಬಗೆಗೆ ಚಿಂತಿಸಬೇಕಾಗಿದೆ. ಜನಪದ ಸಾಹಿತ್ಯಗಳ ಮೇಲೆ, ಸಂಸ್ಕೃತಿಯ ಮೇಲೆ ಜಾಗತೀಕರಣದ ಪರೋಕ್ಷ ಹೆಜ್ಜೆಗಳು ಮೂಡಿ ಸಾಹಿತ್ಯವೇ ಕಣ್ಮರೆಯ ಹಂತದಲ್ಲಿವೆ. ಕೃಷಿ ಪರಿಕರಗಳಲ್ಲಿ, ಆಹಾರ ಪದ್ಧತಿಯಲ್ಲಿ, ಸಂಪತ್ತಿನ ಬಳಕೆಯಲ್ಲಿ, ಬೆಳೆಗಳಲ್ಲಿ, ಮನರಂಜನ ಕ್ಷೇತ್ರದಲ್ಲಿ, ಆರೋಗ್ಯ ಕ್ಷೇತ್ರದಲ್ಲಿ ಹೀಗೆ ಎಲ್ಲಾ ಮಗ್ಗಲುಗಳಲ್ಲಿ ಯಂತ್ರಗಳು ಸ್ಥಾನ ಪಡೆದಿರುವುದನ್ನು ಲೇಖಕರು ವಿವರಿಸಿದ್ದಾರೆ. ಈ ಆಧುನಿಕ ತಂತ್ರಜ್ಞಾನ, ಅಭಿವೃದ್ಧಿ, ಆಡಳಿತಗಳಿಂದ ಮಾನವ ಯಾಂತ್ರಿಕ ಜೀವನ ಸಾಗಿಸುವುದಂತಾಗಿರುವುದು ದುರಂತವೇ ಸರಿ. ಗ್ರಾಮೀಣ ಮೀನು ಬೇಟೆಯ ಪಾರಂಪರಿಕ ಜ್ಞಾನ ಮತ್ತು ತಂತ್ರಜ್ಞಾನ ಪ್ರಾದೇಶಿಕ ವ್ಯಾಪ್ತಿಯನ್ನೊಳಗೊಂಡ ವಿವರಣಾತ್ಮಕ ಲೇಖನವಾಗಿದೆ. ಕೃಷಿ ಆಚರಣೆಯಲ್ಲಿರುವ ಪಾರಂಪರಿಕ ಜ್ಞಾನ, ರಂಗೋಲಿ ಚಿತ್ರಕಲೆ ಮತ್ತು ಅದರ ಮಹತ್ವ ಲೇಖನಗಳು ಕೂಡ ಪರಿಚಯಾತ್ಮಕವಾಗಿವೆ.

ನಮ್ಮ ಸಮಾಜ ಬದಲಾಗಿದೆ, ಬದಲಾಗುತ್ತಿದೆ, ನಾಶವಾಗುತ್ತಿವೆ ಎಂದು ತೀವ್ರತರವಾಗಿ ಕೇಳುತ್ತಿರುವ ಈ ಸಂದರ್ಭದಲ್ಲಿ ನಮ್ಮ ಪಾರಂಪರಿಕ ಜ್ಞಾನ ಮುಂದುವರಿಯುತ್ತಿದೆ ಎಂದು ಆಚರಣೆಗಳನ್ನು, ಸಂಪ್ರದಾಯಗಳನ್ನು ಉದಾಹರಿಸಿ ವಿಶ್ಲೇಷಿಸುವ ಕಾರ್ಯ 'ಆಧುನಿಕತೆ ಮತ್ತು ಪಾರಂಪರಿಕ ಸಮಾಜ' ಲೇಖನದಲ್ಲಾಗಿದೆ.

ಸಮೃದ್ಧ, ವಿಷಯಗಳನ್ನು, ಸೂಕ್ಷ್ಮ ಚಿಂತನೆಗಳನ್ನು ಒಳಗೊಂಡ ಜಾನಪದ ಜಗಲಿ ಸಂಚಿಕೆಯಲ್ಲಿ ಯುವ ಸಂಶೋಧಕರು ಅಧ್ಯಯನ ಕ್ರಮಗಳನ್ನು ಅರಿತಂತೆ ಕಾಣುವುದಿಲ್ಲ. ಸಂಚಿಕೆಯಲ್ಲಿ ಕೊಟ್ಟಿರುವ ನಿಬಂಧನೆಗಳನ್ನು ಪಾಲಿಸಿದಂತೆ ಕಾಣುವುದಿಲ್ಲ. ಕೆಲವೊಂದು ಲೇಖನಗಳು ಕ್ಷೇತ್ರಕಾರ್ಯಾಧಾರಿತವಿಲ್ಲದೇ ಅವಸರದಿಂದ ರಚಿಸಲ್ಪಟ್ಟಿವೆ ಎಂದು ಹೇಳಬೇಕು. ಪರಾಮರ್ಶನ ಗ್ರಂಥಗಳ ವಿವರಗಳನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದು ತಿಳಿಸಿದ್ದರೂ ಲೇಖನಗಳಲ್ಲಿ ತಪ್ಪು ತಪ್ಪಾಗಿ ನೀಡಲಾಗಿದೆ. ಇದರ ಬಗ್ಗೆ ಸಂಪಾದಕರು ಗಮನಿಸಿದಂತೆ ಕಾಣುವುದಿಲ್ಲ. ಹಾಗೆಯೇ ಅಕ್ಷರದೋಷಗಳು ಲೇಖನಗಳಲ್ಲಿ ಸ್ಥಾನ ಪಡೆದಿವೆ.

ಡಾ. ಎಸ್. ಮೋಹನ್

□□

೪

ಜೀವನ ಪರಿಚಯ

೧. ಗೊಂಬೇಗೌಡರ ರಾಮನಗೌಡರು

ಡಾ. ಚಂದ್ರಪ್ಪ ಸೊಬಟಿ,
ಪುಟ ೧೦೬, ಬೆಲೆ ರೂ. ೮೦/-
ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಡಾ. ಚಂದ್ರಪ್ಪ ಸೊಬಟಿ ಅವರ 'ಗೊಂಬೇಗೌಡರ ರಾಮನಗೌಡರು' ಕೃತಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ತಿಂಗಳ ಅತಿಥಿಯೊಂದಿಗೆ 'ಪಟ್ಟಾಂಗ' ಎಂಬ ವಿಶಿಷ್ಟ ಕಾರ್ಯಕ್ರಮದಲ್ಲಿ ನಡೆಸಿದ ಸಂವಾದ ರೂಪ.

ಜನಪದ ಪ್ರದರ್ಶಕ ಕಲೆಗಳಲ್ಲಿ ಒಂದಾದ ಸೂತ್ರದ ಗೊಂಬೆಯಾಟ ಇಂದು ಅವಸಾನದ ಅಂಚಿನಲ್ಲಿರುವುದು ವಿಪರ್ಯಾಸವೇ ಸರಿ. ಈ ಬಗೆಯ ಪ್ರದರ್ಶಕ ಕಲೆಗಳನ್ನು ಹಾಗೂ ಕಲಾವಿದರನ್ನು ಉಳಿಸಿ, ಬೆಳೆಸಿಕೊಂಡು ಬರುವ ಅನನ್ಯ ಹೊಣೆಗಾರಿಕೆ ನಮ್ಮೆಲ್ಲರದ್ದಾಗಿದೆ. ಪ್ರಸ್ತುತ ಕೃತಿಯಲ್ಲಿ ಅನುಚಾನಾಗಿ ನಡೆಸಿಕೊಂಡು ಬಂದಂತಹ ಗೊಂಬೆಯಾಟ ಹಾಗೂ ಕಲಾವಿದರ ಅತಂತ್ರ ಸ್ಥಿತಿ-ಗತಿಗಳು, ಸ್ಥಿತ್ಯಂತರಗಳು ಓದುಗರ ಗಮನವನ್ನು ಸೆಳೆಯುತ್ತದೆ. ಕಲಾವಿದರ ಕಟ್ಟುಪಾಡುಗಳು ಅನುಭವಿಸಿಕೊಂಡು ಬಂದಂತಹ ಸಮಸ್ಯೆಗಳೂ ಸಹ ಹೊರತಾಗಿಲ್ಲ. ಸೂತ್ರದ ಗೊಂಬೆಯಾಟವನ್ನು ಬಾಲ್ಯದಿಂದಲೇ ಕರಗತ ಮಾಡಿಕೊಂಡ ಶ್ರೀ ರಾಮನಗೌಡರು ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕು ಅಂತರವಳ್ಳಿ ಗ್ರಾಮದವರು. ಗೊಂಬೇಗೌಡರ ಮನೆತನಕ್ಕೆ ಸೇರಿದ ಇವರು ರಾಜ್ಯೋತ್ಸವ ಪ್ರಶಸ್ತಿ ವಿಜೇತರಾಗಿದ್ದಾರೆ.

ನಾಲ್ಕೈದು ತಲೆಮಾರಿನಿಂದ ನಡೆಸಿಕೊಂಡು ಬಂದಿರುವ ಈ ಕಲೆಯನ್ನು ಕೈಬಿಡಬಾರದು ಎನ್ನುವ ದೃಢಸಂಕಲ್ಪ ಮಾಡಿರುವ ಇವರು ಗೊಂಬೆಯಾಟವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ. ಶ್ರೀ ಕಮಲಾಂಜನೇಯ ಸೂತ್ರದ ಗೊಂಬೆಯಾಟ ಮೇಳಕ್ಕೆ ರಾಮನಗೌಡರು ನಾಯಕರಾಗಿದ್ದಾರೆ. ಅರವತ್ತೇಳು ಸಂವತ್ಸರಗಳನ್ನು ಪೂರೈಸಿದ ಗೌಡರು, ಸೂತ್ರದ ಗೊಂಬೆಯಾಟದಲ್ಲಿ, ಐವತ್ತೆರಡು ವರ್ಷಗಳ ಅನುಭವವನ್ನು ಹೊಂದಿದ್ದಾರೆ. ವೃತ್ತಿಯಿಂದ ಕೃಷಿಕರಾಗಿ ಪ್ರವೃತ್ತಿಯಿಂದ ಗೊಂಬೆಯಾಟದ ಕಲಾವಿದರೂ ಆಗಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ನಾಲ್ಕು ಅಧ್ಯಾಯಗಳಿದ್ದು, ರಾಮನಗೌಡರ ಬಾಲ್ಯಜೀವನ, ಅವರ ಕುಲಕಸುಬು... ಇತ್ಯಾದಿ ವಿವರಗಳಿದ್ದು, ಅವರ ಅಂತರಾಳದ ನೋವಿನ ಮಾತುಗಳಿವೆ. ಒಬ್ಬ ಕಲಾವಿದನು ತನ್ನ ಪ್ರದರ್ಶಕ ಕಲೆಯ ಅಸ್ತಿತ್ವಕ್ಕಾಗಿ ಹೋರಾಟ ಮಾಡುವ ನೋವಿದೆ. ಆತ್ಮಕಥನದ ಅನಾವರಣದಲ್ಲಿ ರಾಮನಗೌಡರ ಅರ್ಥಪೂರ್ಣ ಮಾತುಗಳಿವೆ.

ಡಾ. ಎಚ್. ನಾಗವರ್ಮ

೨. ನೆಲದೊಡಲ ಚಿಗರು

(ನಾಡೋಜ ಡಾ. ಎನ್. ನಾರಾಯಣರೆಡ್ಡಿ ಅವರ ಬದುಕು, ಚಿಂತನೆ)

ಎನ್.ಎಲ್. ಆನಂದ ಮತ್ತು ಗುಂಡಪ್ಪ ದೇವಿಕೇರಿ
ಪುಟ ೧೬೮, ಬೆಲೆ ರೂ. ೧೪೦/-
ಪ್ರಥಮ ಮುದ್ರಣ ೨೦೧೩
ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು–೫೬೦ ೦೦೧

ಭಾರತ ಕೃಷಿ ಪ್ರಧಾನ ದೇಶವೆಂದು ಹೇಳುವ ಮಾತುಗಳು ದೂರ ಸರಿಯುತ್ತಿವೆಯೇನೋ ಎನ್ನುವ ಅನುಮಾನಗಳು ಎಡೆಯೆತ್ತುವ ಈವೊತ್ತಿನಲ್ಲಿ ಸಾವಯವ ಕೃಷಿಯಲ್ಲಿ ನೈಜತೆಯನ್ನು ಎತ್ತಿತೋರಿಸುತ್ತಿರುವ ನಾಡೋಜ ಡಾ. ಎಲ್. ನಾರಾಯಣರೆಡ್ಡಿ ಅವರು ಚೈತನ್ಯದ ಮೂರ್ತಿಯಾಗಿ ಕಂಗೊಳಿಸುತ್ತಿದ್ದಾರೆ. ಭಾರತ ಕೃಷಿ ಪ್ರಧಾನ ದೇಶವಾಗಿ ಉಳಿಯಲು, ಕೃಷಿ ನಂಬಿದ ಜನರೆಲ್ಲ ತನ್ನ ಬದುಕಿನಲ್ಲಿ ಅಭಿವೃದ್ಧಿ ಕಾಣಲು ಇರುವ ಸಾಧ್ಯಾಸಾಧ್ಯತೆಗಳನ್ನೆಲ್ಲ ಪ್ರಾಯೋಗಿಕವಾಗಿ ತೋರಿಸುವುದರೊಂದಿಗೆ, ಕಸದಲ್ಲಿ ರಸ ತೆಗೆಯುತ್ತಿರುವ ಕೃಷಿಋಷಿ ಎಂದರೆ ಅದು ಡಾ. ಎಲ್. ನಾರಾಯಣರೆಡ್ಡಿ ಅವರು. ಇಂಥವರ ಬದುಕು, ಚಿಂತನೆಯನ್ನಾಧರಿಸಿ ಶ್ರೀ ಎನ್.ಎಲ್. ಆನಂದ್

ಮತ್ತು ಗುಂಡಪ್ಪ ದೇವೀಕೇರಿ ಅವರುಗಳು ರಚಿಸಿರುವ "ನೆಲದೊಡಲ ಚಿಗುರು" ಕೃತಿ ರೈತಾಪಿ ಬದುಕಿಗೊಂದು ಮಾರ್ಗಸೂಚಿಯಾಗಿದೆ.

ಕನ್ನಡದಲ್ಲಿ ವ್ಯಕ್ತಿ ಚಿತ್ರಣವನ್ನೊಳಗೊಂಡ ಕೃತಿಗಳು ಇಲ್ಲವೆಂದೇನಲ್ಲ, ಆದರೆ ಅವುಗಳೆಲ್ಲ ಸಾಹಿತಿಗಳ, ರಾಜಕಾರಣಿಗಳ, ಗಣ್ಯಾತಿಗಣ್ಯ ಮಹನೀಯರ ಬದುಕನ್ನಾಧರಿಸಿದ ಕೃತಿಗಳಾಗಿವೆ. 'ನೆಲದೊಡಲ ಚಿಗುರು' ಕೃಷಿಕನೊಬ್ಬನ ಬದುಕಿನ ಹಿನ್ನೆಲೆ, ಕೃಷಿಯ ಬಗೆಗಿನ ಚಿಂತನ-ಮಂಥನದ ವಿವರಗಳ ಕೃತಿಯಾಗಿ ಗಮನಾರ್ಹವಾಗಿದೆ.

ಈ ಕೃತಿಯಲ್ಲಿ ನಾರಾಯಣರೆಡ್ಡಿ ಅವರ ಬದುಕು ಮತ್ತು ಚಿಂತನೆಗಳೊಂದಿಗೆ, ಅವರ ಒಡನಾಡಿಗಳ ಅಭಿಪ್ರಾಯವನ್ನು ಸೇರಿಸಿಕೊಂಡು ಮೂರು ಭಾಗಗಳನ್ನಾಗಿ ವಿಂಗಡಿಸಿ ನೋಡಬಹುದು. ಮೊದಲ ಭಾಗದಲ್ಲಿ ರೆಡ್ಡಿಯವರ ಬಾಲ್ಯ ವಿದ್ಯಾಭ್ಯಾಸ, ಮನೆ ಬಿಟ್ಟು ನಗರ ಸೇರಿ ದುಡಿಮೆಗಾರರಾಗಿ ನಡೆಸಿದ ಜೀವನಕ್ರಮವಿದ್ದರೆ, ಎರಡನೇ ಭಾಗದಲ್ಲಿ ಕೃಷಿಯ ಸದ್ಬಳಕೆಯ ಚಿಂತನಕ್ರಮಗಳು ತುಂಬಿವೆ. ಮೂರನೆಯ ಭಾಗದಲ್ಲಿ ರೆಡ್ಡಿಯವರ ಒಡನಾಡಿಗಳು ಹಾಗೂ ಅವರ ವ್ಯಕ್ತಿತ್ವಕ್ಕೆ ಮಾರುಹೋದವರ ಅಭಿಪ್ರಾಯಗಳು ವ್ಯಕ್ತಗೊಂಡಿವೆ.

ಹಾಗೆ ನೋಡಿದರೆ ನಾರಾಯಣರೆಡ್ಡಿಯವರು ನೇರಾನೇರವಾಗಿ ಕೃಷಿಕರಾದವರೇನಲ್ಲ, ರೆಡ್ಡಿಯವರು ಬಾಲ್ಯದಲ್ಲಿ ಜಾಣರಾಗಿದ್ದರಿಂದ ವಿದ್ಯಾಭ್ಯಾಸದಲ್ಲಿಯೋ ಮುಂದುವರೆಯಲು ಪ್ರೋತ್ಸಾಹ ಸಿಕ್ಕಿತು. ಎಸ್.ಎಲ್.ಎಲ್.ಸಿ.ಯಲ್ಲಿ ರೆಡ್ಡಿಯವರು ಉನ್ನತ ಮಟ್ಟದಲ್ಲಿ ಪಾಸಾದರು. ಆದರೆ ಅನಂತರದ ಪಿಯುಸಿ ಓದುವುದಕ್ಕೆ ಹುಟ್ಟೂರಾದ ವರ್ತೂರಿನ ಹತ್ತಿರದ ಸೋರಹುಣಸೆ ಗ್ರಾಮದಲ್ಲಿ ಅನುಕೂಲ ಇಲ್ಲದಿದ್ದರಿಂದ ಬೆಂಗಳೂರಿಗೆ ಹೋಗಬೇಕಾಗಿ ಬಂತು. ಅದ್ಯಾಕೋ ಬೆಂಗಳೂರಿನಲ್ಲಿ ವಿದ್ಯಾಭ್ಯಾಸದ ಕಡೆ ಆಸಕ್ತಿ ತೋರದೆ ಮತ್ತೆ ಹುಟ್ಟೂರಿಗೆ ವಾಪಸ್ಸಾದರು. ಕುರಿ, ಮೇಕೆ ಕಾಯುವ ಕೆಲಸದಲ್ಲಿ ನಿಂತರು. ಆದರೆ ರೆಡ್ಡಿಯವರು ಈ ಕೆಲಸದಲ್ಲಿ ಅವರ ತಂದೆಯವರ ನಂಬಿಕೆಗರ್ಹವಾಗುವ ರೀತಿಯಲ್ಲಿ ನಡೆದುಕೊಳ್ಳದೇ ಹುಟ್ಟೂರಾದ ಸೋರಹುಣಸೆ ಬಿಟ್ಟು ಬೆಂಗಳೂರು ಸೇರಬೇಕಾಯಿತು. ಅಲ್ಲಿ ಹೋಟೆಲ್, ಆಫೀಸ್‌ಬಾಯ್ ಆಗಿ ಕೆಲಸ ಮಾಡುತ್ತ ಅನಂತರದಲ್ಲಿ ಲಾರಿ ಕಂಪನಿ ಮಾಲೀಕರ ಜೊತೆ ಸೇರಿ ಟ್ರಾವೆಲಿಂಗ್ ಏಜೆಂಟ್ ಆಗಿ ಹಂತ ಹಂತವಾಗಿ ರೆಡ್ಡಿಯವರು ತನ್ನ ಬುದ್ಧಿಶಕ್ತಿಯ ಚತುರತೆಯಿಂದ ಮೇಲೇರುತ್ತ ಹೋದರು. ನಗರದಲ್ಲೂ ಕೆಲಸ ಮಾಡುವ ಅರ್ಹತೆ ಪಡೆದುಕೊಂಡರು. ಆದರೆ ಸಹೋದರನ ಭೇಟಿಯಿಂದಾಗಿ ಸೋರಹುಣಸೆಗೆ ವಾಪಸ್ಸಾಗಿ ಸರೋಜಮ್ಮ ಎನ್ನುವವರನ್ನು ಮದುವೆ ಮಾಡಿಕೊಂಡರು. ಅನಂತರ ರೆಡ್ಡಿಯವರು ಅವರ ತಂದೆಯವರ ಅನುಮತಿಯಂತೆ ಕೃಷಿಕರಾಗಿ ಕಾಯಕ ಮಾಡುತ್ತ ಎತ್ತರಕ್ಕೆ ಬೆಳೆದದ್ದು ನಾರಾಯಣರೆಡ್ಡಿಯವರ ವಿಶಿಷ್ಟತೆಗಳಲ್ಲಿ ಒಂದಾಗಿದೆ.

ನಾರಾಯಣರೆಡ್ಡಿಯವರು ಕೃಷಿಕರಾಗಿ ಎತ್ತರಕ್ಕೆ ಬೆಳೆಯುವಲ್ಲಿ ಅವರ ಶ್ರೀಮತಿ ಸರೋಜಮ್ಮನವರ ಪಾತ್ರವು ಮುಖ್ಯವಾಗಿದೆ. ರೆಡ್ಡಿಯವರ ಕೃಷಿ ಬದುಕಿಗೆ ಹೆಗಲು

ಕೊಟ್ಟು ದುಡಿದವರು ಮಾತ್ರವಲ್ಲದೆ, ರೆಡ್ಡಿಯವರಿಗೆ ಸಮಭಾಗಿಯಾಗಿ ನಿಂತು, ವ್ಯವಸಾಯದಲ್ಲಿ ಕೈ ಸುಟ್ಟುಕೊಂಡಾಗ ಸಾಂತ್ವನದ ಮಾತುಗಳನ್ನಾಡಿ ಧೈರ್ಯ ತುಂಬಿ ಸಮಾಧಾನಪಡಿಸಿ ಪ್ರೋತ್ಸಾಹಿಸಿದ ಮಾತೃಹೃದಯಿ ಶ್ರೀಮತಿ ಸರೋಜಮ್ಮನವರು. ಸರೋಜಮ್ಮನವರು ನಿಷ್ಕಪಟ ನಿಷ್ಕಲ್ಮಶ ಮನಸ್ಸಿನವರು ಎಂಬುದನ್ನು ರೆಡ್ಡಿಯವರು ಒಡನಾಡಿಗಲೆಲ್ಲ ಗುರುತಿಸುತ್ತಿದ್ದದನ್ನು ಈ ಕೃತಿಯಲ್ಲಿ ಗಮನಾರ್ಹವಾಗಿ ತಿಳಿಸಿ ಕೊಡಲಾಗಿದೆ.

ನಾರಾಯಣರೆಡ್ಡಿಯವರಿಗೆ ದುಡಿಮೆಯೇ ಮುಖ್ಯವಾಗಿದ್ದರೆ ಬಾಂಬೆಯಲ್ಲಿ ಲಾರಿ ಕಂಪನಿಯಲ್ಲಿಯೇ ಉಳಿಯಬಹುದಿತ್ತು. ಹಾಗಾಗಿ ಕೃಷಿಕರಾಗಿದ್ದು ಕೂಡ ದುಡಿಮೆಗಾಗಿ, ಹಣ ಸಂಪಾದಿಸುವ ಉದ್ದೇಶವಾಗಿರದೆ ಕೃಷಿಯ ಅಭಿವೃದ್ಧಿ ಕ್ರಮಗಳನ್ನು ಕಂಡು ಕೊಳ್ಳುವುದಕ್ಕೆ ಹಾಗೂ ಅದನ್ನು ಇತರ ರೈತರಿಗೆ ತಿಳಿಸಿಕೊಡುವುದಕ್ಕಾಗಿ ಎಂಬುದು ಇಡೀ ಕೃತಿಯಲ್ಲಿ ಎದ್ದು ಕಾಣುವ ಸಂಗತಿಯಾಗಿದೆ. ಮಣ್ಣಿನೊಳಗಿನ ಜೀವಚರಗಳ ಬಗ್ಗೆ, ಮಣ್ಣಿನ ಆರೋಗ್ಯ ಸುಧಾರಣೆ ಬಗ್ಗೆ ಎಲ್ಲ ಕೃಷಿಕರು ತಿಳಿಯಬೇಕು ಎಂಬುದು ರೆಡ್ಡಿಯವರ ಮಹಾದಾಸೆಯಾಗಿರುವುದು ಮುಖ್ಯವಾಗಿದೆ. ಹಾಗಾಗಿಯೇ ರೆಡ್ಡಿಯವರಿಂದ ಕೃಷಿ ಬಗ್ಗೆ ತಿಳಿದುಕೊಳ್ಳಲು ಯಾರೇ ಬಂದರೂ ಅವರು ಬೆಳೆಸಿದ ತೋಟವನ್ನು ತೋರಿಸುತ್ತ ಬೆಳೆಯುವ ವಿಧಾನವನ್ನು ವಿವರ ವಿವರವಾಗಿ ತಿಳಿಸಿಕೊಡುತ್ತಾರೆ. ಜತೆಗೆ ಅವರುಗಳ ಊರುಗಳಿಗೂ ಹೋಗಿ ಬೆಳೆಯುವ ವಿಧಾನಗಳನ್ನು ಕ್ರಮವಾಗಿ ತೋರಿಸಿ ಕೊಡುವಲ್ಲಿಯೂ ಸ್ವತಃ ರೆಡ್ಡಿಯವರು ಮುಂದಾಗುವುದನ್ನು ನೋಡಿದರೆ, ಕೃಷಿ ಬಗ್ಗೆ ರೆಡ್ಡಿ ಅವರಿಗೆ ಇರುವ ಕಾಳಜಿ ಎದ್ದು ಕಾಣುತ್ತದೆ.

ನಾರಾಯಣರೆಡ್ಡಿಯವರು ಕೃಷಿ ಕಾರ್ಯದಲ್ಲಿ ಪ್ರಯೋಗಶೀಲರು. ಯಾವ ಭೂಮಿಯಲ್ಲಿ ಎಂಥ ಬೆಳೆ ಬೆಳೆಯಬೇಕು. ಹೇಗೆ ಬೆಳೆಯಬೇಕು ಎಂಬೆಲ್ಲ ವಿಚಾರಗಳನ್ನು ತಿಳಿದುಕೊಳ್ಳಲು ದೇಶ ವಿದೇಶಗಳನ್ನೆಲ್ಲ ತಿರುಗಿ ಸ್ಪಷ್ಟವಾದ ಮಾಹಿತಿ ತಿಳಿದುಕೊಂಡು ಬಂದು ತಮ್ಮ ಸ್ವಂತ ಭೂಮಿಯಲ್ಲಿ ಪ್ರಯೋಗ ಮಾಡಿ ಒಳ್ಳೆಯ ಅಭಿವೃದ್ಧಿ ಕಂಡು ಬಂದರೆ ಬೇರೆಯವರಿಗೆ ತಿಳಿಸಿಕೊಡುತ್ತಾರೆ. ಹಾಗಾಗಿಯೇ ದೇಶ ವಿದೇಶಗಳಿಂದ ರೆಡ್ಡಿಯವರ ಕೃಷಿ ಭೂಮಿಯನ್ನು ನೋಡಲು, ತಿಳಿದುಕೊಳ್ಳಲು ಜನಸಾಗರ ಹರಿದು ಬರುತ್ತಿರುವುದು. ಆದ್ದರಿಂದಲೇ ರೆಡ್ಡಿಯವರ ಕೃಷಿ ಕ್ಷೇತ್ರ ಒಂದು ಕೃಷಿ ವಿಶ್ವವಿದ್ಯಾಲಯ ವಿದ್ದಂತೆ ಎಂಬ ಹಲವರ ಅಭಿಪ್ರಾಯವು ಔಪಚಾರಿಕ ಮಾತಾಗಿ ಉಳಿಯದೆ, ಔಚಿತ್ಯಪೂರ್ಣವಾಗುತ್ತದೆ.

ವ್ಯವಸಾಯಗಾರನಿಗೆ ಅಕ್ಷರ ಜ್ಞಾನ ಯಾಕೆ ಬೇಕು? ಎಂಬ ಪ್ರಶ್ನೆಗೆ ಉತ್ತರವಾಗಿ ರೆಡ್ಡಿಯವರು ಸಾಕ್ಷೀಭೂತರಾಗುತ್ತಾರೆ. ಅನಾದಿಕಾಲದಿಂದಲೂ ಅಕ್ಷರಸ್ಥ ಅಧಿಕಾರಿ ಯಾಗುವುದು, ಅನಕ್ಷರಸ್ಥ ವ್ಯವಸಾಯಗಾರನಾಗುವುದು ರೂಢಿಯಾಗಿ ಬೆಳೆದುಬಂದಿರುವ ವಿಚಾರ. ಆದರೆ ಈಗ ಇದು ದೂರವಾಗುತ್ತದೆ. ಆಹಾರ ಧಾನ್ಯಗಳನ್ನು ಬೆಳೆಯುವ

ವಿಧಾನಗಳೊಂದಿಗೆ, ವಾಣಿಜ್ಯ ಬೆಳೆಗಳನ್ನು ಬೆಳೆಯುವ ವಿಧಾನವನ್ನು ತಿಳಿದುಕೊಳ್ಳಲು ಅಕ್ಷರಜ್ಞಾನದ ಅಗತ್ಯ ಮುಖ್ಯವಾಗಿದೆ. ಕೃಷಿಯಿಂದಲೇ ಯಾವುದೇ ಅಧಿಕಾರಿಗೂ ಕಡಿಮೆ ಇಲ್ಲದಂತೆ ಬದುಕಲು ಸಾಧ್ಯ ಎಂಬುದನ್ನು ನಾರಾಯಣರೆಡ್ಡಿಯವರು ಸಾಧಿಸಿ ತೋರಿಸಿದ್ದಾರೆ.

ಹಠ, ಚಲಕ್ಕೆ ಇನ್ನೊಂದು ಹೆಸರೇ ನಾರಾಯಣರೆಡ್ಡಿಯವರು. ಲಾರಿ ಮಾಲೀಕರ ಬಳಿ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾಗ ಇವರ ಪ್ರಾಮಾಣಿಕತೆ, ದಕ್ಷತೆ ಕಂಡು ಲಾರಿ ಮಾಲೀಕರು ಬಾಂಬೆಗೆ ಕಳುಹಿಸಿದರು. ಆದರೆ ಅಲ್ಲಿ ಇವರನ್ನು 'ಒಂದು ವಾಕ್ಯ ಇಂಗ್ಲಿಷ್‌ನಲ್ಲಿ ಮಾತನಾಡುವುದಕ್ಕೆ ಬರೋಲ್ಲ, ಸುಮ್ಮನೆ ಹೊಗಳುತ್ತಾರೆ. ಅಷ್ಟೇ?' ಎಂದು ಹಲವರು ಅವಹೇಳನ ಮಾಡತೊಡಗಿದಾಗ ಬರೀ ಒಂದು ವಾರದಲ್ಲಿಯೇ ಸರಾಗವಾಗಿ ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನು ಕಲಿತು ಆಡಿಕೊಳ್ಳುವವರ ಬಾಯಿ ನಿಲ್ಲಿಸಿದ ಸ್ವಾಭಿಮಾನಿ ರೆಡ್ಡಿಯವರು. ಹಾಗೆ ಜೀವನದುದ್ದಕ್ಕೂ ಸವಾಲುಗಳನ್ನು ಎದುರಿಸುತ್ತಲೇ ಬಂದವರು ಕೂಡ. ಕೃಷಿ ಕೆಲಸಕ್ಕೆ ನಾಲಾಯಕ್ಕಾದ ದೇಹ ರೆಡ್ಡಿಯವರದು. ಎಂದವರ ಎದುರಲ್ಲಿ ಕೃಷಿಕನಾಗಿ ಅದ್ಭುತ ಸಾಧನೆ ಮಾಡಿ ತೋರಿಸಿದ ಕ್ರಿಯಾಶೀಲ ಮನೋಭಾವದವರು ನಾರಾಯಣರೆಡ್ಡಿಯವರು. ತನಗೆ ಸರಿ ಅನ್ನಿಸಿದ್ದನ್ನು ಹೇಳಲು ಹಿಂದು-ಮುಂದು ನೋಡುವವರಲ್ಲ ನಾರಾಯಣರೆಡ್ಡಿಯವರು. ಅದು ಬೇರೆಯವರಿಂದ ನಿಷ್ಠುರಕ್ಕೆ ಒಳಗಾದರೂ ಪರವಾಗಿಲ್ಲ. ಹಾಗೆ ನೋಡಿದರೆ ರೆಡ್ಡಿ ಅವರಿಗೆ ಸರಿ ಅನ್ನಿಸಿದ್ದು ಸಮಾಜದ ಸಮಗ್ರತೆಯ ದೃಷ್ಟಿಯಿಂದ ಸರಿಯಾದುದೇ ಆಗಿರುತ್ತದೆ. ರೈತ ಸಂಘದವರು ರೈತರಿಗೆ ವಿದ್ಯುತ್ತನ್ನು ಪೂರ್ತಿ ಉಚಿತವಾಗಿ ಕೊಡಬೇಕು ಎಂಬ ವಾದವನ್ನು ತಳ್ಳಿ ಹಾಕಿದ ರೆಡ್ಡಿಯವರು, "ರೈತರಿಗೆ ದಿನಪೂರ್ತಿ ವಿದ್ಯುತ್ ಅವಶ್ಯಕತೆಯಿಲ್ಲ. ಅದು ಅಂತರ್ಜಲದ ಮೇಲೆ ಹೆಚ್ಚು ಹೊರೆ ಬಿದ್ದು ಖಾಲಿಯಾಗುವ ಸಂಭವವಿದೆ. ಭೂಮಿಯೂ ಬರಡಾಗುತ್ತದೆ. ಬದಲಿಗೆ, ಸರ್ಕಾರ ಕೊಡುವ ೪ - ೬ ತಾಸು ವಿದ್ಯುತ್ತನ್ನೇ ಸಮರ್ಪಕವಾಗಿ, ಉತ್ಕೃಷ್ಟವಾಗಿ ಕೊಡಲಿ ಮತ್ತು ರೈತರು ಬಳಸಿದ ವಿದ್ಯುತ್‌ಗೆ ಕನಿಷ್ಟ ಬೆಲೆ ನಿಗದಿಪಡಿಸಲಿ" ಎಂಬ ತಮ್ಮ ವಾದದಿಂದ ರೆಡ್ಡಿಯವರು ಹಲವರ ಕೆಂಗಣ್ಣಿಗೆ ಗುರಿಯಾದರು. ಆದರೂ ತಮ್ಮ ಆದರ್ಶಗಳಿಗೆ ಅವರೆಂದೂ ರಾಜಿ ಯಾದವರಲ್ಲ.

ನಾರಾಯಣರೆಡ್ಡಿಯವರು ಕೃಷಿಯಲ್ಲಿ ಸಂಪ್ರದಾಯವಾದಿಗಳಲ್ಲ. "ಆಧುನಿಕತೆಯಲ್ಲಿನ ಗುಣಾತ್ಮಕತೆಯನ್ನು, ಪರಂಪರೆಯೊಂದಿಗೆ ಬೆಸೆಯುವ ವಿವೇಕಾನಂದರು! ಎಂದು ಕರೆಸಿಕೊಂಡವರು. ಪರಂಪರೆಯಿಂದಲೂ ಭತ್ತ ಬೆಳೆಯುವ ಪದ್ಧತಿ ಎಂದರೆ, ಗದ್ದೆ ಮಾಡುವುಗಳನ್ನು ನಿರ್ಮಿಸಿಕೊಂಡು ಅದರಲ್ಲಿ ಸದಾ ನೀರು ನಿಂತಿರುವಂತೆ ಮಾಡುವುದು. ಇದು ಈಗಲೂ ಎಲ್ಲಾ ಕಡೆ ಬಹುತೇಕವಾಗಿ ಇರುವಂತಹದ್ದು. ಆದರೆ ಈ ಪದ್ಧತಿಯಿಂದ ಅನಾನುಕೂಲಗಳು ಇವೆ. ಸದಾಕಾಲ ಗದ್ದೆಯಲ್ಲಿ ನೀರು

ನಿಲ್ಲುವುದರಿಂದ ಆಮ್ಲಜನಕದ ಕೊರತೆ ಉಂಟಾಗಿ ಬೇರುಗಳ ಬೆಳವಣಿಗೆ ಕುಂಠಿತವಾಗುತ್ತದೆ. ರಾಸಾಯನಿಕ ಗೊಬ್ಬರಗಳಿಂದ ಜಲಮಾಲಿನ್ಯ ಉಂಟಾಗುತ್ತದೆ. ಎರೆಹುಳುಗಳು ಜೀವಿಸಲು ಸಾಧ್ಯವಾಗುವುದಿಲ್ಲ. ಈ ಮುಂತಾದ ತೊಂದರೆಗಳನ್ನು ತಪ್ಪಿಸಲು ಗದ್ದೆಯಲ್ಲಿ ನೀರು ನಿಲ್ಲಿಸದೆ ತೇವಾಂಶ ಕಾಪಾಡಿಕೊಳ್ಳಲು ಐದರಿಂದ ಏಳು ದಿನಗಳಿಗೊಮ್ಮೆ ನೀರು ಒದಗಿಸಿದರೆ ಉತ್ತಮ ಭತ್ತದ ಇಳುವರಿ ಪಡೆಯಲು ಸಾಧ್ಯ"ವೆಂಬುದನ್ನು ಫ್ರೆಂಚ್ ಮೂಲದ ಪಾದ್ರಿಯಿಂದ ತಿಳಿದು ಪ್ರಯೋಗ ಮಾಡಿ ನೋಡಿ ಈ ಪದ್ಧತಿ ಪ್ರಪಂಚದ ಎಲ್ಲ ಭತ್ತ ಬೆಳೆಯುವ ದೇಶಗಳಲ್ಲಿ ಪ್ರಚಾರಕ್ಕೆ ಬರುವಂತೆ ಮಾಡಿದ್ದಾರೆ. ಹೀಗೆ ಕೃಷಿಗೆ ಸಂಬಂಧಿಸಿದ ಹೊಸ ಹೊಸ ಆವಿಷ್ಕಾರಗಳನ್ನು, ಮಾರ್ಪಾಡುಗಳನ್ನು ರೆಡ್ಡಿಯವರು ಮಾಡುತ್ತಲೇ ಬರುತ್ತಿದ್ದಾರೆ.

ಕೃಷಿಕನಿಗೆ ರೆಡ್ಡಿಯವರಿಂದ ಸಿಗುವ ಮಾಹಿತಿಯನ್ನು ಪಟ್ಟಿ ಮಾಡಿ ಸೂಚ್ಯವಾಗಿ ಹೇಳುವುದಾದರೆ ಭೂಮಿ ರಕ್ಷಿಸಿಕೊಳ್ಳುವ ವಿಧಾನ, ಆರೋಗ್ಯಕರವಾದ ಮಣ್ಣನ್ನು ಹೊಂದುವ ವಿಧಾನ, ಭೂಮಿಯಲ್ಲಿ ನೀರು ನಿಲ್ಲುವಂತೆ ಮಾಡಿ ಕಸ-ಕಡ್ಡಿ, ಕೃಷಿ ತ್ಯಾಜ್ಯ, ಪ್ರಾಣಿಗಳ ಸಗಣಿ-ಗಂಜಲ ಮಣ್ಣು ಸೇರಿಸಿ ಕಾಂಪೋಸ್ಟ್ ತಯಾರಿಸುವ ವಿಧಾನ, ರಾಶಿ ಪದ್ಧತಿಯಲ್ಲಿ ರಸವತ್ತು ಗೊಬ್ಬರ ತಯಾರಿಸಿಕೊಳ್ಳುವ ವಿಧಾನ, ಎರೆಹುಳುವಿನಷ್ಟೇ ಗೆದ್ದಲು ಹುಳುವಿನ ಪ್ರಯೋಜನ, ಅಲಸಂದೆ, ಅವರೆ ಜಾತಿಯ ಸಸ್ಯಗಳ ರಸ ಹೀರುವ ಹೇನುಗಳ ನಾಶಪಡಿಸುವ ವಿಧಾನ, ಎರೆಗೊಬ್ಬರ ತಯರಿಸುವ ವಿಧಾನ, ಬಿದಿರಿನ ಉಪಯೋಗ - ಈ ಮುಂತಾದ ವಿಧಾನಗಳೊಂದಿಗೆ ಯಾವ ಭೂಮಿಯಲ್ಲಿ ಎಂಥ ಬಳೆ ಬೆಳೆಯಬಹುದು, ಕೃಷಿ ಕೀಟಗಳ, ಮಿಶ್ರ ಬೆಳೆಗಳ ಬಗ್ಗೆ, ಬೆಳೆ ನಾಶ ತಪ್ಪಿಸುವ ಬಗ್ಗೆ, ಕೃಷಿ ಸಲಕರಣೆಗಳ ಬಗ್ಗೆ, ಸರ್ಕಾರದಿಂದ ಕೃಷಿಗೆ ಸಿಗುವ ಸೌಲಭ್ಯಗಳ ಬಗ್ಗೆ, ಸಾವಯವ ಕೃಷಿ ಬಗ್ಗೆ ಹೀಗೆ ಕೃಷಿಗೆ ಸಂಬಂಧಿಸಿ ಕಣಜವೆಂದರೆ ಅದು ನಾರಾಯಣರೆಡ್ಡಿ ಅವರು ಎಂಬುದು ಜನಜನಿತವಾದ ಮಾತಾಗಿದೆ. ಹಾಗೆ ನೋಡಿದರೆ ಇವೊತ್ತಿನ ಕೃಷಿ ವಿಶ್ವವಿದ್ಯಾಲಯಗಳಿಂದ ಏನು ಪ್ರಯೋಜನವಾಗಿದೆಯೇ ಗೊತ್ತಿಲ್ಲ. ಆದರೆ ನಾರಾಯಣರೆಡ್ಡಿ ಅವರ ಚಿಂತನೆ, ಪ್ರಯೋಗಗಳಿಂದ ಪ್ರಯೋಜನ ವಂತೂ ಅಪಾರವಾಗಿದೆ. ರೆಡ್ಡಿ ಅವರ ಮಾತಲ್ಲೇ ಹೇಳುವುದಾದರೆ "ಇಂದಿನ ಯುವಕರು ಈ ಮನುಷ್ಯ ಜನ್ಮದ ಉದ್ದೇಶಗಳನ್ನೇ ಮರೆತು ಕ್ಷಣಿಕ ಸುಖದ ಬೆನ್ನತ್ತಿ, ತಮ್ಮ ಪವಿತ್ರವಾದ ಜೀವನವನ್ನು ವ್ಯರ್ಥ ಮಾಡಿಕೊಂಡು, ಪಶ್ಚಾತ್ತಾಪಪಡುತ್ತಿದ್ದಾರೆ. ಇಂದು ಆರೋಗ್ಯಕರ ಸಮಾಜದ ಒಳ್ಳೆಯ ಬೆಳವಣಿಗೆಯಲ್ಲಿ ಅವರು ಉದಾತ್ತ ಧ್ಯೇಯವನ್ನು ಹೊಂದಿ, ಚಿಂತನೆಗಳನ್ನು ಮೈಗೂಡಿಸಿಕೊಂಡು ಶ್ರಮಿಸಿದರೆ, ಗೌರವದಿಂದ ಕೂಡಿದ ನೆಮ್ಮದಿಯ ಬದುಕು ನಡೆಸಿ ಸಮಾಜಕ್ಕೆ ದಾರಿ ತೋರಿಸಬಲ್ಲರೆಂಬುದು ನನ್ನ ನಂಬಿಕೆ. ಅದೇ ಈ ಪುಸ್ತಕದ ಆಶಯ ಕೂಡಾ" ಆಗಿದೆ.

ಎನ್.ಎಲ್. ಆನಂದ್ ಮತ್ತು ಗುಂಡಪ್ಪ ದೇವಿಕೇರಿ ಅವರುಗಳು ಜೊತೆಗೂಡಿ ನಾಡೋಜ ಡಾ. ಎಲ್. ನಾರಾಯಣರೆಡ್ಡಿಯವರ ನಲ್ವತ್ತು ವರ್ಷಗಳ ಕೃಷಿ ಅನುಭವ

ಮತ್ತು ಚಿಂತನೆಗಳನ್ನು ಅವರಿಂದಲೇ ಕೇಳಿ ಸಂಗ್ರಹಿಸಿ, ಅರ್ಥಪೂರ್ಣವಾದ ರೀತಿಯಲ್ಲಿ ಹೆಣೆದಿರುವುದು ಈ ಕೃತಿಯಲ್ಲಿ ಎದ್ದು ಕಾಣುತ್ತದೆ. ಹಾಗೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ನಾರಾಯಣರೆಡ್ಡಿಯವರ ಚಿಂತನೆ ವಿಚಾರಗಳು ಸಂದರ್ಶನದ ಮೂಲಕ 'ಕೃಷಿ ಮಂಥನ' ಎಂಬ ಕಾಲಂನಲ್ಲಿ ಪ್ರಕಟಗೊಳ್ಳುತ್ತವೆ. ಅವೆಲ್ಲ ಇವೊತ್ತಿನ ಕೃಷಿಕರಿಗೆ 'ಭಗವದ್ಗೀತೆ' ಆಗುವುದರಲ್ಲಿ ಅನುಮಾನವೇ ಇಲ್ಲ.

ಸಾಮಾನ್ಯ ವರ್ಗದ ಕುಟುಂಬದಲ್ಲಿ ಜನಿಸಿದ ನಾಡೋಜ ಡಾ. ನಾರಾಯಣರೆಡ್ಡಿ ಅವರು ಸರಳತೆ, ಸೂಕ್ಷ್ಮತೆಯಿಂದ ಅಸಾಧ್ಯವನ್ನು ಸಾಧ್ಯವಾಗಿಸಿಕೊಂಡು ವಿಶ್ವ ಮಟ್ಟಕ್ಕೇರಿದ ಮಹಾನ್ ಸಾಧಕರಲ್ಲಿ ಒಬ್ಬರಾಗುತ್ತಾರೆ. ಇಂಥವರ ಬದುಕು, ಚಿಂತನೆ, ವಿಚಾರಗಳು ಸಾರ್ವಜನಿಕವಾದ ಇವೊತ್ತಿನ ಯುವಜನತೆಗೆ ಉತ್ತಮ ಮಾರ್ಗದರ್ಶನವಾಗಿ, ತಮ್ಮ ಗುರಿ ಸಾಧನೆ ಹಾದಿ ಕಡೆ ತಿರುಗಲು ಪ್ರಭಾವ ಬೀರುವ ನಿಟ್ಟಿನಲ್ಲಿ 'ನೆಲದೊಡಲ ಚಿಗುರು' ಕೃತಿ ಗಮನಾರ್ಹವಾದುದಾಗಿದೆ.

ಡಾ. ಎಸ್. ಶಿವಣ್ಣ ಬೆಳವಾಡಿ

೩. ಬುರ್ರಕಥಾ ಜಯಮ್ಮ

ಡಾ. ಕೆ. ಪ್ರೇಮಕುಮಾರ
ಪುಟ ೭೦, ಬೆಲೆ ರೂ. ೪೦/-
ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

'ಬುರ್ರಕಥಾ ಜಯಮ್ಮ' ಈ ಕೃತಿಯಲ್ಲಿ ಜಯಮ್ಮ ಇವರ ಬದುಕಿನ ಏಳುಬೀಳುಗಳು, ಬುರ್ರಕಥೆ ಕಲೆಯ ಸ್ವರೂಪ, ಸೋಲಿಗರ ಕುಲಮೂಲ ಕಥನಗಳನ್ನು ಸಂಕ್ಷಿಪ್ತವಾಗಿ, ಸಾಂದ್ರವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಡಾ. ಕೆ. ಪ್ರೇಮಕುಮಾರ ಇವರು ಮಾಡಿದ್ದಾರೆ.

ಪ್ರಸ್ತುತ ಕೃತಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಮ್ಮಿಕೊಂಡು 'ಪಟ್ಟಾಂಗ' ಕಾರ್ಯಕ್ರಮದಲ್ಲಿ ಸಂವಾದ ರೂಪದಲ್ಲಿ ನಡೆಸಿದ ಒಟ್ಟಾರೆ ಫಲಿತದ ರೂಪವಾಗಿ ಹೊರಹೊಮ್ಮಿದೆ. ಕಲಾವಿದರ ಬದುಕು ಬವಣೆಗಳು ಕಲೆಯ ಅಸ್ತಿತ್ವಕ್ಕಾಗಿ ಅವರು ಅನುಭವಿಸಿದ ನೋವು-ನಲಿವುಗಳನ್ನು ಲೇಖಕರು ಹಿಡಿದಿಟ್ಟಿದ್ದಾರೆ. ಈ ಕೃತಿಯ ಹನ್ನೊಂದು ಅಧ್ಯಾಯಗಳಿದ್ದು, ಬುರ್ರಕಥೆಯ ಹಿನ್ನೆಲೆ, ಪರಂಪರೆ ಹಾಗೂ ಇತಿಹಾಸಗಳ

ಪರಿಚಯವನ್ನು ನೀಡುತ್ತವೆ. ಜಯಮ್ಮ ಹಾಗೂ ಅವರ ಬುರ್ರಕಥೆಯ ತೋಂಡೀ ಪರಂಪರೆಯನ್ನು ಸರಳವಾಗಿ ಅರ್ಥೈಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯೊಂದಿಗೆ ರಾಜ್ಯ, ಜಿಲ್ಲೆಯ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಬುರ್ರಕಥಾ ಜಯಮ್ಮ ಅವರ ಕುರಿತ ಈ ಕೃತಿಯಲ್ಲಿ ಮಾಹಿತಿಗಳು ಅಪೂರ್ಣವೆನಿಸುತ್ತಿವೆ. ಬಹುಶಃ ಲೇಖಕರು ಕಲಾವಿದರನ್ನು ಸಂದರ್ಶಿಸಿ ಮಾಹಿತಿಗಳನ್ನು ಪಡೆದಿಲ್ಲವೆನಿಸುತ್ತಿದೆ. ಕಲಾವಿದರ ಎಲ್ಲ ವಿಚಾರಗಳೂ ಬಹಳ ಸಂಕ್ಷಿಪ್ತ ವ್ಯಾಪ್ತಿಯಲ್ಲಿವೆ. ಬುರ್ರಕಥಾ ಹಾಡುಗಳನ್ನಾಗಲಿ, ಕಲಾವಿದೆಯ ಜೀವನ ಸಾಧನೆಯನ್ನಾಗಲಿ, ಕಲೆ-ಕಲಾವಿದರ ನೋವು-ನಲಿವುಗಳನ್ನಾಗಲೀ ಗಂಭೀರವಾಗಿ ನೋಡದೇ ಕೇವಲ ೪೦ ಪುಟಗಳ ಸೀಮಿತತೆಯಲ್ಲಿ ನೀಡಿರುವುದು ಈ ಕೃತಿಯ ಬಹುದೊಡ್ಡ ಕೊರತೆಯೆನಿಸುತ್ತದೆ.

ಡಾ. ಎಚ್. ನಾಗವರ್ಮ

೪. ಹಾಲಕ್ಕಿ ಒಕ್ಕಲಿಗರು

ಸಂಪಾದಕರು: ಶಾ.ಮ. ಕೃಷ್ಣರಾಯ
ಲೇಖಕರು: ಅಕ್ಷತಾ ಕೃಷ್ಣಮೂರ್ತಿ ಬೇಲೇಕೇರಿ
ಪುಟ ೬೪, ಬೆಲೆ ರೂ. ೩೦/-
ಪ್ರಥಮ ಮುದ್ರಣ ೨೦೧೩
ಹೇಮಂತ ಸಾಹಿತ್ಯ, ರಾಜಾಜಿನಗರ, ಬೆಂಗಳೂರು–೧೦

ಕಳೆದ ಐವತ್ತು ವರ್ಷಗಳಿಂದ ನೂರಾರು ವಿವಿಧ ವಿಷಯಗಳಿಗೆ ಸಂಬಂಧಿಸಿದ ಕೃತಿಗಳನ್ನು ನಾಡಿಗೆ ನೀಡಿದ ಹೇಮಂತ ಸಾಹಿತ್ಯ ಪ್ರಕಾಶನ ಸಂಸ್ಥೆ ತನ್ನ ಸುವರ್ಣ ಮಹೋತ್ಸವದ ಸವಿನೆನಪಿನಲ್ಲಿ ಈ ಸರಣಿ ಪುಸ್ತಕಗಳನ್ನು ಪ್ರಕಟಿಸಿದೆ. ಹಾಲಕ್ಕಿ ಒಕ್ಕಲಿಗ ಸಮುದಾಯದ ಕುರಿತ ಅಕ್ಷತಾ ಕೃಷ್ಣಮೂರ್ತಿ ಅವರು ಬರೆದ ಪುಟ್ಟ ಕೃತಿ. ಆ ಸಮುದಾಯವನ್ನು ಪರಿಚಯಿಸುವಲ್ಲಿ ಯಶ ಕಂಡಿದೆ.

ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಹಾಲಕ್ಕಿ ಒಕ್ಕಲಿಗರು ಮೂಲತಃ ಬುಡಕಟ್ಟು ಸಮುದಾಯದವರು. ಕರ್ನಾಟಕದಲ್ಲಿ ಇಂದಿಗೂ ತಮ್ಮ ಅಸ್ಮಿತೆಯನ್ನು, ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಬುಡಕಟ್ಟುಗಳಲ್ಲಿ ಹಾಲಕ್ಕಿ ಒಕ್ಕಲಿಗರದು ಅಗ್ರಸ್ಥಾನ.

ಬೇಸಾಯವನ್ನೇ ತಮ್ಮ ಆದಾಯದ ಮೂಲವನ್ನಾಗಿಸಿಕೊಂಡ ಹಾಲಕ್ಕಿ ಒಕ್ಕಲಿಗಸರು ಒಂದು ಕಾಲದಲ್ಲಿ ಗೇಣಿ ಪದ್ಧತಿ ಎಂಬ ಆರ್ಥಿಕ ಗುಲಾಮಗಿರಿಯ ಅನ್ಯಾಯ, ಅವಮಾನಗಳಿಂದ ನರಳುತ್ತಿದ್ದರು. ವಿಶೇಷವಾಗಿ ಈ ಭಾಗದ ಆದಿವಾಸಿಗಳೆಂದೇ

ಭಾವಿಸಲಾದ ಹಾಲಕ್ಕಿ ಒಕ್ಕಲಿಗರ ಸ್ಥಿತಿಯಂತೂ ಶೋಚನೀಯವಾಗಿತ್ತು ಎಂಬ ವಿಷ್ಣು ನಾಯ್ಕರ ಮಾತನ್ನು ಲೇಖಕರು ಉಲ್ಲೇಖಿಸಿದ್ದಾರೆ(ಪು. ೭). ಸರಕಾರದ ತೆರಿಗೆ ಕಟ್ಟಲು ಪರದಾಡುತ್ತಿದ್ದಾಗಲೇ ಗೇಣಿ ವಸೂಲಿ ಸಂಬಂಧ ಒಡೆಯ ನ್ಯಾಯಾಲಯದ ವಾರಂಟ್ ತರುತ್ತಿದ್ದುದನ್ನು ವಿಷ್ಣು ನಾಯ್ಕರು ದಾಖಲಿಸಿದ್ದಾರೆ. ಇದರಿಂದಲೇ ಯಾವ ರೀತಿ ಕಷ್ಟ-ಕಾರ್ಪಣ್ಯಗಳ ಜೀವನ ಹಾಲಕ್ಕಿ ಒಕ್ಕಲಿಗರದಾಗಿತ್ತು ಎಂಬುದನ್ನು ತಿಳಿಯ ಬಹುದು. ಹಾಲಕ್ಕಿ ಒಕ್ಕಲಿಗರು ಕಾಡನ್ನು, ಕಾಡಿನ ಅಂಚನ್ನು ತನ್ನ ವಾಸದ ಮೂಲನೆಲೆಯಾಗಿಸಿಕೊಂಡಿದ್ದರಿಂದಲೇ ಜನಪದ ವೈದ್ಯ ನಾಟಿ ವೈದ್ಯ ಪದ್ಧತಿಯನ್ನು ಕರಗತ ಮಾಡಿಕೊಂಡಿದ್ದಾರೆ ಎಂದು ಹೇಳಬಹುದು. ಹಿರಿಯರು ಮರಣಿಸುವ ಕಾಲ ಹತ್ತಿರ ಬಂದಾಗ ತನ್ನ ಒಬ್ಬ ಮಗನಿಗೆ ತನ್ನ ವೈದ್ಯ ಪದ್ಧತಿಯ ರಹಸ್ಯವನ್ನು ಹೇಳಿ ಮರಣಿಸುತ್ತಿದ್ದರು ಎಂಬುದನ್ನು ಲೇಖಕರು ದಾಖಲಿಸಿದ್ದಾರೆ. ಇದರಿಂದ ಅವರ ಮಾನವೀಯತೆ, ಪರೋಪಕಾರಿ ಗುಣವನ್ನು ನಾವು ತಿಳಿಯಬಹುದು. ಕೆಲವು ಹಾಲಕ್ಕಿ ಒಕ್ಕಲಿಗರು ತಮ್ಮ ವೈದ್ಯ ಪ್ರತಿಭೆಯಿಂದಲೇ ದೇಶ-ವಿದೇಶಗಳಲ್ಲಿ ಖ್ಯಾತರಾಗಿದ್ದಾರೆ (ಪು. ೧೨). ಹೈಟೆಕ್ ಆಸ್ಪತ್ರೆಗಳಿಗೆ ಲಕ್ಷಾಂತರ ಸುರಿದರೂ ವಾಸಿಯಾಗದ ಖಾಯಿಲೆಗಳನ್ನು ದೇಸಿ ವೈದ್ಯ ಪದ್ಧತಿಯ ಮೂಲಕ ಗುಣಪಡಿಸಿದ ಉದಾಹರಣೆಗಳು ಸಾಕಷ್ಟಿವೆ. ಮುರಿದ ಮೂಳೆ ಕೂಡಿಸುವ ತೋಡೂರು ಗೌಡರು, ಅರ್ಧಾಂಗವಾಯುವನ್ನು ಗುಣಪಡಿಸುವ ಬೆಳಂಬಾರ ಗೌಡ ಇವರೆಲ್ಲ ಯಾವುದೇ ದೊಡ್ಡ ದೊಡ್ಡ ಪದವಿ ಗಳಿಸಿದ ವೈದ್ಯರಿಗೆ ಕಡಿಮೆಯಲ್ಲ. ಇತ್ತೀಚಿನ ದಿನಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಪಡೆದು ದೊಡ್ಡ ದೊಡ್ಡ ಆಸ್ಪತ್ರೆಗಳು ಕ್ಷಣದಲ್ಲಿ ಜೀವ ತೆಗೆಯುವುದು ದಿನಂಪ್ರತಿ ಪತ್ರಿಕೆಗಳಲ್ಲಿ ಕಾಣುತ್ತೇವೆ. ಆದರೆ ಕಡಿಮೆ ಖರ್ಚಿನಲ್ಲಿ ರೋಗ ಗುಣಪಡಿಸುವ, ಖಾಯಿಲೆಯ ತೀವ್ರತೆಯನ್ನು ಕಡಿಮೆ ಮಾಡುವ ತಂತ್ರಗಾರಿಕೆ ಹಾಲಕ್ಕಿ ಒಕ್ಕಲಿಗ ವೈದ್ಯರಲ್ಲಿರುವುದು ವಿಶೇಷ ಸಂಗತಿಯೇ ಸರಿ.

ಹಾಲಕ್ಕಿ ಒಕ್ಕಲಿಗರಲ್ಲಿನ ಜನಪದ ಸಾಹಿತ್ಯ ಶ್ರೀಮಂತವಾಗಿದೆ. ಜನಪದ ಗೀತೆಯಲ್ಲಿ ಹನ್ನೆರಡಂಕಣ ಮನೆ, ಮಾಲೂಗಿ ಮನೆಯ ಬಗೆಗಿನ ವಿವರಣೆಗಳು ಬರುತ್ತವೆ ಎಂಬುದನ್ನು ಲೇಖಕರು ಉಲ್ಲೇಖಿಸಿದ್ದಾರೆ. ಹಾಗೆಯೇ ರಾಗಿ ಅಂಬ್ಲಿ ಅತ್ಯಂತ ಪ್ರಿಯವಾದ, ಪೂಜನೀಯವಾದ ಆಹಾರ. ಗುಮಟೆ ಪದದಲ್ಲಿ "ರಾಗಿಯ ಅಂಬ್ಲಿ ಮೀನಿನ ಪಳದಿ ಹಾಲಕ್ಕಿ ಮಕ್ಕಳಿಗೆ" ಎಂಬ ಸಾಲು ಬರುವುದನ್ನು ಲೇಖಕರು ಗಮನಿಸಿದ್ದಾರೆ(ಪು. ೧೬).

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಲಕ್ಕಿ ಒಕ್ಕಲಿಗರು ವಾಸಿಸುವ ಸುಮಾರು ಏಳು ಸೀಮೆಗಳನ್ನು ಕೃತಿಯಲ್ಲಿ ಲೇಖಕರು ನೀಡಿದ್ದಾರೆ. ಕಪವಾದ ಸೀಮೆ, ಅಂಕೋಲ ಸೀಮೆ, ಕುಂಬಾರಗದ್ದೆ ಸೀಮೆ, ಗೋಕರ್ಣ ಸೀಮೆ, ನುರಿಕೋಟೆ ಸೀಮೆ, ಹರೀಟೆ ಸೀಮೆ, ಚಂದಾವರ ಸೀಮೆ ಹೀಗೆ ಏಳು ಸೀಮೆಗಳ ಕೊಪ್ಪ (ಮನೆ)ಗಳಲ್ಲಿ ವಾಸಿಸುವ

ಹಾಲಕ್ಕಿ ಒಕ್ಕಲಿಗರ ಕೌಟುಂಬಿಕ ವ್ಯವಸ್ಥೆಯಲ್ಲಿ ಊರಗೌಡ, ಬುಧವಂತ, ಕೋಲ್ಕಾರರೆಂಬ ಅಧಿಕಾರಿ ವರ್ಗಗಳಿರುತ್ತಾರೆ. ಹಬ್ಬ-ಹರಿದಿನ-ಮದುವೆ-ಮುಂಜಿ ಇನ್ನಿತರ ವಿಶೇಷ ಕಾರ್ಯಕ್ರಮಗಳಲ್ಲಿ ಊರಗೌಡನ ಉಪಸ್ಥಿತಿ ಕಡ್ಡಾಯವಾಗಿರುತ್ತದೆ. ಈ ರೀತಿಯ ಸ್ಥಳೀಯ ಆಡಳಿತವಿರುವುದರಿಂದಲೇ ಹಾಲಕ್ಕಿ ಒಕ್ಕಲಿಗರು ಇಂದೂ ತಮ್ಮತನವನ್ನು, ಅಸ್ಮಿತೆಯನ್ನು ಕಳೆದುಕೊಂಡಿಲ್ಲ.

ಹಾಲಕ್ಕಿ ಒಕ್ಕಲಿಗರ ಗುಮಟೆ ಪದ, ಸುಗ್ಗಿ ಪದ, ಹಗಣ ಪದ ಮತ್ತು ಅಲಾದಿಪದಿಗಳು ಅವರ ಶ್ರೀಮಂತ ಸಾಹಿತ್ಯವನ್ನು ಸಾಕ್ಷೀಕರಿಸುತ್ತವೆ. ಗುಮಟೆ ಪದ ಮತ್ತು ಸುಗ್ಗಿ ಪದಗಳ ಕೆಲವು ಸಾಲುಗಳನ್ನು ಉಲ್ಲೇಖಿಸಿ ಸಂಕ್ಷಿಪ್ತವಾಗಿ ವಿಶ್ಲೇಷಿಸುವ ಕಾರ್ಯ ಲೇಖಕರು ಮಾಡಿದ್ದಾರೆ. ಉಡುಗೆ-ತೊಡುಗೆ, ಜೀವನಾವರ್ತನ ಆಚರಣೆಗಳ ಬಗೆಗೆ ಈ ಕೃತಿಯು ಬೆಳಕು ಚೆಲ್ಲುತ್ತದೆ. ಒಟ್ಟಾರೆಯಾಗಿ ಕೃತಿ ಚಿಕ್ಕದಾಗಿದ್ದರೂ ಹಾಲಕ್ಕಿ ಒಕ್ಕಲಿಗರ ಬಗೆಗೆ ಪ್ರಾಥಮಿಕ ಮಾಹಿತಿಗಳನ್ನು ನೀಡಿರುವುದು ಗಮನಾರ್ಹ.

ಶ್ವೇತಾ ಕೆ.

□□

೫

ಜನಪದ ವೈದ್ಯ

೧. ಹಸಿ ಮದ್ದು ಖುಷಿ ಮದ್ದು

ಡಾ. ನಡಿಬೈಲು ಉದಯಶಂಕರ
ಪುಟ ೧೬೦, ಬೆಲೆ ರೂ. ೯೦/-
ಪ್ರಥಮ ಮುದ್ರಣ ೨೦೧೩
ಸಾಧನ ಪ್ರಕಾಶನ, ಬಳೇಪೇಟೆ
ಬೆಂಗಳೂರು ೫೬೦ ೦೫೩

ಆರೋಗ್ಯಕರ ಸಮಾಜವು ಯಾವುದೇ ದೇಶದ ಸಂಪತ್ತು. ಆರೋಗ್ಯವಂತ ಜನರು ಅವರವರ ಕುಟುಂಬಗಳ ಆರ್ಥಿಕ ಮೂಲವಾಗಿರುತ್ತಾರಲ್ಲದೆ ವೈಯಕ್ತಿಕವಾಗಿಯೂ ಅಭಿಮಾನದಿಂದ ಬದುಕುವ ಉತ್ಸಾಹದಲ್ಲಿರುತ್ತಾರೆ. ಯಾವುದೇ ವ್ಯಕ್ತಿಯ ಬದುಕಿನ ಕ್ರಿಯಾಶೀಲತೆಗೆ, ದುಡಿಮೆಗೆ ಆಶಾದಾಯಕ ಜೀವನ ಪ್ರೀತಿಗೆ ಆತನ ಆರೋಗ್ಯವು ಹಿನ್ನೆಲೆಯಾಗಿದ್ದುಕೊಂಡು ಶ್ರೇಯಸ್ಸಿಗೆ ಕಾರಣರಾಗಿರುತ್ತಾರೆ ಎಂಬುದು ಸತ್ಯಸಂಗತಿ. ಹೀಗಾಗಿ ಆರೋಗ್ಯವಂತ ಜನರು ಕುಟುಂಬ ಸಮಾಜ ಮತ್ತು ದೇಶದ ಸ್ವತ್ತಾಗಿರುವವರಲ್ಲದೆ ವ್ಯಕ್ತಿಗತವಾಗಿ ಹಾಗೂ ಸಾರ್ವತ್ರಿಕವಾಗಿ ಎಲ್ಲಾ ರಂಗಗಳಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗುತ್ತಾರೆ.

ಆರೋಗ್ಯವೇ ಭಾಗ್ಯ (Health is Wealth) ಎಂಬುದು ಪುರಾತನ ವಾಣಿ. ಈ ಮಾತು ಎಷ್ಟು ಅರ್ಥಗರ್ಭಿತವಾಗಿದೆ ಮತ್ತು ಎಷ್ಟು ಪ್ರಸ್ತುತ ಎಂಬುದನ್ನು ಬಹಳಷ್ಟು ಮಂದಿ ತಿಳಿದಿಲ್ಲ. ನಿಜ ಹೇಳಬೇಕೆಂದರೆ ಆರೋಗ್ಯಕ್ಕಿಂತ ಸಂತೋಷದ ಸಂಪತ್ತು ಬೇರೊಂದಿಲ್ಲ. ಈ ಸತ್ಯವು ಅನಾರೋಗ್ಯದಿಂದ ದೀರ್ಘಕಾಲದವರೆಗೆ ನರಳುತ್ತಿರುವವರನ್ನು ಕಂಡರೆ ಅಥವಾ ದೊಡ್ಡಾಸ್ಪತ್ರೆಗಳ ಎಡತಾಕುವ ತರಾವರಿ ರೋಗಿಗಳನ್ನು ಕಂಡರೆ ತಿಳಿಯುತ್ತದೆ. ನಿಜ; ಹಣ, ಅಧಿಕಾರ, ಸಂಪತ್ತು, ಹೆಂಡತಿ, ಮಕ್ಕಳು, ಕುಟುಂಬ, ಕಾರು, ಬಂಗಲೆ ಎಲ್ಲವೂ ಬೇಕು. ಇದೆಲ್ಲಾ ಇಲ್ಲದವರಿಗೆ ಗಳಿಸಬೇಕೆಂಬ

ಹಂಬಲ; ಇವೆಲ್ಲಾ ಇರುವವರು ಉಳಿಸಿಕೊಳ್ಳಬೇಕು ಎಂಬ ಛಲ ಹೊಂದಿದವರಾಗಿರುತ್ತಾರೆ. ಆದರೆ ಏನೆಲ್ಲಾ ಇದ್ದೂ ಆರೋಗ್ಯವಿಲ್ಲದೇ ಹೋದರೆ ಬದುಕಿದ್ದು ಅಥವಾ ವೈಭೋಗವಿದ್ದು ಪ್ರಯೋಜನವಾದರೂ ಏನು? ಸುಖ ಪಡಲು ಸಂತೋಷದಿಂದ ಬಾಳಲು ಆರೋಗ್ಯ ಇಲ್ಲದಿದ್ದರೆ ಬದುಕಿರುವುದಾದರೂ ಏತಕ್ಕೆ? ಎಂಬ ನಿರಾಶದಾಯಕ ಭಾವನೆ ಅಂತಹ ಸಂದಿಗ್ಧ ಸಂದರ್ಭದಲ್ಲಿ ಮಾಡುವುದು ಸಹಜ. ಅಂದರೆ ಮನುಷ್ಯನಿಗೆ ವೈಭೋಗವೂ ಬೇಕು. ಅದನ್ನು ಸವಿಯಲು ಮನಸ್ಸು-ದೇಹದ ಆರೋಗ್ಯವು ಸ್ಥಿರವಾಗಿರಬೇಕು. ಅದಕ್ಕಾಗಿ ಜೀವನಶೈಲಿಯು ಮೌಲ್ಯಾಧಾರಿತವಾಗಿರಬೇಕು.

ಆದರೆ ಇಂದಿನ ದಿನಗಳಲ್ಲಿ ಮಾನವರ ಯಾಂತ್ರಿಕ ಬದುಕಿನ ರೀತಿ-ನೀತಿಗಳು ಸಮಾಜಮುಖಿ ಜೀವಮುಖಿಯಾಗಿ ಆಲೋಚಿಸುವವರಿಗೆ, ಸಮಾಜದ ಪ್ರಗತಿಯನ್ನು ಅನ್ವೇಷಿಸಿ ಚಿಂತಿಸುವವರಿಗೆ ಆತಂಕಕ್ಕೀಡುಮಾಡುತ್ತದೆ. ಮನುಷ್ಯನ ಪ್ರಯೋಜನಗಳು ಹೆಚ್ಚುತ್ತಾ ತಾನಷ್ಟೇ ಬದುಕಬೇಕು. ಚೆನ್ನಾಗಿರಬೇಕು. ತನ್ನ ಕುಟುಂಬ, ಪೀಳಿಗೆ ಸುಖವಾಗಿರಬೇಕು ಎಂಬ ಸ್ವಾರ್ಥಭಾವದಿಂದ ಸಮಾಜದ ಸಾಂವಿಧಾನಿಕ ನಿಯಮಗಳನ್ನು ಗಾಳಿಗೆ ತೂರಿ ಧನಸಂಪತ್ತನ್ನು ಕ್ರೋಢೀಕರಣ ಮಾಡಿಕೊಳ್ಳಲು ಹೊರಟಿರುವ ಮಂದಿಯನ್ನು ಕಂಡಾಗ ಸಮಾಜವು ಎತ್ತ ಸಾಗುತ್ತದೆ. ಸಮಾಜದ ಆರೋಗ್ಯಕ್ಕೆ ಬಾಧೆ ತಾಗುತ್ತಿದೆ ಎಂದೆನಿಸದೆ ಇರದು.

ಕೆಲವರು ಕಾಯಿಲೆಗಳನ್ನು ತಾವಾಗಿ ತಂದುಕೊಂಡೋ ಅಥವಾ ಆಹಾರ ವಾತಾವರಣ, ಹವ್ಯಾಸ, ಅಭಿರುಚಿಗಳ ವೈಪರೀತ್ಯಗಳಿಂದ ಬರಮಾಡಿಕೊಂಡೋ ಹಿಂಸೆ ಅನುಭವಿಸುತ್ತಾರೆ. ಬಾದರಾಯಣ ಭಾವನಾತ್ಮಕ ಸಂಬಂಧಗಳು, ಬಂಧುತ್ವ ಮಾನವೀಯ ಗುಣಗಳು ಗೌಣವಾಗುತ್ತಾ ಬಂದಿರುವುದೂ ಅಂದರೆ ಮನುಷ್ಯನಿಗೆ ಪೂರಕವಾಗಿ ಪರಿಣಮಿಸುವ ಏಕಾಕಿತನ ಆ ಮೂಲಕ ಬರುವ ಮಾನಸಿಕ ಕ್ಷೋಭೆ. ಇದರಿಂದಾಗಿ ದೇಹದ ಮೇಲೆ ಆಗುವ ಆರೋಗ್ಯ ಸಂಬಂಧಿ ಏರುಪೇರುಗಳು ಕಾಯಿಲೆಯ ಮೂಲ ಸಂಗತಿಗಳಾಗಿವೆ. ನನ್ನ ಅನುಭವಗಮ್ಯವಾದ ಆರೋಗ್ಯ ಕುರಿತ ವಿಚಾರಗಳು 'ಹಸಿ ಮದ್ದು-ಋಷಿ ಮದ್ದು' ಕೃತಿಯಲ್ಲಿ ವೈದ್ಯವಾಗಿರುವ ಆಯುರ್ವೇದ ಮೂಲದ ಆರೋಗ್ಯ ಕುರಿತ ವಿಪುಲ ಮಾಹಿತಿಗಳು ಒಂದರೊಡನೊಂದು ಸಾವಯವ ಸಂಬಂಧ ಹೊಂದಿದೆ ಎನಿಸುತ್ತದೆ.

ಡಾ. ನಡಿಬೈಲು ಉದಯಶಂಕರ ಅವರು 'ಹಸಿ ಮದ್ದು-ಋಷಿ ಮದ್ದು' ಹೆಸರಿನ ಕೃತಿಯಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದ ಗಿಡಮೂಲಿಕೆ ಪ್ರಧಾನ ಔಷಧಿಗಳ ಬಗ್ಗೆ ಅಮೂಲ್ಯವೂ, ಆರೋಗ್ಯಕರವೂ ಆದ ಅರಿವನ್ನು ಮೂಡಿಸಿದ್ದಾರೆ. ಈ ಕಾರಣಕ್ಕೆ ವಿಶಿಷ್ಟವಾಗಿರುವ ಕೃತಿ ಮತ್ತು ಕೃತಿಕಾರರು ಅಭಿನಂದನಾರ್ಹರು. ರೋಗ ರುಜಿನಗಳಿಂದ

ನರಳುವ, ರೋಗದ ಗೌಪ್ಯತೆಯನ್ನು ಕಾಪಾಡಿಕೊಂಡು ಕಾಯಿಲೆಗಳನ್ನು ತೀವ್ರ ಸ್ವರೂಪಕ್ಕೆ ತಂದುಕೊಂಡು ಪರಿತಪಿಸುವ ಮಂದಿಗೆ ಸುಲಭ ಮಾರ್ಗದಲ್ಲಿ ಚಿರಪರಿಚಿತ ಮರ-ಗಿಡ-ಬಳ್ಳಿಗಳಿಂದಲೇ,ತಾವೇ ಕೈಯಾರೆ ಔಷಧಿ ತಯಾರಿಸಿಕೊಳ್ಳಬಹುದಾದ ಆರೋಗ್ಯ ಸೂಚಿ ಮಾರ್ಗದರ್ಶಕರ ಕೃತಿಯಾಗಿದೆ ಎಂದರೆ ತಪ್ಪಾಗಲಾರದು. ಔಷಧಿಯ ಗುಣಗಳಿರುವ ಸಸ್ಯ ಸಂಪತ್ತನ್ನು ಯಥೋಚಿತವಾಗಿ ಬೆಳೆಸಿಕೊಳ್ಳುವ ಮತ್ತು ಬಳಸಿ ಕೊಳ್ಳುವ ಸರಳ ವಿಧಾನವನ್ನು ತಿಳಿಸಿಕೊಡುವ ಮೂಲಕ ಒಂದು ರೀತಿಯಲ್ಲಿ ಸಮಾಜ ಸೇವೆಗೂ ಡಾ. ನಡಿಬೈಲು ಉದಯಶಂಕರರು ಕಾರಣರಾಗಿದ್ದಾರೆ.

ಶ್ರೀಯುತರು ವೃತ್ತಿ ಒತ್ತಡಗಳ ಮಧ್ಯೆ ಬಿಡುವು ಮಾಡಿಕೊಂಡು ಈ ಹೊತ್ತಿಗೆಯನ್ನು ಪ್ರಾಯೋಗಿಕ ಪ್ರಕ್ರಿಯೆ ಮೂಲಕ ಮತ್ತು ಸೃಜನಾತ್ಮಕವಾಗಿಯೂ ಕಟ್ಟಿಕೊಟ್ಟಿರುವುದು ವಿಶೇಷ ಸಂಗತಿ. ವೈದ್ಯರು ಪ್ರಾಯೋಗಿಕ ನೆಲೆಗಟ್ಟಿನಲ್ಲಿ ತಮ್ಮ ಬಳಿಗೆ ಬರುವ ರೋಗ ಪೀಡಿತರನ್ನು ಉಪಚರಿಸಬೇಕು. ಹೀಗೆ ನೇರವಾಗಿ ರೋಗಿಗಳ ಮೇಲೆ ಔಷಧಿ- ಚಿಕಿತ್ಸೆ ಮೂಲಕ ಖಾಯಿಲೆ ಗುಣಪಡಿಸುವ ಮೂಲೋದ್ದೇಶಗಳನ್ನು ಗುರಿಯಾಗಿಟ್ಟು ಹೋಗುವುದು ಪ್ರತ್ಯಕ್ಷ ವೈದ್ಯಕೀಯ ಸೇವೆ ಎನಿಸಿಕೊಳ್ಳುತ್ತದೆ. ಸಮಾಜದ ಜನರು ರೋಗ ಬರುವ ಮೊದಲೇ ಎಚ್ಚರಿಕೆಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳಲು, ಸ್ಥಿರವಾಗಿಟ್ಟುಕೊಳ್ಳಲು ಇಂತಹ ಪುಸ್ತಕಗಳ ಮೂಲಕ ವೈದ್ಯಕೀಯ ಸಲಹೆ ಸೂಚನೆಗಳನ್ನು ಕೊಟ್ಟು ಜಾಗೃತಗೊಳಿಸುವುದನ್ನು ಪರೋಕ್ಷ ವೈದ್ಯಕೀಯ ಸೇವೆ ಎನ್ನಬಹುದು. ಮಾನ್ಯ ಉದಯಶಂಕರ ಅವರು ಈ ಎರಡೂ ರೀತಿಯ ವೈದ್ಯಕೀಯ ಕೈಂಕರ್ಯವನ್ನು ಕೈಗೊಂಡು ಆಯುರ್ವೇದ-ಔಷದೋಪಚಾರಗಳಲ್ಲಿ ಅಪಾರ ನಂಬಿಕೆ, ವಿಶ್ವಾಸವನ್ನಿಟ್ಟು ಕೊಂಡವರ ಪಾಲಿಗೆ ಆದರ್ಶಪ್ರಾಯರಾಗಿ ಕಂಡುಬರುತ್ತಾರೆ.

ಒಂದು ವಿಧದಲ್ಲಿ ಆರೋಗ್ಯ ಔಷಧ ಮಾಹಿತಿಗಳ ಕಣಜವಾಗಿರುವ ಈ ಪುಸ್ತಿಕೆಯ ಪರಿಸರದ ಬಗ್ಗೆ ಅರಿವು ಮೂಡಿಸುವ ಕೃತಿಯಾಗಿಯೂ ಕಂಡು ಬರುತ್ತದೆ. ಏಕೆಂದರೆ ಈ ಪುಸ್ತಿಕೆಯನ್ನು ಓದುವವರು, ರೋಗಪೀಡಿತರು ತಮಗರಿವಿಲ್ಲದೆ ಇವುಗಳನ್ನು ಬೆಳೆಸುವ-ಪೋಷಿಸುವ ಪ್ರಕ್ರಿಯೆಯಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಾಲ್ಗೊಳ್ಳುವವ ರಾದ್ದರಿಂದ ಏಕಕಾಲಕ್ಕೆ ಪರಿಸರವಾದಿ -ನಿಸರ್ಗ ಪ್ರೇಮಿಗಳೂ ಆಗಿ ಪರಿಗಣಿಸಲ್ಪಡುವರು ಎಂಬುದು ನನ್ನ ವೈಯಕ್ತಿಕ ವಿಚಾರ ಹಾಗೂ ಅನುಭವ. ಜನರು ತಮ್ಮ ವಾಸಸ್ಥಳದಿಂದ ಹೊಲಗದ್ದೆ, ತೋಟತುಡಿಕೆ ಮುಂತಾದೆಡೆಯಲ್ಲಿ ಬೆಳೆಯುವರಲ್ಲದೆ, ಸ್ನೇಹಿತರು, ಬಂಧುಗಳು, ಹಿತೈಷಿಗಳೂ ಈ ಬಗ್ಗೆ ಮಾಹಿತಿ ನೀಡಿ ಅವರೂ ಔಷಧಿ ಮೂಲಿಕೆಗಳನ್ನು ಬೆಳೆಯಲು ಕಾರಣರಾಗುವರು.

ಭಾರತದ ಮೂಲದ ಆಯುರ್ವೇದವು ಜಗತ್ತಿನಾದ್ಯಂತ ಜನಪ್ರಿಯವಾಗುತ್ತಿದೆ. ಅಲೋಪತಿ ವೈದ್ಯ ಪದ್ಧತಿಯಷ್ಟೇ ತೀವ್ರವಾಗಿ ಪರಿಣಾಮ ಬೀರದೆ ಹೋದರೂ

ನಿಧಾನಗತಿಯಲ್ಲಿ ಆದರೆ ಅಡ್ಡ ಪರಿಣಾಮಗಳನ್ನು ತಂದೊಡ್ಡದೆ ಕಾಯಿಲೆಗಳನ್ನು ಇಲ್ಲವಾಗಿಸುವ ಗುಣ ಈ ವೈದ್ಯ ಪದ್ಧತಿಯಾಗಿರುವುದು ಗಮನಿಸಬೇಕಾದ ವಿಷಯವಾಗಿದೆ. ಅಲ್ಲದೆ ಇಂದಿನ ಜಾಗತೀಕರಣದ ಪ್ರಭಾವವಲಯದಲ್ಲಿ ಆಯುರ್ವೇದಂತಹ ಪುರಾತನ ವೈದ್ಯ ಪದ್ಧತಿ ಪರಂಪರೆಯ ಸ್ಥಿರೀಕರಿಸುವ ಮತ್ತು ಇದರ ವ್ಯಾಪಕತೆಯನ್ನು ವಿಸ್ತರಿಸಬೇಕಾಗಿದೆ.

ಸಮಾಜದ, ಕುಟುಂಬದ ವ್ಯಕ್ತಿಯ ಸ್ವಾಸ್ಥ್ಯದಲ್ಲಿ ಆರೋಗ್ಯದಂತಹ ವಿಷಯವು ಪ್ರಮುಖ ಪಾತ್ರ ವಹಿಸುತ್ತದೆ ಎಂದರೆ ತಪ್ಪಾಗಲಾರದು. ಈ ಮಾತು ಯಾವುದೇ ವ್ಯಕ್ತಿ, ರಾಷ್ಟ್ರಕ್ಕೆ ಅನ್ವಯಿಸುತ್ತದೆ. ಯಾವುದೇ ದೇಶದ ಜನರು ಯಾಂತ್ರಿಕ ಬದುಕಿನ ಹತ್ತು ಹಲವು ಒತ್ತಡಗಳ ಮಧ್ಯೆ ಬದುಕನ್ನು ನಿರಾಳವಾಗಿ ಅನುಭವಿಸಬೇಕಾದರೆ ಮನಸ್ಸಿಗೆ ನೆಮ್ಮದಿಯನ್ನು ತಂದುಕೊಂಡು ಬಾಳಬೇಕಾದರೆ ವ್ಯಕ್ತಿಯ ಆಲೋಚನೆ ಮತ್ತು ಆರೋಗ್ಯ ಬಹಳ ಮುಖ್ಯ. ಹಾಗೆಯೇ ಅದೇ ವ್ಯಕ್ತಿಯು ತನ್ನ ಕುಟುಂಬದ ಎಲ್ಲ ಸದಸ್ಯರ ಆರೋಗ್ಯದ ಬಗ್ಗೆಯೂ ಕಾಳಜಿ ಹೊಂದಿದವನಾಗಿ ಆ ನಿಟ್ಟಿನಲ್ಲಿ ಆಲೋಚಿಸುತ್ತಾನೆ. ಆರೋಗ್ಯ ಸದೃಢತೆ ಬಗ್ಗೆ ಚಿಂತಿತನಾಗುತ್ತಾನೆ. ಕಾರಣ ಆರೋಗ್ಯ ನಷ್ಟದಿಂದಾಗುವ ಆರ್ಥಿಕ ನಷ್ಟವು ಕುಟುಂಬದ ಪ್ರಗತಿಗೆ ಮಾರಕವಾಗಿ ಪರಿಣಮಿಸಬಹುದು. ದುರ್ಬಲ ಮನಸ್ಸು ದುರ್ಬಲ ಆರೋಗ್ಯವು ವ್ಯಕ್ತಿಯ ವ್ಯಕ್ತಿತ್ವವನ್ನು ಕುಂಠಿತಗೊಳಿಸುತ್ತದೆ.

ಅಸ್ತಿತ್ವದ ಪ್ರಶ್ನೆ ಎದುರಾಗಿ ಸಮಾಜದಲ್ಲಿ ಸಿಗುವ ಸ್ಥಾನಮಾನಗಳ ವಿಚಾರವಾಗಿಯೂ ಆತಂಕಕ್ಕೀಡಾಗುವವರಿಗೆ ಲೇಖಕರು ಬರೆದಿರುವ 'ಹಸಿ ಮದ್ದು - ಋಷಿ ಮದ್ದು' ಕೃತಿಯು ಆರೋಗ್ಯದ ಬಗ್ಗೆ ಜಾಗೃತರಾಗಿರಲು ಎಚ್ಚರಿಸುತ್ತಿದೆಯಲ್ಲದೆ ಇಲ್ಲಿ ಹೆಸರಿಸಿರುವ ಮನಸ್ಪತಿ ರಾಶಿಯ ಮೂಲ ಪರಂಪರೆಯನ್ನು ತಿಳಿದು ಪರಿಸರದ ಬಗ್ಗೆ ಪ್ರೇಮ ಉಂಟಾಗುತ್ತದೆ. ಏಕೆಂದರೆ ಇಲ್ಲಿ ಪ್ರಸ್ತಾಪಿಸಿರುವ ಮರ-ಗಿಡ-ಬಳ್ಳಿಗಳು ನಮ್ಮ ನಡುವೆ ಇರುವ ವನರಾಶಿಯಾಗಿದೆ. ಆದರೆ ಇವುಗಳ ಮಹತ್ವ ಉಪಯುಕ್ತತೆ ತಿಳಿದಿರಲಿಲ್ಲ ಅಷ್ಟೆ.

ಮಾನ್ಯ ಉದಯಶಂಕರ ಅವರು ಈ ಕೃತಿಯಲ್ಲಿ ಕಾವ್ಯದ ಪರಿಭಾಷೆಯಲ್ಲಿ ವಾಚ್ಯ ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳ ಮೂಲಕವಾಗಿ ವಸ್ತುನಿರೂಪಣೆ ಮಾಡಿರುವ ಇವರು ಶ್ರೇಷ್ಠ ಕವಿಯಾಗುವ ಎಲ್ಲ ಲಕ್ಷಣ ಹೊಂದಿರುವವರು. ಅವರು ನಿರೂಪಿಸಿರುವ ಮದ್ದು ಮೂಲಕ ವನಸ್ಪತಿಯ ಗುಣ ಸ್ವರೂಪಗಳನ್ನು ರಂಜನಾತ್ಮಕವಾಗಿ ಹಾಗೂ ಓದುಗರಿಗೆ ಉತ್ಸುಕತೆ ಒದಗಿಸುವ ನಿಟ್ಟಿನಲ್ಲಿ ಬಳಸಿರುವ ಪದ, ಭಾಷೆ ಪ್ರಯೋಗ ಪರಿಣಾಮಕಾರಿಯಾಗಿದೆ ಮತ್ತು ಪ್ರಬುದ್ಧ ಪಾಂಡಿತ್ಯಪೂರ್ಣ ಭಾಷೆಯ ಗಾಂಭೀರ್ಯತೆ ಇದೆ.

ನಿಸರ್ಗದ ಪ್ರತಿಯೊಂದು ವಸ್ತು, ಸಸ್ಯ, ಪ್ರಾಣಿ, ಖನಿಜ ಔಷಧಿಯುಕ್ತವಾಗಿರುವುದು ಇವರ ಕೃತಿಯಿಂದ ನನಗೆ ತಿಳಿಯಿತು. ಇದನ್ನು ಫಲಾಪೇಕ್ಷೆಯುಳ್ಳವರಿಗೆ ನಾನು ತಲುಪಿಸುವ ಕೆಲಸ ಮ್ಮಾಡುತ್ತೇನೆ. ಏಕೆಂದರೆ ಈ ಕೃತಿಯ ಅಧ್ಯಯನ ನಮ್ಮ ನಾನಾ ಬಗೆಯ ಕಾಯಿಲೆಗಳ ಹೆಸರು, ಅವುಗಳ ಸ್ವರೂಪ ತಿಳಿಸಿತಲ್ಲದೆ ಅಂತಹ ಕಾಯಿಲೆಗಳಿಗೆ ಔಷಧಿ ಯಾವುದು ಎಂಬ ವಿಚಾರವು ಮನವರಿಕೆಯಾಯಿತು. ಹೀಗಾಗಿ ನಾನು ಗಳಿಸಿದ ಈ ಜ್ಞಾನವು ನನ್ನೊಳಗಿದ್ದರೆ ಏನು ಚಂದ? ಇದು ಪಸರಿಸಿಸಿದಂತಾಗಬೇಕು; ಹಾಗೆ ಮಾಡುತ್ತೇನೆ.

ಮತ್ತೊಮ್ಮೆ ಡಾ. ನಡಿಬೈಲು ಉದಯಶಂಕರ ಅವರಿಗೆ ಅಭಿಮಾನಪೂರ್ವಕ ನಮನಗಳು.

ಡಾ. ಓ. ನಾಗರಾಜು

೨. ಮನೆ ಮದ್ದು

ಸಂಗ್ರಹ: ವೈ.ವಿ. ರಾಮನಾಥನ್
ಪುಟ ೨೧೨, ಬೆಲೆ ರೂ. ೧೨೦/-
ಪ್ರಥಮ ಮುದ್ರಣ ೨೦೧೩
ಶಾಲಿನಿ ಪಬ್ಲಿಕೇಷನ್, ನಂ. ೧೯/೨೦, ಆಶೀರ್ವಾದ್ ಮ್ಯಾನ್‌ಷನ್
೧೭ನೇ ಅಡ್ಡರಸ್ತೆ, ಮುನೇಶ್ವರನಗರ, ಉಳ್ಳಾಳು ಮುಖ್ಯರಸ್ತೆ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬

ಮನೆಮದ್ದು, ಗಿಡಮೂಲಿಕೆ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಜನಪದ ವೈದ್ಯ ನಶಿಸುತ್ತಿದೆ. ಹಿರಿಯ ತಲೆಮಾರಿನವರು ತಾವು ಕಲಿತಿರುವ ಅನೇಕ ಸಸ್ಯ ಔಷಧಿಗಳ ವಿವರಗಳನ್ನು ಇತರರಿಗೆ ಹೇಳಿಕೊಡದೇ ತಮ್ಮೊಂದಿಗೆ ಅವನ್ನು ಒಯ್ಯುತ್ತಿದ್ದಾರೆ. ಅನೇಕ ರೋಗನಿರೋಧಕ ಗಿಡಮೂಲಿಕೆ ಔಷಧಿಗಳಲ್ಲಿ ಕೆಲವನ್ನು ಸಂಗ್ರಹಿಸಿ ವೈ.ವಿ. ರಾಮನಾಥನ್‌ರವರು ಪುಸ್ತಕ ರೂಪದಲ್ಲಿ ನೀಡಿದ್ದಾರೆ.

ನಮ್ಮ ಸುತ್ತಮುತ್ತ ದಿನನಿತ್ಯದಲ್ಲಿ ನಾವು ನೋಡುತ್ತಿರುವ ನೂರಾರು ಹಣ್ಣು, ಕಾಯಿ, ಬೇರು, ಕಾಂಡ ಮುಂತಾದವುಗಳನ್ನು ಬಳಸಿಕೊಂಡು ಸುಲಭವಾಗಿ ಔಷಧಿಗಳನ್ನು ಮಾಡಬಹುದಾಗಿದೆ. ಹೀಗೆ ಬಳಸುವಾಗ ಯಾವ ರೋಗಕ್ಕೆ, ಯಾವ ಪ್ರಮಾಣದಲ್ಲಿ, ಯಾವ ಸಸ್ಯ ಭಾಗವನ್ನು ಬಳಸಬೇಕು ಎಂಬುದನ್ನು ತಿಳಿಸುವ, ಔಷಧಿ ಸೇವಿಸಿದ ನಂತರ ಯಾವ ಆಹಾರ ಪದಾರ್ಥಗಳನ್ನು ಬಳಸಬೇಕೆಂಬ ಎಚ್ಚರಿಕೆಯನ್ನು ಲೇಖಕರು ನೀಡಿದ್ದಾರೆ. ಸುಮಾರು ೧೦೦ಕ್ಕೂ ಇಂತಹ ವಸ್ತುಗಳ ಹೆಸರನ್ನು ಸೂಚಿಸಿ ಅವುಗಳನ್ನು ಯಾವ ಯಾವ ರೋಗಕ್ಕೆ ಬಳಸಿಕೊಳ್ಳುವುದರಿಂದ ರೋಗವನ್ನು ಉಪಶಮನಗೊಳಿಸಿಕೊಳ್ಳಬಹುದೆಂಬುದನ್ನು ತಿಳಿಸುತ್ತಾರೆ.

ಮನೆಯಲ್ಲಿಯೇ ಇರುವ ಪದಾರ್ಥಗಳನ್ನು ಉಪಯೋಗಿಸಿಕೊಂಡು ರೋಗ-ರುಜಿನಗಳನ್ನು ಶಮನಗೊಳಿಸಿ ಜೀವನ ನಡೆಸಿದ ಲಕ್ಷಾಂತರ ಉದಾಹರಣೆಗಳು ನಮ್ಮಲ್ಲಿವೆ. ಮನೆಯ ಪರಿಸರದಲ್ಲಿ, ಹೊಲ-ಗದ್ದೆ-ತೋಟಗಳಲ್ಲಿ ದೊರಕುವ ನೂರಾರು ಗಿಡ-ಗಂಟಿ, ಹಣ್ಣು-ಕಾಯಿ, ತೊಗಟೆ, ಚಿಗುರು, ಸೊಪ್ಪುಗಳಿಂದ ಅತ್ಯಂತ ಪರಿಣಾಮಕಾರಿಯಾದ ಔಷಧಗಳನ್ನು ತಯಾರಿಸಿ ಬಳಸಬಹುದೆಂಬುದು ನಮ್ಮ ಜನಪದರ ಅನುಭವದ ಮಾತುಗಳು. ಅವುಗಳನ್ನೇ ತಮ್ಮ ಆಹಾರವನ್ನಾಗಿಸಿ ಸೇವಿಸುವುದು ಅವರ ಜಾಣ್ಮೆಗೆ ಹಿಡಿದ ಕನ್ನಡಿಯಾಗಿದೆ. ಆದರೆ ಇಂದು ಆಧುನಿಕ ತಂತ್ರಜ್ಞಾನ ಎಂದೆಲ್ಲ ಕರೆಯಲ್ಪಟ್ಟು ಪರಿಸರದಲ್ಲಿರುವ ಸಸ್ಯಗಳನ್ನು ಕಳೆ ಗಿಡಗಳೆಂದು ದೂರೀಕರಿಸುತ್ತಿದ್ದೇವೆ. ಅವುಗಳ ಸಂಜೀವಿನಿ ಶಕ್ತಿ ನಮಗೆ ಕಾಣಿಸುವುದಿಲ್ಲ. "ದೀರ್ಘಕಾಲ ಕೆಮ್ಮು ಮತ್ತು ನೆಗಡಿಯಿಂದ ಬಳಲುವವರು ಬೆಳ್ಳುಳ್ಳಿಯನ್ನು ಪ್ರತಿನಿತ್ಯ ಸೇವಿಸಿದರೆ ಕೆಮ್ಮು ಶಮನವಾಗುವುವು" (ಪು. ೮). "ವಿಷ ಪ್ರಾಶನವಾದಾಗ ಸಾಸಿವೆಯನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಬೆರೆಸಿ ಕುಡಿಯುವುದರಿಂದ ವಾಂತಿಯಾಗಿ ವಿಷವು ಹೊರಬೀಳುವುದು"(ಪು. ೧೩). "ಪ್ರತಿದಿನ ಈರುಳ್ಳಿ ಪಲ್ಯ ಮತ್ತು ಹುರುಳಿ ಕಟ್ಟಿನ ಸಾರು ಸೇವಿಸುವುದರಿಂದ ಮೂತ್ರಕೋಶದಲ್ಲಿ ಕಲ್ಲಿನ ಬೆಳವಣಿಗೆಯಾಗುವುದಿಲ್ಲ"(ಪು. ೧೫). ಪ್ರತಿಯೊಂದು ಮನೆಯಲ್ಲಿಯೂ ಬೆಳ್ಳುಳ್ಳಿ, ಸಾಸಿವೆ, ಈರುಳ್ಳಿ ಇವೆಲ್ಲವೂ ದೊರೆಯುತ್ತದೆ. ವಿವಿಧ ತಿಂಡಿ-ತಿನಿಸುಗಳಲ್ಲಿ ಬಳಸುತ್ತೇವೆ. ಸಣ್ಣಪುಟ್ಟ ದೈಹಿಕ ಸಮಸ್ಯೆಗಳಾದಾಗ ಸರಳವಾಗಿ ಉಪಯೋಗಿಸುವ ಜಾಣ್ಮೆ ಮಾತ್ರ ನಮ್ಮಲ್ಲಿಲ್ಲದಿರುವುದು ವಿಷಾದನೀಯ. ಪ್ರತಿಯೊಂದಕ್ಕೂ ಎಂ.ಬಿ.ಬಿ.ಎಸ್. ಮತ್ತು ಇತರೆ ಪದವಿಗಳನ್ನು ಪಡೆದಿರುವ ವೈದ್ಯರ ಹತ್ತಿರ ಹೋಗಿ ಚುಚ್ಚುಮದ್ದು, ಮಾತ್ರೆ, ಮುಲಾಮುಗಳ ಮೊರೆಹೋಗುತ್ತೇವೆ. ನೂರಾರು-ಸಾವಿರಾರು ರೂಪಾಯಿಗಳ ವೆಚ್ಚದೊಂದಿಗೆ ಕಾಲಹರಣ ಮಾಡುವುದರಲ್ಲಿಯೇ ನಮ್ಮ ಜಾಣತನ ಪ್ರದರ್ಶನವಾಗುತ್ತದೆ.

ಪ್ರತಿಯೊಂದು ಸಾಂಬಾರ ಪದಾರ್ಥಗಳನ್ನು ಉಪಯೋಗಿಸಿಕೊಂಡು ಖಾಯಿಲೆ ಶಮನಗೊಳಿಸುವ ರೀತಿ ಒಂದೆಡೆಯಾದರೆ ಪರಿಸರದಲ್ಲಿ ಪುಕ್ಕಟೆಯಾಗಿ, ಸುಲಭವಾಗಿ ಕೈಗೆಟುಕುವ ಹಣ್ಣು-ಹಂಪಲು, ಕಾಯಿಪಲ್ಯೆಗಳನ್ನು ರೋಗಗಳ ಶಮನಕ್ಕೆ ಬಳಸಿಕೊಳ್ಳುವುದು ಮತ್ತೊಂದು ರೀತಿ. ಹಾಗೆಯೇ ಕೈತೋಟಗಳಲ್ಲಿ, ಮನೆಯ ಛಾವಣಿಗಳಲ್ಲಿ, ಅಂಗಳದಲ್ಲಿ ಸಣ್ಣಪುಟ್ಟ ಔಷಧಿ ಗಿಡಗಳನ್ನು ಬೆಳೆಸಿ ಉಪಯೋಗಿಸಬೇಕು ಎನ್ನುವ ಅಭಿಲಾಷೆಯನ್ನು, ಉತ್ಸಾಹವನ್ನು ಈ ಕೃತಿ ಉತ್ತೇಜಿಸುವುದರಲ್ಲಿ ಎರಡು ಮಾತಿಲ್ಲ.

ತುಳಸಿ, ಕರಿಬೇವು, ನುಗ್ಗೆ, ವೀಳ್ಯದೆಲೆ, ಪುದಿನ, ಕೊತ್ತಂಬರಿ ಸೊಪ್ಪು, ನಿಂಬೆ, ಸೀತಾಫಲ, ಅಂಜೂರ, ದೊಡ್ಡಪತ್ರೆ, ಬ್ರಾಹ್ಮೀ(ಸರಸ್ವತಿ) ಇವುಗಳನ್ನೆಲ್ಲ ಬೆಳೆಯಲು ವಿಶಾಲವಾದ ಸ್ಥಳ ಬೇಕಾಗಿಲ್ಲ. ಗೊಬ್ಬರ, ಆಳುಗಳ ಬೇಡಿಕೆ ಬೇಕಾಗುವುದಿಲ್ಲ. ಇಂಥವುಗಳನ್ನು ಬೆಳೆದು ಬಳಸಿಕೊಂಡು ನಮ್ಮ ಜನಪದರ ಬುದ್ಧಿಶಕ್ತಿಯನ್ನು ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ನಿರಂತರವಾಗಿ

ನಮ್ಮ ಅಡುಗೆ ಮನೆಯಲ್ಲಿ ಸ್ಥಾನ ಪಡೆದಿರುವ ಲವಂಗ, ಜೀರಿಗೆ, ಬೆಳ್ಳುಳ್ಳಿ, ಮೆಣಸು, ಉಪ್ಪು, ಸಾಸಿವೆ, ಎಳ್ಳು, ಏಲಕ್ಕಿ, ಅರಿಶಿಣ, ಇಂಗು, ಕೊತ್ತಂಬರಿ, ಟೀಪುಡಿ, ಜೇನುತುಪ್ಪ, ಬೆಲ್ಲ, ಹುಣಸೆಹಣ್ಣು, ಉದ್ದು, ಕೊಬ್ಬರಿ ಎಣ್ಣೆ, ಹಾಲು, ತೆಂಗು ಇನ್ನಿತರ ಪದಾರ್ಥಗಳಿಗೆ ತಡಕಾಡಬೇಕಾದ ಅನಿವಾರ್ಯತೆ ಇಲ್ಲ. ಇವುಗಳನ್ನೇ ಔಷಧಿಯನ್ನಾಗಿ ಬಳಸಿಕೊಂಡರೆ ಮಾತ್ರ ನಾವು ಆರೋಗ್ಯದಿಂದಿರಲು ಸಾಧ್ಯ ಎಂಬುದನ್ನು ವೈ.ವಿ. ರಾಮನಾಥನ್ ಸರಳ ಕನ್ನಡದಲ್ಲಿ ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಮಾಹಿತಿಗಳನ್ನು ನೀಡಿದ್ದಾರೆ.

ಜನಸಾಮಾನ್ಯರು ಹೆಚ್ಚು ಹೆಚ್ಚು ಹಣ ತೆತ್ತು ಔಷಧಿಗಳಿಗೆ ಮೊರೆಹೋಗುವುದನ್ನು ತಪ್ಪಿಸಿ ಕೈಗೆಟುಕುವ ರೀತಿಯಲ್ಲಿ ಕಡಿಮೆ ಹಣ ಖರ್ಚು ಮಾಡಿ ರೋಗವನ್ನು ನಿವಾರಿಸಿಕೊಳ್ಳಬಹುದು. ಮನೆಯಲ್ಲಿಯೇ ತಯಾರಿಸಬಹುದಾದ ಚಿಕ್ಕಪುಟ್ಟ ಮದ್ದುಗಳು ಪೂರ್ತಿ ಅದರಲ್ಲಿಯೇ ಗುಣವಾಗುತ್ತದೆ ಎಂದಲ್ಲ; ತಕ್ಷಣಕ್ಕೆ ಕೆಲವು ಮಾತ್ರ ಪರಿಹಾರ ದೊರೆಯುತ್ತದೆ. ಇನ್ನು ಕೆಲವು ತುಂಬಾ ದಿನಗಳವರೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈಗ ಮನೆಯಲ್ಲಿರುವ ಸಾಮಗ್ರಿಗಳಲ್ಲಿ ಕೆಲವು ಬಹಳ ಉಪಯುಕ್ತವಾದವುಗಳಿಗೆ ಅದರಲ್ಲಿ ಕೆಲವನ್ನು ಹೇಗೆ ಬಳಸಬಹುದು ಎಂದು ತಿಳಿಯಬಹುದು.

ಈ ಕೃತಿಯ ಬೆನ್ನುಡಿಯಲ್ಲಿ ನಮೂದಿತವಾಗಿರುವ ವಿಚಾರಗಳಿಗೂ ಪುಸ್ತಕದ ಒಳಗಿನ ಹೂರಣಕ್ಕೂ ಯಾವುದೇ ಸಂಬಂಧವಿರದಿರುವುದು ಪ್ರಕಾಶಕರ ಅವಸರದ ಕಾರ್ಯ ಎನ್ನಬಹುದು. ಕೆಲವು ಕಡೆ ಅಕ್ಷರದೋಷಗಳು ಹಾಗೆ ಉಳಿದಿವೆ. ರಕ್ಷ ಕವಚದ ಮುಂಭಾಗದಲ್ಲಿ ಸಾಧನಾ ಪಬ್ಲಿಕೇಷನ್ ಎಂದು ಅಚ್ಚಾಗಿದ್ದು ಒಳಪುಟದ ಮೊದಲಲ್ಲಿ ಶಾಲಿನಿ ಪಬ್ಲಿಕೇಷನ್ ಎಂಬ ವಿವರಗಳು ಅಚ್ಚಾಗಿವೆ. ಇದು ಓದುಗರನ್ನು ಗೊಂದಲ ಗಲಿಬಿಲಿಗೊಳಿಸುತ್ತದೆ.

ಲೋಕೇಶ

□□

೬

ಸಂಕೀರ್ಣ

೧. ಕೊಪ್ಪರಿಗೆ

(ಡಾ. ಯು.ಪಿ. ಉಪಾಧ್ಯಾಯ-ಡಾ. ಸುಶೀಲಾ ಉಪಾಧ್ಯಾಯ ಅಭಿನಂದನ ಗ್ರಂಥ)

ಸಂಪಾದಕರು: ಡಾ. ಬಿ. ಜನಾರ್ಧನ್ ಭಟ್
ಕೆ.ಎಲ್. ಕುಂಡಂತಾಯ, ಡಾ. ನಾ. ಮೊಗಸಾಲೆ
ಪುಟ ೪೯೬, ಬೆಲೆ ರೂ. ३೦೦/-
ಪ್ರಥಮ ಮುದ್ರಣ ೨೦೧३
ಮೊಗಸಾಲೆ ಪ್ರಕಾಶನ, ನಂ. ೧೧ (೨೮೭) (೫-ಬಿ)
ಬ್ಲೊಸಮ್ ಟವರ್ಸ್, ಬೆಳುವಾಯಿ-೫೭೪ ೨೧३

ಹೆಸರೇ ಸೂಚಿಸುವ ಹಾಗೆ 'ಕೊಪ್ಪರಿಗೆ' ನಿಜ ಅರ್ಥದಲ್ಲಿ ವಿಷಯದ ಕೊಪ್ಪರಿಗೆಯೇ ಆಗಿದೆ. ಕನ್ನಡದ ಮಹತ್ವದ ಸಂಶೋಧಕರಲ್ಲಿ ಒಬ್ಬರಾದ ಡಾ. ಯು.ಪಿ. ಉಪಾಧ್ಯಾಯ ಮತ್ತು ಅವರ ಪತ್ನಿ ಡಾ. ಸುಶೀಲಾ ಅವರ ಬದುಕು-ಬರಹ ಆಯಾಮಗಳ ಸಮೂಹ ಶೋಧವೆಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹೊರತಂದಿರುವ ಕೊಪ್ಪರಿಗೆ ಹೆಸರಿನ ಕೃತಿಯು ಕರಾವಳಿ ಕರ್ನಾಟಕದ ಸಂಸ್ಕೃತಿ ಚಿಂತನೆಗೆ ವೇದಿಕೆಯಾಗಿ ಮಾರ್ಪಟ್ಟಿರುವುದು ಸಂತಸದ ವಿಷಯ. ಅಭಿನಂದನ ಗ್ರಂಥಗಳು ಒಂದು ಕಾಲದಲ್ಲಿ ಒಂದು ಸಾಹಿತ್ಯ ಪ್ರಕಾರವನ್ನೋ, ಒಬ್ಬ ಕವಿಯನ್ನೋ ಅಥವಾ ಒಂದು ಸಾಹಿತ್ಯ ಚಳುವಳಿಯನ್ನೋ ಕುರಿತು ಆಳವಾಗಿ ಪುನರ್‌ಚಿಂತಿಸುವ ಮಾಧ್ಯಮಗಳಾಗಿದ್ದವು. ಆದರೆ ಇಂದು ಅಭಿನಂದನ ಗ್ರಂಥಗಳೆಂದರೆ ಹೊಗಳು ಭಟ್ಟರ ಪರಾಕುಗಳೇ ತುಂಬಿ ರದ್ದಿಗೆ ಹಾಕಲು ಯೋಗ್ಯವಾಗಿರುತ್ತವೆ. ಆದರೂ ಅಲ್ಲೊಂದು ಇಲ್ಲೊಂದು ಆಕರ ಗ್ರಂಥವಾಗಿ ನಿಲ್ಲುವ ಅಭಿನಂದನ ಗ್ರಂಥಗಳು ಪ್ರಕಟಗೊಳ್ಳುತ್ತಿರುವುದು ಕನ್ನಡದಲ್ಲಿ ಇನ್ನೂ ನಿಜ ಕಾಳಜಿಯ ಚಿಂತಕರಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ.

ತುಳು ಭಾಷೆಯ ಅಧ್ಯಯನಕ್ಕೆ ದಾರಿದೀಪವಾದ, ಇವರಿಬ್ಬರೂ ಸೇರಿ ಪ್ರಕಟಿಸಿದ ತುಳು ನಿಘಂಟು ಪ್ರಕಟಣೆಯು ಇತಿಹಾಸದಲ್ಲಿ ಮೈಲುಗಲ್ಲಾಗಿದೆ. ಡಾ. ಉಪಾಧ್ಯಾಯ ದಂಪತಿಗಳು ಇಂತಹ ಅನೇಕ ಸಂಶೋಧನ ಕೊಡುಗೆಗಳನ್ನು ನೀಡಿರುವರು. ಇಂತಹ ಅಪರೂಪದ ದಂಪತಿಗಳ ಕೊಡುಗೆಯನ್ನು ಗುರುತಿಸುವ ಗ್ರಂಥವಾಗಿ ರೂಪು ಗೊಂಡಿದ್ದರೂ ಇದು ಅಷ್ಟಕ್ಕೇ ಸೀಮಿತವಾಗದೆ ತುಳು ಭಾಷೆ, ಸಂಸ್ಕೃತಿ, ತುಳು ವ್ಯಕ್ತಿತ್ವಗಳ ಮರುಮಂಥನಾ ಗ್ರಂಥವಾಗಿ ರೂಪುಗೊಂಡಿರುವುದು ಮೆಚ್ಚತಕ್ಕ ಅಂಶವಾಗಿದೆ. ಈ ಕಾರಣದಿಂದಾಗಿಯೇ ಈ ಕೊಪ್ಪರಿಗೆ ಅಭಿನಂದನಾ ಗ್ರಂಥವೆಂದು ಎಲ್ಲೂ ನಮೂದಿಸಿಕೊಂಡಿಲ್ಲ!

ಐದು ಭಾಗಗಳಲ್ಲಿ ರೂಪುಗೊಂಡಿರುವ ಈ ಕೃತಿ ವ್ಯಕ್ತಿತ್ವ ವಿದ್ವತ್ತು ಎರಡನ್ನೂ ಗುರುತಿಸುವ ಹಾಗೂ ಇವೆರಡರ ಪರಿಣಾಮದಿಂದ ಪ್ರಭಾವಗೊಂಡ ಸಂಶೋಧನಾ ಕಾರ್ಯವನ್ನು ಕುರಿತು ಅನೇಕ ಲೇಖನಗಳಿವೆ. ಭಾಗ ಒಂದರಲ್ಲಿ(ಜೋಡು ಕೊಪ್ಪರಿಗೆ) ಹದಿಮೂರು ಲೇಖನಗಳಿದ್ದು ಉಪಾಧ್ಯಾಯ ದಂಪತಿಗಳ ವ್ಯಕ್ತಿತ್ವಗಳನ್ನು ಸರಳವಾಗಿ ಮತ್ತು ಸಾರ್ಥಕವಾಗಿ ಪರಿಚಯಿಸಿವೆ. ಡಾ. ಅರುಣಕುಮಾರ್, ಡಾ. ಮಹಾಬಲೇಶ್ವರ ರಾವ್, ಡಾ. ವಾದಿರಾಜ ಭಟ್, ಹೊಸ್ಕೆರೆ ಶಿವಸ್ವಾಮಿ ಅವರ ಲೇಖನಗಳು ಸಮರ್ಥವಾಗಿ ಮೂಡಿಬಂದಿವೆ. ಈ ಭಾಗದಲ್ಲಿ ಡಾ. ಯು.ಪಿ. ಉಪಾಧ್ಯಾಯ ಮತ್ತು ಡಾ. ಸುಶೀಲಾ ಅವರ ಅನ್ಯೋನ್ಯತೆ, ಸರಳತೆ, ಇತರರಿಗೆ ತೋರಿಸುವ ಗೌರವ ಹಾಗೂ ಅವರ ಕರ್ತವ್ಯನಿಷ್ಠೆ, ಶ್ರದ್ಧೆ, ಶ್ರಮ ಎಲ್ಲವನ್ನೂ ಬೊಗಸೆಯಲ್ಲಿ ಹಿಡಿದು ನಮ್ಮ ಮುಂದಿಡುವ ಪ್ರಯತ್ನ ಮಾಡಿವೆ.

ಎರಡನೆಯ ಭಾಗವಾದ ಸಂಸ್ಕೃತಿಯ ಒಡಲು ಭಾಗ ತುಳುನಾಡಿನ ಸಂಸ್ಕೃತಿ ಚಿಂತನೆಯ ಹನ್ನೆರಡು ಲೇಖನಗಳಿಂದ ಕೂಡಿದೆ. ತುಳುನಾಡಿನ ಮತ-ಧರ್ಮ, ಕಥನ ಪರಂಪರೆ, ನಾಗಾರಾಧನೆ, ಸಿರಿ ಆಚರಣೆ, ಯಕ್ಷಗಾನ, ಭೈರರು, ಬೇಟೆ ಆಚರಣೆ, ಜಾನಪದ ಸಂಗೀತ, ತುಳು ಸಂಸ್ಕೃತಿ ಅಧ್ಯಯನಕ್ಕೆ ಅನನ್ಯ ಕೊಡುಗೆ ನೀಡುತ್ತಿರುವ ಗೋವಿಂದ ಪೈ ಸಂಶೋಧನ ಕೇಂದ್ರ ಮತ್ತು ಕಾಂತಾವರ ಕನ್ನಡ ಸಂಘಗಳ ಕೊಡುಗೆ ಕುರಿತ ಲೇಖನಗಳಿವೆ. ಡಾ. ಎಸ್.ಡಿ. ಶೆಟ್ಟಿ, ಡಾ. ಚಿನ್ನಪ್ಪ ಗೌಡ, ಶ್ರೀ ಕುಂಡಂತಾಯ, ಡಾ. ಪ್ರಭಾಕರ ಜೋಶಿ, ಕಾತ್ಯಾಯಿನಿ ಕುಂಜಿಬೆಟ್ಟು ಅವರ ಲೇಖನಗಳು ಅನೇಕ ಒಳನೋಟಗಳಿಂದ ಕೂಡಿವೆ. ಅವಿಭಜಿತ ತುಳುನಾಡನ್ನು ಲಕ್ಷ್ಯದಲ್ಲಿಟ್ಟುಕೊಂಡು ಡಾ. ಎಸ್.ಡಿ. ಶೆಟ್ಟಿಯವರು ತುಳುನಾಡಿನ ಮತ ಧರ್ಮಗಳ ಐತಿಹಾಸಿಕ ಬೆಳವಣಿಗೆಯನ್ನು ಕುರಿತ ಲೇಖನ ಒಂದು ಮಿತಿಯಲ್ಲಿಯೇ ಚರ್ಚಿತವಾಗಿದೆ. ಇವರು ತುಳುನಾಡಿನ ಬೌದ್ಧ ಧರ್ಮ ಮತ್ತು ವೈಷ್ಣವ ಧರ್ಮದ ಬಗ್ಗೆ ಇನ್ನಷ್ಟು ಚರ್ಚೆ ನಡೆಸಬಹುದಿತ್ತು. ಉಡುಪಿ ಕೃಷ್ಣ ಪರಂಪರೆಯ ವಿವಾದಗಳನ್ನು ಗಮನಿಸಿ, ಚರ್ಚಿಸಬಹುದಿತ್ತು. ವಲಸಿಗರ ಪ್ರಬಲತೆ ಹೇಗೆ ಸ್ಥಳೀಯರನ್ನು ಮೂಲೆಗುಂಪು ಮಾಡಿತು. ಅವರ ಸಂಸ್ಕೃತಿಯನ್ನು ಅಧೀನಗೊಳಿಸಿಕೊಂಡಿತೆಂದು ಹೇಳಬಹುದಿತ್ತು.

ಡಾ. ಚಿನ್ನಪ್ಪ ಗೌಡರು ತಮ್ಮ ಉಳ್ಳಾಲ್ತಿ ಬಗೆಗಿನ ಲೇಖನದಲ್ಲಿ ತುಳುನಾಡಿನ ಲಿಖಿತ ಇತಿಹಾಸವು ಆಡಳಿತಪರ, ರಾಜನಿಷ್ಠ ಮತ್ತು ಮೇಲ್ವರ್ಗದ ಪರವಾಗಿದೆಯೆಂದು ಅಭಿಪ್ರಾಯಪಟ್ಟು, ಸಾಂಸ್ಕೃತಿಕ ರಚನೆಯಲ್ಲೂ ಹೇಗೆ ಅಧಿಕಾರ ಪರವಾದ ಮತ್ತು ಪುರುಷ ಪರವಾದ ಮನೋಧರ್ಮ ಇವೆಯೆಂದು ಸಾಧಿಸಿರುವರು. ಈ ಲೇಖನದಲ್ಲಿ ಮಹಿಳೆಯ ಪರವಾದ ಅಧ್ಯಯನಗಳು ಇನ್ನೂ ರೂಪುಗೊಳ್ಳಬೇಕೆಂಬ ಆಶಯ ವ್ಯಕ್ತವಾಗಿದೆ. ಡಾ. ಜನಾರ್ಧನ ಭಟ್ಟರು ತಮ್ಮ ಲೇಖನದಲ್ಲಿ ಬೆರ್ಮರ ಬಗೆಗಿನ ಅನೇಕ ಗೊಂದಲಗಳಿಗೆ ತೆರೆ ಎಳೆಯಲು ಪ್ರಯತ್ನಿಸಿರುವರು. ಶ್ರೀ ಕುಂಡಂತಾಯ ಅವರು ನಾಗಾರಾಧನೆ ಬಗ್ಗೆ ಬರೆದಿರುವ ಲೇಖನದಲ್ಲಿ ನಾಗಾರಾಧನೆ ವಿಧಾನದ ಮೂಲ ಮತ್ತು ಉದ್ದೇಶಪೂರ್ವಕವಾಗಿ ಇತ್ತೀಚೆಗೆ ಅಳವಡಿಸಿಕೊಂಡ ಚಿಂತನೆಗಳನ್ನು ಬೇರ್ಪಡಿಸಿ ಗಮನಿಸಬೇಕೆಂಬ ಮಹತ್ವದ ಮಾತನ್ನು ಹೇಳುತ್ತಾರೆ. ಇದು ನಿಜ, ಏಕೆಂದರೆ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳ ಪ್ರಭಾವದಿಂದ ಜನಪದ ಕಲೆ ಮತ್ತು ಆಚರಣೆಗಳು ಪ್ರದರ್ಶನ ಕಲೆಯಾಗಿ ರೂಪುಗೊಳ್ಳುತ್ತಿರುವುದರಿಂದ ಬೇರೆ ಬೇರೆ ಸೇರ್ಪಡೆಗಳಾಗಿ ಮೂಲ ಮರೆಯಾಗುತ್ತಿದೆ. ನಾಗಪೂಜೆ ವೈದಿಕೀಕರಣಗೊಂಡಿದ್ದನ್ನು ಸಮರ್ಥವಾಗಿ ಗುರುತಿಸಿದ್ದಾರೆ. ಡಾ. ಪಾಂಡುರಂಗ ಅವರು ತಮ್ಮ ಲೇಖನದಲ್ಲಿ ಭೈರರ ಭಾಷೆಯನ್ನು ಒಂದು ಭಾಗವಾಗಿ ಚರ್ಚಿಸಿದ್ದು ಸೂಕ್ಷ್ಮ ಅಧ್ಯಯನಕ್ಕೆ ಆದ್ಯತೆ ನೀಡಿರುವರು. ತುಳು ಜಾನಪದ ಸಂಗೀತದ ಬಗೆಗೆ ಕಾತ್ಯಾಯಿನಿ ಕುಂಜಿಬೆಟ್ಟು ಬರೆದಿರುವ ಪುಟ್ಟ ಲೇಖನದಲ್ಲಿ ತುಳುನಾಡಿನ ಸಂಗೀತವು ಮೂಲವನ್ನು ಕಳೆದುಕೊಂಡು ಇಂದು ಸಿನಿಮಾ ಸಂಗೀತದ ತುತ್ತೂರಿಯಾಗಿದೆಯೆಂದು ಬೇಸರಿಸಿರುವುದು ನಿಜವಾಗಿದೆ.

ಮೂರನೆಯ ಭಾಗ ಭಾಷೆಯೆಂಬ ಕಡಲು ಭಾಗದಲ್ಲಿ ಡಾ. ಸವದತ್ತಿಮಠರು ನಶಿಸಿ ಹೋಗುತ್ತಿರುವ ಕೊರಚ ಭಾಷೆಯ ಬಗ್ಗೆ ಅಪರೂಪದ ಲೇಖನವನ್ನು ಬರೆದಿರುವರು. ನಶಿಸುತ್ತಿರುವ ಭಾಷೆಗಳ ಬಗ್ಗೆ ಮಾರ್ಮಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ವೈಜ್ಞಾನಿಕ ನೆಲೆಗಟ್ಟಿನಲ್ಲಿ ಕೊರಚ ಭಾಷೆಯನ್ನು ಚರ್ಚಿಸಿರುವರು. ಭಾಷೆಯೊಂದಿಗೆ ಕೊರಚರ ಬದುಕಿನ ಬಗೆಗೂ ಚರ್ಚಿಸಿರುವುದು ಭಾಷೆ ಮತ್ತು ಬದುಕು ಹೇಗೆ ಒಂದಕ್ಕೊಂದು ಪೂರಕವೆನ್ನುವುದನ್ನು ಒತ್ತಿ ಹೇಳುತ್ತದೆ. ಗೌಡ-ಕನ್ನಡದ ಬಗೆಗೆ ಡಾ. ಕುಶಾಲಪ್ಪ ಗೌಡರು ದೊಡ್ಡ ಸಂಶೋಧನೆಯನ್ನೇ ಮಾಡಿರುವರು. ಅದರ ಸಾರವನ್ನು ಗೌಡಕನ್ನಡ/ಅರೆಭಾಷೆ ಎಂಬ ಲೇಖನದಲ್ಲಿ ನೀಡಿರುವರು. ಅನೇಕ ಅಪರೂಪದ ಮಾಹಿತಿಗಳು ಈ ಲೇಖನದಲ್ಲಿವೆ. ಹವ್ಯಕ ನುಡಿಯ ಬಗ್ಗೆ ಡಾ. ಹರಿಕೃಷ್ಣ ಭರಣ್ಯರು ಚರ್ಚಿಸಿದ್ದು ಇವರು ಕೂಡ ಹವ್ಯಕ ನುಡಿಯ ಮಹತ್ವವನ್ನು ಮುಂದಿರಿಸಿದ್ದಾರೆ. ಹವಿಗನ್ನಡವೆಂಬ ಖ್ಯಾತಿ ಪಡೆದ ಹವ್ಯಕ ಭಾಷೆ ಹೇಗೆ ಹಳಗನ್ನಡದ ಜೊತೆ ಸಂಬಂಧ ಹೊಂದಿದೆಯೆಂದು ಬಹಳ ವಿವರವಾಗಿ ಚರ್ಚಿಸಿದ್ದಾರೆ. ಕನ್ನಡಕ್ಕೂ ಹವ್ಯಕಕ್ಕೂ ಇರುವ ವ್ಯಾಕರಣ ವ್ಯತ್ಯಾಸ-ಸಾಮ್ಯತೆಯನ್ನು ಉದಾಹರಣೆಗಳೊಂದಿಗೆ ವಿವರಿಸಿರುವುದು ಭಾಷಾಭ್ಯಾಸಿಗಳಿಗೆ ಅತ್ಯಂತ ಉಪಯುಕ್ತವಾಗಿದೆ. ಡಾ. ಸುಶೀಲಾ

ಉಪಾಧ್ಯಾಯ ಬರೆದಿರುವ ಬ್ಯಾರಿ ಜನಾಂಗ ಮತ್ತು ಸಂಸ್ಕೃತಿ ಲೇಖನವು ಅವರ ಸಂಸ್ಕೃತಿ ಮತ್ತು ಕರಾವಳಿಯೊಂದಿಗಿನ ಸಂಪರ್ಕವನ್ನು ಗುರುತಿಸಲು ಪ್ರಯತ್ನಿಸಿದೆ. ಕಿಟೆಲ್ ನಿಘಂಟುವಿನ ಮಾದರಿಯನ್ನು ಗುರುತಿಸಿರುವ ಡಾ. ತಾಳ್ತಜೆ ಅವರ ಲೇಖನ ಆ ನಿಘಂಟುವಿನ ಮಹತ್ವವನ್ನು ಪರಿಚಯಿಸುತ್ತಿದೆ. ಈ ನಿಘಂಟುವಿನ ವೈಶಿಷ್ಟ್ಯಪೂರ್ಣ ಅಂಶಗಳನ್ನು, ಶಬ್ದ ಸಂಗ್ರಹದ ವಿಧಾನಗಳನ್ನು ಅವು ಹೇಗೆ ಮಾದರಿ ವಿಧಾನ ಗಳಾದವೆಂದು ವಿವರವಾಗಿ ಚರ್ಚಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ನಿಘಂಟುಕಾರರು ಲೇಖನದಲ್ಲಿ ಶ್ರೀ ಸುಧಾಕರ ವಿಶ್ವಾಮಿತ್ರ ಅವರು ವಿಲಿಯಂ ರೀವ್‌ನಿಂದ ಆರಂಭಿಸಿ ಇತ್ತೀಚಿನವರೆಗಿನ ನಿಘಂಟುಕಾರರನ್ನು ಗುರುತಿಸಿದ್ದಾರೆ. ಡಾ. ಮರಿಯಪ್ಪ ಭಟ್ಟ, ಡಾ. ಕೆದಿಲಾಯ ಅವರುಗಳನ್ನು ಕುರಿತ ಲೇಖನಗಳೂ ಮಾಹಿತಿಪೂರ್ಣವಾಗಿವೆ. ಪಾವೆಂ ಅವರ ಪದಾರ್ಥ ಚಿಂತಾಮಣಿಯನ್ನು ಕುರಿತ ಲೇಖನದಲ್ಲಿ ಭಾಷಾ ವ್ಯತ್ಯಾಸದ ಅಂಶಗಳನ್ನು ನವಿರು ಹಾಸ್ಯದಲ್ಲಿ ಹೇಳಲಾಗಿದೆ. ತುಳು ಭಾಷಾ ಮಹಾನಿಘಂಟಿನ ಬಗ್ಗೆ ಗುಲ್ವಾಡಿ ಮತ್ತು ಮಹಾಬಲೇಶ್ವರ ರಾವ್ ಇಬ್ಬರೂ ಲೇಖನ ಬರೆದಿದ್ದು ಡಾ. ಉಪಾಧ್ಯಾಯ ದಂಪತಿಗಳ ೧೯ ವರ್ಷಗಳ ಸಾಹಸಗಾಥೆಯನ್ನು ಸಮರ್ಥವಾಗಿ ಮುಂದಿಟ್ಟಿದೆ. ಸಂಸ್ಕೃತ ಭಾಷೆಗೆ ಕರಾವಳಿ ಕೊಡುಗೆ; ಉಡುಪಿಯ ಗುರುರಾಯರ ಬಗೆಗೆ, ಮುದ್ರಾಮಂಜೂಷದ ಬಗ್ಗೆ, ಕಾರಂತರ ಕಾದಂಬರಿ ಬಗ್ಗೆ, ಸಿರಿ ಸಂಸ್ಕೃತಿಯ ದಾಖಲೀಕರಣ ಮತ್ತು ಸಂಶೋಧನೆಗಳ ಬಗ್ಗೆ ಬರೆದ ಲೇಖನಗಳು ಭಾಗ ನಾಲ್ಕರ ಸಾಹಿತ್ಯ-ಸಂಸ್ಕೃತಿ ಭಾಗದಲ್ಲಿವೆ. ದಾಸಸಾಹಿತ್ಯ ಸಂಗ್ರಹಕಾರ ಗುರುರಾಯರ ಬಗ್ಗೆ ಬರೆದಿರುವ ಡಾ. ಎ.ವಿ. ನಾವಡರು ಅಷ್ಟಕ್ಕೇ ತಮ್ಮ ಲೇಖನವನ್ನು ಸೀಮಿತಗೊಳಿಸದೆ ಆ ನೆಪದಲ್ಲಿ ದಾಸಸಾಹಿತ್ಯದ ಪೂರ್ಣ ಸ್ವರೂಪದ ಕಡೆಯೂ ಚರ್ಚಿಸಿರುವುದು ಆ ಲೇಖನದ ಉಪಯುಕ್ತತೆಯನ್ನು ಹೆಚ್ಚಿಸಿದೆ. ಡಾ. ಕೆ.ಎಸ್. ಉಡುಪ ಅವರ ಮುದ್ರಾಮಂಜೂಷದ ಬಗೆಗಿನ ಲೇಖನ ಹೊಸ ವಿಷಯಗಳಿಂದ ಕೂಡಿದೆ. ಕೆಂಪು ಮತ್ತು ಕವಿಯ ಸ್ಥಳದ ಬಗ್ಗೆ ಸೂಕ್ಷ್ಮವಾಗಿ ಚರ್ಚಿಸಿದ್ದಾರೆ. ಭಾಗ ಐದು ಸೀಮಾತೀತ ಭಾಗದಲ್ಲಿ ಉಪಾಧ್ಯಾಯ ದಂಪತಿಗಳನ್ನು ಕುರಿತು ಅವರ ಮಗಳಾದ ಡಾ. ವೀಣಾ, ಶ್ರೀ ಪೂಜಾರಿ, ಡಾ. ಡಿಸೋಜ, ಡಾ. ಪದ್ಮನಾಭ ಅವರ ಲೇಖನಗಳು ಇಂಗ್ಲೀಶ್‌ನಲ್ಲಿ ಉಪಾಧ್ಯಾಯರ ಬದುಕು-ಸಾಧನೆಗಳನ್ನು ವಿವರಿಸಿವೆ. ಕೊನೆಯ ಭಾಗದಲ್ಲಿ ಡಾ. ಉಪಾಧ್ಯಾಯ ದಂಪತಿಗಳ ಮಹಾಕಾರ್ಯ ತುಳು ನಿಘಂಟುವಿನ ಬಗೆಗಿನ ಅಭಿಪ್ರಾಯ ಗಳನ್ನು ನೀಡಿರುವುದು ಕೊಪ್ಪರಿಗೆಯ ತೂಕವನ್ನು ಹೆಚ್ಚಿಸಿದೆ.

ಒಟ್ಟಾರೆಯಾಗಿ ಕೊಪ್ಪರಿಗೆ ಕೃತಿಯು ಡಾ. ಯು.ಪಿ. ಉಪಾಧ್ಯಾಯ ಮತ್ತು ಡಾ. ಸುಶೀಲಾ ಉಪಾಧ್ಯಾಯರ ಬದುಕು-ಸಾಧನೆಯನ್ನು ವಿವರಿಸುವುದರೊಂದಿಗೆ ತುಳು ಭಾಷೆ, ತುಳು ಸಂಸ್ಕೃತಿ, ತುಳು ವ್ಯಕ್ತಿತ್ವಗಳನ್ನು ಪರಿಚಯಿಸುವುದರೊಂದಿಗೆ ಅನೇಕ ವಿಚಾರಗಳನ್ನು ಪುನರ್‌ಅಧ್ಯಯನಕ್ಕೆ ಒಳಪಡಿಸಬೇಕಾದ ಆಲೋಚನೆಯನ್ನು ಕಟ್ಟಿಕೊಡುವ ಪ್ರಯತ್ನದಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು. ಇದಕ್ಕೆ ಶ್ರಮಿಸಿದ

ಸಂಪಾದಕ ಮಂಡಳಿಯನ್ನು ಶ್ಲಾಘಿಸಬೇಕಾಗಿದೆ. ಪ್ರಕಟಿಸಿದ ಮೊಗಸಾಲೆ ಪ್ರಕಾಶನವನ್ನು ಅಭಿನಂದಿಸಬೇಕಾಗಿದೆ.

ಡಾ. ಡಿ.ವಿ. ಪರಮಶಿವಮೂರ್ತಿ

೨. ಕೇರಳದ ಜನಪದವೀರ ತಚ್ಚೋಳಿ ಒದೇನನ್

ಡಾ. ಕೆ. ಕಮಲಾಕ್ಷ
ಪುಟ ೨೭೪, ಬೆಲೆ ರೂ. ೧೪೦/-
ಪ್ರಥಮ ಮುದ್ರಣ ೨೦೧೩
ವಿಸ್ತರಣೆ ಮತ್ತು ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಉತ್ತರ ಕೇರಳದಲ್ಲಿ ಪ್ರಚಲಿತದಲ್ಲಿರುವ ಜನಪದ ಕಥನ ಗೀತೆಗಳನ್ನು 'ವಡಕ್ಕನ್ ಪಾಟುಗಳು' ಎನ್ನುತ್ತಾರೆ. ಪರಾಕ್ರಮಿಗಳಾದ ವೀರ ಪುರುಷರ ಹಾಗೂ ವೀರ ಮಹಿಳೆಯರ ಕಥಾನಕಗಳನ್ನು ಈ ಹಾಡುಗಳು ನಿರೂಪಿಸುತ್ತವೆ. ಗದ್ದೆ ಬಯಲುಗಳಲ್ಲಿ ದುಡಿಯುವ ರೈತಾಪಿ ಜನರು ಮೌಖಿಕ ಪರಂಪರೆಯಲ್ಲಿ ಇಂತಹ ಜನಪದ ಗೀತೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಬೇಸಾಯದ ಸಂದರ್ಭದಲ್ಲಿ ಜನಪದರು ಈ ಗೀತೆಗಳನ್ನು ಹಾಡುತ್ತಿದ್ದರು. ಹಾಡಿನ ಲಯಕ್ಕನುಸಾರವಾಗಿ ನೇಜಿ ಕೀಳುವ ಮತ್ತು ನೆಡುವ ಕ್ರಿಯೆಗಳ ವೇಗವು ಹೆಚ್ಚಾಗಿ, ದುಡಿಮೆಯ ಶ್ರಮ ಕಡಿಮೆಯಾಗುತ್ತಿತ್ತು.

ವಸ್ತು, ರೂಪ ಮೊದಲಾದ ಘಟಕಗಳ ಆಧಾರದಲ್ಲಿ ವಡಕ್ಕನ್ ಪಾಟುಗಳನ್ನು ವರ್ಗೀಕರಿಸಲಾಗಿದೆ. 'ಕಥಾಗಾನಂ' ಮತ್ತು 'ಕಥಾಗಾನಚಕ್ರಂ' ಮಲೆಯಾಳ ಜನಪದ ಗೀತೆಗಳ ಎರಡು ಮುಖ್ಯ ಪ್ರಭೇದಗಳು. ಕಥಾಗಾನವೆಂದರೆ ನಿರ್ದಿಷ್ಟ ಕಥೆಯಿಂದ ಕೂಡಿದ ಲಾವಣಿಗಳು. ಕಥಾಗಾನ ಚಕ್ರವೆಂದರೆ ಒಬ್ಬ ಕಥಾನಾಯಕನನ್ನು ಕೇಂದ್ರದಲ್ಲಿರಿಸಿಕೊಂಡು, ಕಾಲಾನುಕ್ರಮವಿಲ್ಲದೆ ಅನೇಕ ಘಟನೆಗಳನ್ನು ನಿರೂಪಿಸುವ ಕಥನ ಗೀತೆಗಳಾಗಿವೆ. ತಚ್ಚೋಳಿ ಪಾಟುಗಳು ಇಂತಹ ಕಥಾಗಾನ ಚಕ್ರವಾಗಿದೆ.

ತಚ್ಚೋಳಿ ಒದೇನನ್ ತಚ್ಚೋಳಿ ಪಾಟುಗಳ ಕಥಾನಾಯಕ. ಈತ ಕೇರಳದ ಕಡತ್ತುನಾಡಿನ ಜನಪ್ರಿಯನಾದ ಜನಪದ ವೀರ; ಸಾಂಸ್ಕೃತಿಕ ವೀರಪುರುಷ. ಕೇರಳ ಮತ್ತು ತುಳುನಾಡಿನ ಮಧ್ಯಕಾಲೀನ ಯುಗವು ಜನಪದ ವೀರಪುರುಷರ ಬಗೆಗೆ ವಿಶೇಷ ಒಲವು ತೋರಿದೆ. ಈ ಕಾರಣದಿಂದ ಕೋಟಿ ಚೆನ್ನಯ, ದೇವುಪೂಂಜ, ಆರೋಮಲ್ ಚೇಗವರ್, ತಚ್ಚೋಳಿ ಒದೇನನ್ ಮುಂತಾದ ಜನಪದ ವೀರರು

ಜನಪದರ ಮಧ್ಯೆ ವಿಶೇಷ ಸ್ಥಾನವನ್ನು ಪಡೆದುಕೊಂಡಿದ್ದಾರೆ. ತಚ್ಚೋಳಿ ಪಾಟುಗಳಲ್ಲಿ ಚೆದುರಿ ಹೋಗಿರುವ ತಚ್ಚೋಳಿ ಕಣ್ಮಣಿ ಬಾಲ ಒದೇನನ್ ಕಥೆಯನ್ನು ಕನ್ನಡ ಭಾಷೆಗೆ ರೂಪಾಂತರಿಸುವ ಕೆಲಸವನ್ನು ಡಾ. ಕೆ. ಕಮಲಾಕ್ಷ ಅವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ತಚ್ಚೋಳಿ ಪಾಟುಗಳು ವಿಶಿಷ್ಟ ಲಯಗಾರಿಕೆಯಿಂದ ಕೂಡಿದ ಮಲೆಯಾಳದ ಜನಪ್ರಿಯ ಜನಪದ ಗೀತೆಗಳಾಗಿವೆ. ಒದೇನನ್ ಬದುಕಿನ ವಿಭಿನ್ನ ಘಟನೆಗಳನ್ನು ಬೇರೆ ಬೇರೆ ತಚ್ಚೋಳಿ ಪಾಟುಗಳು ನಿರೂಪಿಸುತ್ತವೆ. ಇಂತಹ ಪಾಟುಗಳನ್ನು ಭಿನ್ನ ಮೂಲಗಳಿಂದ ಸಂಗ್ರಹಿಸಿ, ಅವುಗಳ ಜಾನಪದ ಸೊಗಡು ಸೋರಿ ಹೋಗದಂತೆ ಡಾ.ಕೆ.ಕಮಲಾಕ್ಷ ಅವರು ಕನ್ನಡಕ್ಕೆ ನೀಡಿದ್ದಾರೆ. ಮಲೆಯಾಳದ ಜನಪದ ಹಾಡುಗಳನ್ನು ಅದೇ ರೂಪದಲ್ಲಿ ಕನ್ನಡಕ್ಕೆ ಅನುವಾದಿಸುವುದು ಕಷ್ಟದ ಕಲಸ. ಹೀಗಾಗಿ ಅವರು ಗದ್ಯವನ್ನು ನೆಚ್ಚಿಕೊಂಡಿರುವುದು ಉಚಿತವಾದ ತೀರ್ಮಾನ. ಜನಪದ ಹಾಡುಗಳಲ್ಲಿ ಸಹಜವಾಗಿ ಕಂಡುಬರುವ ಪುನರಾವರ್ತನೆಯನ್ನು ಕೈಬಿಟ್ಟು, ಒಟ್ಟು ಕಥೆಯನ್ನು ಅನುಕ್ರಮವಾಗಿ ಅನೇಕ ಅಧ್ಯಾಯಗಳಾಗಿ ವಿಂಗಡಿಸಿದ್ದಾರೆ. ಅವುಗಳಿಗೆ ಉಚಿತವಾದ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಅನೇಕ ಸಂದರ್ಭಗಳಲ್ಲಿ ಮೂಲ ಜನಪದ ಗೀತೆಯ ವಿಶಿಷ್ಟ ಸಾಲುಗಳನ್ನು ಶಿರೋನಾಮೆಗಳಾಗಿ ಕೊಟ್ಟಿರುವುದು ಅವರ ಸಹೃದಯತೆಗೆ ಸಾಕ್ಷಿಯಾಗಿದೆ.

ಈ ಮಹತ್ವದ ಭಾಷಾಂತರ ಪ್ರಕ್ರಿಯೆಯಲ್ಲಿ ಡಾ.ಕೆ.ಕಮಲಾಕ್ಷ ಅವರು ಕನಿಷ್ಠ ಪ್ರಮಾಣದಲ್ಲಿ ಲೇಖನ ಚಿಹ್ನೆಗಳನ್ನು ಬಳಸಿರುವುದು ಈ ಕೃತಿಯ ಇನ್ನೊಂದು ವೈಶಿಷ್ಟ್ಯವಾಗಿದೆ. ಯಾವುದೇ ಲೇಖನ ಚಿಹ್ನೆಗಳನ್ನು ಬಳಸದಿದ್ದರೂ ಕೃತಿಯ ಓದಿಗೆ ಯಾವುದೇ ತೊಡಕಿಲ್ಲ. ಈ ಮೂಲಕ ಮಲೆಯಾಳದ ಒಂದು ವಿಶಿಷ್ಟ ಲಯಗಾರಿಕೆಯನ್ನು ಅವರು ಕೃತಿಯಲ್ಲಿ ತಂದಿದ್ದಾರೆ. ಅದೇ ರೀತಿಯಲ್ಲಿ ಸಂಬೋಧನೆಯಲ್ಲಿ ಮಲೆಯಾಳದ ನೈಜತೆಯನ್ನು ಉಳಿಸಿಕೊಂಡಿದ್ದಾರೆ. ಮಲೆಯಾಳದ ಸಾಂಸ್ಕೃತಿಕ ಪದಗಳು, ವ್ಯಕ್ತಿನಾಮಗಳು, ಸ್ಥಳನಾಮಗಳು ಕೇರಳದ ಜಾನಪದ ಸೊಗಡನ್ನು ಅನಾವರಣಗೊಳಿಸುವಂತಿವೆ. ಈ ಎಲ್ಲ ಕಾರಣಗಳಿಂದ ಕೇರಳದ ಜನಪದ ವೀರ ತಚ್ಚೋಳಿ ಒದೇನನ್ ಕೃತಿಯು ಕೇವಲ ಭಾಷಾಂತರ ಕೃತಿಯಾಗದೆ, ಒಂದು ಜನಪದ ಕಾದಂಬರಿಯಂತೆ ಓದಿಸಿಕೊಂಡು ಹೋಗುತ್ತದೆ.

ಒದೇನನ್‌ನ ಮಧ್ಯಕಾಲೀನ ಕಡತ್ತುನಾಡು ಅನೇಕ ಅರಸೊತ್ತಿಗೆಗಳ ಸಂಘರ್ಷದ, ಸಣ್ಣಪುಟ್ಟ ಪಾಳೇಗಾರರ ದರ್ಪದ, ಶ್ರೀಮಂತ ಜಮೀನ್ದಾರರ ಪ್ರಾಬಲ್ಯದ ಕಾಲವಾಗಿತ್ತು. ಗೇಣಿ ವಸೂಲಿ, ಗಡಿಕಾಳಗ, ದಂಗೆ ಮುಂತಾದ ಸಂದರ್ಭಗಳಲ್ಲಿ ಅರಸರು, ಪಾಳೇಗಾರರು ಕಳರಿ ವಿದ್ಯೆಯಲ್ಲಿ ನಿಪುಣರಾದ ವೀರರ ಸಹಾಯವನ್ನು ಪಡೆಯುತ್ತಿದ್ದರು. ಇಂತಹ ವೀರರು ಅಂಕದ ಸವಾಲನ್ನು ಸ್ವೀಕರಿಸಿಕೊಂಡು ಪ್ರಭುತ್ವದ ಹಿತಕ್ಕಾಗಿ ಹೋರಾಡುತ್ತಿದ್ದರು. ಒದೇನನ್ ಹೀಗೆ ಅಂಕದ ಸವಾಲನ್ನು ಸ್ವೀಕರಿಸಿ, ಅನೇಕ ಸಾಹಸಗಳನ್ನು ಮೆರೆದ ಗಂಡುಗಲಿ. ಚಿರಕ್ಕಲ್ ಅರಸರು ಜೋನಕರನ್ನು(ಮುಸ್ಲಿಂ

ಪಾಳೇಗಾರರು) ಹತ್ತಿಕ್ಕಲು ಒದೇನನ್‌ನ ಸಹಾಯವನ್ನು ಪಡೆಯುತ್ತಾನೆ. ಕುಟ್ಟಿಪುರದ ಅರಸನಿಗೆ ಮೂರು ವರ್ಷಗಳಿಂದ ಗೇಣಿ ಸಂದಾಯ ಮಾಡದೆ ಇದ್ದ ಕೊಡಗು ಮಲೆಗೊಡೆಯ ಕುಂಞಿಕಣ್ಣನಿಂದ ಗೇಣಿ ವಸೂಲಿ ಮಾಡುತ್ತಾನೆ. ಪೊನ್ಮಲೆ ಕೋಟೆಯ ಕುಂಞಿಕನ್ನಿಯನ್ನು ರಕ್ಷಿಸಲು ಕರಿಮಲೆ ಕುಂಞಿಕೋರನ ಮೋಸದ ಕೊಲೆಗೂ ಹೇಸುವುದಿಲ್ಲ.

ಒದೇನನ್ ದೊಡ್ಡ ದೈವಭಕ್ತ. ಒಳವನ್ನೂರು ಭಗವತಿ ಅವನ ಇಷ್ಟದೈವ. ಯಾವುದೇ ಕೆಲಸಕ್ಕೆ ತೊಡಗುವಾಗಲೂ ಆತ ಒಳವನ್ನೂರು ಭಗವತಿಯನ್ನು ವಂದಿಸುತ್ತಾನೆ. ಒದೇನನ್ ಮತ್ತು ಅವನ ಪತ್ನಿ ಕುಂಞಿಚೀರುವಿನ ಸಂಬಂಧ ಸನ್ನಿವೇಶಗಳು ಅವನ ರಸಿಕತೆಗೆ ನಿದರ್ಶನಗಳಾಗಿವೆ. ಅವನು ಕುಞಿಚೀರುವನ್ನು ಮದುವೆಯಾದ ಪ್ರಸಂಗವು ಹಾಸ್ಯರಸಭರಿತವಾಗಿದ್ದು, ನೆನಪಿನಲ್ಲಿ ಉಳಿಯುತ್ತದೆ. ಹೀಗೆ ಸಾಹಸ, ಸ್ವಾಭಿಮಾನ, ರಸಿಕತೆ ಮೊದಲಾದ ಗುಣಗಳಿರುವಂತೆ ಒದೇನನ್‌ನಲ್ಲಿ ದುಡುಕು ಪ್ರವೃತ್ತಿ, ಮುಂಗೋಪ, ಅತಿಕಾಮುಕತೆ, ಉದ್ಧಟತನ ಮೊದಲಾದ ಋಣಾತ್ಮಕ ಗುಣಗಳನ್ನು ಜನಪದರು ಚಿತ್ರಿಸಿದ್ದಾರೆ. ತನ್ನ ಮೂವತ್ತೆರಡನೆಯ ವಯಸ್ಸಿನಲ್ಲಿ ವೀರಮರಣವನ್ನಪ್ಪುವ ಒದೇನನ್ ಜನಪದರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿದುಕೊಂಡು ಬರಲು ಮನುಷ್ಯ ಸಹಜವಾದ ಈ ಗುಣಗಳು ಕಾರಣವಾಗಿರಬಹುದು.

ಡಾ.ಕೆ.ಕಮಲಾಕ್ಷ ಅವರು ಕನ್ನಡ, ತುಳು, ಮಲೆಯಾಳ ಭಾಷೆಗಳಲ್ಲಿ ಪರಿಣತರು. ಜಾನಪದ ಅಧ್ಯಯನ ಅವರ ಇಷ್ಟವಾದ ಕ್ಷೇತ್ರ. ತಚ್ಚೋಳಿ ಒದೇನನ್ ಕತೆಯನ್ನು ಕನ್ನಡದಲ್ಲಿ ಕಟ್ಟಿಕೊಡುವಾಗ ಅವರು ಓದುಗರಿಗೆ ಉಪಯುಕ್ತ ಪ್ರಸ್ತಾವನೆಯನ್ನು ಒದಗಿಸಿದ್ದಾರೆ. ಕೃತಿಯ ಕೊನೆಯಲ್ಲಿ ಕೊಟ್ಟಿರುವ ಸಾಂಸ್ಕೃತಿಕ ಪದಕೋಶ ಮತ್ತು ಛಾಯಾಚಿತ್ರಗಳು ಐತಿಹಾಸಿಕ ವೀರನ ಓದಿಗೆ ಪೂರಕವಾಗಿವೆ.

ಶ್ರೀಧರ ಎನ್. ಏತಡ್ಕ

೩. ದ್ರಷ್ಟಾರ

(ಉಡುಪುಮೂಲೆ ಗೋಪಾಲಕೃಷ್ಣ ಭಟ್ ಸಪ್ತತಿ ಸಂಭ್ರಮ)

ಪುಟ ೨೨೦, ಬೆಲೆ ರೂ. ೧೦೦/-

ಸಂಪಾದಕರು: ಕೆ. ರಘುರಾಮ ಭಟ್
ನಾ. ಕಾರಂತ ಪೆರಾಜೆ

ಪ್ರಥಮ ಮುದ್ರಣ ೨೦೧೩

ಭೂಮಿಕಾ ಪ್ರತಿಷ್ಠಾನ ಉಡುಪುಮೂಲೆ (ರಿ)

ಗಿರಿನಿವಾಸ, ಎಡನೀರು ಅಂಚೆ

ಕಾಸರಗೋಡು ಜಿಲ್ಲೆ, ಕೇರಳ

'ದ್ರಷ್ಟಾರ' ವೃತ್ತಿಯಿಂದ ಮಂತ್ರವಾದಿಗಳೂ ಪ್ರವೃತ್ತಿಯಿಂದ ಯಕ್ಷಗಾನ ಕಲಾವಿದರೂ ಆಗಿರುವ ಉಡುಪುಮೂಲೆ ಗೋಪಾಲಕೃಷ್ಣ ಭಟ್ಟರ ಅಭಿನಂದನಾ ಗ್ರಂಥ. ಗಡಿನಾಡು ಕಾಸರಗೋಡು ಜಿಲ್ಲೆಯ ಎಡನೀರು ಸಮೀಪ ವಾಸವಿದ್ದು ತಮ್ಮ ಪಾರಂಪರಿಕ ವೃತ್ತಿಯಾದ ಮಂತ್ರವಾದವನ್ನು ಸಮಾಜದ ಒಳಿತಿಗಾಗಿ ಮುಂದುವರಿಸಿಕೊಂಡು ಬಂದಿರುವ ಬಹುಮುಖೀ ವ್ಯಕ್ತಿತ್ವದ ಉಡುಪುಮೂಲೆಯವರು ೭೦ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಅವರ ಬಂಧುವರ್ಗ ಹಾಗೂ ಅಭಿಮಾನಿಗಳು ಗೌರವದಿಂದ ರೂಪಿಸಿರುವ ವಿಶೇಷ ಹೊತ್ತಗೆಯಿದು.

ನಾಲ್ಕು ಅಧ್ಯಾಯಗಳಲ್ಲಿ ಮೂಡಿಬಂದಿರುವ ಈ 'ಸಪ್ತತಿ ಸಂಭ್ರಮ'ದ ಕೃತಿಯನ್ನು ಕೆ. ರಘುರಾಮ ಭಟ್ ಹಾಗೂ ನಾ. ಕಾರಂತ ಪೆರಾಜೆ ಸಂಪಾದಿಸಿದ್ದಾರೆ. ಉಡುಪು ಮೂಲೆಯವರನ್ನು ಹತ್ತಿರದಿಂದ ಬಲ್ಲ ಸುಮಾರು ೬೦ಕ್ಕೂ ಹೆಚ್ಚು ಮಂದಿ ಬಂಧುಗಳು, ಸ್ನೇಹಿತರು, ಕುಟುಂಬ ವರ್ಗ, ಕಲಾವಿದರು ಮತ್ತು ಓರಗೆಯವರು ಇಲ್ಲಿ ಭಟ್ಟರ ವ್ಯಕ್ತಿತ್ವದ ವಿವಿಧ ಮುಖಗಳನ್ನು ತೆರೆದಿಟ್ಟಿದ್ದಾರೆ.

'ದ್ರಷ್ಟಾರ'ದ ಮೊದಲ ಅಧ್ಯಾಯದಲ್ಲಿ ಉಡುಪುಮೂಲೆಯವರೇ ತಮ್ಮ ಸುದೀರ್ಘ ವೃತ್ತಿ ಹಾಗೂ ಪ್ರವೃತ್ತಿ ಬದುಕಿನ ವಿವಿಧ ಮಜಲುಗಳನ್ನು ಮೆಲುಕು ಹಾಕಿಕೊಂಡಿದ್ದಾರೆ. ತಮ್ಮ ಬಾಲ್ಯಜೀವನ ಮತ್ತು ವಿದ್ಯಾಭ್ಯಾಸ, ಮಹಾಮಾಂತ್ರಿಕರೆಂದು ಹೆಸರು ಪಡೆದ ಅಜ್ಜನ ಪ್ರಭಾವ, ತಾವು ಮಂತ್ರವಾದವನ್ನು ಒಂದು ತಪಸ್ಸಾಗಿ ಸ್ವೀಕರಿಸಿದ ಬಗೆಯನ್ನು ಅವರು ನೆನಪಿಸಿಕೊಂಡಿದ್ದಾರೆ. ಜತೆಗೆ ಯಕ್ಷಗಾನದ ಒಡನಾಟ ಬೆಳೆದ ಬಗೆ, ಮಂತ್ರವಾದಿಯ ಸವಾಲುಗಳು, ಸಮಾಜದ ದೃಷ್ಟಿಯಲ್ಲಿ ತಮ್ಮ ಅಸ್ತಿತ್ವ ಇತ್ಯಾದಿಗಳ ಬಗೆಗೂ ಅವರ ಸ್ವಗತ ವಿಸ್ತರಿಸಿಕೊಂಡಿದೆ. ಅವರ ಪಾಂಡಿತ್ಯಕ್ಕೆ ಕನ್ನಡಿ ಹಿಡಿಯುವ ಒಂದೆರಡು ಲೇಖನಗಳು, ಸಂದರ್ಶನ ಕೂಡ ಈ ವಿಭಾಗದಲ್ಲಿವೆ.

ಎರಡನೇ ಅಧ್ಯಾಯದಲ್ಲಿ ಭಟ್ಟರ ಕುಟುಂಬ ವರ್ಗ, ಬಂಧುಬಳಗವು ಅವರ ಹಿರಿಮೆ-ಗರಿಮೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟ ಆತ್ಮೀಯ ವ್ಯಕ್ತಿ ಚಿತ್ರಗಳಿವೆ. ಮೂರನೇ ಅಧ್ಯಾಯದಲ್ಲಿ ವೃತ್ತಿ ಸಂಬಂಧಿ ಬರೆಹಗಳಿದ್ದರೆ, ಕೊನೆಯ ಭಾಗದಲ್ಲಿ ಯಕ್ಷರಂಗದ ವಿವಿಧ ಕಲಾವಿದರು ಉಡುಪುಮೂಲೆಯವರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡಿದ್ದಾರೆ.

'ದ್ರಷ್ಟಾರ' ಎಂದರೆ 'ದೈವಿಕವಾದ ತಿಳುವಳಿಕೆ ಹೊಂದಿದವ, ದಿವ್ಯದೃಷ್ಟಿ ಉಳ್ಳವ, ಕಂಡುಕೊಂಡವ' ಎಂದರ್ಥ. ತಮ್ಮ ಈ ದರ್ಶನವನ್ನು ಭಟ್ಟರು ಸಮಾಜದ ಸ್ವಾಸ್ಥ್ಯಕ್ಕಾಗಿ ಜೀವನಪೂರ್ತಿ ಮುಡಿಪಾಗಿಟ್ಟರು ಎಂಬ ಅಂಶ ಕೃತಿಯುದ್ದಕ್ಕೂ ಎದ್ದು ಕಾಣುತ್ತದೆ. ಕೃತಿಯ ಸಂಪಾದಕರೇ ಹೇಳಿಕೊಂಡಿರುವಂತೆ, ಅಭಿನಂದನ ಕೃತಿಯೊಂದರಲ್ಲಿ ಸಹಜವಾಗಿ ನುಸುಳಬಹುದಾದ 'ಪುನರುಕ್ತಿ' ಗುಣಗಳು ಇದರಲ್ಲೂ ಇವೆಯಾದರೂ ಅವು ಯಾವುವೂ ಭಟ್ಟರ ವ್ಯಕ್ತಿತ್ವದ ವಿವಿಧ ಮುಖಗಳಾದ ನೇರ ನಡೆನುಡಿ, ಕಾಠಿಣ್ಯ

ಬೆರೆತಿರುವ ಸ್ನೇಹಶೀಲತೆ, ಹಾಸ್ಯಪ್ರವೃತ್ತಿ, ಸಮಾಜ ಹಿತಚಿಂತನೆ, ನಾಯಕತ್ವ, ಪಾಂಡಿತ್ಯಗಳನ್ನು ತಿಳಿದುಕೊಳ್ಳುವಲ್ಲಿ ಅಡ್ಡಿಯಾಗುವುದಿಲ್ಲ.

ಮಂತ್ರವಾದ, ಮಾಂತ್ರಿಕ ಇತ್ಯಾದಿ ಪದಗಳು ಜನಸಾಮಾನ್ಯರನ್ನು ಆತಂಕಕ್ಕೆ ಗುರಿಯಾಗಿಸಬಹುದಾದ ಇಂದಿನ ಕಾಲಘಟ್ಟದಲ್ಲಿ ಸ್ವತಃ ಭಟ್ಟರು ಆಡುವ ಮಾತುಗಳು ಆಶಾವಾದದಂತೆ ಕಾಣಬಹುದು: "ಈಚೆಗೆ ಜನರಲ್ಲಿ ವ್ಯಾಪಾರಿ ಮನೋವೃತ್ತಿ, ಅಧ್ಯಯನಗಳ ಕೊರತೆಯಿರುವುದರಿಂದ ಮಂತ್ರವಾದವು ತಾರಕವಾಗದೆ, ಮಾರಕವಾಗಿ ಕಂಡುಬರುತ್ತಿದೆ. ಕಲಿಕೆಯಲ್ಲಿ ತಾಳ್ಮೆ, ಶ್ರದ್ಧೆ, ಯಮ ನಿಯಮಾದಿ ಉಪಾಸನಾ ವಿಧಾನ, ಸದ್ಗುರುವಿನ ಉಪದೇಶ, ಋಷಿ ಪ್ರಣೀತ ಮಂತ್ರ, ಶಾಸ್ತ್ರಗಳ ಅಧ್ಯಯನ ಹಾಗೂ ಅದನ್ನು ಪ್ರಾಯೋಗಿಕವಾಗಿ ಬಳಸುವಲ್ಲಿ ಅದರ ಪ್ರಯೋಜನ ಜನರಿಗೆ ದೊರಕುವಲ್ಲಿ ಬೇಕಾದ ಸಂಶೋಧನೆ ಇವುಗಳೆಲ್ಲವೂ ಇದ್ದರೆ ಮಾತ್ರ ಸಮಾಜಕ್ಕೆ ಪ್ರಯೋಜನ. ಪ್ರಕೃತ ಸಮಾಜದಲ್ಲಿ ಇವುಗಳ ಕೊರತೆಯಿದ್ದು ಈ ವೃತ್ತಿಯನ್ನು ಹೊಂದಿರುವವರು ವಿರುದ್ಧವಾದ ಮಾರ್ಗವನ್ನು ಹಿಡಿದು ಜನರ ಅಪವಾದಕ್ಕೆ ಗುರಿಯಾಗುತ್ತಿದ್ದಾರೆ..... ಕೇವಲ 'ಉದರ ನಿಮಿತ್ತ'ಕ್ಕಾಗಿ 'ಹೇಗೆ ಬೇಕೋ ಹಾಗೆ' ಮಂತ್ರವಾದವನ್ನು ಬಳಸುವುದರಿಂದ ಜನರಲ್ಲಿ ವಿಶ್ವಾಸ ಕುಂಠಿತವಾಗುತ್ತಿದೆ"(ಪು. ೨೭-೨೮).

"ಗುರೂಪದೇಶವಿಲ್ಲದೆ, ಮಂತ್ರವಾದದ ಯಾವ ತಳಹದಿಯೂ ಇಲ್ಲದೆ ಬರಿಯ ಪವಾಡ, ಕಪಟ, ಮರುಳು ಮಾತಿನಿಂದ ಜನರನ್ನು ಮೋಸಗೊಳಿಸುವ, ಹಣ ದೋಚುವವರ ಸಂಖ್ಯೆ ಮಿಗಿಲಾಗಿದೆ. ಇದರಿಂದಾಗಿ ಜನಸಾಮಾನ್ಯರಿಗೆ 'ಮಂತ್ರವಾದ'ದಲ್ಲಿ ವಿಶ್ವಾಸ ಕಮರುತ್ತಿದೆ. ಜನರನ್ನು ನಂಬಿಸುವ ಶೀರ್ಷಿಕೆಗಳಿಂದ ಪತ್ರಿಕೆಗಳಿಗೆ ಜಾಹೀರಾತು ನೀಡಿ, ಮನುಷ್ಯನಿಗೆ ಸ್ವರ್ಗಸುಖದ ಕಲ್ಪನೆಯನ್ನು ಕೊಟ್ಟು, ಬದುಕಿನಲ್ಲಿ ಅಧಃಪತನಕ್ಕೆ ತಳ್ಳುವ-ತುಳಿಯುವ ಜನರು ಇದ್ದಷ್ಟು ಕಾಲ ಮಂತ್ರವಾಗಲಿ, ಮಂತ್ರವಾದವಾಗಲಿ ಏಳಿಗೆಯನ್ನು ಹೊಂದುವುದಿಲ್ಲ. ಯಾವುದೇ ಶಾಸ್ತ್ರವಾದರೂ ಪ್ರತಿಯೊಬ್ಬರ ಆತ್ಮೋದ್ಧಾರಕ್ಕೆ ಮಾರ್ಗದರ್ಶನವಾಗಬೇಕು. ಸಮಾಜಕ್ಕೆ ಒಳಿತನ್ನು ಅನುಗ್ರಹಿಸಬೇಕು" (ಪು. ೨೮) ಎಂಬ ಉಡುಪುಮೂಲೆಯವರ ಮಾತು 'ದ್ರಷ್ಟಾರ'ಕ್ಕೆ ಆಯಾಮವನ್ನು ನೀಡಿದೆ.

ಸಿಬಂತಿ ಪದ್ಮನಾಭ ಕೆ.ವಿ.

೪. ರೂಪಾಂತರ

(ಸಿ.ಎನ್. ರಾಮಚಂದ್ರನ್ ಬದುಕು–ಬರಹ)
ಸಂಪಾದಕರು: ಡಾ. ಬಿ.ಎ. ವಿವೇಕ ರೈ
ಪುಟ ೩೯೨, ಬೆಲೆ ರೂ. ೨೯೫/-
ಪ್ರಥಮ ಮುದ್ರಣ ೨೦೧೩
ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು-೦೪

ಡಾ. ಸಿ.ಎನ್. ರಾಮಚಂದ್ರನ್ ನಮ್ಮ ನಾಡಿನ ಸಾಹಿತ್ಯ ವಿಮರ್ಶಕರಾಗಿ, ಪ್ರಾಧ್ಯಾಪಕರಾಗಿ, ಅನುವಾದಕರಾಗ್ಗಿ ಹೆಸರು ಮಾಡಿದವರು. ಕನ್ನಡ ಅನೇಕ ಕೃತಿಗಳನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿದ್ದಾರೆ. ಮಲೆಯ ಮಾದೇಶ್ವರ, ತೆಂಬರೆ, ಬೇಟೆಯ ನೆನಪು, ಶ್ರೀರಾಮಾಯಣ ಮಹಾನ್ವೇಷಣಂ, ಶಿವರಾತ್ರಿ(ನಾಟಕ) ಹೀಗೆ ಅನೇಕ ಕೃತಿಗಳನ್ನು ಆಂಗ್ಲ ಭಾಷೆಗೆ ನೀಡಿದ್ದಾರೆ. ಹಾಗೆಯೇ ಆಂಗ್ಲ ಭಾಷೆಯಲ್ಲಿಯೂ, ಕನ್ನಡದಲ್ಲಿಯೂ ಅನೇಕ ಕೃತಿಗಳ ಕರ್ತೃಗಳಾಗಿದ್ದಾರೆ ಸಿಎನ್‌ಆರ್ ಅವರು. ಪ್ರಸ್ತುತ ರೂಪಾಂತರ ಸಿಎನ್‌ಆರ್ ಅವರ ಅಭಿನಂದನ ಗ್ರಂಥ. ಸಿಎನ್‌ಆರ್ ಅವರ ಜೊತೆಗಾರರಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ, ತುಳು ಸಾಹಿತ್ಯದ ಮೇರು, ಜಾನಪದ ವಿದ್ವಾಂಸರು ಆದ ಡಾ. ಬಿ.ಎ. ವಿವೇಕ ರೈ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ.

ರೂಪಾಂತರದಲ್ಲಿ ಸಿಎನ್‌ಆರ್ ಅವರು ಕನ್ನಡ ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಬಗ್ಗೆ ಕೆಲ ವಿದ್ವಾಂಸರು ತಮ್ಮ ವಿದ್ವತ್ ಲೇಖನಗಳ ಮೂಲಕ ಹಾಜರಾಗಿದ್ದಾರೆ. ಅದನ್ನು ಮಾತ್ರ ಗಮನಿಸಲಾಗಿದೆ. ಡಾ. ಪುರುಷೋತ್ತಮ ಬಿಳಿಮಲೆ ಅವರು ಸಿಎನ್‌ಆರ್ ಕನ್ನಡ ಜಾನಪದಕ್ಕೆ ನೀಡಿದ ಕೊಡುಗೆಗಳನ್ನು ಅವಲೋಕಿಸಿದ್ದಾರೆ. ಕನ್ನಡ ಜನಪದ ಮಹಾಕಾವ್ಯಗಳ ಕಡೆಗೆ ಮುಖ ಮಾಡಿದ ಡಾ. ಸಿ.ಎನ್. ರಾಮಚಂದ್ರನ್ ಅವರ ಇಪ್ಪತ್ತೈದು ವರ್ಷಗಳಲ್ಲಿ ಮಾಡಿದ ಸಾಧನೆಗಳನ್ನು ಲೇಖಕರು ಪಟ್ಟಿ ಮಾಡಿದ್ದಾರೆ. ಮಲೆ ಮಾದೇಶ್ವರ ಮಹಾಕಾವ್ಯವನ್ನು ಇಂಗ್ಲೀಷ್‌ಗೆ ಅನುವಾದಿಸಿದ್ದು(೨೦೦೧), ವಿಶ್ವದ ಇಪ್ಪತ್ತೈದು ಪ್ರಮುಖ ಮೌಖಿಕ ಕಾವ್ಯಗಳ ಕುರಿತ ಅಧ್ಯಯನಗಳ 'ಮಡಿಯ ಮೇಲೆ ಚದುರಂಗ'(೨೦೦೭)ವನ್ನು ಪ್ರಕಟಿಸಿರುವುದು, 'Strings and Cymbals' ಹೆಸರಿನಲ್ಲಿ ಕನ್ನಡದ ಕೆಲವು ಮೌಖಿಕ ಮಹಾಕಾವ್ಯಗಳ ಆಯ್ದ ಭಾಗವನ್ನು ಪ್ರಕಟಿಸಿರುವುದರ ಮೂಲಕ ನಮ್ಮ ಕನ್ನಡ ಜನಪದ ಮಹಾಕಾವ್ಯಗಳನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದ ಹಿರಿಮೆ ಸಿಎನ್‌ಆರ್ ಅವರದ್ದು ಎಂದು ಹೇಳಿದ್ದಾರೆ ಲೇಖಕರು. "ಡಾ ಸಿ.ಎನ್. ರಾಮಚಂದ್ರನ್ ಅವರು ಮೌಖಿಕ ಮಹಾಕಾವ್ಯಗಳ ಅಧ್ಯಯನಕ್ಕೆ ಬೇಕಾದ ಯೋಗ್ಯ ತಳಹದಿಯೊಂದನ್ನು ನಿರ್ಮಿಸಿಕೊಟ್ಟಿದ್ದಾರೆ. ಅವರ ಪ್ರಯೋಜನ ಪಡೆಯಬೇಕಾದದ್ದು ನಮ್ಮ ಕರ್ತವ್ಯ"(ಪು. ೯೮).

ಮೌಖಿಕ ಮಹಾಕಾವ್ಯಗಳಲ್ಲಿನ ಪ್ರತಿರೋಧದ ಅಂಶಗಳ ಕಡೆಗೆ ಬೆಳಕು ಚೆಲ್ಲಿದ ಸಿಎನ್‌ಆರ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ. "ಒಟ್ಟಿನಲ್ಲಿ, ಶಿಷ್ಟ ಸಾಹಿತ್ಯದ ಮಾನದಂಡಗಳನ್ನು ಮೌಖಿಕ ಸಾಹಿತ್ಯ ಮೀರುತ್ತದೆ; ಶಿಷ್ಟ ಸಾಹಿತ್ಯವು ಪ್ರತಿಷ್ಠಾಪಿಸುವ ವ್ಯವಸ್ಥೆಗಳನ್ನು ಹಾಗೂ ಮೌಲ್ಯಗಳನ್ನು ತಿರಸ್ಕರಿಸುತ್ತಾ, ಮೌಖಿಕ ಸಾಹಿತ್ಯವು ಪರ್ಯಾಯ ವ್ಯವಸ್ಥೆಗಳನ್ನು ಹಾಗೂ ಮೌಲ್ಯಗಳನ್ನು ಗುರುತಿಸುತ್ತದೆ; ವ್ಯಕ್ತಿ-ಕೇಂದ್ರಿತ ಶಿಷ್ಟ ಸಾಹಿತ್ಯಕ್ಕೆ

ಬದಲಾಗಿ ಜಾನಪದ ಸಾಹಿತ್ಯ ಸಮಷ್ಟಿ-ಕೇಂದ್ರಿತವಾಗಿ, ಆಯಾಯ ಸಮುದಾಯಗಳ ಅನುಭವಗಳನ್ನು, ನೆನಪುಗಳನ್ನು, ಆದರ್ಶಗಳನ್ನು ದಾಖಲಿಸುತ್ತದೆ"(ಉದ್ಧೃತ: ಪುರುಷೋತ್ತಮ ಬಿಳಿಮಲೆ, ೨೦೧೩, ಪು. ೯೯). ಮುಂದುವರೆದು ಲೇಖಕರು ಸಿಎನ್‌ಆರ್ ಅವರ ಇನ್ನೊಂದು ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ. "ಜನಪದರ ಬದುಕಿನ ಗತಿಯನ್ನು ನಿಸರ್ಗವೇ ನಿಯಂತ್ರಿಸುವುದರಿಂದ, ಬದಲಾಗುವ ಋತುಮಾನ ಗಳೇ ರೂಪಿಸುವುದರಿಂದ, ನಿಸರ್ಗವಿಲ್ಲದೆ ಅಥವಾ ನಿಸರ್ಗದೊಡನೆ ಸಹಬಾಳ್ವೆ ಸಾಧ್ಯವಿಲ್ಲದೆ ಮಾನವ ಬದುಕೇ ಅಸಾಧ್ಯ ಎಂಬುದನ್ನು ಜಾನಪದ ವಾಙ್ಮಯ ಮತ್ತೆ ಮತ್ತೆ ಮನೋಜ್ಞವಾಗಿ ದಾಖಲಿಸಿದೆ"(ಉದ್ಧೃತ: ಪುರುಷೋತ್ತಮ ಬಿಳಿಮಲೆ, ೨೦೧೩, ಪು. ೯೯). ನಮ್ಮ ನಾಡಿನ ಪ್ರಸಿದ್ಧ ಕಥನಕವನವಾದ ಮದಗದ ಕೆಂಚವ್ವನ ಕುರಿತು ಸಿಎನ್‌ಆರ್ ಅವರ ವಿಶ್ಲೇಷಣೆಯನ್ನು ನಾವು ಗಮನಿಸಬೇಕು. "ಈ ಕವನದ ಹಾಗೂ ಇದೇ ಬಗೆಯ ಬಲಿದಾನದ ಕವನಗಳ ಪ್ರಮುಖ ಗುಣವೆಂದರೆ-ಅವುಗಳು ತಿರುಳಿನ ನೆಲೆಯಲ್ಲಿ ಸ್ತ್ರೀಯ ಬಲಿದಾನವನ್ನು ಒಪ್ಪಿಕೊಳ್ಳುತ್ತವೆ; ಆದರೆ, ನಿರೂಪಣೆಯ ನೆಲೆಯಲ್ಲಿ ವ್ಯಂಗ್ಯ-ವಿಡಂಬನೆಗಳ ಮೂಲಕ ಆ ಬಲಿದಾನದ ಆಶಯವನ್ನು ತಿರಸ್ಕರಿಸುತ್ತವೆ; ಮತ್ತು ಬಲಿಯಾಗುವ ಸ್ತ್ರೀಯ ಬಗ್ಗೆ ಕೇಳುಗರ ಮರುಕವನ್ನು ಗಳಿಸುತ್ತವೆ"(ಉದ್ಧೃತ: ಪುರುಷೋತ್ತಮ ಬಿಳಿಮಲೆ, ೨೦೧೩, ಪು. ೧೦೨).

ಡಾ. ಎಲ್.ಎಸ್. ಶೇಷಗಿರಿರಾವ್ ಅವರು ಸಿಎನ್‌ಆರ್ ಅವರ ಮಲೆ ಮಾದೇಶ್ವರ ಅನುವಾದದ ಬಗ್ಗೆ ವಿಶ್ಲೇಷಿಸುತ್ತಾ "ಎಲ್ಲ ದೇಶಗಳ ಜನತೆಯ ಮೂಲ ಮಾನವ ಸ್ವಭಾವವು ಒಂದೇ ಎಂದು ನಮಗೆ ಮನಗಾಣಿಸುವ ಸಾಧನಗಳಲ್ಲಿ ಒಂದು ಜಾನಪದ. ಸಾಮಾನ್ಯ ಜನತೆಯ ಹೃದಯ ಕಲ್ಪನೆಗಳಿಂದ ರೂಪಿತವಾದ ಈ ಸಾಹಿತ್ಯ ಎಲ್ಲ ದೇಶಗಳಲ್ಲಿ ಕೆಲವು ಸಾಮಾನ್ಯ ಗುಣಗಳನ್ನು ಪಡೆದುಕೊಂಡಿದೆ. ಗಂಡ-ಹೆಂಡತಿ, ತಂದೆ-ತಾಯಿ-ಮಕ್ಕಳು, ಕುಟುಂಬ-ಕುಟುಂಬದ ಸದಸ್ಯರು, ಭೂಮಿ-ಮನುಷ್ಯ, ಸಮುದಾಯ-ವ್ಯಕ್ತಿ, ಮನುಷ್ಯ ಭಗವಂತ, ಸಾವು ಇಂಥ ಬಾಂಧವ್ಯಗಳನ್ನು ಕುರಿತು ಬೇರೆ ಬೇರೆ ನಾಡುಗಳ ಜಾನಪದದಲ್ಲಿ ಅಂತರ್ಗತವಾಗಿರುವ ಮೌಲ್ಯಗಳ ತೌಲನಿಕ ಅಧ್ಯಯನ ಫಲಪ್ರದವಾದದ್ದು"(ಪು. ೨೧೫) ಎಂದು 'ಮಲೆ ಮಾದೇಶ್ವರ'ದಲ್ಲಿನ ಸಂಕಮ್ಮಳ ಆತ್ಮಗೌರವವನ್ನು ಬಿಟ್ಟು ಕೊಡದ ಘಟನೆ ಹಿನ್ನೆಲೆಯಲ್ಲಿ ಹೇಳಿದ್ದಾರೆ.

'ಹೊಸಮಡಿಯ ಮೇಲೆ ಚದುರಂಗ' ಎಂಬ ಡಾ. ಸಿ.ಎನ್. ರಾಮಚಂದ್ರನ್ ಅವರ ಈ ಕೃತಿಗೆ ಡಾ. ಬಿ.ಎ. ವಿವೇಕ ರೈ ಅವರು ಬರೆದ ಮುನ್ನುಡಿಯನ್ನು ಈ ಗ್ರಂಥದಲ್ಲಿ ಸಂಕಲಿಸಿದ್ದಾರೆ. ರೂಪಾಂತರದಲ್ಲಿ ಕನ್ನಡ ಸಾಹಿತ್ಯ, ಜಾನಪದದಲ್ಲಿ ಹೆಸರು ಮಾಡಿದ ವಿದ್ವಾಂಸರು ಡಾ. ಸಿ.ಎನ್. ರಾಮಚಂದ್ರನ್ ಅವರ ಮೌಖಿಕ ಮಹಾಕಾವ್ಯಗಳ ಮೇಲಿನ ಕೃಷಿಯನ್ನು ವಿಶ್ಲೇಷಿಸಿದ್ದಾರೆ, ಅವಲೋಕಿಸಿದ್ದಾರೆ. ನೇರ ನಡೆ-ನುಡಿಯ, ಗಂಭೀರ ಚಿಂತನೆಯ, ದೇಸಿ ಸೊಗಡಿನ ವಿದ್ವಾಂಸರಾದ ಸಿಎನ್‌ಆರ್ ಅವರಿಗೆ

ಕೃತಿಯ ಮೂಲಕ ಅಭಿನಂದನೆ ಸಲ್ಲಿಕೆಯಾಗಿದೆ. ಕೃತಿಯನ್ನು ಸಂಪಾದಿಸಿದ ಜಾನಪದ ತಜ್ಞರಾದ ಡಾ. ಬಿ.ಎ. ವಿವೇಕ ರೈ ಅವರಿಗೆ ವಂದನೆಗಳು.

ನಿಂಗಪ್ಪ ಮಾದಣ್ಣವರ್

೫. ಕುಕ್ಕೆ ಸುಬ್ರಹ್ಮಣ್ಯ

ಲಕ್ಷ್ಮೀ ಮಚ್ಚಿನ
ಪುಟ ೮೦, ಬೆಲೆ ರೂ. ೩೫/-
ಪ್ರಥಮ ಮುದ್ರಣ ೨೦೧೩
ಹೇಮಂತ ಸಾಹಿತ್ಯ, ನಂ. ೯೭೨/ಸಿ, ೪ನೇ ಇ-ಬ್ಲಾಕ್
೧೦ನೇ 'ಎ' ಮುಖ್ಯರಸ್ತೆ, ರಾಜಾಜಿನಗರ
ಬೆಂಗಳೂರು ೫೬೦ ೦೧೦

ಸರ್ಪಗಳನ್ನು ಕುರಿತು ಭಾರತದಲ್ಲಿ ಮಾತ್ರವಲ್ಲ ಆಫ್ರಿಕ, ಯುರೋಪ್, ಕಾಂಬೋಡಿಯಾ, ಗ್ರೀಕ್ ಮೊದಲಾದ ಪ್ರಪಂಚದ ವಿವಿಧ ಸಂಸ್ಕೃತಿಗಳಲ್ಲಿ ಆರಾಧನಾ ಪದ್ಧತಿ ಇದೆ. ಸರ್ಪಗಳ ಆರಾಧನೆಗೆ ಪರಂಪರೆಯ ಇತಿಹಾಸವಿದೆ. ಜನಪದರ ಬದುಕಿನ ಭಾಗವಾಗಿರುವ ಈ ಆರಾಧನಾ ಸಂಪ್ರದಾಯದ ಮೂಲಕ ಜನಪದರು ತಮ್ಮ ದೈಹಿಕ, ಮಾನಸಿಕ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಕೊಂಡಿದ್ದಾರೆ, ಕಾಣುತ್ತಿದ್ದಾರೆ, ಕಾಣಲು ಪ್ರಯತ್ನಿಸುತ್ತಿದ್ದಾರೆ. ನಿರಂತರತೆಯುಳ್ಳ ಪ್ರಕ್ರಿಯಾತ್ಮಕ ಈ ಆಚರಣೆ - ಸಂಪ್ರದಾಯಗಳು ಸರ್ಪಗಳ ಬಗ್ಗೆ ಜನಪದರಲ್ಲಿ ಭಕ್ತಿಯನ್ನು, ಭಯವನ್ನು ಉಂಟುಮಾಡಿದೆ. ಸರ್ಪಗಳ ರೂಪವನ್ನು ಕಲ್ಲಿನಲ್ಲಿ ಕಡೆದು ಪೂಜಿಸುವುದು ಮಾತ್ರವಲ್ಲದೆ ನಿಜದ ಸರ್ಪಗಳ ಬಗ್ಗೆಯೂ ಅಂತಹುದೇ ಭಯಭಕ್ತಿಗಳು ಜನಮಾನಸದಲ್ಲಿವೆ. ಸರ್ಪದ ಜನ್ಮ ಮಾನವ ಜನ್ಮಕ್ಕಿಂತ ಶ್ರೇಷ್ಠ, ದೈವಾಂಶ ಪ್ರಣೀತವೆಂಬ ನಂಬಿಕೆಗಳು ಜನಪದರ ಈ ಆರಾಧನಾ ಪದ್ಧತಿಗೆ ಒತ್ತಾಸೆಯಾಗಿವೆ. ಕರ್ನಾಟಕದಲ್ಲಿ ಸರ್ಪ ಆರಾಧನೆಯನ್ನು ಮಾಡುವ ವಿವಿಧ ಕ್ಷೇತ್ರಗಳಿವೆ. ಅವುಗಳಲ್ಲಿ ಆದಿಸುಬ್ರಹ್ಮಣ್ಯ ವೆಂದು ಪ್ರಸಿದ್ಧವಾಗಿರುವ ದಕ್ಷಿಣ ಕನ್ನಡಕ್ಕೆ ಸೇರಿದ ಕುಕ್ಕೆ ಸುಬ್ರಹ್ಮಣ್ಯ, ಮಧ್ಯಸುಬ್ರಹ್ಮಣ್ಯ ವೆಂದು ಖ್ಯಾತವಾಗಿರುವ ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ, ಅಂತ್ಯ ಸುಬ್ರಹ್ಮಣ್ಯವೆಂದು ಪ್ರಸಿದ್ಧವಾದ ಪಾವಗಡ ತಾಲೂಕಿನ ನಾಗಲಮಡಿಕೆ ಹಾಗೂ ಗೌರಿಬಿದನೂರು ತಾಲೂಕಿನ ವಿದುರಾಶ್ವತ ಮುಖ್ಯವಾದವು. ಈ ಕ್ಷೇತ್ರಗಳಲ್ಲಿ ನಡೆಸಲಾಗುವ ನಾಗ ಪ್ರತಿಷ್ಠಾಪನೆ, ಸರ್ಪಸಂಸ್ಕಾರ, ನಾಗದೋಷ ಪರಿಹಾರ ಮೊದಲಾದ ಆಚರಣೆಗಳು ವರ್ಷಾವರ್ತ ನಿರಂತರವಾಗಿರುವುದರಿಂದ ಭಕ್ತರಿಂದ ಕ್ಷೇತ್ರಗಳು ಕಿಕ್ಕಿರಿದಿರುತ್ತವೆ.

ಸರ್ಪವನ್ನು ಸುಬ್ರಹ್ಮಣ್ಯ ದೈವದ ಪ್ರತಿರೂಪವಾಗಿ ಕಾಣಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಜನಪದರು ಸುಬ್ರಹ್ಮಣ್ಯ ಷಷ್ಠಿ, ನಾಗರಪಂಚಮಿಯನ್ನು ಹಬ್ಬವಾಗಿ ಆಚರಿಸುತ್ತಾರೆ. ಅವುಗಳ ಮೂಲಕ ತಮ್ಮ ವಿವಾಹ, ಸಂತಾನ, ವೈಯಕ್ತಿಕ ಅಭ್ಯುದಯ, ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶ್ರೀ ಕ್ಷೇತ್ರಗಳಲ್ಲಿ ನಾಗ ಪ್ರತಿಷ್ಠಾಪನೆ, ವಿವಾಹ ಮತ್ತು ಸಂತಾನ ಸಮಸ್ಯೆಗಳ ಪರಿಹಾರಕ್ಕಾಗಿ, ಸರ್ಪ ಸಂಸ್ಕಾರ -ಸರ್ಪಹತ್ಯಾ ದೋಷ ಪರಿಹಾರಕ್ಕಾಗಿ, ರಾಹುಕೇತು ಶಾಂತಿಗಾಗಿ ನಾಗದೋಷ ಪರಿಹಾರ ಕಾರ್ಯಗಳು ನಡೆಯುತ್ತವೆ. ಹೀಗೆ ಜನಪದರ ಬದುಕಿನಲ್ಲಿ ನಿರಂತರ ಆಚರಣೆಯ ಭಾಗವಾಗಿ ಬರುವ ಸರ್ಪಗಳ ಬಗ್ಗೆ, ಆರಾಧನಾ ಕ್ಷೇತ್ರಗಳ ಬಗ್ಗೆ ಮಾಹಿತಿ ನೀಡುವ ಪುಸ್ತಕಗಳು ಕನ್ನಡದಲ್ಲಿ ವಿರಳವಾಗಿವೆ. ಲೇಖಕರಾದ ಶ್ರೀ ಲಕ್ಷ್ಮೀ ಮಚ್ಚಿನ ಅವರಿಂದ ರಚಿತವಾಗಿರುವ 'ಕುಕ್ಕೆ ಸುಬ್ರಹ್ಮಣ್ಯ' ಕೃತಿಯು ಅಂತಹ ಕೊರತೆಯನ್ನು ಕೊಂಚಮಟ್ಟಿಗೆ ಕಡಿಮೆಯಾಗಿಸಿದೆ.

ಈ ನಾಡಿನ ಮುಂದೆ ಜನಾಂಗ, ನಾಡು-ನುಡಿ, ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ತಿಳಿದುಕೊಂಡು ನಾಡುಕಟ್ಟುವ ಕಾರ್ಯದಲ್ಲಿ ಕ್ರಿಯಾಶೀಲರಾಗ ಬೇಕೆಂಬ ಗುರಿಯೊಂದಿಗೆ ಹೇಮಂತ ಸಾಹಿತ್ಯ ಪ್ರಕಾಶನವು 'ಲಕ್ಷ್ಮೀ ಮಚ್ಚಿನ' ಅವರ ಮೂಲಕ 'ಕುಕ್ಕೆ ಸುಬ್ರಹ್ಮಣ್ಯ' ಶ್ರೀಕ್ಷೇತ್ರದ ಧಾರ್ಮಿಕ ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ನಾಡಿನ ಜನರಿಗೆ ಪರಿಚಯಿಸಿ ತನ್ನ ಉದ್ದೇಶವನ್ನು ಯಶಸ್ವಿಯಾಗಿ ಪೂರೈಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಯಾಗಿರುವ ಕುಕ್ಕೆ ಸುಬ್ರಹ್ಮಣ್ಯದ ಧಾರ್ಮಿಕ ಶ್ರದ್ಧೆಗಳನ್ನು ಕೃತಿ ಪರಿಚಯಿಸುತ್ತದೆ. ನಾಗಾರಾಧನೆಯ ಹಿನ್ನೆಲೆ, ಸ್ಥಳ ಪುರಾಣ, ಇತಿಹಾಸ, ಧಾರಾತೀರ್ಥ, ಪೌರಾಣಿಕ ನಂಬಿಕೆಗಳು, ಕುಮಾರ ಪರ್ವತ, ಕುಮಾರಧಾರ, ಹೊಸಳಿಗೆಮ್ಮ, ಕುಕ್ಕೆಲಿಂಗ, ನರಸಿಂಹ, ಭೈರವ ದೇವರು, ಮತ್ಸ್ಯತೀರ್ಥ, ಅಗ್ರಹಾರ, ಸೋಮನಾಥ ದೇವಸ್ಥಾನ, ಆದಿ ಸುಬ್ರಹ್ಮಣ್ಯ, ಶೃಂಗೇರಿ ಮಠ ಹೀಗೆ ಶ್ರೀಕ್ಷೇತ್ರವನ್ನು ಕುರಿತು ವಿವಿಧ ಮಾಹಿತಿಗಳ ರಾಶಿಯೇ ಕೃತಿಯಲ್ಲಿ ಅಡಗಿದೆ. ಅಡಕಗೊಂಡಿರುವ ಮಾಹಿತಿಗಳ ಕಾರಣದಿಂದಲೇ ಕೃತಿಯು ಭಕ್ತರಿಗೆ ಧಾರ್ಮಿಕ ಆಚರಣೆಗಳು, ನಂಬಿಕೆಗಳ ಕುರಿತು ಮಾಹಿತಿ, ಚಾರಣಿಗರಿಗೆ, ಪ್ರವಾಸಿಗರಿಗೆ ಕ್ಷೇತ್ರದ ಬಗೆಗಿನ ಭೌಗೋಳಿಕ ವಿವರಗಳನ್ನು, ಮಾಹಿತಿಯನ್ನು ನೀಡುವ ಮಾರ್ಗದರ್ಶಕ ಕೃತಿಯಾಗಿದೆ.

ಕೃತಿಯಲ್ಲಿ ಲೇಖಕರು ಪ್ರಚಲಿತದಲ್ಲಿರುವ ನಂಬಿಕೆಗಳನ್ನು, ಪುರಾಣಗಳನ್ನು ಯಥಾವತ್ತಾಗಿ ದಾಖಲಿಸುತ್ತಾರೆ. ಅಲ್ಲದೆ ಶ್ರೀಕ್ಷೇತ್ರದಲ್ಲಿ ನಡೆಯುವ ವಿವಿಧ ಆರಾಧನೆಗಳ ಕುರಿತು ಸವಿವರ ಮಾಹಿತಿಯನ್ನು ಕಲೆ ಹಾಕಿದ್ದಾರೆ. ಈ ಮಾಹಿತಿಯನ್ನು ಸಂಗ್ರಹಿಸಲು ಲೇಖಕರು ಶ್ರಮವಹಿಸಿರುವುದು ಕೃತಿ ಸ್ಪಷ್ಟಪಡಿಸುತ್ತದೆ. ಅಲ್ಲದೆ ಸ್ಥಳೀಯವಾಗಿರುವ ವಿವಿಧ ಸ್ಥಳಗಳ ಬಗೆಗಿನ ಮಾಹಿತಿಯು ಲೇಖಕರು ನಡೆಸಿರುವ ಶ್ರೀಕ್ಷೇತ್ರದಲ್ಲಿನ ದೀರ್ಘವಾದ ನಡೆದಾಟವನ್ನು ಎದ್ದು ಕಾಣಿಸುತ್ತದೆ. ಕೃತಿಯಲ್ಲಿನ ಸಂಶೋಧನಾ ಪ್ರಧಾನ ಅಧ್ಯಯನ ಮತ್ತು ವ್ಯಾಪಕತೆ ಇಲ್ಲದಿದ್ದರೂ ಲಭ್ಯವಾಗಿರುವ ಮಾಹಿತಿಯನ್ನು ಅಚ್ಚುಕಟ್ಟಾಗಿ ಪ್ರಸ್ತುತಪಡಿಸುತ್ತದೆ.

ಲೇಖಕರು ಕೃತಿಯಲ್ಲಿ ತಾವು ನೀಡುವ ನಂಬಿಕೆ, ಪುರಾಣಗಳ ವಾಸ್ತವತೆಯನ್ನು, ಪ್ರಸ್ತುತತೆಯನ್ನು ಚರ್ಚಿಸುವ ಗೊಡವೆಗೆ ಹೋಗಿಲ್ಲ. ಅಧ್ಯಾಯಗಳಾಗಿ ವಿಷಯವನ್ನು ವರ್ಗೀಕರಿಸುವುದಿಲ್ಲ. ಆದರೂ ಕೃತಿಯ ಉದ್ದೇಶವೇ ನಾಡು-ನುಡಿಯ ಪರಿಚಯ ವಾದ್ದರಿಂದ ಕುಕ್ಕೆ ಸುಬ್ರಹ್ಮಣ್ಯವೆಂಬ ಧಾರ್ಮಿಕ ಪುಣ್ಯಕ್ಷೇತ್ರವನ್ನು ಕುರಿತು ಧಾರ್ಮಿಕ ಶ್ರದ್ಧೆಯಿಂದ ಲೇಖಕರು ಮಾಹಿತಿಯನ್ನು ಸಂಗ್ರಹಿಸಿ ಕೃತಿಯಾಗಿಸಿದ್ದಾರೆ. ಕುಕ್ಕೆ ಸುಬ್ರಹ್ಮಣ್ಯ ಕುರಿತು ಮಾಹಿತಿ ಹುಡುಕುವ ಅಧ್ಯಯನಕಾರರಿಗೆ ಮಾರ್ಗ ತೋರಿಸುವ ಅಧ್ಯಯನ ಯೋಗ್ಯ ಕೃತಿಯಾಗಿ ಕನ್ನಡಿಗರು 'ಕುಕ್ಕೆ ಸುಬ್ರಹ್ಮಣ್ಯ'ವನ್ನು ಸ್ವೀಕರಿಸುವಲ್ಲಿ ಸಂಶಯವಿಲ್ಲ.

ಡಾ. ಹೆಚ್.ಆರ್. ರೇಣುಕ

೬. ಮೈಯೇ ಸೂರು ಮನವೇ ಮಾತು

(ಸಂಸ್ಕೃತಿ, ಸಾಹಿತ್ಯ ಮತ್ತು ಸಂಶೋಧನೆ)

ಬಸವರಾಜ ಕಲ್ಗುಡಿ
ಪುಟ ೩೭೦, ಬೆಲೆ ರೂ. ೨೭೫/-
ಪ್ರಥಮ ಮುದ್ರಣ ೨೦೧೩
ಅಭಿನವ, ವಿಜಯನಗರ,
ಬೆಂಗಳೂರು–೫೬೦ ೦೪೦

ಬಸವರಾಜ ಕಲ್ಗುಡಿಯವರು ಕನ್ನಡ ಸಾಹಿತ್ಯದ ಬಹುಮಹತ್ವದ ವಿಮರ್ಶಕರಲ್ಲಿ ಒಬ್ಬರು. ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡ ಮೌಲಿಕ ಬರಹಗಳನ್ನು 'ಮೈಯೇ ಸೂರು ಮನವೇ ಮಾತು' ಎಂಬ ಹೆಸರಿನ ಪುಸ್ತಕದಲ್ಲಿ ಸಂಕಲಿಸಿದ್ದಾರೆ. ವಸಾಹತೋತ್ತರ ಸಂಸ್ಕೃತಿ ಚಿಂತನೆಯೇ ಈ ಕೃತಿಯ ಬುನಾದಿ. ಸೂಕ್ಷ್ಮ ಗ್ರಹಿಕೆ, ಅಸಾಧಾರಣ ಒಳನೋಟಗಳಲ್ಲಿ ವೈಚಾರಿಕ ತಿಳುವಳಿಕೆ, ವ್ಯಾಖ್ಯಾನ ಸಾಮರ್ಥ್ಯಗಳು ನಿಜಕ್ಕೂ ಬೆರಗುಗೊಳಿಸುತ್ತವೆ. ದೇಸಿ ಸಂಸ್ಕೃತಿನಿಷ್ಠ ಶೋಧಕರಾಗಿದ್ದರೂ ಸಮಾಜದ ವಿದ್ಯಮಾನ ಗಳಲ್ಲಿ ಪ್ರಾಚೀನ ಅರ್ವಾಚೀನಗಳೆಂಬ ಗಡಿರೇಖೆಯನ್ನು ಮೀರಿ ಅದೆಷ್ಟೋ ಗ್ರಂಥಗಳ ಮನನದ ಮೂಲಕ ಕನ್ನಡ ವಿಮರ್ಶಾಲೋಕಕ್ಕೆ ಹೊಸಬೆಳಕನ್ನು ಚೆಲ್ಲಿದ್ದಾರೆ. ಈ ಕಾಲದ ಆತಂಕ ತಲ್ಲಣಗಳು, ಸಾಹಿತ್ಯ ಸಂಶೋಧನೆಗಳ ಕುರಿತ ಹೊಸ ಒಳನೋಟಗಳು ಈ ಕೃತಿಯಲ್ಲಿ ಹರಡಿಕೊಂಡಿವೆ. ಇದು ಕಲ್ಗುಡಿಯವರು ಆಳವಾದ ವ್ಯುತ್ಪತ್ತಿಯನ್ನು ತಿಳಿಸುತ್ತವೆ.

ಮೈಯೇ ಸೂರು ಮನವೇ ಮಾತು ಬೃಹತ್ ಗ್ರಂಥದಲ್ಲಿನ ಎಲ್ಲವನ್ನು, ಎಲ್ಲ ಲೇಖನಗಳನ್ನು ಕುರಿತು ಮಾತನಾಡುವುದಕ್ಕೆ ಹೋಗುವುದಿಲ್ಲ. ಜಾನಪದ ಗ್ರಂಥಗಳ ಬಗೆಗಿನ ವಿಮರ್ಶಾ ಕಾರ್ಯದ ಹಿನ್ನೆಲೆಯಲ್ಲಿ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಲೇಖನಗಳನ್ನು ಇಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ.

'ಇತಿಹಾಸ, ಜಾನಪದ ಶಿಸ್ತುಗಳನ್ನು ಕುರಿತಂತೆ ಸಂಶೋಧನೆ' ಎಂಬ ಲೇಖನದಲ್ಲಿ ಬಸವರಾಜ ಕಲ್ಗುಡಿ ಅವರು ಕರ್ನಾಟಕ ಇತಿಹಾಸ, ಸಂಸ್ಕೃತಿಗೆ ಸಂಬಂಧಪಟ್ಟ ಸಂಶೋಧನೆಗಳನ್ನೂ; ಜನಪದ ಅಧ್ಯಯನಕ್ಕೆ ಸಂಬಂಧಿಸಿದಂಥ ಸಂಶೋಧನ ಸಾಮಗ್ರಿಗಳನ್ನು ಗಮನಿಸಿ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಕರ್ನಾಟಕದಲ್ಲಿ ಬ್ರಿಟಿಷರಿಂದ ಆರಂಭಗೊಂಡ 'ಓರಿಯೆಂಟಲ್' ಶಿಸ್ತಿನ ಅಧ್ಯಯನಗಳು ವಾಸ್ತವ ನೆಲೆಯಿಂದ ರೂಪುಗೊಂಡಿಲ್ಲವೆಂಬುದನ್ನು ನಿಖರವಾಗಿ ಪ್ರತಿಪಾದಿಸುವ ಲೇಖಕರು ದೇವುಡು, ಎಂ.ಎಚ್. ಕೃಷ್ಣ, ಪಿ.ಬಿ. ದೇಸಾಯಿ, ಬೆಟಗೇರಿ ಕೃಷ್ಣಶರ್ಮ, ಶ್ರೀಕಂಠಶಾಸ್ತ್ರಿ, ಕಪಟರಾಳ ಕೃಷ್ಣರಾಯ ಮುಂತಾದ ವಿದ್ವಾಂಸರು ಆ ಶಿಸ್ತನ್ನು ನಿರಾಕರಿಸಿ ಜಾನಪದ, ಜನರ ನಡಾವಳಿ-ನುಡಿವಳಿಯನ್ನು ಆಧರಿಸಿ ವಾಸ್ತವತೆಯನ್ನು ಪ್ರತಿಪಾದಿಸಲು ಯತ್ನಿಸಿದ್ದಾರೆ ಎಂದು ಹೇಳುತ್ತಾರೆ. ಸಿ.ಪಿ.ಕೆ., ಜೀಶಂಪ., ಕಾರಂತ ಹೀಗೆ ಅನೇಕ ವಿದ್ವಾಂಸರು ಹೇಳುವ ಮಾತುಗಳನ್ನು ಆಧಾರವಾಗಿಟ್ಟುಕೊಂಡು ಜಾನಪದದ ಸ್ಥಗಿತತೆ ಬಗ್ಗೆ ಕಲ್ಗುಡಿಯವರು ಮಾತನಾಡುತ್ತಾರೆ. "ದುರಂತದ ವಿಷಯವೆಂದರೆ ಜನಪದ ಶಿಸ್ತಿನ ಹೆಸರಿನಲ್ಲಿ ಇತ್ತೀಚೆಗೆ ಹೇರಳವಾದ ಉತ್ಪಾದನೆಯು ಅಧ್ಯಯನದ ಪ್ರಾಥಮಿಕ ತಾತ್ವಿಕ ನೆಲೆಗಳನ್ನು ಕೂಡ ನಿರಾಕರಿಸಿದೆ. ವಿಶ್ವವಿದ್ಯಾನಿಲಯಗಳಲ್ಲಿ ಇದು ಅಧ್ಯಯನದ ವಿಷಯವಾದಾಗಿನಿಂದ ವಿಶ್ವವಿದ್ಯಾಲಯದ ಬಹುಪಾಲು ಜಾನಪದ ವಿದ್ವಾಂಸರು ಅಧ್ಯಯನದ ಸತ್ವಪೂರ್ಣ ಬೆಳವಣಿಗೆಯ ಕಡೆಗೆ ಯಾವುದೇ ರೀತಿಯ ಗಮನಹರಿಸಿಲ್ಲ" (ಪು. ೩೧೨). ಮುಂದುವರೆದು "ಜಾನಪದ ಅಧ್ಯಯನದ ಸಧ್ಯದ ಸ್ಥಿತಿಯಲ್ಲಂತೂ ಸ್ಥಗಿತಗೊಂಡಿದೆಯೆಂದೇ ವಿಷಾದದಿಂದ ಹೇಳಬೇಕಾಗಿದೆ. ಹೊಸ ಹೊಸ ವೈಜ್ಞಾನಿಕ ನೆಲೆಗಳಿಂದ ಅದನ್ನು ಅಧ್ಯಯನ ಮಾಡುವ ಪ್ರಯತ್ನವೂ ಗಂಭೀರ ರೀತಿಯಲ್ಲಿ ಆರಂಭವಾದರೆ, ಜಾನಪದದ ಬಗೆಗಿನ ತಪ್ಪು ಕಲ್ಪನೆಗಳು, ಕಾಲ್ಪನಿಕ ವಿವರಣೆಗಳು ಮುಂತಾದ ಅನವಶ್ಯಕ ಜೊಳ್ಳಿನ ರಾಶಿಯು ಉದ್ಭವವಾಗುವುದು ತಪ್ಪುತ್ತದೆ. ಇಲ್ಲದೇ ಹೋದರೆ ಇಂಥ ಜೊಳ್ಳ ರಾಶಿಯೇ ದೈತ್ಯವಾಗಿ ಬೆಳೆಯುತ್ತದೆ(ಪು. ೩೧೫). ೧೯೮೭ರಲ್ಲಿ ದಶವಾರ್ಷಿಕ ಸಾಹಿತ್ಯ ಸಮೀಕ್ಷೆಗೆ ಬರೆದ ಲೇಖನದಲ್ಲಿ ಜಾನಪದ ಅಧ್ಯಯನಗಳು ಯಾವು ರೀತಿಯಲ್ಲಿ ಮುನ್ನಡೆಯುತ್ತವೆ. ಅದರ ಒಟ್ಟಾರೆ ಚಲನಶೀಲತೆಯ ಬಗ್ಗೆ ಲೇಖಕರು ಬೆಳಕು ಚೆಲ್ಲಿದ್ದಾರೆ. ಹತ್ತಿರ ಹತ್ತಿರ ಎರಡು ದಶಕಗಳು ಕಳೆದರೂ ಪೂರ್ಣ ಪ್ರಮಾಣದಲ್ಲಿ ಜಾನಪದ ಕ್ಷೇತ್ರಕ್ಕೆ ಕೊಡಬೇಕಾದ, ಸಲ್ಲಬೇಕಾದ ಮನ್ನಣೆ ಸಂದಿಲ್ಲವೆಂದೇ ಹೇಳಬೇಕು.

'ಮಾಸ್ತಿ ಜನಪದ ಗೀತೆಗಳು ಮಾಸ್ತಿ ಆಚರಣೆ ಹಾಗೂ ನಂಬಿಕೆಯನ್ನು ವಿರೋಧಿಸುವ ಆಶಯ ಸೂಚಕಗಳಾಗಿ' ಎಂಬ ಲೇಖನ ೧೯೮೦ರಲ್ಲಿ ಬರೆದದ್ದು. ಸ್ತ್ರೀ ದಹನಕ್ಕೆ ಕಾರಣವಾದ ಪ್ರಾಚೀನ ಭಾರತೀಯ ಸಂಸ್ಕೃತಿಯ ನಡವಳಿಕೆ ಮತ್ತು ನಂಬಿಕೆಗಳನ್ನು ಆ ಕಾಲದಲ್ಲಿಯ ಜನಪದ ಗೀತೆಗಳು ಹೇಗೆ ಪ್ರತಿರೋಧಿಸಿವೆ ಎಂಬುದರ ಹುಡುಕಾಟವನ್ನು ಲೇಖಕರು ಮಾಡಿದ್ದಾರೆ. "ಹೆಣ್ಣಿನ ಅಧೀನತೆ, ಆ ಕಾರಣಕ್ಕಾಗಿ ಗಂಡಿನ

ಹಿಂಬಾಲಕಳಾಗಿ ಅವಳು ಇನ್ನೊಂದು ಲೋಕಕ್ಕೆ ಹೋಗುತ್ತಾಳೆನ್ನುವ ನಂಬಿಕೆಗಳು ಪ್ರಭುತ್ವ ಸಂಸ್ಕೃತಿಯಲ್ಲಿ ಅಂತರ್ಗತಗೊಂಡಿರುವ ಬಗೆ"ಯನ್ನು ಮಹಾಸತಿ ಜನಪದ ಗೀತೆಗಳು ಸಾರುತ್ತವೆ ಎಂಬುದು ಲೇಖಕರ ಅಭಿಪ್ರಾಯ. ಜನಪದರಲ್ಲಿ, ಸಮಾಜದಲ್ಲಿ ಮಹಾಸತಿ ಕಥಾ ಬೆಳವಣಿಗೆಯನ್ನು ಲೇಖಕರು ನಾಲ್ಕು ಪ್ರಮುಖ ಘಟ್ಟಗಳಾಗಿ ವಿಂಗಡಿಸಿ ನೋಡಿದ್ದಾರೆ. ಆ ಮೂಲಕ ಕಥನಗೀತೆಯೊಂದು ಯಾವ ರೀತಿಯಲ್ಲಿ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಗಂಭೀರವಾಗಿ ನಿರೂಪಿಸುತ್ತಾರೆ. ಪ್ರಸ್ತುತ ಸಮಾಜದಲ್ಲಿಯೂ ಲೇಖಕರು ಕಂಡುಕೊಂಡ ಘಟ್ಟಗಳು ಸಹಜವಾಗಿಯೇ ನಡೆಯುತ್ತವೆ ಎಂದು ಅನ್ನಿಸಬಹುದು. ಎರಡು ವಿರೋಧಿ ಭಾವಗಳ ದ್ವಂದ್ವ, ಎರಡು ರೀತಿಯ ಶಕುನಗಳು ಮತ್ತು ಕೊಂಡದ ಸಿದ್ಧತೆ, ಹೆಣ್ಣು ಅದಕ್ಕೆ ಸಿದ್ಧಳಾಗುವ ಸ್ಥಿತಿ ಮತ್ತು ಜನಪದ ಗೀತೆಯಲ್ಲಿ ಕಾಣಿಸಿಕೊಳ್ಳುವ ಭಾವ. ಹೀಗೆ ನಾಲ್ಕು ಘಟ್ಟಗಳಲ್ಲಿಯೂ ಸ್ತ್ರೀಯೇ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಳ್ಳುವುದು. ಪುರುಷ ಇಲ್ಲಿ ಗೌಣನಾಗುತ್ತಾನೆ.

ಒಟ್ಟಾರೆಯಾಗಿ ಒಂದು ಜನಪದ ಗೀತೆಯ ರಾಚನಿಕ ಸ್ವರೂಪ ಮತ್ತು ಅವುಗಳ ಒಳನೋಟಗಳನ್ನು ಲೇಖಕರು ಗಂಭೀರವಾದ ರೀತಿಯಲ್ಲಿ ವಿಮರ್ಶಿಸಿದ್ದಾರೆ. ಟಿ.ಎಸ್. ಸತ್ಯನಾಥ್ ಅವರ 'ಕನ್ನಡ ಜಾನಪದ : ಕೆಲವು ಮುಖಗಳು' ಎಂಬ ಕೃತಿಯ ವಿಮರ್ಶಾ ಲೇಖನವನ್ನು ಬಸವರಾಜ ಕಲ್ಗುಡಿಯವರು ಇಲ್ಲಿ ನೀಡಿದ್ದಾರೆ. ವಿಮರ್ಶಾ ಲೋಕದಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿರುವ ಬಸವರಾಜ ಕಲ್ಗುಡಿ ಅವರು ಎಂದಿನಂತೆ ಗಂಭೀರ ಶೈಲಿಯ ಆಲೋಚನಾ ಕ್ರಮಗಳನ್ನು ಈ ಕೃತಿಯಲ್ಲಿ ನೀಡಿರುವುದು ಗಮನಾರ್ಹ.

ಸುಭಾಷ್ ಪಟ್ಟಾಜೆ

೭. ಅಯನ

(ಡಾ. ತಾಳ್ತಜೆ ವಸಂತಕುಮಾರ ಅಭಿನಂದನ ಸಂಪುಟ)

ಪ್ರಧಾನ ಸಂಪಾದಕರು: ಡಾ. ಕೆ. ಚಿನ್ನಪ್ಪ ಗೌಡ

ಸಂಪಾದಕರು: ಡಾ. ಪಾದೇಕಲ್ಲು ವಿಷ್ಣುಭಟ್ಟ, ಡಾ. ವರದರಾಜ ಚಂದ್ರಗಿರಿ,

ಡಾ. ಬಿ.ಪಿ. ಸಂಪತ್‌ಕುಮಾರ್, ಡಾ. ರಾಜಶ್ರೀ

ಡಾ. ಗೋವಿಂದ ಪ್ರಸಾದ್ ಕಜೆ.

ಪುಟ ೬೨೨, ಬೆಲೆ ರೂ. ೪೦೦/-

ಪ್ರಥಮ ಮುದ್ರಣ ೨೦೧೩

ಡಾ. ತಾಳ್ತಜೆ ವಸಂತಕುಮಾರ ಅಭಿನಂದನ ಸಮಿತಿ

ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ

ಪುತ್ತೂರಿನ ಸ್ವಾಮಿ ವಿವೇಕಾನಂದ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ನಂತರ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ಡಾ. ತಾಳ್ತಜೆ ವಸಂತಕುಮಾರ ಅವರಿಗೆ ಶಿಷ್ಯರೆಲ್ಲರೂ ಸೇರಿ ಅರ್ಪಿಸಿದ ಅಭಿನಂದನ ಗ್ರಂಥ ಅಯನ. ಸುಮಾರು ಆರುನೂರ ಹನ್ನೆರಡು ಪುಟಗಳ ಬೃಹತ್ ಗ್ರಂಥವನ್ನು ಪ್ರೀತಿಯ ಗುರುಗಳಿಗೆ ಗೌರವಯುತವಾಗಿ ಅರ್ಪಿಸಿ ಕೃತಜ್ಞರಾಗಿದ್ದಾರೆ. ನಾಲ್ಕು ವಿಭಾಗಗಳಲ್ಲಿ ಸಮೃದ್ಧ ವಿಚಾರಗಳನ್ನು ಒಳಗೊಂಡ ಕೃತಿಯಲ್ಲಿ ಡಾ. ತಾಳ್ತಜೆ ಅವರು ಕನ್ನಡ ಜಾನಪದಕ್ಕೆ ನೀಡಿದ ಕೊಡುಗೆಗಳನ್ನು ಕೃತಿ, ಲೇಖನ, ಯೋಜನೆಗಳಿಗೆ ಸಂಬಂಧಿಸಿದಂತೆ ಅನೇಕ ವಿದ್ವಾಂಸರು ಅವಲೋಕಿಸಿದ್ದಾರೆ. ಅವುಗಳನ್ನು ಮಾತ್ರ ಮುಂದಿರಿಸಿಕೊಂಡು ನೋಡುವ ಕೆಲಸ ನನ್ನದು.

ಡಾ. ಪುಂಡಿಕ್ಕಾ ಗಣಪಯ್ಯ ಭಟ್ ಅವರು 'ಸಾಂಸ್ಕೃತಿಕ ಸಂಶೋಧನೆಯ ನಡೆ' ಎಂಬ ಲೇಖನದಲ್ಲಿ ತಾಳ್ತಜೆಯವರ ಸಂಶೋಧನೆ ಕುರಿತು ಮಾತನಾಡಿದ್ದಾರೆ. "ದಕ್ಷಿಣ ಕನ್ನಡದ ಕೆಲವು ಜಾನಪದ ಐತಿಹ್ಯಗಳು" ಎಂಬ ಲೇಖನದಲ್ಲಿ ಐತಿಹ್ಯಗಳ ಹಿನ್ನೆಲೆ, ಸ್ವರೂಪ ಮತ್ತು ಆಶಯಗಳನ್ನು ಹಲವು ಉದಾಹರಣೆಗಳ ಮೂಲಕ ಅರ್ಥೈಸುವ ಪ್ರಯತ್ನವಿದೆ. ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ೧೯೮೮-೯೧ರ ಅವಧಿಯಲ್ಲಿ ತಾಳ್ತಜೆಯವರು ಕೈಗೊಂಡಿದ್ದ 'ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು' ಎಂಬ ಸಂಶೋಧನ ಯೋಜನೆಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. ಒಂದು ಪ್ರದೇಶದ ಇತಿಹಾಸ ರಚನೆಗೆ, ಸಾಂಸ್ಕೃತಿಕ ಅಭ್ಯಾಸಕ್ಕೆ ಹಾಗೂ ವಿಶಿಷ್ಟ ಜನಮಾನಸದ ಅಸ್ಮಿತೆಯ ಅರಿವಿಗೆ ಬಹುಮಟ್ಟಿಗೆ ಅಜ್ಞಾತವಾಗಿಯೇ ಉಳಿದಿರುವ ಸ್ಥಳೀಯ ಐತಿಹ್ಯಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಿದೆ ಎಂಬ ವಿಚಾರಕ್ಕೆ ವಿಶೇಷವಾದ ಬೆಳಕನ್ನು ಚೆಲ್ಲುವ ಈ ರೀತಿಯ ಅಧ್ಯಯನ ತಾಳ್ತಜೆಯವರ ಸಾಂಸ್ಕೃತಿಕ ಸಂಶೋಧನೆಯ ದಾರಿಯ ಪ್ರಮುಖ ಹೆಜ್ಜೆಗಳಲ್ಲೊಂದು ಎನ್ನಬಹುದು(ಪು. ೩೮೫-೩೮೬) ಎಂದು ವಿಶ್ಲೇಷಿಸಿದ್ದಾರೆ. 'ದಕ್ಷಿಣ ಕನ್ನಡದ ಊಟದ ಅಡುಗೆ' ಲೇಖನದ ಬಗ್ಗೆಯೂ ಲೇಖಕರು ಉಲ್ಲೇಖಿಸಿದ್ದಾರೆ(ಪು. ೩೮೭).

ಡಾ. ತಾಳ್ತಜೆಯವರ ಮಡದಿ ಮಣಿಮಾಲಿನಿ ಅವರ 'ಬಾಜಿರಕಂಬದ ಒಳಸುತ್ತು, ಕಥಾ ಸಂಕಲನದ ವೈಶಿಷ್ಟ್ಯದ ಬಗೆ ಅಹಲ್ಯಾ ಬಲ್ಲಾಳ್ ಮತ್ತು ದಾಕ್ಷಾಯಿಣಿ ಯಡಹಳ್ಳಿ ಅವಲೋಕಿಸಿದ್ದಾರೆ. ತುಳು ಸಂಸ್ಕೃತಿಯಲ್ಲಿ 'ಬಾಜಿರ ಕಂಬ' ಅತ್ಯಂತ ಮಹತ್ವದ ಮನೆಯೊಳಗಿನ ಒಂದು ಕಂಬ. ಹವ್ಯಕ ಭಾಷೆಯ ಸೊಗಡಿನ ಕೃತಿಯನ್ನು ದೇಶಿ ಶೈಲಿಯಲ್ಲಿಯೇ ಅವಲೋಕಿಸಿದ್ದಾರೆ ಲೇಖಕರು(ಪು. ೪೩೦, ೪೧೨).

ಡಾ. ವೀರಣ್ಣ ದಂಡೆ ಅವರ 'ಕಾವ್ಯ ಮೀಮಾಂಸೆಯ ಮುಖ್ಯವಾಹಿನಿ ಮತ್ತು ಜನಪದ ದೃಷ್ಟಿಕೋನ' ಲೇಖನ ಈ ಅಭಿನಂದನ ಗ್ರಂಥದಲ್ಲಿ ಸೇರಿಕೊಂಡಿದೆ. "ನೈಸರ್ಗಿಕ ಗುಣಗಳು ಕಾಣುವುದು ಮೌಖಿಕ ಪರಂಪರೆಯಲ್ಲಿಯೇ. ಬರಹ ಮೂಲದ

ಶಿಷ್ಟ ಸಾಹಿತ್ಯ ಗ್ರಹಿಕೆಗೆ ಶಿಕ್ಷಣ, ವಯಸ್ಸು ಈ ಸಂಗತಿಗಳು ಬಹುಮುಖ್ಯವಾಗಿ ಕೆಲಸ ಮಾಡುತ್ತದೆ. ಆದರೆ ಮೌಖಿಕ ಸಾಹಿತ್ಯವನ್ನು ಆಲಿಸಿ ಗ್ರಹಿಸಲು, ಜನಪದ ಕಲೆಗಳನ್ನು ನೋಡಿ ಗ್ರಹಿಸಲು ಶಿಕ್ಷಣ ಮತ್ತು ವಯಸ್ಸಿನ ಯಾವ ಕಡ್ಡಾಯವೂ ಬೇಕಿಲ್ಲ (ಪು. ೫೦೨)" ಎಂದು ವಿಶ್ಲೇಷಿಸಿದ್ದಾರೆ ವೀರಣ್ಣ ದಂಡೆ ಅವರು. ಒಂದು ಜನಪದ ಕಲೆ, ಪ್ರದರ್ಶನ ಕಲೆಯನ್ನು ಯಾವುದೇ ಶಾಲೆಯ ಮೆಟ್ಟಿಲು ಹತ್ತದ ಸಾಮಾನ್ಯನೂ ಕೂಡ ನೋಡಿ, ಆಲಿಸಿ ತಿಳಿದುಕೊಳ್ಳಲು ಸಾಧ್ಯ. ಆದರೆ ಶಿಷ್ಟ ಸಾಹಿತ್ಯ ಹಾಗಿಲ್ಲ. ಹಾಗೆಯೇ ಅದೇ ಜನಪದ ಸಾಹಿತ್ಯವೇ ಶಿಷ್ಟ ಸಾಹಿತ್ಯಕ್ಕೆ ಮೂಲ ಎನ್ನುವುದು ವೇದ್ಯವಾಗುತ್ತದೆ. ನಮ್ಮ ಬಹುತೇಕ ಪ್ರಸಿದ್ಧ ಕವಿಗಳಲ್ಲಿ ಜನಪದ ಮೌಖಿಕ ಸಾಹಿತ್ಯದಿಂದ ಪ್ರೇರಣೆ ಪಡೆದು ಶಿಷ್ಟ ಸಾಹಿತ್ಯದಲ್ಲಿ ಕೃಷಿ ಮಾಡಿರುವುದನ್ನು ನಾವು ಗಮನಿಸಬಹುದು.

ಒಟ್ಟಾರೆಯಾಗಿ ಅಯನ ಅಭಿನಂದನ ಗ್ರಂಥವು ತಾಳ್ತಜೆಯವರ ಜಾನಪದ ದೃಷ್ಟಿಯನ್ನು, ಜಾನಪದ ಆಲೋಚನೆಯನ್ನು, ಜಾನಪದ ಕೃತಿಯ ಅವಲೋಕನವನ್ನು ಒಳಗೊಂಡಿದೆ.

ವಸಂತಕುಮಾರ್ ಹಾಡಿಕಲ್ಲು

೮. Urus of Mekkikattu

(A Monograph on the Wooden Images of
Nandikejvara Temple)
S.A. Krishnaiah
Tran: Dr. N. Thirumaleshwara Bhat
Editor: Dr. P.N. Narasimhamurthy
First Published: 2013
Pages: 50 Price: Rs. 150/-
Regional Resources Centre for Folk Performing Arts
M.G.M. College, Udupi-576 102

ಉಡುಪಿಯ 'ಜನಪದ ಪ್ರದರ್ಶನ ಕಲೆಗಳ ಪ್ರಾದೇಶಿಕ ಸಂಪನ್ಮೂಲ ಕೇಂದ್ರ' ಪ್ರಕಟಿಸಿರುವ 'ಉರುಸ್ ಆಫ್ ಮೆಕ್ಕಿಕಟ್ಟು' ಜಾನಪದ ಜ್ಞಾನ ಹಾಗೂ ಕೌಶಲ್ಯಗಳ ದಾಖಲೀಕರಣದ ದೃಷ್ಟಿಯಿಂದ ಒಂದು ಮಹತ್ವದ ಕೃತಿಯಾಗಿದೆ. ಉಡುಪಿ ತಾಲೂಕಿನ ಶಿರಿಯಾರ ಗ್ರಾಮದ ಮೇಕೆಟ್ಟು ಅಥವಾ ಮೆಕ್ಕಿಟ್ಟು ಎಂಬ ಪುಟ್ಟ ಹಳ್ಳಿಯಲ್ಲಿದ್ದು ದೇಶದ ಕಲಾಸಕ್ತರ ಗಮನ ಸೆಳೆದಿರುವ ನಂದಿಕೇಶ್ವರ ದೇವಾಲಯದ ವಿಶಿಷ್ಟ ಕಾಷ್ಠಶಿಲ್ಪಗಳ ಕುರಿತ ವಿಶೇಷ ಸಂಪ್ರಬಂಧವಾಗಿದೆ ಈ ಹೊತ್ತಿಗೆ.

ಎಸ್.ಎ. ಕೃಷ್ಣಯ್ಯ ಅವರ ಮೂಲ ಕನ್ನಡ ಕೃತಿಯನ್ನು ಡಾ. ಎನ್. ತಿರುಮಲೇಶ್ವರ ಭಟ್ ಇಂಗ್ಲಿಷ್‌ಗೆ ಅನುವಾದಿಸಿದ್ದು, ಡಾ. ಪಿ.ಎನ್. ನರಸಿಂಹಮೂರ್ತಿ ಸಂಪಾದಿಸಿದ್ದಾರೆ.

ಯಜ್ಞ ಮಂಗಳೂರು ಅವರ ಛಾಯಾಚಿತ್ರ ಸರಣಿ ಒಟ್ಟಾರೆ ಪುಸ್ತಕಕ್ಕೆ ಕಲಶಪ್ರಾಯವಾಗಿದ್ದು, ದಾಖಲೀಕರಣದ ನಿಟ್ಟಿನಲ್ಲಿ ಹೆಚ್ಚಿನ ಮಹತ್ವ ಪಡೆದಿದೆ.

ಹೊಸದೊಂದು ಕಲಾ ಸಂಪ್ರದಾಯಕ್ಕೆ ಕಾರಣವಾಗಿರುವ ನಂದಿಕೇಶ್ವರ ದೇವಾಲಯದ ಮರದ ಶಿಲ್ಪಗಳ ಬಗ್ಗೆ ಪ್ರಸ್ತುತ ಕೃತಿಯು ಬೆಳಕು ಚೆಲ್ಲುತ್ತ ಅವುಗಳ ಸಮಗ್ರ ವಿವರಗಳನ್ನು ಸಂಕ್ಷೇಪವಾಗಿ ನೀಡುವ ಪ್ರಯತ್ನ ಮಾಡಿದೆ. ನೂರಾರು ವರ್ಷಗಳ ಇತಿಹಾಸವುಳ್ಳ ನಂದಿಕೇಶ್ವರ ದೇವಾಲಯವು ತನ್ನಲ್ಲಿರುವ ವಿಶಿಷ್ಟ ಕಾಷ್ಠ ಶಿಲ್ಪಗಳ ಕಾರಣದಿಂದಲೇ ಈಗ ರಾಷ್ಟ್ರಮಟ್ಟದಲ್ಲಿ ಕಲಾವಿದರ ಹಾಗೂ ಸಹೃದಯರ ಗಮನ ಸೆಳೆದಿದೆ. ಈ ಬಗೆಯ ಮರದ ಶಿಲ್ಪಗಳು ಇನ್ನೂ ಅನೇಕ ದೇಗುಲಗಳಲ್ಲಿ ಕಾಣಸಿಗುತ್ತವಾದರೂ, ಮೆಕ್ಕಿಕಟ್ಟುವಿನ ಪ್ರತಿಮೆಗಳು ತಮ್ಮ ವರ್ಣವೈವಿಧ್ಯ, ನಿಲುವು, ಆಕಾರ, ಪ್ರಕಾರ, ಅವಯವಗಳಲ್ಲಿರುವ ಸ್ಪಷ್ಟತೆ ಹಾಗೂ ಸ್ವಂತಿಕೆಗಳಿಗಿಂತ ಹೊಸದೊಂದು ಕಲಾ ಪ್ರಕಾರವನ್ನು ಹುಟ್ಟುಹಾಕಿವೆ. ಇದಕ್ಕಿರುವ ಜನಪದ ಸಂಬಂಧದಿಂದಾಗಿ ಒಟ್ಟಾರೆ ಕಲೆ ಹೆಚ್ಚಿನ ಅಧ್ಯಯನಕ್ಕೆ ತೆರೆದುಕೊಳ್ಳುತ್ತದೆ.

ನಂದಿಕೇಶ್ವರ ದೇವಾಲಯವನ್ನು 'ಕಾಷ್ಠ ಕಲೆಯ ವಿಸ್ಮಯ'ವೆಂದು ಹೆಸರಿಸುವ ಪುಸ್ತಕವು, ಅದರ ಭೌಗೋಳಿಕ ಪರಿಸರ, ಇತಿಹಾಸ ಮತ್ತು ಅದಕ್ಕೆ ಅಂಟಿಕೊಂಡಿರುವ ಪುರಾಣ ಹಾಗೂ ಜನಪದ ನಂಬಿಕೆಗಳನ್ನು ಪ್ರಸ್ತಾಪಿಸುತ್ತದೆ. ಶಿವನ ವಾಹನ ನಂದಿಯ ಹೆಸರಿನಿಂದ ಗುರುತಿಸಲ್ಪಡುವ ಈ ದೇಗುಲದಲ್ಲಿ ದುರ್ಗೆ ಪ್ರಧಾನ ಅಧಿದೇವತೆ. ಇಲ್ಲಿನ ಎಲ್ಲ ಹಬ್ಬ-ಹರಿದಿನ ಆಚರಣೆಗಳಲ್ಲಿ ಬುಡಕಟ್ಟು ಸಮುದಾಯದವರ ಪಾಲ್ಗೊಳ್ಳುವಿಕೆ ಆದಿಯಿಂದಲೂ ಚಾಲ್ತಿಯಲ್ಲಿರುವ ಸಂಪ್ರದಾಯ. ದೇವಾಲಯದ ಆಡಳಿತ ಬಂಟ ಮನೆತನದ್ದಾದರೂ, ಅವರ ಜತೆಗೆ ಕೈಜೋಡಿಸುವವರಲ್ಲಿ ವಿಶ್ವಕರ್ಮ ಸಮುದಾಯದವರೂ ಇದ್ದು, ಇದೊಂದು ಎಲ್ಲ ವರ್ಗಗಳಿಗೆ ಸೇರಿದ ನೆಲಮೂಲ ಸಂಸ್ಕೃತಿಯ, ನಂಬಿಕೆಯ ಕ್ಷೇತ್ರವಾಗಿ ಗೋಚರಿಸುತ್ತದೆ.

ದೇವಾಲಯದ ಆಚರಣೆಗಳ ಬಗ್ಗೆ ವಿವರಣೆ ನೀಡುತ್ತಾ ಕೃತಿಯು ಮೆಕ್ಕಿಕಟ್ಟುವಿನಲ್ಲಿ ಜನಪದರ ನಡುವೆ ಆಚರಣೆಯಲ್ಲಿರುವ ಮರಿಪೂಜೆ, ಗಿಂಡಸೇವೆ, ನಾಗಮಂಡಲವನ್ನು ಹೋಲುವ ಢಕ್ಕೆ ಬಲಿ, ತೊಟ್ಲ ಸೆಡಿ, ತುಲಾಭಾರ, ಬಸವನ ಕಾಣಿಕೆ ಮೊದಲಾದವುಗಳ ವಿವರಣೆ ನೀಡುತ್ತದೆ. ಅವುಗಳ ಆಚರಣೆಯ ವಿಧಾನ, ಅದಕ್ಕೆ ತಳಕು ಹಾಕಿಕೊಂಡಿರುವ ಸ್ಥಳೀಯ ನಂಬಿಕೆಗಳ ವಿವರಣೆ ನೀಡುತ್ತದೆ.

ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿರುವ ಕಾಷ್ಠಶಿಲ್ಪಗಳು ನಿರ್ದಿಷ್ಟವಾಗಿ ಯಾವಾಗ ಸ್ಥಾಪನೆಯಾದವೆಂದು ಕೃತಿ ತಿಳಿಸುವುದಿಲ್ಲವಾದರೂ ಅವು ೧೯ನೇ ಶತಮಾನದ ಮಧ್ಯಭಾಗದಲ್ಲಿ ನವೀಕರಣಗೊಂಡವೆಂದೂ, ಮುಂದೆ ಶ್ರೇಷ್ಠ ಕಲಾವಿದೆಯಾಗಿಯೂ ಪ್ರಸಿದ್ಧಿ ಪಡೆದ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಆಸಕ್ತಿ ಹಾಗೂ ಮುಂದಾಳುತನ ದಿಂದಾಗಿ ಮತ್ತೊಮ್ಮೆ ೧೯೬೦ರ ದಶಕದಲ್ಲಿ ಪುನರ್‌ನವೀಕರಣಗೊಂಡು ರಾಷ್ಟ್ರದ

ಗಮನ ಸೆಳೆದವೆಂದು ತಿಳಿಸುತ್ತದೆ. ಕಮಲಾದೇವಿಯವರು ಈ ಕಾಷ್ಠಶಿಲ್ಪಗಳ ಅಂತಃಸತ್ವವನ್ನು ಗಮನಿಸಿ ಅವುಗಳಿಗೆ ಸ್ಥಳೀಯ ಗುಡಿಗಾರ ಕಲಾವಿದರ ಸಹಾಯದಿಂದ ಮರುಜೀವ ನೀಡಿ, ಹಳೆಯ ಶಿಲ್ಪಗಳನ್ನು ರಾಷ್ಟ್ರೀಯ ವಸ್ತುಸಂಗ್ರಹಾಲಯಕ್ಕೆ ಒಯ್ದು ಸಂರಕ್ಷಣೆಗೆ ಕಾರಣರಾದರು.

ಕಾಷ್ಠಶಿಲ್ಪಗಳ ವರ್ಣ ಮಿಶ್ರಣ ಹಾಗೂ ಮೆರುಗೆಣ್ಣೆ ಕೌಶಲಗಳ ವಿವರ ನೀಡುತ್ತಾ ಕೃತಿಕಾರರು "ವರ್ಣ ಸಂಯೋಜನೆಯ ಈ ಕಲೆಯು ಆರೋಗ್ಯಕರ ಮನಸ್ಸಿನ ಸಂಕೇತ" ಎಂಬ ಡಾ. ಶಿವರಾಮ ಕಾರಂತರ ಮಾತನ್ನು ಉದ್ಧರಿಸುತ್ತಾರೆ. ಗುಡಿಗಾರ ಸಮುದಾಯಕ್ಕೆ ಸೇರಿದ ಕಲಾವಿದರು ವರ್ಣ ಸಂಯೋಜನೆ ಹಾಗೂ ಮೆರುಗು ನೀಡುವಲ್ಲಿ ಉಪಯೋಗಿಸುವ ಸಾಂಪ್ರದಾಯಿಕ ಜ್ಞಾನದ ವಿವರಣೆ ನೀಡಿದ್ದಾರೆ.

ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿರುವ ಒಟ್ಟು ೧೭೮ 'ಉರು'ಗಳನ್ನು ಪ್ರತ್ಯೇಕವಾಗಿ ಹೆಸರಿಸಿ ಪರಿಚಯಿಸುವ ಕೆಲಸ ಮಾಡಿರುವ ಕೃತಿಯು, ಈ ಶಿಲ್ಪಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆಯೆಂದೂ ತಿಳಿಸುತ್ತದೆ. ಮೆಕ್ಕಿಕಟ್ಟು ಸಂಪ್ರದಾಯದ ಹಿಂದಿನ ಜನಪದ ಜ್ಞಾನ ಹಾಗೂ ಕೌಶಲಗಳ ಕುರಿತು ಹೆಚ್ಚಿನ ಸಂಶೋಧನೆ ನಡೆಸುವ ಆಸಕ್ತರಿಗಂತೂ ಪ್ರಸ್ತುತ ಕೃತಿಯು ಒಂದು ಉತ್ತಮ ಆಕರ.

ಆರತಿ ಪಟ್ರಮೆ

೯. ಬೇಲೂರು ಹಳೇಬೀಡು

ಪ್ರಧಾನ ಸಂಪಾದಕರು: ಶಾ.ಮಂ. ಕೃಷ್ಣರಾಯ
ಲೇಖಕರು: ವೈ. ಗಿರಿಜಾ ದಿನಕರ,
ಪುಟ ೬೪, ಬೆಲೆ ರೂ. ೩೦/-
ಪ್ರಥಮ ಮುದ್ರಣ ೨೦೧೩,
ಹೇಮಂತ ಸಾಹಿತ್ಯ, ಬೆಂಗಳೂರು

ಪ್ರಸ್ತುತ ಕೃತಿಯಲ್ಲಿ ಜಗತ್ಪ್ರಸಿದ್ಧ ಶಿಲ್ಪಕಲಾ ಕ್ಷೇತ್ರವಾದ ಬೇಲೂರು ಮತ್ತು ಹಳೇಬೀಡಿಗೆ ಹೋಗುವ ಮಾರ್ಗ ಪರಿಚಯವಿದೆ. ಇಲ್ಲಿನ ದೇವಾಲಯಗಳ ಹಿನ್ನೆಲೆ, ಇಲ್ಲಿನ ಕಲಾ ವೈಭವವನ್ನು ಇತಿಹಾಸದ ಪುಟಗಳನ್ನು ತಿರುವಿ ಹಾಕುವುದಕ್ಕಿಂತ ಜಾನಪದದ ಹಿನ್ನೆಲೆಯಲ್ಲಿ ಅರ್ಥೈಸಿದರೆ ಸರಳವಾಗಿ ಮನದಟ್ಟಾಗುತ್ತಿತ್ತು.

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಪ್ರಸಿದ್ಧ ರಾಜಮನೆತನಗಳಲ್ಲಿ ಹೊಯ್ಸಳ ವಂಶದ ಮೂಲ ಪುರುಷನ ಕುರಿತು ಜಾನಪದ ದಾಟಿಯಲ್ಲಿ ನೆಲೆಯಲ್ಲಿರುವ ಕತೆಗಳ ಕುರಿತು ಸರಳವಾಗಿ ಮನದಟ್ಟಾಗುವಂತೆ ವಿಶ್ಲೇಷಿಸಿರುವುದು ಶ್ಲಾಘನೀಯ. ಹೊಯ್ಸಳರ ಶಾಸನಗಳಲ್ಲಿ ಸಳನನ್ನು ಕುರಿತು ಉಲ್ಲೇಖವಿರುವ ಜನಪದರ ನೀತಿಕತೆಗಳಂತೆ ವಿವರಿಸಲಾಗಿದೆ.

ಮೂಲಪುರುಷ ಸಳನನ್ನು ಕುರಿತಂತೆ ಸೊಸೆವೂರಿನ ವಾಸಂತಿಕಾದೇವಿಯ ಜಾತ್ರೆಯಲ್ಲಿ ನೆರೆದ ಜನಪದರ ರಕ್ಷಣೆಗಾಗಿ ದಿಟ್ಟತನದಿಂದ ಹೋರಾಡಿದ ಒಬ್ಬ ಜನ ನಾಯಕನನ್ನು ಗುರುತಿಸುವ ಜನಪದ ಕತೆ ಓದುಗರಿಗೆ ಮೈನವಿರೇಳಿಸುವಂತೆ ಮಾಡುತ್ತದೆ. ಹಾಗೆಯೇ ಧಾರ್ಮಿಕವಾಗಿ ವಿಲೀನಗೊಳಿಸುವ ಮೂಲಕ ಈ ರಾಜವಂಶವನ್ನು ಪೌರಾಣಿಕ ನೆಲೆಯಲ್ಲಿ ವಿಸ್ತರಿಸುವಂತಹದ್ದನ್ನು ಹೊಯ್ಸಳರ ಶಾಸನಗಳ ಮೂಲಕ ತಿಳಿಯಬಹುದಾಗಿದೆ ಎಂದು ಸೂಚಿಸಲಾಗಿದೆ.

ಬೇಲೂರು ಪಟ್ಟಣದ ಹಿನ್ನೆಲೆ

ಪ್ರವಾಸಿ ತಾಣವಾದ ಬೇಲೂರು ಪುರಾತನ ಪಟ್ಟಣವೆಂಬುದಕ್ಕೆ ಇಲ್ಲಿನ ಶ್ರೀ ಚನ್ನಕೇಶವ ದೇವಾಲಯವು ಪ್ರವಾಸಿಗರ ಕುತೂಹಲವನ್ನು ಕೆರಳಿಸಿ, ಈ ಕಲಾ ಸಿರಿಯು ಶಿಲ್ಪ ಸಾಮ್ರಾಜ್ಯಕ್ಕೆ ಸುವರ್ಣ ಮುಕುಟವಾಗಿದೆ ನಿಜ. ಆದರೆ ಈ ಶಿಲ್ಪ ಸಾಮ್ರಾಜ್ಯಕ್ಕೆ ಶ್ರಮಿಸಿದ ಕಲಾವಿದರ ಬದುಕು, ಬವಣೆ ಕುರಿತು ಹೇಳಬೇಕಿತ್ತು. ಇತಿಹಾಸ ಪ್ರಸಿದ್ಧ ಬೇಲೂರನ್ನು ಕುರಿತು ಹೇಳುವ ಅನೇಕ ಜನಪದ ದಂತಕತೆಗಳಿರುವುದನ್ನು ಹೇಳಲಾಗಿದೆ. ಸತ್ಯಕ್ಕೆ ಹತ್ತಿರವಾಗಿರುವಂತಹ ಜನಪದರು ಹೇಳುವ ದಂತಕತೆಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಿತ್ತು. ಇತಿಹಾಸ ತಜ್ಞರು, ಬೇಲೂರಿನ ಸ್ಥಳನಾಮ ಕುರಿತು ಪ್ರಸ್ತಾಪಿಸಿರುವ ಐತಿಹ್ಯದಿಂದ ಹೊಯ್ಸಳರ ವಿಷ್ಣುವರ್ಧನನು ಜಾತಿಬೇಧವಿಲ್ಲದಂತೆ ಜನರನ್ನು ಗೌರವಿಸುತ್ತಿದ್ದನು. ಚನ್ನಕೇಶವ ದೇವಾಲಯದಲ್ಲಿ ಹರಿಜನರ ಪ್ರವೇಶ ಅದರಲ್ಲೂ ಜನಪದರ ಪ್ರಮುಖ ಆಚರಣೆಯಾಗಿರುವ ಜಾತ್ರೆಯ ರಥೋತ್ಸವದಂದು ಅವಕಾಶ ಕಲ್ಪಿಸಿರುವುದು ಪ್ರಸ್ತುತ ಪ್ರಜಾಪ್ರಭುತ್ವ ಸಮಾಜಕ್ಕೆ ಮಾದರಿ ಎನಿಸಿದೆ.

ಇಲ್ಲಿನ ಪ್ರಕೃತಿಯ ರಮ್ಯ ತಾಣವಾಗಿರುವ ಯಗಚಿ ನದಿಯ ಬಗೆಗಿನ ಐತಿಹ್ಯವು ಜನಪ್ರಿಯವಾಗಿದೆ. ಬೇಲೂರು ಕೋಟೆಯ ದಕ್ಷಿಣ ಬದಿಗೆ ಇಳಿಜಾರಿನಲ್ಲಿರುವ ವಿಷ್ಣು ಸಮುದ್ರಕ್ಕೆ ಬಿಟ್ಟಿ ಸಮುದ್ರ, ಬಿಚ್ಚಮ್ಮನ ಕೆರೆ, ದೊಡ್ಡಕೆರೆ ಮೊದಲಾದ ಹೆಸರಗಳಿಂದ ಕರೆಯಲ್ಪಡುವುದಕ್ಕೆ ಅನೇಕ ಜಾನಪದ ಕತೆಗಳಿವೆ. ವಿಷ್ಣುವರ್ಧನನ ಮಗಳಿಗೆ ಹಿಡಿದ ಪಿಶಾಚಿ ಬಿಟ್ಟಿದ್ದು, ವಿಷ್ಣುವರ್ಧನನು ಈ ಕೆರೆಯನ್ನು ಕಟ್ಟಿಸಿದ್ದು, ಬಿಟ್ಟರವಳ್ಳಿಯ ಪಟೇಲರ ಸೊಸೆ ಈ ಕೆರೆಗೆ ಬಲಿಯಾದದ್ದು, ಅವಳು ದೇವಿಯಾಗಿ ಜನರಿಗೆ ಆಭರಣಗಳನ್ನು ಬಳಕೆಗೆ ಕೊಡುತ್ತಿದ್ದುದು, ಕುಷ್ಠರೋಗಿಯ ರೋಗ ನಿವಾರಣೆ, ಗರುಡನು ಆಕಾಶದಲ್ಲಿ ಅಮೃತವನ್ನು ಒಯ್ಯುವಾಗ ಅಮೃತದ ಹನಿ ಬಿದ್ದು ಈ ಕೆರೆಯಾದದ್ದು; ಹೀಗೆ ಹಲವಾರು ಕತೆಗಳು ಇದರ ಸುತ್ತ ಹೆಣೆದುಕೊಂಡಿರುವ ಬಗ್ಗೆ ಲೇಖಕರು ತಿಳಿಸುತ್ತಾರೆ. ಇಲ್ಲಿನ ಜನಪದ ಬದುಕಿನ ಸ್ಥಿತಿಗತಿಗಳನ್ನು ಹಾಗೂ ನಂಬಿಕೆ ಸಂಪ್ರದಾಯಗಳನ್ನು ಬಹುಸೂಕ್ಷ್ಮವಾಗಿ ಗುರುತಿಸಲು ಈ ಜಾನಪದ ಕತೆಗಳು ಸಾಕ್ಷಿಯಾಗಿವೆ.

ಹೊಯ್ಸಳರ ಕಾಲದ ದೇವಾಲಯಗಳು

ವಾಸ್ತು ಹಾಗೂ ಶಿಲ್ಪಕಲೆಯಲ್ಲಿ ಅನೇಕ ಹೊಸತುಗಳನ್ನು ಸಾಧಿಸಲು ಹೊಯ್ಸಳರು ನೆರವಾಗಿ ಹೊಯ್ಸಳ ಶೈಲಿ ಎಂದೇ ಹೆಸರಾದ ಇವರಿಗೆ ಆ ಕಾಲದಲ್ಲಿ ಪ್ರಚಲಿತವಿದ್ದ ಚೋಳ, ಪಾಂಡ್ಯ ಮತ್ತು ಕಲ್ಯಾಣ ಚಾಲುಕ್ಯರ ಶೈಲಿಯ ನಿರ್ಮಾಣಗಳು ಸ್ಫೂರ್ತಿಯನ್ನೊದಗಿಸಿದವು. ಉತ್ತಮ ಅಂಶಗಳನ್ನು ಅಳವಡಿಸಿಕೊಂಡು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ನೂತನ ವಾಸ್ತುಶಿಲ್ಪ ಕಲೆಯನ್ನು ಹುಟ್ಟು ಹಾಕಿದ ಶಿಲ್ಪಿಗಳ ಕಲೆಗಾರಿಕೆ ಮತ್ತು ಅರಸರ ಹೆಸರನ್ನು ಅಜರಾಯರವಾಗಿಸಿರುವುದು ಸ್ಮರಣೀಯವಾದುದು.

ಹೊಯ್ಸಳ ಶಿಲ್ಪಕಲೆ ಎಂದಾಕ್ಷಣ ಎಲ್ಲರ ಮನಸ್ಸಿಗೆ ಬೇಲೂರು ಮತ್ತು ಹಳೇಬಿಡು ದೇವಾಲಯಗಳ ವಾಸ್ತು ವಿನ್ಯಾಸ, ತಂತ್ರಜ್ಞಾನ ಮತ್ತು ಯೋಜನೆಗಳನ್ನು ರೂಪಿಸಿರುವುದರ ಹಿಂದಿನ ಉದ್ದೇಶಗಳನ್ನು ಮುಖ್ಯಾಂಶಗಳನ್ನು ತಿಳಿಯಪಡಿಸಬೇಕಾಗಿತ್ತು. ಈ ಕಲೆಯಲ್ಲೇ ಅಡಗಿರುವ ಆ ಕಾಲದ ಶ್ರದ್ಧೆ, ಏಕಾಗ್ರತೆ, ಕರ್ತವ್ಯ, ನಿಷ್ಠೆ, ಸಮಯ ಪರಿಪಾಲನೆ ಸೂಕ್ಷ್ಮತೆಗಳು ಪ್ರಸ್ತುತ ಯುವ ಮನಸ್ಸುಗಳಿಗೆ ಉಜ್ವಲ ಭವಿಷ್ಯ ರೂಪಿಸಲು ಪ್ರೇರಕಾಂಶಗಳಾಗಿ ಹೊರಹೊಮ್ಮುವುದರಲ್ಲಿ ಯಾವುದೇ ಸಂದೇಹವಿರುತ್ತಿರಲಿಲ್ಲ. ಅಲ್ಲದೆ ಹೊಯ್ಸಳರ ಕಾಲದ ದೇವಾಲಯಗಳು ಜನಪದ ಜೀವನದಲ್ಲಿ ನಿತ್ಯ ಸಂಗತಿಗಳಾಗಿ ಅವರನ್ನು ತಿದ್ದುವ ಶಕ್ತಿಗಳೆಂದು ಬಣ್ಣಿಸಿದ್ದಾರೆ. ಅವುಗಳ ನಿರ್ಮಾಣ ಉದಾತ್ತವಾದ ಸಂಸ್ಕೃತಿಯ ಸಾಧನೆಗೆ ಹಿನ್ನೆಲೆಯಾಗಿರುವುದು ಸ್ಮರಣೀಯ.

ಇಲ್ಲಿನ ಶಿಲಾಬಾಲಿಕೆಯರ ಹಲವು ಬಗೆಯ ಹಾವಭಾವವು ನಾಟ್ಯಶಾಸ್ತ್ರ, ಆಧ್ಯಾತ್ಮ, ಯೋಗಶಾಸ್ತ್ರ ಮತ್ತು ವೇದ ತತ್ವಗಳು ಒಳಗೊಂಡಿದೆ. ಇಲ್ಲಿ ಬಳಸಿರುವ ಬಳಪದಕಲ್ಲು ವಿಶೇಷವಾಗಿ ಶಿಲ್ಪಿಯ ಕಲಾವಂತಿಕೆಗೆ ಕಾರಣೀಭೂತವಾಗಿದೆ. ಪ್ರಕೃತಿಯೊಂದಿಗೆ ಅವಿನಾಭವಸಂಬಂಧ ಹೊಂದಿರುವಂಥದ್ದನ್ನು ಪ್ರಾಣಿ, ಪಕ್ಷಿ, ಹೂ, ಮರ, ಗಿಡ, ಬಳ್ಳಿಯ ಶಿಲ್ಪಗಳಲ್ಲಿ ಅಳವಡಿಸಿರುವುದು ಎಲ್ಲರ ಗಮನ ಸೆಳೆಯುವಂಥದ್ದಾಗಿದೆ.

ಸಾಲಭಂಜಿಕೆಯರ ಶಿಲ್ಪಗಳಲ್ಲಿ ಶಿಲ್ಪಿಯು ಎಲ್ಲಾ ಬಗೆಯ ಆಭರಣಗಳನ್ನು ಕೆತ್ತಿರುವುದು ಅಂದಿನ ಜನಪದರ ರೀತಿ ನೀತಿಗಳನ್ನು ಬಿಂಬಿಸಿರುವುದು ಹಾಗೂ ಅಂದಿನ ಜನರ ರಸಿಕತೆಯನ್ನು ಈ ಮೂಲಕ ನಾವು ತಿಳಿಯಬಹುದಾಗಿದೆ. ಜನಪದ ಕಲೆಗಳಾದ ಡೋಲು, ಮದ್ದಳೆ, ಕೊಳಲು, ತಾಳ ಮೊದಲಾದ ವಾದ್ಯಗಳನ್ನು ನುಡಿಸುತ್ತಿರುವ ಮದನಿಕೆಯರ ನರ್ತನದ ಭಂಗಿ ವಿಶೇಷವಾಗಿ ಎಲ್ಲರ ಮನಸ್ಸನ್ನು ಆಕರ್ಷಿಸುತ್ತವೆ. ಇಲ್ಲಿ ಮಹಿಳೆಯರನ್ನು ತುಚ್ಛವಾಗಿ ಕಾಣಲಾಗಿದೆಯೋ ಅಂದರೆ ಪುರುಷನ ಕೈಗೊಂಬೆಗಳಾಗಿಯೋ ಅಥವಾ ಮನರಂಜನೆಯ ಕೈಗೊಂಬೆಗಳಾಗಿ ಬಳಸಿಕೊಳ್ಳಲಾಗಿದೆಯೆಂದೋ ಸೂಕ್ಷ್ಮವಾಗಿ ಅವಲೋಕಿಸಬೇಕಿದೆ. ಇಲ್ಲವೇ ಜನಪ್ರಿಯವಾಗಿ ಅತ್ಯಂತ ಗೌರವಯುತವಾಗಿ ಕಾಣಲಾಗಿದೆಯೋ ಎಂದೂ ಮತ್ತೊಂದು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ.

ಇಲ್ಲಿ ಶಿಲಾಬಾಲಿಕೆಯರನ್ನು ಕುರಿತು ವರ್ಣನೆ ಮಾಡಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಹಲವು ಜನಪದ ಕಲೆಗಳು ಹೊಯ್ಸಳರ ಕಾಲಘಟ್ಟದಿಂದಲೇ ಹಲವು ಜನಪದ ಕಲೆಗಳನ್ನು ಮಹಿಳೆಯರು ಕರಗತ ಮಾಡಿಕೊಂಡಿರುವಂತಹದ್ದನ್ನು ಗುರುತಿಸ ಬಹುದಾಗಿದೆ. ಅದರಲ್ಲಿಯೂ ಹೆಣ್ಣೊಬ್ಬಳ ತನ್ನ ಮನದಿಂಗಿತವನ್ನು ಪ್ರಕೃತಿಯ ಒಡನಾಟವಿರುವ ಜನಪದ ಮಹಿಳೆ ಶುಕಬಾಯಿಗೆ, ಲೀಲಾ ನಿಷಾದಿ ಎನ್ನುವ ಶಿಲ್ಪವು ಅಂದಿನ ಬೇಟೆಯ ಕ್ರಮವನ್ನು ಸಹ ಈ ಶಿಲಾಬಾಲಿಕೆ ರೂಪದಲ್ಲಿ ಕಾಣಬಹುದು. ಹಾಗೆಯೇ ಡಮರುಗದಂಥ ಚರ್ಮ ವಾದ್ಯವನ್ನು ಹಿಡಿದು ನರ್ತಿಸುವ ನರ್ತಕಿ, ಡೋಲು ಬಾರಿಸುವ ಸಖಿಯರು, ಚರ್ಮವಾದ್ಯವನ್ನು ನುಡಿಸುತ್ತಾ ನರ್ತಿಸುವ ಸುಂದರಿ, ಸಖಿಯರು ಕೊಳಲು ಮತ್ತು ಮೃದಂಗಗಳನ್ನು ನುಡಿಸಿ ಗಾನಕ್ಕೆ ತಕ್ಕ ಮಾಧುರ್ಯವನ್ನು ನೀಡುತ್ತಿರುವ ಗಾನಲೋಕ, ರುದ್ರವೀಣೆಯೆಂಬ ವೀಣಾ ಪ್ರಕಾರವನ್ನು ನುಡಿಸುತ್ತಿರುವ ವಾದಕಿ, ನಾಟ್ಯ ಚತುರೆಯು ಜನಪದ ಕಲೆಗಳಲ್ಲೊ ಒಂದಾದ ಬುಡಬುಡಿಕೆ ಬಾರಿಸುತ್ತ ಬರುತ್ತಿರುವ ಶಿಲ್ಪ, ಇಲ್ಲಿ ಜಾತ್ರೆಯ ದಿನ ಹಚ್ಚಿದ ದೀಪವು ಮೈಸೂರಿನವರೆಗೂ ಕಾಣಿಸುವುದೆಂಬ ಪ್ರತೀತಿ ಇರುವುದಾಗಿ ಗುರುತಿಸಲಾಗಿದೆ. ಹಾಗೆಯೇ ಸೌಂದರ್ಯವರ್ಧಕಗಳನ್ನು ಹೆಚ್ಚು ಬಳಸುವಂತಹ ಶಿಲಾಬಾಲಿಕೆಯರೂ ವಿಭಿನ್ನ ಹಾವಭಾವವನ್ನು ಹೊರಸೂಸುತ್ತ ಸರ್ವರನ್ನು ಆಕರ್ಷಿಸುವ ಕೇಂದ್ರ ಬಿಂದುಗಳಾಗಿವೆ. ಆ ಕಾಲದ ಮಹಿಳೆಯರು ಸಮಾಜದಲ್ಲಿ ಅವರು ನಡೆದುಕೊಳ್ಳುವ ರೀತಿ ನೀತಿಗಳು ಹಾಗೂ ದರ್ಪದಿಂದ ಆಳ್ವಿಕೆ ಮಾಡುತ್ತಿರುವ ವರ್ಗ ಮಹಿಳೆಯರನ್ನು ಹೇಗೆ ಕಾಣುತ್ತಿದ್ದರು ಎಂಬುದನ್ನು ಇಲ್ಲಿನ ಶಿಲ್ಪಗಳೇ ನೋಡುಗರಿಗೆ ಪಾಠ ಹೇಳುವಂತಿವೆ. ಒಟ್ಟಾರೆಯಾಗಿ ಶಿಲ್ಪಕಲೆ ನೋಡುಗರಲ್ಲಿ ಬೆರಗನ್ನು, ಭಕ್ತಿ ಭಾವವನ್ನು ಮೂಡಿಸುವ ಒಂದು ಅಪೂರ್ವ ಕೊಡುಗೆಯೆಂದು ಬಣ್ಣಿಸಲಾಗಿದೆ.

ಹೊಯ್ಸಳರ ಪ್ರಸಿದ್ಧ ರಾಜನಾದ ವಿಷ್ಣುವರ್ಧನನ ಕುರಿತು ಐತಿಹಾಸಿಕವಾಗಿ ಗುರುತಿಸಲಾಗಿದೆ. ವಿಷ್ಣುವರ್ಧನನ ಆಡಳಿತ ಹಿರಿಯರ ಆದರ್ಶಪ್ರಾಯದಂತೆ ಆಳ್ವಿಕೆ ಮಾಡಿರುವಂತಹದ್ದು. ಇಂದಿನ ಪ್ರಜಾಪ್ರಭುತ್ವದ ಜನನಾಯಕರಿಗೆ ಮಾದರಿಯಾಗ ಬೇಕಿರುವಂತಹದ್ದನ್ನು ಇಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ. ಆಚಾರ್ಯ ಪರಂಪರೆಯ ಪ್ರಮುಖರಲ್ಲಿ ಒಬ್ಬರಾದ ಶ್ರೀ ರಾಮಾನುಜಾಚಾರ್ಯರ ಮೂಲಕ ಜಗದೋದ್ಧಾರಕ್ಕೆಂದು ದೇವಸ್ಥಾನದಲ್ಲಿ ಜನ ಸಮುದಾಯಗಳಿಗೆ ನೈತಿಕ ಉಪದೇಶಗಳನ್ನು ನೀಡುತ್ತಿರುವುದು ಸ್ಮರಣೀಯವಾಗಿ ಗುರುತಿಸಬಹುದಾಗಿದೆ. ಜನಪದರಲ್ಲಿ ಹಾಸುಹೊಕ್ಕಾಗಿ ನಂಬಿರು ವಂತಹ ಪವಾಡಗಳು ರಾಜರ ಮಕ್ಕಳನ್ನು ದುಷ್ಟಶಕ್ತಿಗಳಿಂದ ಪಾರುಮಾಡಿದಂಥವುಗಳನ್ನು ಕಂಡು ಜನಪದ ಆಚಾರ್ಯರು ದೈವೀ ಪುರುಷರೆಂಬಂತೆ ಕಾಣುತ್ತಿದ್ದರು. ವಿಷ್ಣುವರ್ಧನ ನಂಥ ಪ್ರಸಿದ್ಧರಾಜನು ಜನರ ಮನಸ್ಸನ್ನು ಸೆಳೆದು. ಪ್ರತಿಷ್ಠೆಯ ಸಂಕೇತವಾಗಿ ರಾಜ್ಯ ವಿಸ್ತಾರ ಮಾಡುವಲ್ಲಿ ಸಹಕರಿಸಿದವರು ರಾಜನ ಮೇಲೆ ಗೌರವ ತೋರಿಸುವ

ಜನಪದರೆಂದೇ ಹೇಳಬಹುದಾಗಿದೆ. ಹಿರಿಯರ ಮಾತಿನಂತೆ ರಾಜ ಮತ್ತು ಅವನ ಪರಿವಾರ ಎಲ್ಲಾ ಪ್ರಜೆಗಳಿಗೆ ಮಾದರಿಯಾಗಿರಬೇಕು ಎಂಬ ಆದರ್ಶದ ಗುಣ ಅಂದಿನ ಕಾಲದಲ್ಲಿತ್ತು.

ಶಾಂತಲಾದೇವಿ ಹೊಯ್ಸಳರ ಸಂಸ್ಕೃತಿಯನ್ನು ಪ್ರತಿನಿಧಿಸುವ ಅತ್ಯಂತ ಜನಪ್ರಿಯ ರಾಣಿಯಾಗಿದ್ದಳು ಎನ್ನಬಹುದು. ಶಾಂತಲೆಯು ಆ ಕಾಲಕ್ಕೆ ಸಂಸ್ಕೃತಿಯ ಅನೇಕ ಪ್ರಕಾರಗಳಲ್ಲಿ ಸಾಕಷ್ಟು ಶಿಕ್ಷಣವನ್ನು ಪಡೆದುಕೊಂಡಿದ್ದ ಉದಾರ ಹೃದಯದ ಮಹಿಳೆ ಕೂಡ ಆಗಿದ್ದಾಳೆ. ಇವಳು ತನ್ನ ಗಂಡನಿಗೆ ಜಯ ಸಿದ್ಧಿಸಲಿ ಎಂದು ಮಹಾದೇವನನ್ನು ಪ್ರಾರ್ಥಿಸಿ ಬೆಟ್ಟದ ಮೇಲಿಂದ ಕೆಳಗೆ ಹಾರಿ ಪ್ರಾಣ ಬಿಟ್ಟಿರುವಂತಹ ಜನಪದ ಕತೆಗಳಿದ್ದು, ಅವುಗಳಲ್ಲಿ ಇಂತಹ ಮಹಿಳೆಯರ ಚಿತ್ರಣಗಳನ್ನು ಕಾಣುತ್ತೇವೆ. ಹಾಗೆಯೇ ಮಾತೃವಾತ್ಸಲ್ಯ ಎಂಬಂತೆ ಹೊಯ್ಸಳರ ಸಂಸ್ಕೃತಿಯ ಎಲ್ಲಾ ವಿಶಿಷ್ಟ ಗುಣಗಳನ್ನು ಈಕೆ ಅಂದು ಮಾಡಿರುವುದು ತ್ಯಾಗ, ಬಲಿದಾನಗಳಿಗೆ ಶಾಂತಲೆಯೇ ಒಂದು ಅಮೂಲ್ಯ ನಿದರ್ಶನ ಎಂದು ಹೇಳಬಹುದು.

ಹೊಯ್ಸಳ ರಾಜರ ವಂಶಪಾರಂಪರ್ಯವನ್ನು ಗುರುತಿಸಿ, ಆಯಾ ರಾಜರುಗಳ ಆಡಳಿತ, ರಾಜ್ಯ ವಿಸ್ತಾರ, ತಮ್ಮ ಸಾಂಸ್ಕೃತಿಕ ಕೊಡುಗೆಯ ವೈಶಿಷ್ಟ್ಯಗಳ ಮೇಲೆ ಪ್ರಭಾವ ಬೀರಿರುವಂತಹದ್ದನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಹೊಯ್ಸಳರ ವಿಶಿಷ್ಟ ಸಂಸ್ಕೃತಿ

ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಹೊಯ್ಸಳರ ಸಂಸ್ಕೃತಿಯನ್ನು ಲೇಖಕರು ಇಲ್ಲಿ ಸರಳವಾಗಿ ಎಲ್ಲರ ಮನಮುಟ್ಟುವ ಹಾಗೆ ಬಿಂಬಿಸಿದ್ದಾರೆ. ನೆರೆ ರಾಜ್ಯಗಳೊಂದಿಗೆ ಸಾಂಸ್ಕೃತಿಕ ಸಂಪರ್ಕವನ್ನು ಸೃಷ್ಟಿಸಿರುವುದು, ಈ ವಂಶದಲ್ಲಿ ಆಳ್ವಿಕೆ ಮಾಡಿದ ಪ್ರಮುಖ ಅರಸರುಗಳು ಸಾಂಸ್ಕೃತಿಕ ವಲಯದ ನಾಯಕರಾಗಿರುವುದು ಓದುಗರಿಗೆ ಹಾಗೂ ಸಾಮಾನ್ಯ ವರ್ಗದವರಿಗೂ ಮಾದರಿಯಾಗಿ ಪ್ರತಿನಿಧಿಸುತ್ತಾರೆ. ಹೊಯ್ಸಳ ಕಾಲದಲ್ಲಿ ಸ್ತ್ರೀಯರು ಸಾಂಸ್ಕೃತಿಕ ಮೌಲ್ಯವನ್ನು ಎತ್ತಿಹಿಡಿಯುವ ಶಕ್ತಿಗಳಾಗಿದ್ದರು. ರಾಜಮನೆತನದ ಸ್ತ್ರೀಯರು ಎಲ್ಲಾ ವಿಷಯಗಳಲ್ಲಿ ಇತರರಿಗೆ ಮಾದರಿಯಾಗಿ ನಿಲ್ಲುತ್ತಿರುವ ವಿಷಯ ಶ್ಲಾಘನೀಯವಾದುದು. ಇವರ ಧೈರ್ಯ, ತ್ಯಾಗ ಮನೋಭಾವನೆ, ತಾಳ್ಮೆ, ಬಲಿದಾನದ ಭಾವನೆ ಮೊದಲಾದ ಮಾನವೀಯ ಮೌಲ್ಯಗಳನ್ನು ಬಿಂಬಿಸುವುದು ಹೊಯ್ಸಳರ ಸಂಸ್ಕೃತಿಯ ವೈಶಿಷ್ಟ್ಯವೆಂದೇ ಹೇಳಬೇಕು. ಉನ್ನತ ವರ್ಗದ ಮಹಿಳೆಯರು ತಾವು ಗೃಹಕೃತ್ಯಗಳಿಗೆ ಮಾತ್ರ ಸೀಮಿತವಾಗಿದ್ದೇವೆಂದು ಭಾವಿಸಿರಲಿಲ್ಲ. ಕೆಲವರು ದುಷ್ಟರನ್ನು ಶಿಕ್ಷಿಸುವ ಕಾರ್ಯದಲ್ಲಿ ಸಾಕ್ಷಾತ್ ದುರ್ಗಿಯ ಅವತಾರವಾಗಿ ಮಹಿಳೆಯರು ವಹಿಸಿದ ಪಾತ್ರ ಹಿರಿದಾದುದಾಗಿದೆ.

ಹೊಯ್ಸಳರ ಕಾಲದಲ್ಲಿ ದೇವಾಲಯಗಳು ಜನಪದರ ಜೀವನದಲ್ಲಿ ನಿತ್ಯ ಸಂಗಾತಿ ಗಳಾಗಿ ಅವರನ್ನು ತಿದ್ದುವ ಶಕ್ತಿಗಳಾಗಿದ್ದವು. ದೇವಾಲಯಗಳನ್ನು ನಿರ್ಮಿಸುವುದು

ಕೂಡ ಉದಾತ್ತ ಸಂಸ್ಕೃತಿಯ ಸಂಕೇತವಾಗಿತ್ತು. ಹಾಗೆಯೇ ಧಾರ್ಮಿಕ ರಂಗದಲ್ಲಿ ಸಮನ್ವಯದ ಭಾವನೆ ಕಂಗೊಳಿಸುತ್ತಿತ್ತು. ಹೀಗೆ ಹೊಯ್ಸಳರ ಕಾಲದ ಸಂಸ್ಕೃತಿ ಶ್ರೀಮಂತ ಹಾಗೂ ವೈವಿಧ್ಯಮಯವಾಗಿರುವುದನ್ನು ಲೇಖಕರು ಸೋದಾಹರಣವಾಗಿ ತಿಳಿಯಪಡಿಸಲು ಪ್ರಯತ್ನಿಸಿದ್ದಾರೆ.

ಹೊಯ್ಸಳರ ಕಾಲದ ಆಡಳಿತ: ಹೊಯ್ಸಳ ಕಾಲದ ಅರಸರು ಧರ್ಮಶಾಸ್ತ್ರಕ್ಕೆ ಅನುಸಾರವಾಗಿ ನಿಷ್ಠೆಯಿಂದ ರಾಜ್ಯಭಾರ ಮಾಡುತ್ತಾ ಜನಪದರ ಯೋಗಕ್ಷೇಮಕ್ಕೆ ಹೆಚ್ಚಿನ ಗಮನ ನೀಡುತ್ತಿದ್ದರು. ಹಾಗೆಯೇ ವ್ಯವಸಾಯವನ್ನು ಪ್ರೋತ್ಸಾಹಿಸುತ್ತಿದ್ದುದು, ವ್ಯಾಪಾರ ಮತ್ತು ವಿದ್ಯಾಭ್ಯಾಸಕ್ಕೂ ಉತ್ತೇಜನ ನೀಡಿ, ಸೈನಿಕರಿಗೆ ಸ್ಫೂರ್ತಿಯನ್ನು ನೀಡಿ ಶಾಂತಿ ನೆಮ್ಮದಿ ಕಾಪಾಡಲು ಕಾರಣಕರ್ತರಾಗಿದ್ದರು ಎಂದು ತಿಳಿಸಿರುವುದು ಪ್ರೇರಕಾರವಾಗಿ ಕಂಡಬರುವುದು ಒಟ್ಟಾರೆ ಈ ಕಾಲದಲ್ಲಿ ಜನಪದರು ನೆಮ್ಮದಿಯ ಬದುಕನ್ನು ಕಂಡಿದ್ದರು.

ಹೊಯ್ಸಳರ ಕಾಲದಲ್ಲಿ ಸತಿಪದ್ಧತಿ, ದೇವದಾಸಿ ಪದ್ಧತಿ, ಗರುಡ ಪದ್ಧತಿಗಳು ಆಚರಣೆಗಳು ವಿಶಿಷ್ಟವಾಗಿದ್ದವು. ಗರುಡ ಪದ್ಧತಿಯು ಸ್ವಾಮಿನಿಷ್ಠೆಯ ರಾಜ್ಯಕ್ಕಾಗಿ ತನ್ನನ್ನು ತಾನು ಬಲಿದಾನ ಕೊಟ್ಟುಕೊಳ್ಳುವ ಒಂದು ಸಂಪ್ರದಾಯವಾಗಿದೆ. ಹೀಗೆ ಸಾಂಸ್ಕೃತಿಕ ಬದುಕಿನಲ್ಲಿ ವಿಶಿಷ್ಟವಾದ ಮೌಲ್ಯಗಳಿಗೋಸ್ಕರ ಹಲವು ವರ್ಗಗ ಸ್ತ್ರೀ ಪುರುಷರು ತಮ್ಮ ಬದುಕನ್ನೇ ಮೀಸಲಿರಿಸಿದ್ದರು.

ಜಗದ್ವಿಖ್ಯಾತ ಬೇಲೂರು ಹಳೇಬೀಡು ನೋಡಲು ಬರುವ ಪ್ರವಾಸಿಗರನ್ನು ಇಲ್ಲಿಯ ಇತರೆ ಪ್ರಮುಖ ಪ್ರೇಕ್ಷಣೀಯ ಸ್ಥಳಗಳೂ ಸಹ ಕಣ್ಮನ ಸೆಳೆಯುವಂಥದ್ದನ್ನು ಲೇಖಕರು ಗುರುತಿಸಿದ್ದಾರೆ. ಇಲ್ಲಿ ವಿಶೇವಾಗಿ ಕಂಡುಬರುವಂಥ ಹಬ್ಬ ಜಾತ್ರೆಗಳು, ನಂಬಿಕೆ, ಸಂಪ್ರದಾಯಗಳು, ವಿಶಿಷ್ಟ ಆಚರಣೆಗಳನ್ನೊಳಗೊಂಡಂತಿರುವ ಪ್ರಮುಖ ಸ್ಥಳಗಳ ಪರಿಚಯವನ್ನು ಸಹ ಈ ಪುಸ್ತಕದಲ್ಲಿ ಲೇಖಕರು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ್ದಾರೆ.

ನಿರಂಜನಮೂರ್ತಿ ಟಿ.

೧೦. ವಿಜಯನಗರ ಸಾಮ್ರಾಜ್ಯ

ಪ್ರಧಾನ ಸಂಪಾದಕರು: ಶಾ.ಮಂ. ಕೃಷ್ಣರಾಯ
ಲೇಖಕರು: ಡಾ. ಕೂ.ಸ. ಅಪರ್ಣಾ
ಪುಟ ೬೪, ಬೆಲೆ ರೂ. ೩೦/-
ಪ್ರಥಮ ಮುದ್ರಣ ೨೦೧೩
ಹೇಮಂತ ಸಾಹಿತ್ಯ, ಬೆಂಗಳೂರು

ಡಾ. ಕೂ.ಸ. ಅಪರ್ಣಾ ಅವರು ಬರೆದ ವಿಜಯನಗರ ಸಾಮ್ರಾಜ್ಯ ಕಿರುಪುಸ್ತಕ ನಮ್ಮ ಹೆಮ್ಮೆಯ ವಿಜಯನಗರ ಸಾಮ್ರಾಜ್ಯವನ್ನು ಪರಿಚಯಿಸುತ್ತದೆ. ಪ್ರಕಾಶಕರ

ಸುವರ್ಣ ಮಹೋತ್ಸವ ಮಕ್ಕಳ ಮಾಲೆಯಡಿಯಲ್ಲಿ ಪ್ರಕಟವಾದ ಕೃತಿ ಮಕ್ಕಳಿಗೆ ವಿಜಯನಗರ ಸಾಮ್ರಾಜ್ಯದ ಪ್ರಾಥಮಿಕ ಮಾಹಿತಿಗಳನ್ನು ನೀಡುತ್ತದೆ. ಕಾಲನ-ಮುಂದೆ ನರಮಾನವರ ಯಾವ ಸಾಧನೆಗಳೆಲ್ಲವೂ ಮಂಡಿಯೂರುತ್ತವೆ. ಏರಿಳಿತಗಳೆಲ್ಲವೂ ಒಂದೇ ರೀತಿಯಲ್ಲಿ ಇರಲು ಕಷ್ಟಸಾಧ್ಯ. ಕಾಲಕಾಲಕ್ಕೆ ಬೆಳವಣಿಗೆ, ಅವನತಿ, ಸಂಕಷ್ಟ ಹೀಗೆ ಎಲ್ಲವೂ ಮಿಳಿತಗೊಂಡಿರುತ್ತವೆ. ಇದಕ್ಕೆ ಉತ್ತಮ ಉದಾಹರಣೆ ನಮ್ಮ ದೇಶದಲ್ಲಿದ್ದ ನೂರಾರು ರಾಜ್ಯಗಳು, ಸಾಮ್ರಾಜ್ಯಗಳು, ಚಕ್ರವರ್ತಿಗಳು, ರಾಜರುಗಳು ಮತ್ತು ಸಾಮಂತರು. ದಕ್ಷಿಣ ಭಾರತದಲ್ಲೇಕೆ ಇಡೀ ಭಾರತೀಯ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ಅತ್ಯಂತ ಹೆಮ್ಮೆಯ ವಿಷಯ. ಜಗತ್ತಿನ ಅತ್ಯಂತ ವೈಭವೋಪೇತ, ಐತಿಹಾಸಿಕ ಸಾಮ್ರಾಜ್ಯಗಳಲ್ಲಿ ವಿಜಯನಗರ ಸಾಮ್ರಾಜ್ಯವೂ ಒಂದೆಂದು ಇತಿಹಾಸಕಾರರ ಅಭಿಪ್ರಾಯ. ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾದ ಹಂಪಿಯಲ್ಲಿ ಸಾಮ್ರಾಜ್ಯದ ಹುಟ್ಟಿಗಿಂತ ಮೊದಲೇ ವಿರೂಪಾಕ್ಷ ದೇವಾಲಯ ಇತ್ತು. ಅದು ಆ ಕಾಲದ ಪವಿತ್ರ ಕ್ಷೇತ್ರವಾಗಿತ್ತು. 'ಹಂಪಾತೀರ್ಥ', 'ವಿರೂಪಾಕ್ಷ ತೀರ್ಥ' ಎಂದು ತೀರ್ಥಕ್ಷೇತ್ರವಾಗಿ ಅಂದಿನ ಜನಪದರ ಪ್ರೇಕ್ಷಣೀಯ ಸ್ಥಳವಾಗಿತ್ತು. ವಿಜಯನಗರ ಅರಸರ ನಂತರ ಹಂಪಿ ಕ್ಷೇತ್ರ ಅತ್ಯಂತ ವೇಗವಾಗಿ ಬೆಳವಣಿಗೆ ಹೊಂದಿತು.

ಲೇಖಕರು ಚಾರಿತ್ರಿಕ ಅಂಶಗಳಿಂದಲೇ ಸಾಮ್ರಾಜ್ಯವನ್ನು ಪರಿಚಯಿಸಿದ್ದಾರೆ. ಯಾವ ಯಾವ ರಾಜರು ಆಳ್ವಿಕೆ ನಡೆಸಿದರು ಎಂಬುದನ್ನು ಸರಳವಾಗಿ ತಿಳಿಸಿದ್ದಾರೆ. ಒಂದನೇ ಹರಿಹರ, ಒಂದನೇ ಬುಕ್ಕ, ಎರಡನೇ ಹರಿಹರ, ಒಂದನೇ ದೇವರಾಯ, ವಿಜಯರಾಜ, ಎರಡನೇ ದೇವರಾಯ, ಮಲ್ಲಿಕಾರ್ಜುನ, ವಿರೂಪಾಕ್ಷಿ ಹೀಗೆ ಅರವೀಡು, ಸಾಳುವ ಮತ್ತು ತುಳುವ ವಂಶಜರು ಆಳ್ವಿಕೆ ನಡೆಸಿದ ಬಗ್ಗೆ ವಿವರಿಸುತ್ತಾರೆ. ಆಯಾ ರಾಜರ ಕಾಲದಲ್ಲಿ ಗೆದ್ದ ರಾಜ್ಯಗಳನ್ನು, ಜೀವನ ಪದ್ಧತಿಯನ್ನು, ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಒಬ್ಬೊಬ್ಬ ರಾಜ ಒಂದೊಂದು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಉಲ್ಲೇಖವಿಲ್ಲದ ನೂರಾರು ದೇವಾಲಯಗಳು ಆ ಕಾಲದಲ್ಲಿ ನಿರ್ಮಾಣವಾಗಿದೆ. ಶೈವ, ವೈಷ್ಣವ, ಜೈನ ಹೀಗೆ ಎಲ್ಲ ಪಂಥಗಳ ದೇವಾಲಯಗಳು ನಿರ್ಮಾಣವಾಗಿರುವುದನ್ನು ಲೇಖಕರು ವಿವರಿಸಿದ್ದಾರೆ(ಪು. ೬೦). ಹಂಪಿ ಪರಿಸರದಲ್ಲಿರುವ ದೇವಾಲಯಗಳಲ್ಲಿ ಅಂದಿನ ಜನಪದ ಕಲೆಗಳೆಲ್ಲ ವಾಸ್ತುವಿನ ರೂಪದಲ್ಲಿ ಸ್ಥಾನ ಪಡೆದಿರುವುದನ್ನು ನಾವು ಗಮನಿಸಬಹುದು. ಜಗಲಿ, ರಂಗಮಂಟಪದ ಹಾಸುಗಲ್ಲು, ಕಲ್ಯಾಣಮಂಟಪ, ಬಂಡೆಗಳ ಮೇಲೆಲ್ಲ ಜನಪದ ಆಟವಾದ ಹುಲಿಮನಿ ಆಟದ ನಕಾಶೆ ಪಟಗಳನ್ನು ಅಂದೇ ಕೊರೆಸಿರುವುದು ಕಂಡು ಬರುತ್ತದೆ. ಕೋಲಾಟ, ಕೊರವಂಜಿ, ಕುಣಿತಗಳ ಉಬ್ಬುಶಿಲ್ಪಗಳನ್ನು ದೇವಾಲಯಗಳ ಗೋಡೆಗಳಲ್ಲಿ ಈಗಲೂ ಕಾಣಬಹುದು. ಪ್ರಸ್ತುತ ಕೃತಿಯಲ್ಲಿ ಜಾನಪದೀಯ ಅಂಶಗಳಿಗೆ ಒತ್ತು ನೀಡಿಲ್ಲ. ಚಾರಿತ್ರಿಕ ನೋಟವನ್ನಷ್ಟೇ ನೀಡಿದ್ದಾರೆ ಲೇಖಕರು. ಅವರ ಪರಿಮಿತಿಯೂ ಒಂದು ಕಾರಣವಿರಬಹುದು.

ಕೋಲಾಟ, ಆಲಾವಿ ಕುಣಿತ, ಏಕತಾರಿ ಮೇಳ, ಪೋತಗಾರ, ಕರಡಿ ಮಜಲು ಚೌಡಿಕೆ, ಡೊಂಬರ ಕುಣಿತ, ನಗಾರಿ, ಡೊಳ್ಳು, ನಂದಿಧ್ವಜ, ಭಜನೆ ಹೀಗೆ ಜಾನಪದದ ಪ್ರಕಾರಗಳೆಲ್ಲ ವಿಜಯನಗರ ಸಾಮ್ರಾಜ್ಯದಲ್ಲಿದ್ದವು ಎಂಬುದಕ್ಕೆ ದೇವಾಲಯಗಳು, ಮಂಟಪಗಳು, ಬಂಡೆಗಳು ಮತ್ತು ಇನ್ನಿತರ ಸ್ಮಾರಕಗಳು ಆಧಾರಗಳಾಗಿವೆ, ಸಾಕ್ಷಿ ನುಡಿಯುತ್ತವೆ. ಈ ಹಿನ್ನೆಲೆಯಲ್ಲಿ ಮೂಲನೆಲೆಯ, ಮಣ್ಣಿನ ಸೊಗಡನ್ನು ಅಲ್ಪ ಪ್ರಮಾಣದಲ್ಲಿಯಾದರೂ ಪರಿಚಯಿಸುವ ಕಾರ್ಯ ಈ ಕೃತಿಯಲ್ಲಿದ್ದರೆ ಚೆನ್ನಾಗಿತ್ತು. ಏನೇ ಇರಲಿ ನಮ್ಮ ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಸ್ಥಿತಿಯನ್ನು ಒಮ್ಮೆ ಊಹಿಸಿಕೊಂಡರೆ ಕನ್ನಡಿಗರೆಲ್ಲರಿಗೂ ರೋಮಾಂಚನವಾಗುವುದರಲ್ಲಿ ಸಂಶಯವಿಲ್ಲ. ಆದರೆ ಪುರಾತತ್ವ ಇಲಾಖೆಯಡಿಯಲ್ಲಿ ಸ್ಥಾನ ಪಡೆದಿರುವ ಸ್ಮಾರಕಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎಂಬುದನ್ನು ವಿಷಾದದಿಂದಲೇ ಹೇಳಬೇಕು. 'ಹಂಪೆ ಹಾಳು ಕೊಂಪೆ' ಎಂದು ಹೇಳುತ್ತಲೇ ನಿರ್ಲಕ್ಷ್ಯಕ್ಕೆ ದಾರಿ ಮಾಡಿಕೊಟ್ಟಿರುವುದು ಸರಿಯಲ್ಲ. ಪುಟ್ಟ ಕೃತಿಯನ್ನು ನೀಡಿದ ಡಾ. ಕೂ.ಸ. ಅಪರ್ಣ ಅವರಿಗೆ ಧನ್ಯವಾದಗಳು.

ಶ್ರೀಮತಿ ಎ. ನಾಗವೇಣಿ

೧೧. ಕೊಲ್ಲೂರು ಶ್ರೀ ಮೂಕಾಂಬಿಕಾದೇವಿ ಕ್ಷೇತ್ರ

ಪ್ರಧಾನ ಸಂಪಾದಕರು: ಶಾ.ಮಂ. ಕೃಷ್ಣರಾಯ
ಲೇಖಕರು: ಲಕ್ಷ್ಮೀ ಮಚ್ಚಿನ
ಪುಟ ೭೨, ಬೆಲೆ ರೂ. ೩೫/-
ಪ್ರಥಮ ಮುದ್ರಣ ೨೦೧೩
ಹೇಮಂತ ಸಾಹಿತ್ಯ, ಬೆಂಗಳೂರು

ಲಕ್ಷ್ಮೀ ಮಚ್ಚಿನ ಅವರು ಮಕ್ಕಳ ಸಾಹಿತ್ಯ ಸರಣಿಯಲ್ಲಿ ಮಕ್ಕಳಿಗಾಗಿ ಬರೆದಿರುವ ಪುಟ್ಟ ಕೃತಿ 'ಕೊಲ್ಲೂರು ಶ್ರೀಮೂಕಾಂಬಿಕಾದೇವಿ ಕ್ಷೇತ್ರ. ಹೇಮಂತ ಸಾಹಿತ್ಯ ತನ್ನ ಪ್ರಕಟಣೆಯ ಕಾರ್ಯದಲ್ಲಿ ಸುವರ್ಣೋತ್ಸವ ಸಂಭ್ರಮದ ನೆನಪಿಗಾಗಿ ಈ ಸರಣಿಯಲ್ಲಿ ಪ್ರಸ್ತುತ ಕೃತಿಯನ್ನು ಪ್ರಕಟಿಸಿದೆ. ಶೀರ್ಷಿಕೆಯೇ ಹೇಳುವಂತೆ ಕೃತಿ ನಮ್ಮ ನಾಡಿನ ಪ್ರಸಿದ್ಧ ದೇವಾಲಯ ಕೊಲ್ಲೂರು ಶ್ರೀಮೂಕಾಂಬಿಕೆ ಕ್ಷೇತ್ರವನ್ನು ಪರಿಚಯಿಸುತ್ತದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿರುವ ಈ ಕ್ಷೇತ್ರದ ಬಗೆಗೆ ಮತ್ತು ಈ ಕರಾವಳಿ ಸೃಷ್ಟಿಯ ಬಗೆಗೆ 'ಪರಶುರಾಮನ ಸೃಷ್ಟಿ' ಎಂದೇ ಜನಜನಿತವಾಗಿದೆ. ಅದರಲ್ಲೂ ಭಿನ್ನಾಭಿಪ್ರಾಯಗಳಿವೆ. ಪುರಾತನ ಇತಿಹಾಸವನ್ನು ಹೊಂದಿರುವ ಈ ಕ್ಷೇತ್ರಕ್ಕೆ ಸಂಬಂಧಿಸಿದ ಜಾನಪದ ಅಂಶಗಳ ಕುರಿತು ಮಾತ್ರ ನೋಡಲು ಇಚ್ಛಿಸಿದ್ದೇನೆ. ದೇವಾಲಯದ ನಿರ್ಮಾಣಕ್ಕೂ, 'ಕೊಲ್ಲೂರು' ಎಂಬ ನಾಮಕರಣಕ್ಕೆ ಸಂಬಂಧಿಸಿದಂತೆ

ಅನೇಕ ಪೌರಾಣಿಕ ಕತೆಗಳಿವೆ. ಶಂಕರಾಚಾರ್ಯರಿಂದ ಕೊಲ್ಲೂರು ಉಚ್ಛ್ರಾಯ ಸ್ಥಿತಿ ತಲುಪಿತು ಎನ್ನುವುದನ್ನು, ಇತಿಹಾಸ ತಿಳಿಸುತ್ತಾರೆ. ಜನಪದರಲ್ಲಿ ಕೊಲ್ಲೂರಿಗೆ ಸಂಬಂಧಿಸಿದ ದಂತಕಥೆಯೊಂದಿದ್ದು, ಲೇಖಕರು ಇಲ್ಲಿ ನೀಡಿದ್ದಾರೆ (ಪು. ೨೬). ಕೆಳದಿ ಸಂಸ್ಥಾನದ ಶಿವಪ್ಪ ನಾಯಕನು ಶ್ರೀ ಕ್ಷೇತ್ರಕ್ಕೆ ಪ್ರತಿದಿನ ಬಾಳೆಹಣ್ಣುಗಳನ್ನು ಸೇವಕನ ಮುಖಾಂತರ ತಲುಪಿಸುತ್ತಿದ್ದನು. ಹೀಗಿರಲು ಒಂದು ದಿನ ಸೇವಕನಿಗೆ ಹಸಿವನ್ನು ತಡೆಯಲಾಗದೆ ವಿಧಿಯಿಲ್ಲದೆ 'ದೇವಿ ನಿನಗೆ ಸಮರ್ಪಿತವಾಗಲಿ' ಎಂದು ತಪ್ಪೊಪ್ಪಿಕೊಂಡು ಬಾಳೆಹಣ್ಣನ್ನು ತಿಂದು ಉಳಿದ ಹಣ್ಣುಗಳನ್ನು ದೇವಾಲಯಕ್ಕೆ ತಲುಪಿಸುತ್ತಾನೆ. ಅಂದು ರಾತ್ರಿ ಶಿವಪ್ಪ ನಾಯಕನಿಗೆ ಕನಸಲ್ಲಿ ಮೂಕಾಂಬಿಕಾದೇವಿ ಬಂದು ಎರಡು ಬಾಳೆಹಣ್ಣು ನನಗೆ ಸಮರ್ಪಿತವಾಗಿದೆ ಎಂದು ಹೇಳಿದ್ದನ್ನು ಕಂಡು ಗಾಬರಿಗೊಳ್ಳುತ್ತಾನೆ. ನಂತರ ಶಿವಪ್ಪ ನಾಯಕ ವಿಷಯ ತಿಳಿದು ಹಸಿದವರಿಗೆ ಆಹಾರ ನೀಡಿದರೆ ಅದು ದೇವರಿಗೆ ಸಮರ್ಪಿಸಿದಂತೆ ಎಂಬುದನ್ನು ತಿಳಿಯುತ್ತಾನೆ(ಪು. ೨೭) ಎಂಬ ದಂತಕಥೆಯನ್ನು ಲೇಖಕರು ನೀಡಿದ್ದಾರೆ. ಇದನ್ನು ಯಾರೂ ಅಲ್ಲಗಳೆಯಲಾಗದು. ಯಾಕೆಂದರೆ ಭಾರತೀಯ ಸಂಸ್ಕೃತಿಯ 'ದಾನ'ಕ್ಕೆ ಅತ್ಯಂತ ಮಹತ್ವವಾದ ಸ್ಥಾನವಿದೆ. ಹದಿಹರೆಯದ ಮಕ್ಕಳಿಗೆ ಕ್ಷೇತ್ರದರ್ಶನ ಮಾಡುವ ಉದ್ದೇಶದಿಂದ ರಚಿತವಾದ ಈ ಕೃತಿ ಸಂಕ್ಷಿಪ್ತ, ಪ್ರಾಥಮಿಕ, ಅತ್ಯವಶ್ಯಕ ಮಾಹಿತಿಗಳನ್ನು ಒಳಗೊಂಡಿರುವುದರಿಂದ ಎಲ್ಲ ವಯೋಮಾನದವರು ಓದಿ ತಿಳಿಯಲು ಸಹಕಾರಿ. ದೂರ ದೂರದಿಂದ ಕ್ಷೇತ್ರ ಪ್ರವಾಸ ಮಾಡುವವರಿಗೆ ಕೊಲ್ಲೂರು ಕ್ಷೇತ್ರದ ಬಗ್ಗೆ ತಿಳಿಯಲು ಇದೊಂದು ಕೈಪಿಡಿ ಎಂದರೆ ತಪ್ಪಾಗಲಾರದು.

ಶಿವಶಂಕರ ಪಿ.

□□

ವಿಮರ್ಶಕರ ವಿಳಾಸ

೧. ಡಾ. ಡಿ.ಕೆ. ಚಿತ್ತಯ್ಯ ಪೂಜಾರ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೫೬೦ ೦೫೬.

೨. ಪ್ರೊ. ಎಂ.ಎಲ್. ನರಸಿಂಹಮೂರ್ತಿ, ವಿಶ್ರಾಂತ ಪ್ರಾಧ್ಯಾಪಕರು, ಶ್ರೀ ಲಕ್ಷ್ಮೀನರಸಿಂಹ ಕೃಪ, ಗೌರಿಬಿದನೂರು ಗೇಟ್ ಹತ್ತಿರ, ಮಧುಗಿರಿ-೫೭೨೧೩೨, ತುಮಕೂರು ಜಿಲ್ಲೆ.

೩. ಡಾ. ಎಸ್.ಎಸ್. ಅಂಗಡಿ, ಸಹಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೪. ಡಾ. ವಸಂತಕುಮಾರ್, ಕನ್ನಡ ಉಪನ್ಯಾಸಕರು, ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು, ಉಡುಪಿ.

೫. ಡಾ. ಜ್ಯೋತ್ಸ್ನಾ ಚಂದ್ರಕಾಂತ, ಯೋಜನಾ ಸಹಾಯಕರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ-೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ.

೬. ಶ್ರೀ ಲೋಕೇಶ, ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬.

೭. ಡಾ. ಓ. ನಾಗರಾಜು, ಕನ್ನಡ ಸಹಪ್ರಾಧ್ಯಾಪಕರು, ಶಶಾಂಕ ನಿಲಯ, ೬ನೇ ಕ್ರಾಸ್, ಸಿ.ಬಿ. ನಗರ ಬಡಾವಣೆ, ಉಪ್ಪಾರಹಳ್ಳಿ, ತುಮಕೂರು.

೮. Soumya P., Research Student, Government College, Kasaragodu, Vidyanagar Post -671123, Kerala.

೯. ಡಾ. ಎ. ಸುಬ್ಬಣ್ಣ ರೈ, ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩ ೨೭೬.

೧೦. ಡಾ. ಎಸ್. ಮೋಹನ್, ಪ್ರಕಟಣ ಸಹಾಯಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩ ೨೭೬.

೧೧. ಡಾ. ಮಾಧವ ಪೆರಾಜೆ, ಸಹಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩ ೨೭೬.

೧೨. ಡಾ. ಕೃಷ್ಣರಾಜ ಕರಬ, ಕನ್ನಡ ಉಪನ್ಯಾಸಕರು, ಬ್ಯಾರೀಸ್ ಪ್ರಥಮದರ್ಜೆ ಕಾಲೇಜು, ಕೋಡಿ, ಕುಂದಾಪುರ, ಉಡುಪಿ ಜಿಲ್ಲೆ

೧೩. ಮಹಾದೇವಪ್ಪ ಎಸ್. ಪೂಜಾರಿ, ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೪. ಡಾ. ಎ.ಎನ್. ಸಿದ್ದೇಶ್ವರಿ, ಅಧ್ಯಾಪಕರು, ವೀರಭದ್ರೇಶ್ವರ ನಿಲಯ, ನಂ. ೧೩/ಸಿ., ೪ನೇ ತಿರುವು, ವಿದ್ಯಾನಗರ (ಪಶ್ಚಿಮ), ಬಳ್ಳಾರಿ-೫೮೩ ೧೦೪.

೧೫. ಡಾ. ಸುರೇಶ ಎಲ್. ಜಾಧವ, ಸಹಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಸಾಹಿತ್ಯ ವಿಭಾಗ, ಸರಕಾರಿ ಮಹಾವಿದ್ಯಾಲಯ, ಗುಲಬರ್ಗಾ-೫೮೫ ೧೦೫.

೧೬. ಡಾ. ಸುರೇಂದ್ರ ಕೆರಮಗಿ, ಸಹಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಸಾಹಿತ್ಯ ವಿಭಾಗ, ಸರಕಾರಿ ಮಹಾವಿದ್ಯಾಲಯ, ಗುಲಬರ್ಗಾ-೫೮೫ ೧೦೫.

೧೭. ಡಾ. ಪುತ್ತಿ ವಸಂತಕುಮಾರ್, ಕನ್ನಡ ಉಪನ್ಯಾಸಕರು, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು, ಕುಂಜಿಬೆಟ್ಟು, ಉಡುಪಿ-೫೭೬ ೧೦೨.

೧೮. Smt. Sandhyakumari , Research Student, Government College, Kasaragodu, Vidyanagar Post -671123, Kerala.

೧೯. ರಾಘವೇಂದ್ರ ತುಂಗ ಕೆ., ಕನ್ನಡ ಉಪನ್ಯಾಸಕರು, ಮಾಧವ ಪೈ ಸ್ಮಾರಕ ಕಾಲೇಜು, ವಿದ್ಯಾನಗರ, ಮಣಿಪಾಲ.

೨೦. ಡಾ. ಜೆ. ಕೃಷ್ಣ, ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮದರ್ಜೆ ಕಾಲೇಜು, ಶ್ರೀರಾಮನಗರ, ಗಂಗಾವತಿ, ಕೊಪ್ಪಳ ಜಿಲ್ಲೆ.

೨೧. ಡಾ. ಎಚ್. ನಾಗವರ್ಮ, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪದವಿ ಕಾಲೇಜು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.

೨೨. ಡಾ. ಎಸ್. ಶಿವಣ್ಣ ಬೆಳವಾಡಿ, ಸಹಾಯಕ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.

೨೩. ಶ್ವೇತಾ ಕೆ., ಎಂ.ಎಸ್.ಸಿ. ಪ್ರಥಮ ವರ್ಷ, ರಸಾಯನಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು.

೨೪. ಡಾ. ಡಿ.ವಿ. ಪರಮಶಿವಮೂರ್ತಿ, ಪ್ರಾಧ್ಯಾಪಕರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-೫೭೨ ೧೦೨.

೨೫. Shridhara N., Assistant Professor, Department of Kannada , Government College, Kasaragodu, Vidyanagar Post -671123, Kerala.

೨೬. ಸಿಬಂತಿ ಪದ್ಮನಾಭ .ಕೆ.ವಿ., ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ಬಿ.ಎಚ್. ರಸ್ತೆ, ತುಮಕೂರು-೫೭೨ ೧೦೩.

೨೭. ಶ್ರೀ ನಿಂಗಪ್ಪ ಮಾದಣ್ಣವರ್, ಉಪನ್ಯಾಸಕರು, ಶ್ರೀ ವಿ.ಎಸ್. ಮಂಡಳ ಪದವಿಪೂರ್ವ ಕಾಲೇಜು, ನಿಪ್ಪಾಣಿ-೫೯೧ ೨೩೭, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ.

೨೮. ಡಾ. ಹೆಚ್.ಆರ್. ರೇಣುಕ, ಸಹಾಯಕ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

೨೯. Subhash Pattaje, Research Student, Government College, Kasaragodu, Vidyanagar Post -671123, Kerala.

೩೦. ಶ್ರೀ ವಸಂತಕುಮಾರ್ ಹಾಡಿಕಲ್ಲು, ಅತಿಥಿ ಉಪನ್ಯಾಸಕರು, ಸರ್ಕಾರಿ ಕಾಲೇಜು, ವಿಟ್ಲ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ.

೩೧. ಆರತಿ ಪಟ್ರಮೆ, ಉಪನ್ಯಾಸಕರು, ವಿದ್ಯಾವಾಹಿನಿ ಪದವಿಪೂರ್ವ ಕಾಲೇಜು, ಎಸ್ಐಟಿ ಬಡಾವಣೆ, ತುಮಕೂರು-೫೭೨ ೧೦೩.

೩೨. ಶ್ರೀ ಟಿ. ನಿರಂಜನಮೂರ್ತಿ, ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩ ೨೭೬.

೩೩. ಶ್ರೀಮತಿ ಎ. ನಾಗವೇಣಿ, ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩ ೨೭೬.

೩೪. Sri Shivashankar P., Assistant Professor, Dept. of Kannada, Manjeshwara Govinda Pai Memorial Govt. College, Manjeshwara, Kerala.

□□

ನಮ್ಮ ಪ್ರಕಟಣೆಗಳು

ಕ್ರ.ಸಂ.	ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು *ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧ *ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ *ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್ *ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು *ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು *ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭.	ಕರ್ನಾಟಕ ಸಂಶೋಧನ ಜಾನಪದ *ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ *ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ *ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು *ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು *ಡಾ. ಮಲ್ಲಿಕಾರ್ಜುನ ಕುಂಬಾರ*	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು *ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ *ಡಾ. ವೃಷಭಕುಮಾರ*	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು *ಶ್ವೇತಾ ಎಂ.ಬಿ.*	೮೦.೦೦
೧೫.	ನೆಲದ ನೆನಪು *ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦

೧೬. ನಮ್ಮ ಗಿಡಮರಬಳ್ಳಿಗಳು
ಶಾಂತಿ ನಾಯಕ ೪೦.೦೦

೧೭. ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು
ಸಂ : ಪ್ರೊ. ಪ್ರಕಾಶ ಕಮ್ಮರಡಿ ೧೦೦.೦೦

೧೮. ಜಾನಪದ ವರ್ಷ–೨೦೧೨
ಸಂ : ಡಾ. ಕೆ.ವಿ. ಮುದ್ದವೀರಪ್ಪ ೧೨೦.೦೦

೧೯. ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೧೦೦೦.೦೦
ಕಾ.ನಿ.ಸಂ : ಪ್ರೊ. ಆರ್ಲಿಯಸ್ ಸುಂದರಂ,
ಸಂ : ಪ್ರೊ. ಸ.ಚಿ. ರಮೇಶ

೨೦. ವಿಸ್ತೃತ ಜಾನಪದ ಗ್ರಂಥಸೂಚಿ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೭೦೦.೦೦
ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ

೨೧. ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ
ಸಂ : ಡಾ. ಇಂದಿರಾ ಹೆಗ್ಗಡೆ ೧೫೦.೦೦

೨೨. ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು
ಸಂ : ಶಾಂತಿ ನಾಯಕ ೧೨೦.೦೦

೨೩. **Manteswamy Epic Tradition of South Karnataka**
Prof. Ambalike Hiriyanna ೨೮೦.೦೦

೨೪. **Dakshinatya Abhinaya Siddhanta**
Dr. Guru Rao Bapat ೧೦೦.೦೦

೨೫. ನಾಡವರ ಜಾನಪದ ತವನಿಧಿ
: ಪ್ರೊ. ಎನ್.ಆರ್. ನಾಯಕ ೨೬೦.೦೦

೨೬. **The Bayalatas of North Karnataka**
Dr. Basavaraja Malashetty
Translated by: Dr. Parvathi G. Aithal ೧೩೦.೦೦

೨೭. ತಾತ್ಯಾ–ಬಾಪು ಅವರ ಲಾವಣಿಗಳು
ಸಂ : ಡಾ. ಹರಿಲಾಲ ಪವಾರ ೮೦.೦೦

೨೮. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ
ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್ ೧೭೦.೦೦

೨೯. ಬೆಳಗಲ್ಲು ವೀರಣ್ಣ
ಡಾ. ಎಂ.ಎನ್. ವೆಂಕಟೇಶ್ ೭೦.೦೦

೩೦. ಮಂಜಮ್ಮ ಜೋಗತಿ
ಡಾ. ಚಂದ್ರಪ್ಪ ಸೊಬಟಿ ೮೦.೦೦

೩೧. ಡಾ. ಪಿ.ಕೆ. ರಾಜಶೇಖರ
ಸಂಗಮೇಶ ಎಸ್. ಗಣಿ ೧೨೦.೦೦

೩೨. ಜಾನಪದ ಅಧ್ಯಯನ
ಅಲನ್ ಡಂಡೆಸ್ ೩೦೦.೦೦

೩೩.	ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯ ಪರಂಪರೆ	೨೦೦.೦೦
೩೪.	ಜಾನಪದ ವರ್ಷ ೨೦೧೩	೧೨೦.೦೦
೩೫.	ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ) ಸಂಚಿಕೆ–೧, ೨, ೩ & ೪	ಬಿಡಿ ಪ್ರತಿಗೆ ೫೦.೦೦

ನೆಲಮೂಲ ಜ್ಞಾನ ಪರಂಪರೆಯನ್ನು ಗರ್ಭೀಕರಿಸಿಕೊಂಡಿರುವ ಜಾನಪದ ಅವಿನಾಶಿಯಾದುದು. ಜಾಗತೀಕರಣ, ಆಧುನೀಕರಣಗಳ ಪರಿಣಾಮದಿಂದ ಜಾನಪದ ಸಂಬಂಧಿ ಸೈದ್ಧಾಂತಿಕ ಸ್ವರೂಪದ ಕೆಲಸಗಳು ಹಿನ್ನೆಲೆಗೆ ಸರಿಯುತ್ತಿವೆ ಎನ್ನುವ ಹಳಹಳಿಕೆ ಪ್ರಚಲಿತದಲ್ಲಿದೆ. ಈ ನಡುವೆ, ಎಂದಿಗೂ ಜೀವಂತವಾಗಿರುವ ಜಾನಪದ ರೂಪಾಂತರವನ್ನು ಹೊಂದಿಯೂ, ಅಸ್ತಿತ್ವದಲ್ಲಿರುವ ನಮ್ಮತನದ ಮೂಲ ಅಸ್ಮಿತೆ ಎನ್ನುವ ನಂಬಿಕೆ ಬಲಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಬಹುಶಿಸ್ತೀಯ ಹಾಗೂ ಅಂತರ್‌ಶಿಸ್ತೀಯ ಅಧ್ಯಯನಗಳ ಸಾಧ್ಯತೆಗಳನ್ನು ಒಳಗೊಂಡಿರುವ ಜಾನಪದವನ್ನು ಕುರಿತ ಕೆಲಸಗಳು ಗುಣ ಮತ್ತು ಗಾತ್ರವನ್ನು ಕಾಪಾಡಿಕೊಳ್ಳುವುದು ಕಷ್ಟಸಾಧ್ಯ. ಜಾನಪದವನ್ನು ಸಂರಕ್ಷಿಸುವ, ಸಂವರ್ಧಿಸುವ ಮೂಲ ಆಶಯಕ್ಕೆ ಬದ್ಧವಾಗಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು, ಪ್ರತಿವರ್ಷ ಜಾನಪದ ಸಂಬಂಧೀ ಕೃತಿಗಳ ಸಮೀಕ್ಷಾತ್ಮಕ ಗ್ರಂಥವನ್ನು ಹೊರತರುವ ಸೈದ್ಧಾಂತಿಕ ಪ್ರಯತ್ನವನ್ನು ನೋಂಪಿಯಂತೆ ಮಾಡಿಕೊಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಡಾ. ಎಸ್. ಮೋಹನ್ ಅವರು ಸಂಪಾದಿಸಿದ 'ಜಾನಪದ ವರ್ಷ-೨೦೧೩' ಗ್ರಂಥ ಗಮನಾರ್ಹವಾದುದು. ಇಂಥ ಮಹತ್ವದ ಗ್ರಂಥ ಸಿದ್ಧಗೊಳ್ಳುವಾಗ ಸಂಪಾದಕರು ಸೇರಿದಂತೆ ಸಮೀಕ್ಷಕರ ಶ್ರಮ-ಶ್ರದ್ಧೆ ಮರೆಯಲಾಗದು. ಈ ಎಲ್ಲರ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಪ್ರಕೃತ 'ಜಾನಪದ ವರ್ಷ-೨೦೧೩' ರೂಪುಗೊಂಡಿದೆ. ಪ್ರಕೃತ ಗ್ರಂಥವನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟ ಡಾ. ಎಸ್. ಮೋಹನ್ ಅವರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲಬೇಕು.

■ ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ISBN 978-93-83149-33-9

₹ : ೧೨೦/-

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ